TIGHT BINDING BOOK

UNIVERSAL
LIBRARY
OU_198708
UNIVERSAL
LIBRARY

OUP—556—13-7-71—4,000.

**OSMANIA UNIVERSITY LIBRARY**

Call No. K923.2 Accession No. K 2325

Author B88G

Title

This book should be returned on or before the date last marked below.

ಪ್ರಕಾಶಕರು :
ರಂ. ರಾ. ದಿವಾಕರ
ಕಾರ್ಯದರ್ಶಿ
ಕರ್ನಾಟಕ ಶಿಕ್ಷಣ ಸಮಿತಿ, ಹುಬ್ಬಳ್ಳಿ

೧೯೪೧

ಮುದ್ರಕರು :
ಹ. ರಾ. ಮೋಹರೆ
ಸಂಯುಕ್ತ ಕರ್ನಾಟಕ ಮುದ್ರಣಾಲಯ,
ಹುಬ್ಬಳ್ಳಿ

# ಪ್ರಕಾಶಕನ ಮೊದಲು ಮಾತು

ಸಮಿತಿಯು ಹುಬ್ಬಳ್ಳಿಗೆ ಬಂದ ಬಳಿಕ ಈ ಪುಸ್ತಕವೆ ಅದರ ಪ್ರಥಮ ಪ್ರಕಟನೆ. ಹಿಂದುಸ್ತಾನದ ಅನ್ಯ ಭಾಷೆಗಳಲ್ಲಿ ಗಾಂಧೀ ವಾಙ್ಮಯವು ಈಗ ಬೇಕಾದಷ್ಟು ಪ್ರಕಟವಾಗುತಲಿದೆ. ಕನ್ನಡದಲ್ಲಿಯೂ ಪ್ರಕಟವಾಗುವದು ಅವಶ್ಯ. ಗಾಂಧೀಯವರೊಬ್ಬರು ಯುಗ ಪುರುಷರು ಎಂಬುದು ಎಲ್ಲರಿಗೂ ಒಪ್ಪಿದ ಮಾತಾಗಿದೆ. ಆದುದರಿಂದ ಅವರ ಆಚಾರ ವಿಚಾರ ಉಚ್ಚಾರಗಳು ಜನರಿಗೆ ತಿಳಿಯುವುದು ಅತ್ಯಂತ ಆವಶ್ಯಕ. ಈಗಾಗಲೆ ಸಮಿತಿಯವರು 'ಮಕ್ಕಳ ಗಾಂಧಿ', 'ಮಂಗಲ ಪ್ರಭಾತ', 'ಗಾಂಧೀ ವಿಚಾರ ದೋಹನ' ಮುಂತಾದ ಪುಸ್ತಕಗಳನ್ನು ಪ್ರಕಟಿಸಿರುವರು. ಈಗ ಈ ಪುಸ್ತಕವನ್ನು ಪ್ರಕಟಿಸುವ ಸುಸಂಧಿ ದೊರೆತಿದೆ. ಈ ಪುಸ್ತಕದ ಪ್ರೂಫು ಪ್ರಕಟನೆ ಮುಂತಾದ ವಿಷಯಗಳಲ್ಲಿ ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಕಚೇರಿಯವರು ವಿಶೇಷ ಆಸ್ಥೆಯಿಂದ ಕೆಲಸ ಮಾಡಿದ್ದಾರೆ. ಆ ಬಗ್ಗೆ ಅವರಿಗೆ ಧನ್ಯವಾದಗಳನ್ನರ್ಪಿಸುವದು ನನ್ನ ಕರ್ತವ್ಯವಿದೆ.

ಈ ಪುಸ್ತಕವು ಎಲ್ಲ ಕನ್ನಡಿಗರಿಗೂ ಪ್ರಿಯವಾದೀತು ಎಂದು ನಂಬಿದ್ದೇನೆ.

ಹುಬ್ಬಳ್ಳಿ<br>೨೫-೬-೧೯೪೧

ಕಾರ್ಯದರ್ಶಿ<br>ಕರ್ನಾಟಕ ಶಿಕ್ಷಣ ಸಮಿತಿ

# ಪರಿವಿಡಿ


| | | ಪುಟ ಸಂಖ್ಯೆ |
|---|---|---|
| | ಮುನ್ನುಡಿ | i vi |
| | ಪ್ರಸ್ತಾವನೆ | ೧-೧೨ |
| ೧ | ಹೊಸಯುಗ | ೧ |
| ೨ | ಪ್ರಥಮ ದರ್ಶನ | ೫ |
| ೩ | ಗಾಂಧಿ — ಒಂದು ಒಗಟು | ೧೧ |
| ೪ | ಅಹಿಂಸೆ — ಅವರ ಜೀವನಸೂತ್ರ | ೧೭ |
| ೫ | 'ಕ್ಷಮಾ ವೀರಸ್ಯ ಲಕ್ಷಣಂ' | ೩೭ |
| ೬ | ಹಾವನ್ನೂ ಹೊಡೆಯಲಾರೆ | ೪೮ |
| ೭ | ಸತ್ಯನಿಷ್ಠೆ | ೫೦ |
| ೮ | ಎಲ್ಲವೂ ಹರಿಚಿತ್ತ | ೫೭ |
| ೯ | ವ್ಯವಹಾರಿಕ ವೇದಾಂತಿ | ೭೫ |
| ೧೦ | ಉಪವಾಸ — ಅಂತರ್ವಾಣಿ | ೭೯ |
| ೧೧ | ಉಪವಾಸ — ಅಹಿಂಸಾ ಶಸ್ತ್ರ | ೧೦೦ |
| ೧೨ | ಸತ್ಯಾಗ್ರಹ | ೧೧೨ |
| ೧೩ | ಗಾಂಧಿಜೀಯವರ ಯುದ್ಧ-ನೀತಿ | ೧೨೧ |
| ೧೪ | ನಿರ್ಣಯ ಮಾಡುವ ರೀತಿ | ೧೪೫ |
| ೧೫ | ಆತ್ಮಪ್ರೇರಣೆ | ೧೫೦ |
| ೧೬ | ನಿರಹಂಕಾರಿ ಜೀವ | ೧೫೮ |
| ೧೭ | ನಿಜರೂಪ | ೧೬೫ |
| ೧೮ | ಸೂಕ್ಷ್ಮದೃಷ್ಟಿ | ೧೬೯ |
| ೧೯ | ದಿನಚರಿ | ೧೭೩ |
| ೨೦ | ಉಪಸಂಹಾರ | ೧೮೦ |

# ಚಿತ್ರಸೂಚಿ


| | | ಪುಟ ಸಂಖ್ಯೆ |
|---|---|---|
| ೧ | 'ಬಾಪೂ' .... ... | ಮುಖಪುಟ |
| ೨ | ಲೇಖಕ: ಗಾಂಧೀಜಿಯೊಡನೆ .... .... | ೧೪ |
| ೩ | ಮಹಾತ್ಮಾ ಗಾಂಧಿ: (ಚೀನೀ ಚಿತ್ರಕಾರನು ತೆಗೆದಚಿತ್ರ | ೧೫ |
| ೪ | ಧ್ಯಾನಾವಸ್ಥಿತ .... .... .... | ೫೮ |
| ೫ | 'ಬಾ' ... .... .... .... | ೫೯ |
| ೬ | ದುಂಡುಮೇಜು ಪರಿಷತ್ತಿಗೆ ಹೊರಟ ಗಾಂಧೀಜಿ | ೮೬ |
| ೭ | 'ಭಿಕ್ಷಾಂದೇಹಿ' .... .... .... | ೮೭ |
| ೮ | ರೇಖಾಚಿತ್ರ— ಊಟ ಕೆಲಸ ಎರಡೂ .... | ೧೦೦ |
| ೯ | ರೇಖಾಚಿತ್ರ— ಊಟ ಕೆಲಸ ಎರಡೂ .... | ೧೧೪ |
| ೧೦ | ಜೇಲಿನಿಂದ ಬಿಡುಗಡೆಯಾದ ಬಳಿಕ (ದಕ್ಷಿಣಆಫ್ರಿಕಾ) | ೧೪೪ |
| ೧೧ | ಗೋಖಲೆಯುವರ ಸ್ವಾಗತ ದ. ಆಫ್ರಿಕಾ (೧೯೧೨) | ೧೫೬ |
| ೧೨ | ದ. ಆಫ್ರಿಕೆಯಲ್ಲಿ ಬೀಳ್ಕೊಡುವ ಸಮಾರಂಭ (೧೯೧೪) | ೧೫೭ |

# ಮುನ್ನುಡಿ

ಒಂದು ಒಂದೂವರೆ ತಿಂಗಳಾಗಿರಬಹುದು. ಪ್ರಸಿದ್ಧ ಹಿಂದೀ ಪ್ರಚಾರಕರಾದ ಶ್ರೀ. ಸಿದ್ಧನಾಥಪಂತರು 'ಬಾಪೂ' ಎಂಬ ಹಿಂದೀ ಪುಸ್ತಕವನ್ನು ನನ್ನ ಕೈಯಲ್ಲಿ ತಂದು ಕೊಟ್ಟರು. ಗುಜರಾಥಿಯಲ್ಲಿ 'ಬಾಪೂ' ಅಂದರೆ ಅಪ್ಪ ಅಥವಾ ತಂದೆ. ಗಾಂಧೀಜಿಯವರ ಬಳಗ ದವರು ಅರ್ಥಾತ್ ಆಶ್ರಮವಾಸಿಗಳು, ಗಾಂಧೀ ಸೇವಾಸಂಘದ ಜನರು, ಅವರ ನಿಕಟ ಸಂಬಂಧ ಬಂದ ಪಂಡಿತ ಜವಾಹರಲಾಲ ಮುಂತಾದವರು ಅವರನ್ನು 'ಬಾಪೂ' ಎಂದು ಸಂಬೋಧಿಸುವರು. ಕೋಟ್ಯಾಧೀಶರು, ಗಾಂಧೀಜಿಯವರ ಪ್ರಭಾವಳಿಯಲ್ಲಿಯ ಓರ್ವ ಮುಖ್ಯ ಗೃಹಸ್ಥರು, ಹರಿಜನ ಸೇವಕ ಸಂಘದ ಅಧ್ಯಕ್ಷರೂ ಆದ ಶ್ರೀ. ಘನಶ್ಯಾಮದಾಸ ಬಿಡಲಾ ಇವರು ಗಾಂಧೀಜಿಯವರನ್ನು ಕುರಿತು ಬರೆದ ಒಂದು ಹೊಸ ಚಿಕ್ಕ ಪುಸ್ತಕದ ಹೆಸರನ್ನು ಅವರು 'ಬಾಪೂ' ಎಂದು ಇಟ್ಟಿರುವರು. ಆ ಪುಸ್ತಕವನ್ನೇ ಪಂತರು ನನಗೆ ಕೊಟ್ಟರು.

ಕೂಡಲೆ ಆ ಪುಸ್ತಕವು ನನ್ನ ಚಿತ್ತವನ್ನಾಕರ್ಷಿಸಿತು. ಅದರ ಪುಟಗಳನ್ನು ತಿರುವಿ ಅಲ್ಲಿ ಇಲ್ಲಿ ಓದಿ ನೋಡಿದೆನು. ಮತ್ತಷ್ಟು ಅದು ನನ್ನನ್ನು ಮೋಹಿಸಿತು. 'ಬಾಪೂ' ಎಂಬ ವಾತ್ಸಲ್ಯಪೂರ್ಣ ಅಭಿದಾನದಿಂದ ಸಂಬೋಧಿಸಲ್ಪಟ್ಟ ಗಾಂಧೀಜಿಯವರು ಆ ಪುಸ್ತಕದ ವಸ್ತು. ಶ್ರೀ. ಬಿರ್ಲಾ ಘನಶ್ಯಾಮದಾಸರಂಥ ನಿಕಟವರ್ತಿ ಭಕ್ತಾಗ್ರಣಿ

ಗಳು ಲೇಖಕರು. ಸರಲ, ಸುಲಭ, ಹುರಿಕಟ್ಟಾದ ಅವರ ಹಿಂದೀ ಶೈಲಿ, ಅಂದಬಳಿಕ ಕೇಳುವದೇನಿದೆ? ಇಂತಹ ಪುಸ್ತಕವು ಕನ್ನಡ ದಲ್ಲಿಯೂ ಇರಬೇಕೆಂದೆನಿಸಿತು- ನನಗೆ ಆ ಲೇಖಕರ ಪರಿಚಯವಿರಲಿಲ್ಲ. ಆದುದರಿಂದ ಪ್ರಸ್ತಾವನಾ ಲೇಖಕರಾದ ಶ್ರೀ. ದೇಸಾಯಿ ಮಹಾ ದೇವಭಾಯಿಯವರಿಗೆ ಅದನ್ನು ಕನ್ನಡಿಸುವ ಬಗ್ಗೆ ಅನುಮತಿ ಕೊಡಿಸಲು ಬರೆದೆನು. ಅದರೊಡನೆ ಶ್ರೀ. ಬಿರ್ಲಾ ಇವರಿಗೂ ಒಂದು ಪತ್ರವನ್ನಿಟ್ಟಿದ್ದೆನು.

ಹಾಗೆ ಬರೆಯುವಾಗ ನಾನು ಸತ್ಯಾಗ್ರಹ ಪ್ರತಿಜ್ಞೆ ಮಾಡಿದ್ದು, ಸತ್ಯಾಗ್ರಹಕ್ಕಾಗಿ ಅಪ್ಪಣೆ ಪಡೆಯಲು ನನ್ನ ಹೆಸರು ಗಾಂಧೀಜಿ ಯವರ ಕಡೆಗೆ ಹೋದದ್ದು, ಎಲ್ಲವೂ ನನ್ನ ನೆನಪಿನಲ್ಲಿತ್ತು. ಗಾಂಧೀಜಿ ಯವರ ಕಡೆಯಿಂದ ಅಪ್ಪಣೆ ಬಂದರೆ ಬೇಗನೆ ಸತ್ಯಾಗ್ರಹಕ್ಕೆ ಸಾಗ ಬೇಕಾದೀತು ಎಂಬದೂ ನನಗೆ ಚನ್ನಾಗಿ ಗೊತ್ತಿತ್ತು. ಹೀಗಿದ್ದರೂ ಈ ಹೊಸ ಕೆಲಸವನ್ನು ಕೈಕೊಳ್ಳುವ ಮೋಹ ನನ್ನನ್ನು ಬಿಡಲಿಲ್ಲ. ಆ ಪುಸ್ತಕವನ್ನು ಕನ್ನಡಿಸಿಯೇ ತೀರಬೇಕು, ಅದನ್ನು ಕನ್ನಡಿಗರಿಗೆ ಅರ್ಪಿಸಿಯೆ ಬಿಡಬೇಕೆಂಬ ಇಚ್ಛೆ ಬಲವತ್ತರವಾಯಿತು.

೨೪-೧೨-೪೦ ದಿನ ಶ್ರೀ. ಮಹಾದೇವಭಾಯಿಯವರಿಂದ ಪತ್ರ ಬಂದಿತು. ಪುಸ್ತಕವನ್ನು ಕನ್ನಡಿಸಲು ಅನುವು, ಸತ್ಯಾಗ್ರಹ ಮಾಡಲು ಅಪ್ಪಣೆ, ಇವೆರಡೂ ಆ ಪತ್ರದಲ್ಲಿದ್ದವು! ಸತ್ಯಾಗ್ರಹ ಮಾಡಲು ಅಧಿಕೃತ ರೀತಿಯಿಂದ ಬರತಕ್ಕ ಅಪ್ಪಣೆ— ಪ್ರಾಂತಿಕ ಕಾಂಗ್ರೆಸ ಕಮಿಟಿಯ ಮುಖಾಂತರ— ಬರಲು ಸ್ವಲ್ಪ ತಡವಾಯಿತು. ಆದರೆ ಶ್ರೀ. ದೇಸಾಯಿಯವರ ಪತ್ರ ನೋಡಿ ಅಪ್ಪಣೆ ಸಿಗುವದೆಂಬ ಬಗ್ಗೆ ಯಾವ ಸಂಶಯವೂ ಉಳಿಯಲಿಲ್ಲ. ಜಾನೇವಾರಿ ೫ನೆ ತಾರೀಖಿನ ನಂತರ ಬೇಕಾದಾಗ ಸತ್ಯಾಗ್ರಹ ಮಾಡಬಹುದು ಎಂದು ಶ್ರೀ. ಮಹಾದೇವಭಾಯಿಯವರು ಬರೆದಿದ್ದರು. ಸರಿ. ಎರಡೂ ಕೆಲಸ ಗಳನ್ನು ಮಾಡಬೇಕಾಯಿತು ಎರಡೂ ಒತ್ತರದ (ಅರ್ಜಂಟ್) ಕೆಲಸ ಗಳೇ- ಆ ಪುಸ್ತಕವನ್ನು ಕನ್ನಡಿಸುವದು, ಸತ್ಯಾಗ್ರಹ ಮಾಡುವದು.

ಸತ್ಯಾಗ್ರಹ ಮಾಡುವ ಪೂರ್ವದಲ್ಲಿ ಹಲವು ವ್ಯವಹಾರಿಕ ಕೆಲಸಗಳನ್ನು ಮಾಡಿಯೇ ತೀರಬೇಕಿತ್ತು. ಅದಕ್ಕಾಗಿ ವೇಳೆಯನ್ನು ಮೀಸಲಿಟ್ಟು ಉಳಿದ ವೇಳೆಯಲ್ಲಿ ಆ ಪುಸ್ತಕವನ್ನು ಕನ್ನಡಿಸುವ ನಿಶ್ಚಯ ಮಾಡಿದೆನು. ಸಂಚಾರ, ಪ್ರವಾಸ ಇವುಗಳನ್ನು ಬಿಡುವದು ಸಾಧ್ಯವಿರಲಿಲ್ಲ. ಆದುದರಿಂದ ಗಾಡಿಯಲ್ಲಿ, ಮೋಟರಿನಲ್ಲಿ ವೇಳೆ, ಅನುವು ಅವಕಾಶಗಳು ದೊರೆತಾಗೆಲ್ಲ ಶಕ್ಯವಿದ್ದಮಟ್ಟಿಗೆ ಆ ಪುಸ್ತಕವನ್ನು ಕನ್ನಡಿಸುವ ಕೆಲಸವನ್ನು ಸಾಗಿಸಬೇಕಾಯಿತು. ಹೀಗೆ ಸ್ವಲ್ಪ ಗಡಿಬಿಡಿಯಲ್ಲಿ ಈ ಕೆಲಸವನ್ನು ಮಾಡುವ ಪ್ರಸಂಗ ಬಂದುದು ನಿಜವಿದ್ದರೂ ಈ ಕೆಲಸದಲ್ಲಿ ಗಡಿಬಿಡಿ ಮಾಡಿಲ್ಲ ಎಂದು ವಿಶ್ವಾಸದಿಂದ ಹೇಳಬಲ್ಲೆ. ಸಾಕಷ್ಟು ಸಮಾಧಾನದಿಂದ ಹಾಗೂ ಸಾವಧಾನವಾಗಿ ಈ ಕೆಲಸವನ್ನು ಮಾಡಿರುವೆನು.

ಇಷ್ಟೆಲ್ಲ ಕಷ್ಟಪಟ್ಟು ಕನ್ನಡಿಸುವಷ್ಟು ಈ ಪುಸ್ತಕವು ಮಹತ್ವದ್ದಿದೆಯೊ? ಅಹುದು. ಪುಸ್ತಕವನ್ನು ಓದುತ್ತ ಹೋದ ಹಾಗೆ ಮತ್ತು ಕನ್ನಡಿಸುತ್ತ ನಡೆದ ಹಾಗೆ ಅದರ ಬಗ್ಗೆ ನನ್ನ ರುಚಿಯು ಹೆಚ್ಚಾಯಿತು, ನನ್ನ ಆದರವು ಬೆಳೆಯಿತು. ವಿಷಯವು ಹಳೆಯದು—ಗಾಂಧೀಜಿಯವರನ್ನು ಕುರಿತು ಈಗ ಬೇಕಾದಷ್ಟು ಸಾಹಿತ್ಯವು ನಿರ್ಮಾಣವಾಗಿದೆ, ನಿತ್ಯ ಆಗುತಿದೆ. ಆದರೂ ಈ ವಿಷಯವು ಒಂದು ದೃಷ್ಟಿಯಿಂದ ನಿತ್ಯ ನವೀನವೆ. ಇನ್ನು ಗಾಂಧಿಜಿಯೆಂದರೊಂದು ಜೀವಂತ ಜಾಗ್ರತ ಜ್ಯೋತಿ. ಈಗಾಗಲೆ ಅದು ಹಳೆಯದಾಗಲಾರದು. ಶ್ರೀ. ಬಿರ್ಲಾ ಇವರು ಈ ಪುಸ್ತಕದಲ್ಲಿ ಅನೇಕ ಹೊಸ ಹಾಗೂ ಅಪರಿಚಿತ ಸಂಗತಿಗಳನ್ನು ಸೇರಿಸಿ ಈ ವಿಷಯದಲ್ಲಿ ಹೊಸ ಕಳೆಯನ್ನು ತುಂಬಿರುವರು. ಕೇವಲ ಅಂಧಭಕ್ತಿಯಿಂದ ಈ ಪುಸ್ತಕವನ್ನು ಅವರು ಬರೆದಿಲ್ಲ. ಗಾಂಧೀಜಿಯವರ ಬಗ್ಗೆ ಅದ್ಭುತಭಾವ, ಅಚ್ಚರಿ, ಆದರ, ಪ್ರೇಮ, ಭಕ್ತಿ, ಪೂಜ್ಯಭಾವ, ಇವೆಲ್ಲ ಶ್ರೀ. ಬಿರ್ಲಾ ಇವರಲ್ಲಿ ಸಾಕಷ್ಟಿವೆ. ಆದರೆ ಅವರು ಸ್ವತಂತ್ರ ಅಭಿಪ್ರಾಯ, ಸಮಾಲೋಚಕ ಬುದ್ಧಿ, ನಿರ್ಭಯಚಿತ್ತದಿಂದ ಪ್ರಾಮಾಣಿಕ ಮತಪ್ರಕಟನೆ, ಇವುಗಳನ್ನು ಯಾರಿಗೂ ಮಾರಿಕೊಂಡಿಲ್ಲ. ಅಲ್ಲಲ್ಲಿ ಅವರು ಉಪಯೋಗಿಸಿದ

ತರ್ಕ, ಮಂಡಿಸಿದ ಯುಕ್ತಿವಾದ, ಎಸೆದ ಮಾರ್ಮಿಕ ಟೀಕಾಸ್ತ್ರ ಇವು ಬಹಳ ಸೂಚಕ, ವಿಚಾರ ಪ್ರಚೋದಕ, ಹಾಗೂ ಮನಸಿಗೆ ಒಂದು ಬಗೆಯ ಉತ್ಸಾಹವನ್ನುಂಟು ಮಾಡುವಂತಹವು ಇವೆ.

ಗಾಂಧೀಜಿಯವರಿಗೆ ಯಾರಾದರೂ ನಿಕಟರಿದ್ದಾರೆಂದು ಹೇಳುವದು ಧೈರ್ಯದ ಮಾತು. ಎಲ್ಲರಿಂದ ಅವರು ಅಷ್ಟು ದೂರವಿದ್ದಂತೆ ತೋರುವದು. ಆದರೂ ದೊಡ್ಡಸ್ತಿಕೆಯಲ್ಲಿ ದೂರವಿದ್ದರೂ ಅವರು ತಮ್ಮ ಪ್ರೇಮಸಾಮ್ರಾಜ್ಯದಲ್ಲಿ ಅನೇಕರಿಗೆ ತೀರ ಸಮೀಪದ ಸ್ಥಾನವನ್ನು ಕೊಟ್ಟಿರುವರು. ಆ ರೀತಿ ಗಾಂಧೀಜಿಯವರಿಗೆ ನಿಕಟರಿದ್ದವರಲ್ಲಿ ಶ್ರೀ. ಬಿರ್ಲಾ ಇವರು ಬಹಳ ಸಮೀಪದವರು ಎಂಬಲ್ಲಿ ಸಂಶಯವಿಲ್ಲ. ಈಗ ೨೫ ವರ್ಷ ಗಾಂಧೀಜಿಯವರ ಸಹವಾಸದಲ್ಲಿದ್ದಾರೆ. ಆದುದರಿಂದ ಗಾಂಧೀಜಿಯವರ ಬಗ್ಗೆ ಜಗತ್ತಿಗೆ ಗೊತ್ತಿಲ್ಲದ ಅನೇಕ ಸಂಗತಿಗಳು ಅವರಿಗೆ ಗೊತ್ತಿವೆ. ಈ ಪುಸ್ತಕದಲ್ಲಿ ಶ್ರೀ. ಬಿರ್ಲಾ ಇವರು ಗಾಂಧೀಜಿಯವರ ಈಗಿನ ಮುಖ್ಯ ಮುಖ್ಯ ಸತ್ಪ್ರವೃತ್ತಿಗಳ ಉಗಮಸ್ಥಾನವನ್ನೂ .ಹಾಗೂ ಉದಯಕಾಲವನ್ನೂ ಹುಡುಕಲೆತ್ನಿಸಿರುವರು. ಗಾಂಧೀ ಎಂದರೊಂದು ಅವತಾರ, ಅವರನ್ನು ಗುಡಿಯಲ್ಲಿಟ್ಟು ಪೂಜಿಸಬೇಕು, ಎಂದು ಭಾವಿಸದೆ ಅವರಲ್ಲಿ ಈಗ ಪ್ರಕಾಶಮಾನವಾಗುತ್ತಿರುವ ಗುಣಗಳು ಹೇಗೆ, ಏಕೆ, ಎಲ್ಲಿ ಪ್ರಕಟವಾದವು ಇದನ್ನು ನಿರ್ಣಯಿಸಿ ಹೇಳಲು ಅವರು ಹೆಣಗಿದ್ದಾರೆ. ತಕ್ಕಮಟ್ಟಿಗೆ ಆ ಕೆಲಸದಲ್ಲಿ ಅವರಿಗೆ ಯಶಸ್ಸು ದೊರೆತಿದೆ. ಶ್ರೀ. ಬಿರ್ಲಾ ಇವರ ಬರೆಹದಲ್ಲಿ ನನಗೆ ಗೋಚರವಾದ ಇನ್ನೊಂದು ಸಂಗತಿ ಎಂದರೆ ಅವರು ಗಾಂಧೀಜಿಯವರ ಬಗ್ಗೆ ಬರೆಯುವಾಗ ಒಂದು ಯಾವುದೋ ದೂರಿನ ವಸ್ತುವಿನ ಬಗ್ಗೆ ಬರೆದಂತೆ ಭಾಸವಾಗುವದಿಲ್ಲ. ನಮ್ಮೆದುರು, ನಮ್ಮ ಹತ್ತಿರ, ನಮ್ಮ ಮುಂದೆಯೇ ಆ ವಸ್ತುವನ್ನಿಟ್ಟುಕೊಂಡು ಅತಿ ಪರಿಚಯದ ಗೆಳೆಯರು ಯಾವ ರೀತಿ ಆ ಬಗ್ಗೆ ಚರ್ಚಿಸಬೇಕೊ ಆ ರೀತಿ ಅವರು ಬರೆದಿರುವರು.

ಗಾಂಧೀಜಿಯವರೆಂದರೆ ಒಂದು ಗೂಢ, ಒಂದು ಯಕ್ಷ, ಒಂದು ಒಗಟು ಎಂದು ಶ್ರೀ. ಬಿರ್ಲಾ ಇವರು ತಮ್ಮ ಪುಸ್ತಕದಲ್ಲಿ ಎಷ್ಟೋ

ಕಡೆಗೆ ಅಂದಿರುವರು. ಆದರೆ ಒಂದು ರೀತಿ ನೋಡಿದರೆ ಶ್ರೀ. ಬಿರ್ಲಾ ಇವರು ಗಾಂಧೀಜಿಯುವರನ್ನು 'ಪಾರದರ್ಶಿ' ಕನ್ನಡಿಯಂತೆ ಮಾಡಿ ಬಿಟ್ಟಿದ್ದಾರೆ. ಈ ಚಿಕ್ಕ ಪುಸ್ತಕವನ್ನೋದಿದರೆ ಗಾಂಧೀಜಿಯುವರ ಚಿತ್ತ ವೃತ್ತಿಗಳ ಚಿತ್ರವನ್ನೆ ನೋಡಿದಂತಾಗುವದು. ಸುತ್ತಲು ಕನ್ನಡಿಯಿದ್ದ ಗಡಿಯಾರಗಳು ಹಲವು ಇರುವವು. ಅವನ್ನು ನೋಡಿದರೆ ಒಳಗಾಲಿ ಗಳೆಲ್ಲ ಹೇಗೆ ತಿರುಗುವವೆಂಬುದನ್ನು ಚನ್ನಾಗಿ ನಿರೀಕ್ಷಿಸಬಹುದು. ಶ್ರೀ. ಬಿರ್ಲಾ ಇವರ ಲೇಖನವು ಅದೇ ಬಗೆ ಇದೆ. ಗಾಂಧೀಜಿಯುವರು ಅವರಿಗೆ ಅಷ್ಟು ಸಮೀಪದವರು, ಪರಿಚಯಸ್ಥರು. ಅತೀವ ತಮ್ಮ ವರು ಎಂಬ ಭಾವನೆಯಿಂದ ಅವರು ಬರೆದಿರುವರು. ಗಾಂಧೀಜಿಯುವರ ಜೀವನ ಹಾಗು ಕಾರ್ಯ ಇವು ಕೇವಲ ರಾಷ್ಟ್ರವ್ಯಾಪಿಯಲ್ಲ, ಅವು ಲೋಕವ್ಯಾಪಿ ಇರುವವು. ಹೀಗಿದ್ದರೂ ಮುಖ್ಯ ಸಂಗತಿಗಳನ್ನೆಲ್ಲ ಒಳ್ಳೆ ಅಚ್ಚುಕಟ್ಟಾಗಿ ಈ ಚಿಕ್ಕ ಪುಸ್ತಕದಲ್ಲಿ ಒಬ್ಬ ಕುಶಲ ರೇಖಾ ಚಿತ್ರಕಾರನಂತೆ ಅವರು ಬರೆದಿರುವರು. ಪುಸ್ತಕವು ಸಣ್ಣದಾಗಿ ತೋರಿ ದರೂ ಓದಿದ ಬಳಿಕ 'ಇದರಲ್ಲಿ ಎಲ್ಲವೂ ಇದೆಯಲ್ಲ' ಎನ್ನಬೇಕಾಗು ವದು.

ಇನ್ನು ಇವರ ಹಿಂದೀ ಶೈಲಿ ಸಹ ಬಹಳ ಸುಂದರವಿದೆ. ಮೊದಲನೆ ಮಾತೆಂದರೆ ಅದು ಹಗುರಿದೆ. ಸಾಹಿತ್ಯವನ್ನು ನಿರ್ಮಾಣ ಮಾಡಬೇಕೆಂದು ಅವರು ಬರೆಯುದೆ ಇದ್ದರೂ ಈ ಪುಸ್ತಕವು ಒಳ್ಳೆ ಸಾಹಿತ್ಯವೆನಿಸುವಂತಿದೆ. ಅತಿಶಯ ಜಟಿಲ ಸಮಸ್ಯೆಗಳನ್ನು ಸಹ ಅವರು ಅತಿ ಸುಲಭವಾಗಿ ವಿವರಿಸಿ ತಿಳಿಹೇಳಿರುವರು. ಮನೆ ಮಾತು ಹೇಳುವಂತೆ ನೇರವಾಗಿ ಬರೆದು ಬಿಟ್ಟಿರುವರು. 'ತ್ಯಾಗ ಭೂಮಿ' ಯಂತಹ ಉಚ್ಚ ವರ್ಗದ ಮಾಸಿಕದಲ್ಲಿ ಆರ್ಥಿಕ ಮುಂತಾದ ಕಠಿಣ ವಿಷಯುಗಳನ್ನು ಕುರಿತು ಎಲ್ಲರಿಗೂ ತಿಳಿಯುವಂತಹ ಅನೇಕ ಲೇಖಗಳನ್ನು ಬರೆದಿರುವರು. ಈ ಪುಸ್ತಕದಲ್ಲಿ ಅವರ ಶೈಲಿಯಲ್ಲಿಯ ಅನೇಕ ಗುಣಗಳು ಒಳ್ಳೆ ಎದ್ದು ಕಾಣಿಸುತಿವೆ.

ಶ್ರೀ. ಮಹಾದೇವಭಾಯಿಯುವರು ಈ ಪುಸ್ತಕಕ್ಕೆ ಪ್ರಸ್ತಾವನೆ ಬರೆದು ಇದನ್ನು ಕೊಂಡಾಡಿದ್ದಾರೆ. ಒಂದೇ ಒಂದು ವಿಷಯದ ಬಗ್ಗೆ

ಅವರು ತಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ. ವಾಚಕರು ಅದನ್ನು ಲಕ್ಷಿಸುವದು ಅತ್ಯವಶ್ಯ.

ಇನ್ನು ಕನ್ನಡದಲ್ಲಿ ಬರೆಯುವಾಗ ನಾನು ಛಾಯಾನುವಾದ ಮಾಡುವ ಪದ್ಧತಿಯನ್ನು ಅನುಸರಿಸಿರುವೆನು. ಅದು ಎಷ್ಟರಮಟ್ಟಿಗೆ ಸಾಧಿಸಿದೆ ಎಂಬ ಮುಂತಾದ ಮಾತುಗಳನ್ನು ನಾನು ವಾಚಕರಿಗೆ ಬಿಡುತ್ತೇನೆ. ಇಲ್ಲಿ ವಿಷಯವು ಮಹತ್ವದ್ದು, ಭಾಷೆ ಗೌಣ ಎಂದು ಬೇರೆ ಹೇಳಬೇಕಾಗಿಲ್ಲ. ಕನ್ನಡದಲ್ಲಿ ಈ ವಿಷಯವು ಬೇಕಾಗಿತ್ತು ಎಂದು ನನ್ನ ಮನವರಿಕೆಯಾದುದರಿಂದ ಈ ಪ್ರಯತ್ನವನ್ನು ಮಾಡಿರುವೆ. ಕನ್ನಡಿಗರು ಇತ್ತ ಲಕ್ಷಗೊಟ್ಟು ಮನ್ನಿಸಬೇಕೆಂದು ಬಿನ್ನಹ.

ಹುಬ್ಬಳ್ಳಿ
೨೮–೧–೪೧

**ರಂಗನಾಥ ದಿವಾಕರ**

# ಪ್ರಸ್ತಾವನೆ

ಗೀತೆಯನ್ನು ಕುರಿತು ಬರೆಯುವುದು ಸುಲಭ ಎಂದು ಯಾರಾ ದರೂ ಅನ್ನುತ್ತಿದ್ದರೆ ಗಾಂಧೀಜಿಯವರನ್ನು ಕುರಿತು ಬರೆಯುವದೂ ಸುಲಭ ಎಂದು ಹೇಳಬಹುದು! ಯಾಕಂದರೆ ಗೀತೆಯನ್ನು ಕುರಿತು ಬರೆಯುವವನು ಕೇವಲ ಗೀತಾಭಾಷ್ಯವನ್ನು ಬರೆಯಲಾರ. ಆ ಭಾಷ್ಯ ದಲ್ಲಿ ಅವನ ಅಂತರಂಗದ ಚಿತ್ರವೂ ಒಡಮೂಡಿ ಬಿಡುವದು. ಲೋಕ ಮಾನ್ಯರು 'ಗೀತಾ ರಹಸ್ಯ'ವನ್ನು ಬರೆದರು. ಅದರಲ್ಲಿ ಅವರ ಜೀವ ನವೂ ಪ್ರತಿಬಿಂಬಿತವಾಗಿದೆ. ಅದೇ ರೀತಿ 'ಅನಾಸಕ್ತಿಯೋಗ'ದಲ್ಲಿ ಗಾಂಧೀಜಿಯವರ ಜೀವನವು ಪ್ರತಿಬಿಂಬಿಸಿದೆ. ಗಾಂಧೀಜಿಯವರ ಜೀವನವನ್ನು ಸಮಾಲೋಚಿಸುವಾಗ ಸಹ ಲೇಖಕನು ತನ್ನ ಜೀವನದ ಚಿತ್ರವನ್ನೂ ರೇಖಿಸಿ ಬಿಡುವನು.

ಇನ್ನೊಂದು ಸಂಗತಿಯೇನಂದರೆ ಗೀತೆ ಎಲ್ಲರೂ ಓದಲಿಕ್ಕೆ ಬರುವಂಥ ಒಂದು ತೆರೆದಿಟ್ಟ ಪುಸ್ತಕವು. ಗಾಂಧೀಜಿಯವರ ಜೀವನವು ಕೂಡ ಒಂದು ತೆರೆದಿಟ್ಟ ಪುಸ್ತಕದಂತೆಯೇ ಇದೆ. ಅದರಲ್ಲಿ ಮುಚ್ಚು-ಮರೆ ಯಾವುದೂ ಇಲ್ಲ. ಗೀತೆಯನ್ನು ದೊಡ್ಡ ದೊಡ್ಡ ವಿದ್ವಾಂಸರು ಓದುವದಂತೂ ಸೈ. ಸಾವಿರಾರು ನಿರಕ್ಷರರು ಕೂಡ ಅದನ್ನು ಶ್ರದ್ಧೆಯಿಂದ ಅನ್ನುವರು. ಗಾಂಧೀಜಿಯವರ ಜೀವನದ ವಿಶೇಷತಃ ಅವರ ಆತ್ಮಕಥೆಯ ಮಾತು ಹೀಗೆಯೆ ಇದೆ. ಗೀತೆಯು ಎಲ್ಲರಿಗೂ ಉಪಯುಕ್ತವಾದ ವಸ್ತು, ಅದೇ ರೀತಿ ಗಾಂಧೀಜಿಯವರ ಜೀವನವು ಎಲ್ಲರಿಗೂ ಉಪಯುಕ್ತ. ಗೀತೆಯಿಂದ ವಿದ್ವಾಂಸರಿಗೆ ಹೆಚ್ಚು ಲಾಭವೊ

ಶ್ರದ್ಧಾಯುಕ್ತ ನಿರಕ್ಷರರಿಗೆ ಹೆಚ್ಚು ಲಾಭವೋ ಎಂಬುದು ವಿಚಾರಣೀಯ ವಿಷಯವು. ಗಾಂಧೀಜಿಯವರ ಮಾತೂ ಹಾಗೆಯೆ. ಗಾಂಧೀಜಿ ಯವರ ಜೀವನವನ್ನೂ, ಅವರ ಸಿದ್ಧಾಂತಗಳನ್ನು ಅರಿತುಕೊಳ್ಳಲು ವಿದ್ವತ್ತೆಯ ಇಲ್ಲವೆ ಲೇಖನ ಶಕ್ತಿಯ ಅವಶ್ಯಕತೆ ಇಲ್ಲ. ಸಹೃದಯ ಅಂತಃಕರಣ, ಸತ್ಯಶೀಲತೆ ಈ ಎರಡು ಗುಣಗಳು ಸಾಕು. ಶ್ರೀ. ಘನ ಶ್ಯಾಮದಾಸಜೀಯವರು ವಿದ್ವಾಂಸರೆಂದು ಅಥವಾ ಲೇಖಕರೆಂದು ಎಣಿಸಲ್ಪಡುವರೊ ಇಲ್ಲವೊ ನಾನರಿಯೆ. ಆದರೆ ಜನರು ಅವರಿಗೆ ಓರ್ವ ದೊಡ್ಡ ಧನಿಕರೆಂದು ಅನ್ನುವದು ನಿಜ. ಅವರು ಧನದ ಮಾಯೆಯಿಂದ ಅಲಿಪ್ತರಿರಲು, ತಮ್ಮ ಹೃದಯವನ್ನು ಸ್ಫಟಿಕದಂತೆ ನಿರ್ಮಲಗೊಳಿಸಲು, ತಮ್ಮ ಬುದ್ಧಿ ಹಾಗೂ ವಾಣಿಯನ್ನು ಸತ್ಯ ಪೂತವಾಗಿಡಲು ಆದಷ್ಟು ಪ್ರಯತ್ನವನ್ನು ಮಾಡಿರುವರು ಎಂಬುದನ್ನು ಬಲ್ಲೆ. ಜಿಲಾ೯ಜಿಯವರು ಲೇಖಕರು ಅಥವಾ ವಿದ್ವಾಂಸರೆಂದು ಈವರೆಗೆ ಎಣಿಸಲ್ಪಟ್ಟಿರಲಿಕ್ಕಿಲ್ಲ. ಆದರೆ ಈಗ ಸರಲ ಹೃದಯ ಹಾಗೂ ಸತ್ಯಪೂತ ವಾಣಿ ಮತ್ತು ಬುದ್ಧಿಯಿಂದ ಮಾಡಲಾದ ಈ ಗಾಂಧೀ ಜೀವನದ ಸಮಾಲೋಚನೆಯು ಅವರನ್ನು ಉತ್ಕೃಷ್ಟ ಹಿಂದೀ ಲೇಖಕ ರೆಂದು ಪರಿಗಣಿಸಲು ಕಾರಣವಾಗುವದು. ಈ ಪುಸ್ತಕವು ಸಹ ಉತ್ತಮ ಸಮೀಕ್ಷಾ ಪುಸ್ತಕಗಳಲ್ಲಿ ಒಂದು ಎಂದು ಗಣಿಸಲಾಗುವದು.

ಶ್ರೀ. ಘನಶ್ಯಾಮದಾಸಜೀಯವರ ಲೇಖನ ಶಕ್ತಿಯ ಪರಿಚಯವು ನನಗೆ ಇದ್ದಷ್ಟು ಕದಾಚಿತ್ ಹಿಂದೀ ಜಗತ್ತಿಗೆ ಇರಲಿಕ್ಕಿಲ್ಲ. ಅವರ ನನ್ನ ಸಂಬಂಧವು ಬಹು ದಿವಸದ್ದು. ಹಿಂದೀಯಲ್ಲಿ ಬರೆದ ಅವರ ಪತ್ರಗಳು ಬಹಳ ಸರಲ ಹಾಗೂ ಸಾದಾ, ತೂಕವುಳ್ಳ, ಸಾರಗರ್ಭಿತ ಶೈಲಿಯ ಉತ್ತಮ ಉದಾಹರಣೆಗಳು. ಅವರ ಶೈಲಿಯತ್ತ ನನ್ನ ಮನಸು ಹೋದಂದಿನಿಂದ ಅವರು ಲೇಖ, ಪುಸ್ತಕ ಮುಂತಾದವುಗಳನ್ನು ಏಕೆ ಬರೆಯುವುದಿಲ್ಲ ಎಂದು ವಿಚಾರಿಸುತ್ತಿದ್ದೇನೆ. ಅವರ ಪತ್ರಗಳಲ್ಲಿ ಕಂಡು ಬರುವ ಆಕರ್ಷಕ ಶೈಲಿಯೆ ಈ ಪುಸ್ತಕದಲ್ಲಿಯೂ ಇರುವುದ ರಿಂದ ನನಗೆ ಬಹಳ ಆನಂದವಾಗಿದೆ.

ಬಿರ್ಲಾಜಿ ಮತ್ತು ಗಾಂಧೀಜಿಯವರ ಸಂಬಂಧ ಬಂದು ಈಗ ಇಪತ್ತೈದು ವರ್ಷಗಳಾದವು. ಈ ಇಪ್ಪತ್ತೈದು ವರ್ಷಗಳ ಸಂಬಂಧವನ್ನು ಕುರಿತು ಅವರು ಬರೆದುದೇನಂದರೆ, 'ನನ್ನ ಹಾಗೂ ಗಾಂಧೀಜಿಯವರ ಪ್ರಥಮ ದರ್ಶನವಾದಂದಿನಿಂದ ಈವರೆಗೆ ನಮ್ಮ ಸಂಬಂಧವು ಅವಿಚ್ಛಿನ್ನವಾಗಿ ನಡೆದು ಬಂದಿದೆ. ಹಲವು ದಿನ ನಾನು ಅವರ ಬಳಿ ಸಮಾಲೋಚಕ ದೃಷ್ಟಿಯಿಂದ ಹೋಗುತಿದ್ದೆ, ಅವರ ದೋಷಗಳನ್ನು ಹುಡುಕಲು ಯತ್ನಿಸುತಿದ್ದೆ. ಯಾಕಂದರೆ ನವಯುವಕರ ಆರಾಧ್ಯ ಮುಖಂಡರಾದ ಲೋಕಮಾನ್ಯರ ಕೀರ್ತಿಗೆ ಸರಿ ಮಿಗಿಲಾಗಿ ಇವರ ಕೀರ್ತಿ ಬೆಳೆಯಲಾರಂಭಿಸಿತ್ತು. ಇದು ನನಗೆ ಸರಿ ಎನಿಸಲಿಲ್ಲ. ಆದರೆ ದೋಷಗಳನ್ನು ಹುಡುಕಲು ನಾನು ಪ್ರಯತ್ನ ಮಾಡುತ್ತ ಹೋದ ಹಾಗೆಲ್ಲ ನಾನು ನಿರಾಶನಾಗುತ್ತ ಹೋದೆನು ಹಲವು ವರ್ಷಗಳಲ್ಲಿ ಆ ವಿಮರ್ಶಾತ್ಮಕ ಬುದ್ಧಿಯು ಪಲ್ಲಟಿಸಿ ಆದರಭಾವವು ಉತ್ಪನ್ನವಾಯಿತು. ಆ ಆದರವು ಮುಂದೆ ಭಕ್ತಿರೂಪವನ್ನು ತಾಳಿತು. ಗಾಂಧೀಜಿಯವರ ಸಂಸರ್ಗದಿಂದ ಪ್ರಭಾವಾನ್ವಿತವಾಗದೆ ಇದ್ದ ವ್ಯಕ್ತಿ ಸಿಕ್ಕುವದು ಕಠಿಣ. ಅವರ ಸ್ವಭಾವವೆ ಹಾಗೆ.' ಘನಶ್ಯಾಮದಾಸಜಿ ಬಿರ್ಲಾ ಇವರು ಪ್ರಭಾವಾನ್ವಿತರಾಗದೆ ಉಳಿದಿಲ್ಲ ಎಂಬುದನ್ನಂತೂ ನಾನು ಹೇಳಬಲ್ಲೆ. ಅವರು ಬರೆದುದು, 'ಗಾಂಧೀಜಿಯವರ್ಕೊಡನೆ ಈಗ ಇಪ್ಪತ್ತೈದು ವರ್ಷ ನನ್ನ ಸಂಬಂಧವಿದೆ. ಅತ್ಯಂತ ಸಮೀಪ ಇದ್ದು ಬಹಳೇ ಸೂಕ್ಷ್ಮದೃಷ್ಟಿಯಿಂದ ನಾನು ಅವರ ಜೀವನವನ್ನು ಅಭ್ಯಸಿಸಿದ್ದೇನೆ. ಸಮಾಲೋಚಕನಂತೆ ಛಿದ್ರಾನ್ವೇಷಣ ಮಾಡಿದ್ದೇನೆ. ಆದರೆ ಅವರು 'ಮಲಗಿದುದನ್ನು' ನಾನು ಎಂದೂ ನೋಡಿಲ್ಲ. ಅವರು ಯಾವಾಗಲೂ ಸಾವಧಾನಚಿತ್ತರು. ಅರ್ಥಾತ್ ಇದೊಂದು ಸುದೈವ ಜಾಗ್ರತ ಜೀವ' ಈ ಮಾತು ಗಾಂಧೀಜಿಯವರನ್ನಂತೂ ಅನ್ವಯಿಸುವದು ನಿಶ್ಚಯ. ಅದೇ ರೀತಿ ಬಿರ್ಲಾಜಿಯವರನ್ನೂ ಅನ್ವಯಿಸುವದು. ಯಾಕಂದರೆ ಗಾಂಧೀಜಿಯವರು ತಾವು ಸ್ವತಃ 'ಮಲಗುವದಿಲ್ಲ' ಇಷ್ಟೇ ಅಲ್ಲ, ತಮ್ಮೊಡನೆ ಸಂಬಂಧ ಬಂದವರನ್ನಾರನ್ನೂ 'ಗಮಲಗೊಡುವುದಿಲ್ಲ.'

ಒಳ್ಳೇ ಅಧ್ಯಯನ, ಅನುಭವ ಹಾಗೂ ಸಮಾಲೋಚನ ಇವುಗಳ ಫಲಸ್ವರೂಪವಾಗಿ ಈ ಪುಸ್ತಕವು ಬರೆಯಲಾಗಿದೆ. ಒಂದೊಂದು ಸಣ್ಣದೊಡ್ಡ ಸಂಗತಿಯನ್ನು ಸಮಾಲೋಚಿಸಿ ಆವರು ಗಾಂಧೀ ಜೀವನವನ್ನು ಅಭ್ಯಸಿಸಲು ಯತ್ನಿಸಿರುವರು. ಮೊಟ್ಟಮೊದಲು ಭೆಟ್ಟಿಯಾದ ನಂತರ ಅವರು ಗಾಂಧೀಜಿಯವರಿಗೆ ಒಂದು ಪತ್ರ ಬರೆದರು. ಒಂದು ಪೋಸ್ಟಕಾರ್ಡಿನ ಮೇಲೆ ಉತ್ತರ ಬಂದಿತು. ಆಬಗ್ಗೆ 'ಹಣದ ಮಿತವ್ಯಯವಂತೂ ಸೈ. ಅದರೊಡನೆ ಶಬ್ದಗಳ ಮಿತವ್ಯಯವೂ ಅದರಲ್ಲಿ ಒಡೆದು ಕಾಣುತ್ತಿತ್ತು' ಎಂದು ಬಿರ್ಲಾಜಿ ಬರೆದಿರುವರು. ಇದು ಸಾಮಾನ್ಯ ಸಂಗತಿ. ಆದರೆ ಬಿರ್ಲಾಜಿಯವರು ಗಾಂಧೀಜಿಯವರ ಜೀವನದ ಒಂದು ವೈಶಿಷ್ಟ್ಯವನ್ನೇ ಇಲ್ಲಿ ಕಂಡು ಹಿಡಿದಿರುವರು. ಒಂದು ಕಡೆಗೆ 'ಈ ರೀತಿ ಗಾಂಧೀಜಿಯವರು ಎಷ್ಟು ತರುಣರ ಮನಸಿನ ಮೇಲೆ ತಮ್ಮ ವರ್ಚಸ್ಸನ್ನು ಬೀರಿರುವರೋ, ಎಷ್ಟು ತರುಣರ ಮನಸು ಅವರನ್ನು ಕುರಿತು ತೊಡಕಿನಲ್ಲಿ ಬಿದ್ದಿರುವದೋ, ಎಷ್ಟು ಜನರ ಕುತೂಹಲಕ್ಕೆ ಅವರು ಪಾತ್ರರಾಗಿರುವರೋ ನಾನು ಹೇಳಲಾರೆ. ಇಷ್ಟು ಮಾತ್ರ ಹೇಳಬಹುದು- ೧೯೧೫ರಲ್ಲಿ ಅವರು ಒಂದು ಒಗಟಿನಂತೆ ಎಷ್ಟು ರಹಸ್ಯಮಯರಿದ್ದರೋ ಅಷ್ಟೇ ಈಗ್ಯೂ ಇರುವರು.

ಇದು ಸರಿ. ಆದರೆ ಗಾಂಧೀಜಿಯವರ ಎಷ್ಟೋ 'ಗೂಢ'ಗಳನ್ನು ಬಿರ್ಲಾಜಿಯವರು ಈ ಪುಸ್ತಕದಲ್ಲಿ ಉತ್ತಮ ರೀತಿಯಿಂದ ಬಿಡಿಸಿರುವರು.

ಗೀತೆಯು ಇಷ್ಟೊಂದು ಸಾದಾ ಮತ್ತು ಸರಲವಾದ ಪುಸ್ತಕವಿದ್ದರೂ ಅದು ಒಗಟುಗಳಿಂದ ತುಂಬಿದಂತಿದೆ. ಗಾಂಧೀಜಿಯವರ ಜೀವನವೂ ಅದೇ ತರಹ. ಹಲವು ದಿನಗಳ ಹಿಂದೆ ರಾಮಕೃಷ್ಣ ಮಠದ ಸ್ವಾಮಿಗಳೊಬ್ಬರು ಇಲ್ಲಿಗೆ ಬಂದಿದ್ದರು. ಒಳ್ಳೆ ಸಜ್ಜನರು, ಗಾಂಧೀಜಿಯವರ ಬಗ್ಗೆ ಅವರಿಗೆ ಒಳ್ಳೆ ಆದರ. ಗ್ರಾಮೋದ್ಯೋಗದ ತತ್ವಾರ್ಥವನ್ನು ತಿಳಿದುಕೊಳ್ಳಲು ಅದೇ ರೀತಿ ನೂಲುವ ಹಿಂಜುವ ಉದ್ಯೋಗವನ್ನು ಕಲಿತುಕೊಂಡು ತಮ್ಮ ಸಮಾಜದಲ್ಲಿ ಅದರ

ಪ್ರಚಾರ ಮಾಡುವ ಉದ್ದೇಶದಿಂದ ಅವರು ಇಲ್ಲಿಗೆ ಬಂದಿದ್ದರು. ಅವರು ಒಂದು ದಿನ ನನ್ನನ್ನು ಕೇಳಿದ್ದು, ಗಾಂಧೀಜಿಯವರ ಏಕಾಗ್ರತೆ ಯನ್ನು ನೋಡಿ ನನಗೆ ಆಶ್ಚರ್ಯವಾಗುವದು, ಪರಮಾತ್ಮನಲ್ಲಿರುವ ಅವರ ಶ್ರದ್ಧೆಯೂ ಆಶ್ಚರ್ಯಕರವು. ಎಂದಾದರೂ ಅವರು ಭಾವಾ ವಿಷ್ಟರಾಗುವರೊ? ಅವರು ಧ್ಯಾನದಲ್ಲಿ ನಿತ್ಯ ಏನಾದರೂ ಕಾಲ ಕಳೆಯುವರೊ? ಇಲ್ಲವೆಂದು ನಾನು ಉತ್ತರಿಸಿದೆನು. ಯಾವ ಬಾಹ್ಯ ಚಿನ್ಹವಿಲ್ಲದೆ ಗಾಂಧೀಜಿಯವರು ದೊಡ್ಡ ಭಕ್ತರು ಹಾಗೂ ಯೋಗಿ ಗಳು ಇದ್ದುದನ್ನು ನೋಡಿ ಅವರಿಗೆ ಬಹಳ ಆಶ್ಚರ್ಯವಾಗಿ ಇದೊಂದು ಗೂಢವೆ ಇದೆ ಎಂದರು. ಇಂಥ ಗೂಢಗಳು ಗಾಂಧೀಜಿಯವರ ಜೀವನದಲ್ಲಿ ಎಷ್ಟೋ ಇವೆ. ಅವುಗಳಲ್ಲಿಯ ಎಷ್ಟೋ ಗೂಢಗಳನ್ನು ಸಫಲತೆಯಿಂದ ವಿವರಿಸಿ ಬಿಡಿಸಿ ಬಿರ್ಲಾಜಿಯವರು ಈ ಪುಸ್ತಕದಲ್ಲಿ ಹೇಳಿರುವರು.

ಒಂದು ಉದಾಹರಣೆ ಕೊಳ್ಳಬಹುದು. ಅಹಿಂಸೆಯಿಂದ ನಾವು ನಮ್ಮ ಸೊತ್ತನ್ನು ರಕ್ಷಿಸಬಲ್ಲೆವೊ ಎಂಬ ಪ್ರಶ್ನೆ ಮೇಲಿಂದ ಮೇಲೆ ಕೇಳಲಾಗುತ್ತದೆ. ಈ ಪ್ರಶ್ನೆಗೆ ಬಿರ್ಲಾಜಿಯವರು ಎಂತಹ ಸುಂದರ ಭಾಷೆಯಲ್ಲಿ ಉತ್ತರ ಕೊಟ್ಟಿರುವರು.

'ಸಿರಿ ಸಂಪತ್ತಿಯ ಸಂಗ್ರಹ, ಆಸ್ತಿಪಾಸ್ತಿಗಳ ರಕ್ಷಣೆ ಅಹಿಂಸೆ ಯಿಂದ ಆಗಬಲ್ಲದೊ? ಈ ಪ್ರಶ್ನೆಗೆ ಅಹುದು, ಇಲ್ಲ, ಎಂದು ಇಬ್ಬಗೆಯ ಉತ್ತರ ಕೊಡಬೇಕಾಗುವದು. ತಮ್ಮ ಸ್ವಂತ ಉಪಯೋಗಕ್ಕಾಗಿ ಸಂಗ್ರಹ ಮಾಡಿಟ್ಟುಕೊಂಡವರಿಗೆ ಅಹಿಂಸಾನೀತಿ ಅನ್ವಯಿಸಲಾಗದು. ಅಹಿಂಸೆಯೆಂದರೆ, ನಾನು ಸಂಗ್ರಹ ಮಾಡದಿದ್ದರೆ ಸಾಯುವೆನು ಎಂಬ ಭಯಭೀತಿಯ ವೃತ್ತಿಯಲ್ಲಿ ನಿಜವಾದ ಅಹಿಂಸೆಯು ಸ್ವಾರ್ಥಕ್ಕಾಗಿ ಸಂಗ್ರಹ ಮಾಡಲು ಹೇಳುವದಿಲ್ಲ. ಅಹಿಂಸಕನಿಗೆ ಲೋಭವೆಲ್ಲಿಯದು? ತನ್ನ ಸ್ವಂತ ಉಪಯೋಗಕ್ಕಾಗಿ ಸಂಗ್ರಹಿಸುವ ಇಲ್ಲವೆ ಸಂರಕ್ಷಿಸುವ ಪ್ರಸಂಗವು ಅಹಿಂಸಕನ ಮೇಲೆ ಬರುವದೇ ಇಲ್ಲ. ಅಹಿಂಸೆಯ ಪೂಜ ಕನು ಯೋಗಕ್ಷೇಮದ ಗದ್ದಲದಲ್ಲಿ ಸಿಕ್ಕುವದು ಕ್ವಚಿತ.'

'ನಿಯೋರ್ಗಕ್ಷೇಮ ಆತ್ಮವಾನ್' ನೀನು ಆತ್ಮವಂತನೂ ಯೋಗಕ್ಷೇಮದ ಚಿಂತೆಬಿಟ್ಟವನೂ ಆಗು, ಎಂದು ಅರ್ಜುನನಂಥ ಗೃಹಸ್ಥನಿಗೆ ಗೀತೆಯು ಹೇಳುವದು, ಇದು ಸನ್ಯಾಸಧರ್ಮವೆಂದು ಗೀತೆಯು ಹೇಳಿಲ್ಲ. ಗೀತೆಯು ಸನ್ಯಾಸ ಧರ್ಮವನ್ನು ಕಲಿಸಲು ಪ್ರವೃತ್ತವಾಗಿಲ್ಲ. ಕರ್ಮವನ್ನು-ಗೃಹಸ್ಥರ ಧರ್ಮವಾದ ಕರ್ಮವನ್ನು ಉಪದೇಶಿಸಲು ಗೀತೆಯು ಅವತಾರವಿರುವದು. ಅಹಿಂಸಾವಾದಿಯ ಶುದ್ಧಧರ್ಮವೂ ಅವನಿಗೆ ಯೋಗಕ್ಷೇಮದ ಜಂಜಾಟದಿಂದ ದೂರ ವಿರಲು ಹೇಳುವದು. ಆದರೆ ಸಂಗ್ರಹ ಹಾಗೂ ರಕ್ಷಣೆ ಇವು 'ಸ್ವ' ಹಾಗೂ 'ಪರ' ಈ ಎರಡೂ ಕಾರಣಗಳಿಗಾಗಿ ಇರಬಲ್ಲವು. ಸ್ವಾರ್ಥ ಸಂಗ್ರಹ ಮಾಡುವವರು ಗಾಂಧೀಜಿಯವರ ದೃಷ್ಟಿಯಿಂದ 'ಟ್ರಸ್ಟಿಗಳು,' ವಿಶ್ವಸ್ತರು, ಧರ್ಮದರ್ಶಿಗಳು. ಅವರು ಅನಾಸಕ್ತರಾಗಿ ಯೋಗ ಕ್ಷೇಮಗಳನ್ನು ಲಕ್ಷಿಸಬಹುದು. ಅವರು ಸಂಗ್ರಹಿಗಳಾದರೂ ಅಹಿಂಸಾ ವಾದಿಗಳು. ಯಾಕಂದರೆ ಆ ಸಂಗ್ರಹದಲ್ಲಿ ಅವರಿಗೆ ಆಸಕ್ತಿ ಇಲ್ಲ. ಧರ್ಮಕ್ಕಾಗಿ ಮಾಡಿದ ಸಂಗ್ರಹವನ್ನು ಅನಾಯಾಸವಾಗಿ ಬಿಟ್ಟು ಬಿಡುವದೂ ಸಾಧ್ಯವು. ಆ ಸಂಗ್ರಹವನ್ನು ಸಂರಕ್ಷಿಸುವ ಪ್ರಶ್ನೆ ಬಂದರೆ ಧರ್ಮದಿಂದಲೆ ಹಾಗೆ ಮಾಡಬೇಕಾಗುವದು, ಅಧರ್ಮ ದಿಂದಲ್ಲ. ಇದಕ್ಕೆ ವಿಪರೀತವಾಗಿ, ಸಂಗ್ರಹದಲ್ಲಿ ಆಸಕ್ತಿಯುಳ್ಳವರು ಅಹಿಂಸಾವಾದಿಗಳಾಗಲಾರರು, ಅಹಿಂಸೆಯಿಂದ ಸಂರಕ್ಷಣೆ ಮಾಡುವ ತತ್ವವೂ ಅವರ ವಿಷಯದಲ್ಲಿ ಉಪಯುಕ್ತವಾಗಲಾರದು. ಆದರೆ ಪೂರ್ಣ ಅಹಿಂಸಾತ್ಮಕ ನೀತಿಯಿಂದ ವರ್ತಿಸುವವರು, ಎಲ್ಲ ರೀತಿ ಯಿಂದಲೂ ಯೋಗ್ಯರಿದ್ದವರು, ತಮಗೆ ಅದು ಧರ್ಮವೆಂದು ತೋರಿ ದರೆ, ಕೇವಲ ಆತ್ಮಶಕ್ತಿಯಿಂದ ಯಾವದೊಂದು ಸಂಗ್ರಹದ ಸಂರಕ್ಷಣೆ ಮಾಡುವದು ಶಕ್ಯವಿರುವದು.'

'ಹಿಂಸಾ ಹಾಗೂ ಅಹಿಂಸಾ ಮಾರ್ಗಗಳನ್ನು ಪರಸ್ಪರ ಹೋಲಿಸಿ ನೋಡುವದು ಅಷ್ಟೊಂದು ಸಮಂಜಸವಲ್ಲ ಎಂಬುದನ್ನು ನಾವು ಲಕ್ಷದಲ್ಲಿಡಬೇಕು. ಈ ಎರಡು ಮಾರ್ಗಗಳ ಗುರಿಗಳೇ ಭಿನ್ನವಿರುವವು. ಹಿಂಸೆಯಿಂದ ಸಾಧಿಸತಕ್ಕ ಸಾಧ್ಯ - ಅದು ಕ್ಷಣಿಕವೇ ಇದ್ದರೂ—

ಅಹಿಂಸೆಯಿಂದ ಸಾಧಿಸದು. ಉದಾ: ನಾವು ಅಹಿಂಸಾಮಾರ್ಗ ದಿಂದ ಸಾಮ್ರಾಜ್ಯವನ್ನು ಕಟ್ಟಲಾರೆವು. ಅನ್ಯರ ದೇಶವನ್ನು ಸೂರೆ ಗೊಳ್ಳಲಾರೆವು. ಇಟಲಿಯು ಅಬಿಸೀನಿಯಾ ಗೆದ್ದು ತನ್ನ ಸಾಮ್ರಾಜ್ಯ ಸ್ಥಾಪನೆ ಮಾಡಿತು. ಇಂಥ ಕೆಲಸಗಳು ಹಿಂಸೆಯಿಂದಲೆ ಆಗಬಲ್ಲವು, ಅಹಿಂಸೆಯಿಂದಲ್ಲ.

ತಾತ್ಪರ್ಯವೇನಂದರೆ, ಅಹಿಂಸೆಯಿಂದ ನಾವು ಧರ್ಮವನ್ನು ರಕ್ಷಿಸಬಲ್ಲೆವು, ಅಧರ್ಮವನ್ನಲ್ಲ. ಸಂಗ್ರಹವು ಅಧರ್ಮಮೂಲಕ ವಿದ್ದಲ್ಲಿ ಅದರ ಸಂರಕ್ಷಣೆಯೂ ಅಹಿಂಸೆಯಿಂದಾಗಲಾರದು. ಅಹಿಂಸೆ ಯನ್ನು ಪ್ರೀತಿಸುವವರು ಅಧರ್ಮವನ್ನು ಇಲ್ಲವೆ ಪಾಪವನ್ನು ರಕ್ಷಿಸುವ ವಿಚಾರವನ್ನು ಮಾಡರು. ಈ ರೀತಿ ಅಹಿಂಸಾಕ್ಷೇತ್ರದ ಮರ್ಯಾದೆ ಗಳನ್ನು ನಾವು ಚನ್ನಾಗಿ ಅರಿತುಕೊಂಡರೆ ನಮ್ಮ ಅನೇಕ ಸಂಶಯ ಗಳ ನಿರಸನವು ತನ್ನಿಂತಾನೆ ಆಗಬಲ್ಲದು. ಯಾವದೊಂದು ವಸ್ತು ವನ್ನು ಸಂರಕ್ಷಿಸುವದು ನಮ್ಮ ಧರ್ಮ, ಎಂದೆನಿಸಿದರೆ ನಾವು ನಮ್ಮ ವಿರೋಧಿಗಳನ್ನು ಅಹಿಂಸೆಯಿಂದ ಸಫಲತಾಪೂರ್ವಕವಾಗಿ ಎದುರಿಸ ಬಲ್ಲೆವು. ಹಾಗೆ ಸಂರಕ್ಷಿಸುವದು ಪಾಪವೆಂದೆನಿಸಿದರೆ ಆ ವಸ್ತುವನ್ನು ನಾವಾಗಿ ತ್ಯಜಿಸಿಬಿಡತಕ್ಕದ್ದು. ಆ ಸಂದರ್ಭದಲ್ಲಿ ಪ್ರತಿಕಾರ ಮಾಡ ಬೇಕೆಂಬುದಕ್ಕೆ ಎಡೆಯೇ ಇಲ್ಲ? 'ಇನ್ನು ಧರ್ಮ ಅಧರ್ಮ ಇವುಗಳ ನಿರ್ಣಯ ಮಾಡುವ ಬಗೆ ಹೇಗೆ? ಸತ್ಯದ ಅನುಯಾಯಿಗೆ ಈ ಪ್ರಶ್ನೆ ಎಂದೂ ತೊಂದರೆ ಕೊಡಲಾರದು. ಒಬ್ಬ ಹಿಂದೀ ಕವಯಿತ್ರಿ, ಜಿನ ಖೋಜಾ ತಿನ ಪಾಯಿಯಾ ಗಹರೇ ಪಾನೀ ಪೈಠ, ಮೈ ಬೌರೀ ಢುಂಢನ ಗಯೀ, ರಹೀ ಕಿನಾರೇ ಬೈಠ,' ನೀರೊಳಗೆ ಮುಳುಗಿ ಹುಡು ಕಿದವಗೆ ಸಿಗತಕ್ಕದ್ದು ಸಿಕ್ಕು ಹೋಯಿತು. ಆದರೆ ಬಣ್ಣಾ (ಕೆಂಪು) ಹುಡುಕುತ್ತ ನಾನು ದಂಡೆಯ ಮೇಲೆ ಹಾಗೆಯೆ ಕುಳಿತೆನು, ಹೀಗೆ ಹೇಳಿರುವಳು. ನಮಗೆ ಅಡಚಣಿ ಬರುವ ಕಾರಣವೇನಂದರೆ ನಾವು ಅಧರ್ಮ ರಕ್ಷಿಸಲು ಎಸಗುವೆವು. ಅಹಿಂಸೆಯಿಂದ ಅಧರ್ಮರಕ್ಷಣೆ ಯಾಗದು. ಆದುದರಿಂದ ಅಹಿಂಸೆಯ ಪ್ರಭಾವವನ್ನು ಕುರಿತು ನನಗೆ

ಸಂಶಯವುಂಟಾಗುವದು ಹಾಗೂ ತಲೆತುಂಬ ತರ್ಕವಿತರ್ಕಗಳ ಗೊಂದಲವು ಏಳುವದು.'

ಈ ರೀತಿ ಬಿರ್ಲಾಜಿಯವರು ಎಷ್ಟೋ ಪ್ರಶ್ನೆಗಳನ್ನೆತ್ತಿ ಚರ್ಚಿಸಿರುವರು. ಆ ಚರ್ಚೆಯಲ್ಲಿ ಅವರ ಸೂಕ್ಷ್ಮ ಅವಲೋಕನ ಹಾಗೂ ಆಳವಾದ ಚಿಂತನ ಇವು ತುಂಬಿವೆ. ಅವರ ಧರ್ಮಚಿಂತನ ಹಾಗೂ ಧರ್ಮಗ್ರಂಥಗಳ ಅಧ್ಯಯನ ಇವುಗಳ ಬಗ್ಗೆ ನನಗೆ ಏನೂ ಗೊತ್ತಿರಲಿಲ್ಲ. ಈ ಪುಸ್ತಕದಲ್ಲಿ ಅದನ್ನೆಲ್ಲ ನಾವು ಕಾಣಬಹುದು. ಅವರು ಗೀತೆಯ ಹಲವು ಶ್ಲೋಕಗಳನ್ನು ಇಲ್ಲಿ ಉದಹರಿಸಿರುವರು. ಅವುಗಳ ರಹಸ್ಯವನ್ನು ಹೊಸ ರೀತಿಯಿಂದ ಹೇಳುವಾಗ ತಮ್ಮ ಬುದ್ಧಿಯ ಮೌಲಿಕ ಶಕ್ತಿಯನ್ನು ಅವರು ವ್ಯಕ್ತಪಡಿಸಿರುವರು.

ಬಿರ್ಲಾಜಿಯವರ ಸೂತ್ರಮಯ ಹಾಗೂ ಒಳ್ಳೆ ಮನದಟ್ಟಾಗುವ ಶೈಲಿಯ ಉದಾಹರಣೆಗಳಂತೂ ಈ ಪುಸ್ತಕದಲ್ಲಿ ಅಲ್ಲಲ್ಲಿ ಕಂಗೊಳಿಸುವವು. 'ನಿಜವಾಗಿ ನೋಡಿದರೆ ಶುದ್ಧಬುದ್ಧಿಯುಳ್ಳವನು ತಾನೇ ಒಂದು ಶಸ್ತ್ರವಿದ್ದಂತೆ. ಅದರ ಚಾಲಕನಾದರೂ ತಾನೇ ಇರುವನು.' 'ಹೊಲಸು ಬಟ್ಟೆಗಳ ಕೊಳೆಯನ್ನು ನಾವು ರಕ್ಷಿಸತೊಡಗಿದರೆ ನೀರು ಸಬಕಾರಗಳೇಕೆ ಬೇಕು? ಧೂಳ ಕೆಸರುಗಳೇ ನಮಗೆ ಬೇಕು.' ಆಕಾಶವಾಣಿ ಕೇಳಿಸಬೇಕಾದರೂ ಪಾತ್ರತೆ ಬೇಕು. ಸೂರ್ಯನ ಪ್ರತಿಬಿಂಬವು ಕನ್ನಡಿಯಲ್ಲಿ ಕಾಣಬಹುದು. ಕಲ್ಲಿನಲ್ಲಲ್ಲ.' ಸರಕಾರದವರು ಶಾಂತಿ, ಸಂರಕ್ಷಣೆ, ಪಾರತಂತ್ರ್ಯ ಇವುಗಳನ್ನು ಕೊಟ್ಟರು. ಅಂದಬಳಿಕ ನಮ್ಮ ಪ್ರತಿನಿಧಿಗಳನ್ನು ಅವರೇ ಏಕೆ ಆರಿಸಬಾರದು!' ನೀನು ಚಳಿಗಾಲದಲ್ಲಿ ದಕ್ಷಿಣಕ್ಕೆ ಬೇಸಿಗೆಯಲ್ಲಿ ಉತ್ತರಕ್ಕೆ ಏಕೆ ಸರಿಯುತ್ತೀ ಎಂದು ಸೂರ್ಯನನ್ನು ಕೇಳಿದರೆ ಅವನು ಏನು ಹೇಳಬಲ್ಲನು? ಚಳಿ ಬಿಸಿಲುಗಾಲಗಳು ದಕ್ಷಿಣಾಯನ ಉತ್ತರಾಯಣಗಳ ಮೂಲಕ ಸಂಭವಿಸುವವು ಹೊರತು ಅವುಗಳ ಮೂಲಕ ಈ ಅಯನಗಳಾಗುವದಿಲ್ಲ!

ಕೊನೆಯ ಉಪಮೆಯು ಎಷ್ಟು ಮನೋಹರ, ಮೌಲಿಕ ಮತ್ತು ಅರ್ಥಪೂರ್ಣವಿರುವದು? ಈ ದೃಷ್ಟಿಯಿಂದ ನೋಡಿದರೆ ಗಾಂಧೀಜಿ

ಯವರ ಜೀವನದಲ್ಲಿಯ ಎಷ್ಟೋ ಕಾರ್ಯಗಳ ಅರ್ಥವು ಸ್ಪಷ್ಟವಾಗು ವದು.

ಗಾಂಧೀಜಿಯವರ ಆತ್ಮಕಥೆಯನ್ನು ನಾವೆಲ್ಲರೂ ಓದಿರುವೆವು. ಆದರೆ ಅದರಲ್ಲಿಯ ಹಲವು ಭಾಗಗಳ ಮೇಲೆ ಬಿರ್ಲಾಜಿಯವರು ಮಾಡಿದ ಭಾಷ್ಯದಂತಹ ಭಾಷ್ಯವನ್ನು ನಾವು ಮಾಡುವದು ಕ್ವಚಿತ. ದ. ಆಫ್ರಿಕೆಯಲ್ಲಿ ಒಂದು ಪ್ರಸಂಗದಲ್ಲಿ ಬಿಳಿಯರು ತಂಡುತಂಡಾಗಿ ಗಾಂಧೀಜಿಯವರನ್ನು ಹೊಡೆಯಲು ಮುಂದಾಗುವರು. ಬಹು ಪ್ರಯಾಸದಿಂದ ಗಾಂಧೀಜಿಯವರು ಅದರೊಳಗಿಂದ ಪಾರಾಗುವರು. ಅದೇ ಸಂದರ್ಭದಲ್ಲಿ ಬಿರ್ಲಾಜಿಯವರಿಗೆ ದಿಲ್ಲಿಯ ಲಕ್ಷ್ಮೀನಾರಾಯಣ ದೇವಸ್ಥಾನ ತೆರೆಯುವ ಸಮಾರಂಭದ ನೆನಪಾಗುವದು. ಅಲ್ಲಿಯ ಜನ ಸಂಮರ್ದದ ಪೂಜ್ಯ ಭಾವವನ್ನು ವರ್ಣಿಸಿ ಆ ಎರಡೂ ಚಿತ್ರಗಳ ಸುಂದರ ಸಮನ್ವಯ ಮಾಡಿ ತಮ್ಮ ವಿಧಾನಗಳನ್ನು ಸಮರ್ಥಿಸುವರು.

ಗಾಂಧೀಜಿಯವರ ಉಪವಾಸ, ಈಶಶ್ರದ್ಧೆ, ಸತ್ಯಾಗ್ರಹ ಇತ್ಯಾದಿ ಪ್ರಶ್ನೆಗಳನ್ನು ಚರ್ಚಿಸುವಾಗ ಅವರ ಜೀವನದಲ್ಲಿಯ ಅನೇಕ ಪ್ರಸಂಗ ಗಳನ್ನು ಎತ್ತಿ ಅವುಗಳ ಆಳವಾದ ವಿಮರ್ಶೆ ಮಾಡಿ ಬಿರ್ಲಾಜಿಯವರು ಒಳ್ಳೆ ಸುಂದರ ರೀತಿಯಿಂದ ಆ ಪ್ರಶ್ನೆಗಳನ್ನು ತಿಳಿಪಡಿಸಿರುವರು.

ಅವರ ತಿಳುವಳಿಕೆ, ಅವರ ದೃಷ್ಟಿ ಅತಿ ಸ್ಪಷ್ಟವಿರುವದು. ಆದುದ ರಿಂದ ಅವರು ಮಾಡಿದ ಸ್ಪಷ್ಟೀಕರಣವನ್ನು ನೋಡಿದರೆ ಒಮ್ಮೊಮ್ಮೆ ಗಾಂಧೀಜಿಯವರು ಮಾಡಿದ ವಿವೇಚನೆ ನೆನಪಿಗೆ ಬರುವದು. ಈ ಪುಸ್ತಕ ಬರೆದು ಮೂರು ತಿಂಗಳಾಗಿ ಹೋದವು. ಆದರೆ ಅವರು ಆಗ ಅಹಿಂಸಕ ಸೇನಾಪತಿ ಹಾಗೂ ಅಹಿಂಸಕ ಸೇನೆ ಈ ಬಗ್ಗೆ ಬರೆದ ಮಾತುಗಳು ಈಗ ಹಲವು ದಿನಗಳಾಚೆ ಗಾಂಧೀಜಿಯವರು 'ಹರಿಜನ' ದಲ್ಲಿ ಬರೆದ ಮಾತುಗಳಂತೆಯೆ ಇವೆ! 'ಸಮಾಜದ ಪ್ರತಿಯೊಬ್ಬ ಮನುಷ್ಯನು ಅಹಿಂಸಕನಾಗಬಹುದೆಂದು ಯಾರೂ ತಿಳಿದಿಲ್ಲ. ಹಿಂಸಕ ಸೈನ್ಯದ ಸಹಾಯದಿಂದ ಶಾಂತಿಸಾಮ್ರಾಜ್ಯಗಳ ಸ್ಥಾಪನೆ ಮಾಡುವವರು ಕೂಡ ಸಮಾಜದಲ್ಲಿಯ ಪ್ರತಿಯೊಬ್ಬನು ಯುದ್ಧಕಲಾನಿಪುಣನಾಗ

ಬೇಕೆಂದು ಅಪೇಕ್ಷಿಸುವುದಿಲ್ಲ. ಕೋಟ್ಯವಧಿ ಜನರಿರುವ ದೇಶದ ಸಂರಕ್ಷಣೆ ಮಾಡಲು ಹಲವು ಲಕ್ಷ ಸೈನಿಕರು ಸಾಕೆಂದು ತಿಳಿಯುವರು. ನೂರರಲ್ಲಿ ಒಬ್ಬನು ಸೈನಿಕನಾದರೆ ಸಾಕು ಎಂದು ತಿಳಿಯುವದುಂಟು. ಆ ಸೈನಿಕರ ವ್ಯವಹಾರ ಮುಂತಾದ್ದು ಕೂಡ ಅವರಲ್ಲಿಯ ಗಣ ನಾಯಕನ ಜಾಣತನವನ್ನೆ ಅವಲಂಬಿಸಿರುತ್ತದೆ. '

' ಸೈನ್ಯ ಸಂಚಾಲನೆ ಮಾಡುವ ಯೋಗ್ಯತೆ ಇದ್ದ ಗಣನಾಯಕರು ಈ ಹೊತ್ತು ಇಂಗ್ಲಂಡದಲ್ಲಿ ಎಷ್ಟು ಜನರಿರಬಹುದು? ಹತ್ತಿಪ್ಪತ್ತು ಇರಬಹುದು. ಉಳಿದ ಲಕ್ಷಾಂತರ ಸೈನ್ಯದಲ್ಲಿರುವವರೆಲ್ಲ ಅಧಿಕಾರಿಗಳು ಹೇಳಿದಂತೆ, ಹೇಳಿದಾಗ ಸಾಯಲು ಸಿದ್ಧರಿದ್ದರಾಯಿತು ಎಂದು ತಿಳಿಯಲಾಗುತ್ತಿದೆ. ಇದೇ ಮಾದರಿಯ ಒಂದು ಅಹಿಂಸಾತ್ಮಕ ಸೈನ್ಯದ ರಚನೆಯನ್ನು ಮಾಡುವದು ಶಕ್ಯವೆಂದು ನಾವು ಕಲ್ಪಿಸಲು ಅಡ್ಡಿ ಇಲ್ಲ. ಅಹಿಂಸಾತ್ಮಕ ಸೈನ್ಯದ ಗಣನಾಯಕರು ಆತ್ಮಶುದ್ಧಿಯುಳ್ಳವರು ಹಾಗೂ ಅವರ ಅನುಯಾಯಿಗಳು ವಿಶೇಷ ಬುದ್ಧಿಶಾಲಿಗಳಿಲ್ಲದಿದ್ದರೂ ಸತ್ಯ ಹಾಗೂ ಅಹಿಂಸೆಯ ಸಲುವಾಗಿ ಸಾಯಲು ಸಿದ್ಧರಿರುವಷ್ಟು ಶ್ರದ್ಧಾವಂತರು ಇದ್ದರೆ ಸಾಕು. '

ಇಡೀ ಪುಸ್ತಕವು ಬಿರ್ಲಾಜಿಯವರ ತತ್ವಶೋಧಕ ಪರೀಕ್ಷಣ ಶಕ್ತಿಯ ಸುಂದರ ದ್ಯೋತಕವಾಗಿದೆ. ಕೇವಲ ಒಂದು ಸಂದರ್ಭದಲ್ಲಿ ಮಾತ್ರ ಅವರು ಎಷ್ಟು ದೂರ ಹೋಗಬೇಕಾಗಿತ್ತೋ ಅಷ್ಟು ದೂರ ಹೋಗಿಲ್ಲ ಎಂದು ಹೇಳಬಯಸುತ್ತೇನೆ. ಅಹಿಂಸೆಯನ್ನು ಚರ್ಚಿಸುವಾಗ ಅವರು ಒಂದು ಅಬಾಧಿತ ಸಿದ್ಧಾಂತವನ್ನು ಹೇಳಿರುವರು— ಅನಾಸಕ್ತರಾಗಿ, ರಾಗದ್ವೇಷರಹಿತರಾಗಿ ಜನಹಿತಕ್ಕಾಗಿ ಮಾಡಲಾದ ಹಿಂಸೆ ಅಹಿಂಸೆಯೆ ಇರುವದು. ಈ ಅಬಾಧ ಸತ್ಯವು ಗೀತೆಯಲ್ಲಿ ಇದ್ದೇ ಇರುವದು. ಆದರೆ ಇದರ ಆಧಾರದಿಂದ ಬಿರ್ಲಾಜಿಯವರು ಊಹಿಸಿದ ಅನುಮಾನವನ್ನು ಮಾತ್ರ ಗಾಂಧೀಜಿಯವರು ಸ್ವೀಕರಿಸುವರೊ ಇಲ್ಲವೊ ಎಂಬ ಬಗ್ಗೆ ನನಗೆ ಸಂಶಯವಿದೆ. ಬಿರ್ಲಾಜಿಯವರು ಬರೆದದ್ದು ' ಗಾಂಧೀಜಿಯವರು ಜೀವನ್ಮುಕ್ತಾವಸ್ಥೆಯಲ್ಲಿ, ಆ ಅವಸ್ಥೆ

ಒಂದೇ ಕ್ಷಣದ ಮಟ್ಟಿಗೆ ಇದ್ದರೂ ಸೈ ಅಥವಾ ಆ ನಿರ್ಣಯ ಮಾಡುವ ಕಾಲಕ್ಕೆ ಮಾತ್ರ ಇದ್ದರೂ ಸೈ— ಅಹಿಂಸಾತ್ಮಕ ಹಿಂಸೆಯನ್ನು ಮಾಡಲನುವಾದರು— ಆ ಕರುವಿನ ಹಿಂಸೆ ಮಾಡಿದರು. ಆದರೆ ಸಾಧಾರಣ ಮನುಷ್ಯನು ಹಾಗೆ ಮಾಡಲನುವಾಗುವುದೆಂದರೆ ಹಂಸವು ಕುಣಿಯಿತೆಂದು ಕಾಗೆ ಕುಣಿಯಲೆಳಸಿದಂತೆ. ಈ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುವೆನು. ಕರುವಿನ ಹಿಂಸೆಯು ಜೀವನ್ಮುಕ್ತ ಸ್ಥಿತಿಯಲ್ಲಿ ಮಾಡಿದ ಹಿಂಸೆಯ ಉದಾಹರಣೆಯೆ ಅಲ್ಲ. ಹಲವು ದಿನಗಳಾಚೆ ಒಂದು ಹುಚ್ಚು ನರಿ ಸೇವಾಗ್ರಾಮಕ್ಕೆ ಬಂದಿತ್ತು. ಅದನ್ನು ಕೊಲ್ಲುವ ಆಜ್ಞೆಯನ್ನು ಗಾಂಧೀಜಿಯುವರು ಕೊಟ್ಟುಬಿಟ್ಟರು. ಅದನ್ನು ಕೊಲ್ಲುವವರು ಅನಾಸಕ್ತ ಜೀವನ್ಮುಕ್ತರಿರಲಿಲ್ಲ. ಅದು ಆವಶ್ಯಕ ಹಾಗೂ ಅನಿವಾರ್ಯವಾದ ಹಿಂಸೆ ಇತ್ತು. ಕೃಷಿ ಕರ್ಮದಲ್ಲಿ ಯಾವ ರೀತಿ ಹುಳ ಹುಪ್ಪಡಿಗಳ ಹಿಂಸೆ ಕೆಲಮಟ್ಟಿಗೆ ಅನಿವಾರ್ಯವೊ ಅದೇ ರೀತಿ ಈ ಹಿಂಸೆ ಇತ್ತು. ಹಿಂಸೆಯಲ್ಲಿಯೂ ಅನೇಕ ಪ್ರಕಾರಗಳು. ಅನಿವಾರ್ಯ ಹಿಂಸೆ ಒಂದು ಪ್ರಕಾರ, ಆ ಕರುವಿನ ಹಿಂಸೆ ಎರಡನೆಯ ಪ್ರಕಾರ. ಶರ್ಯತ್ತುಗಳಲ್ಲಿ ಒಮ್ಮೊಮ್ಮೆ ಕುದುರೆಯ ಕಾಲು ಮುರಿಯು ವದು ಇಲ್ಲವೆ ನೆಟ್ಟಗಾಗದಂಥ ಪೆಟ್ಟು ಬಿದ್ದು ಕುದುರೆಗೆ ಅತ್ಯಂತ ವೇದನೆಯಾಗುವದು. ಅಂಥ ಪ್ರಸಂಗದಲ್ಲಿ ಸಾಹೇಬರು ಅದನ್ನು ಕೊಂದು ಬಿಡುವರು. ಅವರು ಪ್ರೇಮದಿಂದ, ಅದ್ವೇಷದಿಂದ ಕೊಲ್ಲು ವರು. ಆದರೆ ಅವರು ಅನಾಸಕ್ತರು ಇಲ್ಲವೆ ಜೀವನ್ಮುಕ್ತರು ಇರುವ ದಿಲ್ಲ. ಯಾವ ಹಿಂಸೆ ವಿಹಿತವೆಂದು ಗೀತೆ ಹೇಳುವುದೋ ಅದನ್ನು ಅಲೌಕಿಕ ಪುರುಷರು ಮಾತ್ರ ಮಾಡಬಲ್ಲರು. ಆದರೆ ಅಲ್ಲಿ ರಾಮ, ಕೃಷ್ಣ ಇವರು ಆ ಸಂದರ್ಭದಲ್ಲಿ ಈಶ್ವರವಾಚಕ ಹೆಸರುಗಳು ಎಂದು ಗಾಂಧೀಜಿಯುವರ ಅಂಬೋಣವಿರುವದು. ತಾವು ಜೀವನ್ಮುಕ್ತರೆಂದು ತಿಳಿಯಲು ಅಥವಾ ಇತರರಾರಾದರೂ ಪೂರ್ಣ ಜೀವನ್ಮುಕ್ತರಿರ ಬಲ್ಲರು ಎಂಬುದನ್ನು ಗಾಂಧೀಜಿಯುವರು ಒಪ್ಪುವದಿಲ್ಲ. ಪರಮಾತ್ಮ ನೊಬ್ಬನೆ ಸಂಪೂರ್ಣ ಜೀವನ್ಮುಕ್ತನಿರುವನೆಂದೂ 'ಹತ್ವಾಪಿ ಸ ಇಮಾನ್ ಲೋಕಾನ್ನಹಂತಿ ನ ನಿಬಧ್ಯತೇ' ಎಂಬ ಮಾತು ಅವ

ನನ್ನೊಬ್ಬನನ್ನೆ ಅನ್ವಯಿಸುವುದೆಂದೂ ಗಾಂಧೀಜಿಯವರ ದೃಢಾಭಿಪ್ರಾಯವಿರುವುದು. ಆದುದರಿಂದ ಅವರು ಹೇಳುವುದೇನಂದರೆ, ಮನುಷ್ಯನು ಎಷ್ಟೇ ದೊಡ್ಡವನಿರಲಿ, ಎಷ್ಟೇ ಶುದ್ಧನಿರಲಿ, ಅವನು ಪರಮಾತ್ಮಪದಾರೂಢನಾಗಲಾರನು. ಜನಹಿತಕ್ಕಾಗಿ ಸಹ ಹಿಂಸೆ ಮಾಡುವ ಅಧಿಕಾರವು ಅವನಿಗೆ ಪ್ರಾಪ್ತವಾಗಲಾರದು. ಅವರ ನಿರ್ಣಯದ ಮೂಲಕವೆ ಸತ್ಯಾಗ್ರಹ ಹಾಗೂ ಉಪವಾಸ ಈ ಉಪಾಯಗಳು ಹುಟ್ಟಿದವು. ಈ ಪುಸ್ತಕದಲ್ಲಿ ಇದೊಂದು ಮಾತನ್ನು ಬಿಟ್ಟರೆ ನನಗೆ ಉಳಿದ ಯಾವ ಎಡೆಯಲ್ಲಿಯೂ ಯಾವ ದೋಷವೂ ಕಾಣಲಿಲ್ಲ. ಇಷ್ಟೇ ಅಲ್ಲ, ಈ ಪುಸ್ತಕದಲ್ಲಿಯ ವಿವೇಚನೆಯು ಅತ್ಯಂತ ದೋಷರಹಿತವು ಹಾಗೂ ತಲಸ್ಪರ್ಶಿಯಾದುದು ಇರುವುದು. ಆದುದರಿಂದ ಪ್ರೂಫುಗಳನ್ನು ನೋಡುವ ಕಾಲಕ್ಕೆಯೆ ನಾನು ಈ ಪುಸ್ತಕವನ್ನು ಎರಡುಬಾರಿ ಓದಿಬಿಟ್ಟೆನು. ಇನ್ನೂ ಎಷ್ಟೋ ಸಾರೆ ಓದಿದರೂ ನನಗೆ ದಣಿವು ಇಲ್ಲವೆ ಬೇಸರವುಂಟಾಗಲಾರದು. ಇತರ ಓದುಗರಿಗೂ ಇದೇ ಅನುಭವವು ಬರುವುದೆಂದು ನಾನು ಆಶಿಸುವೆನು. ನನಗೆ ಈ ಪುಸ್ತಕವು ಶಾಂತಿದಾಯಕವೂ ಚೈತನ್ಯದಾಯಿಯೂ ಆದಂತೆ ಎಲ್ಲರಿಗೂ ಆಗಲೆಂದು ಕೋರುವೆನು.

ಸೇವಾಗ್ರಾಮ
೮—೯—೪೦

**ಮಹದೇವ ದೇಸಾಯಿ**

# ಬಾಪೂ

## ೧. ಹೊಸ ಯುಗ

ಗಾಂಧೀಜಿಯವರು ಹುಟ್ಟಿದ್ದು ಸನ್ ೧೮೬೯ ರಲ್ಲಿ. ಆ ಲೆಕ್ಕದಿಂದ ಈಗ ಅವರಿಗೆ ಎಪ್ಪತ್ತೊಂದು ತುಂಬಿದವು. ಕಾಲವು ಅನಂತವಿದೆ ಎಂಬುದನ್ನು ಲಕ್ಷಿಸಿದರೆ ಎಪ್ಪತ್ತೊಂದು ವರುಷ ಅಂದರೂ ಅಷ್ಟೇ, ಎಪ್ಪತ್ತೊಂದು ಸಾವಿರ ವರುಷ ಅಂದರೂ ಅಷ್ಟೇ. ಮಹಾಸಾಗರದ ಪಸರಿಸಿದ ನೀರು ಮತ್ತು ಒಂದು ಹನಿ ಇವುಗಳಲ್ಲಿ ಏನಾದರೊಂದು ಪ್ರಮಾಣವನ್ನು ಕಲ್ಪಿಸಬಹುದು. ಆದರೆ ಅನಂತಕಾಲ ಹಾಗೂ ಈ ಎಪ್ಪತ್ತೊಂದು ವರುಷ ಇವುಗಳನ್ನು ಹೋಲಿಸುವುದಾದರೂ ಎಂತು? ಹೀಗಿದ್ದರೂ ಭಾರತದ ಈ ಯುಗದ ಇತಿಹಾಸದಲ್ಲಿ ಈ ಎಪ್ಪತ್ತೊಂದು ವರುಷಗಳಿಗೆ ಇದ್ದ ಮಹತ್ವವು ಇನ್ನಾವ ಕಾಲ-ಖಂಡಕ್ಕೂ ಕ್ವಚಿತವೇ ಇರಬಲ್ಲದು.

ಇದೀಗ ಭಾರತದ ಮನೋಮಂಡಲದಲ್ಲಿ ಒಂದು ಹೊಸ ಬಗೆಯ ಬಲವಾದ ಸುಳಿವು ಕಾಣುತಲಿದೆ; ಹೊಸ ರೀತಿಯ ಜಾಗ್ರತಿ ತಲೆದೋರುತಿದೆ; ಹೊಸ ಅನುಭವವೊಂದು ಪ್ರತೀತವಾಗುತಲಿದೆ. ಈ ವರೆಗೆ ಈ ದೇಶದಲ್ಲಿ ಅನೇಕ ಧರ್ಮಕ್ರಾಂತಿಗಳು ನಡೆದುಹೋಗಿವೆ. ಆದರೆ ರಾಜನೀತಿಯ ಉಡುಪನ್ನುಟ್ಟು ಧರ್ಮವು ತನ್ನ ವರ್ಚಸ್ಸನ್ನು ಬೆಳೆಸಲನುವಾದ ಈ ದೃಶ್ಯವು ತೀರ ಹೊಸದು. ಈ ಪ್ರಯತ್ನದ ಫಲವನ್ನು ಭವಿಷ್ಯವೆ ನಮಗೆ ತೋರಬಲ್ಲದು. ಆದರೆ ಸದ್ಯದಲ್ಲಿ ಹಿಂಸಾತ್ಮಕ ಅಸ್ತ್ರಶಸ್ತ್ರಗಳ ಘಾತಕವಾದ ಘನ ಗರ್ಜನೆಯಿಂದ ಇಡೀ ಮಾನವ ಸಂಸಾರವೆ ತ್ರಸ್ತವಾಗಿದೆ, ಹಚ್ಚ ಹಸುರಾದ ಹೂದೋಟ, ನಗೆ ಮೊಗದ ಮಕ್ಕಳಿಂದ ತುಂಬಿದ ಮನೆಮಾರು, ಇವುಗಳನ್ನು ಒಂದರೆ ಕ್ಷಣದಲ್ಲಿ ಸುಟ್ಟು ಸುಡುಗಾಡು ಮಾಡಿಬಿಡುವ ವಿಧ್ವಂಸಕ ಹೊಸ ಶೋಧಗಳನ್ನು ಮಾಡುವ ಕೆಲಸದಲ್ಲಿ ವಿಜ್ಞಾನವು ನಿತ್ಯನಿಮಗ್ನವಾಗಿದೆ, ಸ್ವದೇಶ ಮತ್ತು ಸ್ವದೇಶ ಭಕ್ತಿ ಎಂಬ ಪವಿತ್ರ ಹೆಸರಿನಲ್ಲಿ ರಕ್ತದ ಕಾಲುವೆಗಳನ್ನು ಹರಿಸುವದು ದೊಡ್ಡ ಗೌರವದ ಕಾರ್ಯವೆನಿಸುತಿದೆ, ಸರ್ವಸ್ವದ ನಾಶಮಾಡುವ ಕಾರ್ಯಕ್ರಮಗಳ ತಳಹದಿಯ ಮೇಲೆ ಮಾನವ ಧರ್ಮದ ಪೀಠವನ್ನು ಸ್ಥಾಪಿಸಬಹುದೆಂಬ ಭ್ರಾಮಕ ಸುಖ ಸ್ವಪ್ನಗಳು ಹಲವರಿಗೆ ಬೀಳುತಿವೆ. ಇಂತಹ ಭಯಾನಕ ನಿರಾಶಾಮಯವಾದ ಅಂಧಕಾರ ಸಮಯದಲ್ಲಿ ಕಾರ್ಯರಂಗದ ಮೇಲೆ ಗಾಂಧೀಜಿಯವರ ಪ್ರವೇಶವೆಂದರೊಂದು ಆಶೆಯ ಶೀತಲ ಕಿರಣದ ಉದಯವೆ ಸೈ. ಭಗವದಿಚ್ಛೆ ಇದ್ದರೆ ಇದೇ ಕಿರಿಯಾದ ಕಿರಣವು ದಿವ್ಯ ಭವ್ಯ ಚಂದಿರನಂಥ ತೇಜೋಗೋಲವಾಗಿ ಈ ಪ್ರಪಂಚದಲ್ಲಿ ಪುನರಪಿ ಶಾಂತಿ ಸಾಮ್ರಾಜ್ಯವನ್ನು ಸ್ಥಾಪಿಸಬಲ್ಲದು.

ಆದರೆ ಕದಾಚಿತ್ ನಾನು ಕೇವಲ ಆಶೆಯ ಪ್ರವಾಹದಲ್ಲಿ ಹಾಗೆ ಹರಿದುಹೋಗುತಿರುವೆ. ಏನೇ ಇರಲಿ. ಗಾಂಧೀಜಿಯವರ ಅವತಾರವು ಈ ದೇಶದಲ್ಲಿ ಒಂದು ಆಶೆ, ಒಂದು ಬಗೆಯ ಉತ್ಸಾಹ, ಒಂದು ತರಹದ ಹುರುಪು, ಇವುಗಳ ಉದಯಕ್ಕೆ ಕಾರಣವಾಗಿದೆ, ಸಾವಿರಾರು ವರುಷಗಳ ಪ್ರಮಾದಗಳನ್ನು ಅಲ್ಲಗಳೆಯುವಂತಹ ಒಂದು ನವಜೀವನದ ರೀತಿ ತಲೆದೋರಲು ಆಸ್ಪದ ಕೊಟ್ಟಿದೆ.

ಒಬ್ಬ ಮಹಾಪುರುಷನನ್ನು ಇನ್ನೊಬ್ಬನೊಡನೆ ಹೋಲಿಸುವುದು ಬಹು ಕಷ್ಟಸಾಧ್ಯ. ಆದರೂ ಗಾಂಧಿಯಂಥವರು ಯುಗಯುಗದಲ್ಲಿ ಹುಟ್ಟುವದುಂಟೇ? ಎಷ್ಟು ಸಾವಿರ ವರುಷಗಳಲ್ಲಿ ಎಷ್ಟು ಗಾಂಧಿಯಂಥವರು ನಮ್ಮಲ್ಲಿ ಹುಟ್ಟಿದರು ಎಂಬುದನ್ನು ಗೊತ್ತುಹಚ್ಚಲು ನಾವು ಹೊರಟರೆ ಅಂಥ ಪ್ರಮಾಣಬದ್ಧವಾದ ಪ್ರಾಚೀನ ಇತಿಹಾಸವೂ ಉಪಲಬ್ಧವಿಲ್ಲ. ರಾಮಕೃಷ್ಣರು ನಮ್ಮಂತಹ ದೇಹಧಾರಿ ಜೀವಗಳಿದ್ದರೂ ಇದ್ದಿರಬಹುದು. ಆದರೆ ಕವಿಗಳು ಅವರನ್ನು ಮಾನುಷ ಮರ್ಯಾದೆಗಳಾಚೆ ತಳ್ಳಿ ಅವರಿಗೆ ಅಲೌಕಿಕ ದೈವೀ ಜೀವನವನ್ನು ಕಲ್ಪಿಸಿಕೊಟ್ಟುಬಿಟ್ಟಿದ್ದಾರೆ. ಕವಿಗಳಂತೂ ಹೇಳಿ ಕೇಳಿ ಕವಿಗಳು. ಆದರೂ ಅವರು ಮಾಡಿದ ಅಲೌಕಿಕ ವರ್ಣನೆಗಳು ಸಹ ಅಷ್ಟೊಂದು ಪೂರ್ಣ ಇಲ್ಲ. ಇಂಥ ದೈವೀ ಸ್ವರೂಪಗಳ ವರ್ಣನೆ ಮಾಡಲು ಅಲೌಕಿಕ ಕವಿಗಳು, ಅಲೌಕಿಕ ಲೇಖನ ಶೈಲಿ, ಹಾಗೂ ಅಲೌಕಿಕ ಭಾಷೆಯೆ ಬೇಕು. ಹೇಗಿದ್ದರೂ ಕವಿಗಳು ಆ ರೀತಿ ಅವರನ್ನು ವರ್ಣಿಸಿದ್ದರಿಂದ ಮಾನವೀ ಅಳತೆ ಪ್ರಮಾಣಗಳಿಂದ ರಾಮಕೃಷ್ಣರನ್ನು ಪರೀಕ್ಷಿಸಿ ಬೆಲೆ ಕಟ್ಟುವದು ದುಷ್ಕರವಾಗಿದೆ.

ಬುದ್ಧನ ವಿಷಯದಲ್ಲಿ ಮಾತ್ರ ಕವಿಗಳು ಎಷ್ಟೇ ಪ್ರಯತ್ನಪಟ್ಟರೂ ಅವನ ಐತಿಹಾಸಿಕ ಕತೆ ಹಾಗೂ ಅವನ ಮಾನವೀ ಜೀವನ ಇವುಗಳನ್ನು ಮರೆಮಾಡುವದು ಅವರಿಂದ ಸಾಧ್ಯವಾಗಲಿಲ್ಲ! ಆದುದರಿಂದ ಐತಿಹಾಸಿಕ ಮಹಾಪುರುಷರಲ್ಲಿ ಬುದ್ಧನಿಗೆ ಒಂದು ಅತ್ಯಂತ ಉಚ್ಚಸ್ಥಾನವು ದೊರಕಿದೆ. ಆದರೆ ಕಲಿಯುಗದಲ್ಲಿ ಒಬ್ಬನೇ ಬುದ್ಧನು ಆಗಿರುವನು ಹಾಗೂ ಗಾಂಧಿಯಾದರೂ ಒಬ್ಬನೇ ಇರುವನು. ತನ್ನ ಜೀವಮಾನದಲ್ಲಿಯೇ ಬುದ್ಧನು ಒಂದು ದೀಪವನ್ನು ಹಚ್ಚಿದನು. ಅವನ ಪಶ್ಚಾತ್ ಆ ದೀಪದ ಪ್ರಚಂಡ ತೇಜವು ಏಶಿಯದ ತುಂಬ ಹಬ್ಬಿತು. ಗಾಂಧೀಜಿಯವರು ತಮ್ಮ ಜೀವನಕಾಲದಲ್ಲಿಯೆ ಒಂದು ಜ್ಯೋತಿಯನ್ನು ಬೆಳಗಿಸಿರುವರು. ಕದಾಚಿತ್ ಅದು ಕಾಲಾನುಕೂಲತೆಯಿಂದ ಇಡೀ ಪ್ರಪಂಚದಲ್ಲಿ ಬೆಳಕು ಬೀರಬಹುದು.

ಗಾಂಧೀಜಿಯವರು ತಮ್ಮ ಜೀವಮಾನದಲ್ಲಿ ಪಡೆದ ಯಶಸ್ಸು, ಹೊಂದಿದ ಕೀರ್ತಿ, ದೊರಕಿಸಿದ ಲೋಕಪ್ರಿಯತೆ ಇವು ಈ ವರೆಗೆ ಸಹಸಾ ಯಾವ ಐತಿಹಾಸಿಕ ಪುರುಷನಿಗೂ ಪ್ರಾಪ್ತವಾಗಿಲ್ಲವೆಂದು ಹೇಳಬಹುದು. ಇಂಥ ಮಹಾಮಹಿಮನನ್ನು ಕುರಿತು ಯಾರು ಎಷ್ಟೆಂದು ಬರೆಯಬಹುದು? ಅವರ ಎಪ್ಪತ್ತೊಂದು ವರುಷದ ಕ್ರಮಬದ್ಧವಾದ ಜೀವನ ಚರಿತವನ್ನು ಬರೆಯುವುದರಲ್ಲಿ ಪೂರ್ಣ ಯಶಸ್ಸು ದೊರಕುವದು ಬಹಳ ಕಠಿಣ. ಇದಲ್ಲದೆ ಗಾಂಧೀಜಿಯವರ ಪೂರ್ಣ ಜ್ಞಾನವಾದರೂ ಯಾರಿಗೆ ಇದೆ? ಗೀತೆಯನ್ನು ಕುರಿತು, 'ಸಮ್ಯಕ್ ಜಾನಾತಿ ವೈ ಕೃಷ್ಣಃ। ಕಿಂಚಿತ್ ಪಾರ್ಥೋ ಧನುರ್ಧರಃ', ಕೃಷ್ಣನಿಗೆ ಪೂರ್ಣ ಗೊತ್ತಿದೆ, ಧನುರ್ಧರ ಪಾರ್ಥನೂ ಕೊಂಚ ಬಲ್ಲನು, ಎಂದು ಹೇಳುವಂತೆ, ಗಾಂಧೀಜಿಯವರ ಜೀವನದ ಬಗ್ಗೆ ಸಹ, ಅವರು ಸ್ವತಃ ತಾವೇ ಅದನ್ನು ಚನ್ನಾಗಿ ಬಲ್ಲರು, ಮಹಾದೇವಭಾಯಿಯವರೂ ಕೊಂಚ ಬಲ್ಲರು, ಎಂದು ಹೇಳಬಹುದು!

# ೧. ಪ್ರಥಮ ದರ್ಶನ

ಇ. ಸ. ೧೯೧೪ರ ಅಂತ್ಯ ಅಥವಾ ೧೯೧೫ರ ಪ್ರಾರಂಭವಿರ ಬಹುದು. ಗಾಂಧೀಜಿಯವರನ್ನು ನಾನು ಮೊಟ್ಟಮೊದಲು ನೋಡಿದ್ದು ಆಗ. ಅದು ಚಳಿಗಾಲ. ಲಂಡನದಿಂದ ಅವರು ಸ್ವದೇಶಕ್ಕೆ ಮರಳಿ ಬಂದಿದ್ದರು ಹಾಗೂ ಕಲಕತ್ತೆಗೆ ಬರುವವರಿದ್ದರು. ಕರ್ಮವೀರ ಗಾಂಧಿಯವರು ಕಲಕತ್ತೆಗೆ ಬರಲಿರುವರು ಎಂಬ ಸುದ್ದಿಯನ್ನು ಕೇಳಿ ದೊಡನೆ ಸಾರ್ವಜನಿಕ ಕಾರ್ಯಕರ್ತರ ಮನಸ್ಸಿನಲ್ಲಿ ಒಂದು ಬಗೆಯ ಕುತೂಹಲವುಂಟಾಯಿತು. ಆ ಸಮಯದಲ್ಲಿ ಸಾರ್ವಜನಿಕ ಜೀವನದ ರೀತಿಯೆ ಬೇರೆ ಇತ್ತು. ವೃತ್ತಪತ್ರಗಳಲ್ಲಿ ಲೇಖ ಬರೆಯುವುದು, ಸಭೆ ಗಳಲ್ಲಿ ಭಾಷಣ ಮಾಡುವುದು, ಮುಖಂಡರನ್ನು ಸ್ವಾಗತಿಸುವುದು ಹಾಗು ಸ್ವತಃ ಆ ಬಗೆಯ ಸ್ವಾಗತವನ್ನು ಪಡೆಯಲಿಚ್ಛಿಸುವುದು,—ಆ ಕಾಲದ ಸಾರ್ವಜನಿಕ ಜೀವನದ ಮೇರೆ ಇಷ್ಟೇ ಇತ್ತು.

ನಾನು ಆಗ ತರುಣನೆನಿಸುತ್ತಿದ್ದೆ. ನನಗೆ ಇಪ್ಪತ್ತು ವರುಷ ಆಗಿಹೋಗಿದ್ದವು. ಮೆರವಣಿಗೆಗಳಲ್ಲಿ ಮುಖ್ಯ ಸವಾರರಲ್ಲಿ ನಾನೊಬ್ಬ ನಿರಬೇಕೆಂದು ನಾನು ಹಾತೊರೆಯುತ್ತಿದ್ದೆ. ಜಾತ್ರೆಗಳಲ್ಲಿ ಸ್ವಯಂ ಸೇವಕನಾಗಿ ಗದ್ದಲವಿದ್ದಲ್ಲಿ ಹೋಗಿ ಜನರನ್ನು ರಕ್ಷಿಸುವುದು, ನೆರೆ ಹಾವಳಿ ಇಲ್ಲವೆ ಬರ ಇವುಗಳಿಂದ ಪೀಡಿತರಾದವರಿಗೆ ಸಹಾಯ ಒದ ಗಿಸುವ ಕುರಿತು ಸಹಾಯಕ ಕೇಂದ್ರಗಳನ್ನು ಸ್ಥಾಪಿಸುವುದು, ಚಂದಾ ಕೂಡಿಸುವುದು ಹಾಗೂ ಕೊಡುವುದು, ಮುಖಂಡರ ಸ್ವಾಗತ ಮಾಡು ವುದು, ಅವರ ವ್ಯಾಖ್ಯಾನಗಳನ್ನು ಕೇಳುವುದು,—ಇವೇ ಮುಂತಾದವು ಆ ದಿನಗಳಲ್ಲಿ ಸಾರ್ವಜನಿಕ ಕೆಲಸಗಳಲ್ಲಿ ರುಚಿಗೊಳ್ಳುವ ತರುಣರ

ಕರ್ತವ್ಯಗಳಾಗಿದ್ದವು. ಅವರ ದೀಕ್ಷೆ ಹಾಗೂ ಶಿಕ್ಷಣ ಇವು ಈ ವಿಷಯಗಳನ್ನು ಕುರಿತು ಇರುತಿದ್ದವು. ನಾನಾದರೂ ಈ ವಿಷಯಗಳಲ್ಲಿ ಅಭಿರುಚಿಯಿಂದ ಉತ್ಸಾಹದಿಂದ ಕೆಲಸ ಮಾಡುತ್ತ ತಿರುಗುತಿದ್ದೆನು. ಆಗಿನ ಮುಖಂಡರು ಈ ವಿಷಯಗಳ ಸೀಮೆಯಾಚೆ ಇರುತಿದ್ದರು. ಅವರ ಬಗ್ಗೆ ಯಾವದೇ ನಿಯಮ ನಿರ್ಬಂಧ, ವಿಧಿ ವಿಧಾನ ಆಗ ಇರಲಿಲ್ಲ. ಆವೇಶಯುಕ್ತ ಭಾಷಣ ಮಾಡುವದು ಹಾಗೂ ಚಂದಾ ವಸೂಲ ಮಾಡುವದು ಇವೇ ಅವರ ಕೆಲಸಗಳು. ಸ್ವಾಗತವನ್ನು ಪಡೆಯುವದು ಅವರ ಹಕ್ಕು ಆಗಿತ್ತು. ಮುಖಂಡರು ಏನೂ ಕೆಲಸ ಮಾಡುತಿರಲಿಲ್ಲ ಅಥವಾ ತಮ್ಮ ಕರ್ತವ್ಯ ಮಾಡಬೇಕೆಂಬ ಭಾವನೆ ಅವರಲ್ಲಿರಲಿಲ್ಲ ಎಂದು ಇದರ ಅರ್ಥವಲ್ಲ. ಯಥಾರ್ಥವಾಗಿ ಅವರಿಗೆ ಬೇರೆ ಕಾರ್ಯಕ್ರಮವೆ ಇರಲಿಲ್ಲ, ಬೇರೆ ಕೆಲಸದ ಕಲ್ಪನೆಯೂ ಇರಲಿಲ್ಲ. ಜನತೆಗೂ ಅವರಿಂದ ಹೆಚ್ಚಿನ ಕೆಲಸವು ಆದೀತೆಂಬ ಅಪೇಕ್ಷೆ ಇರಲಿಲ್ಲ. ಮುಖಂಡರೆ ಆಗ ಕಡಿಮೆ, ಆದುದರಿಂದ ಅವರು ಅಪರೂಪ. ಅನುಯಾಯಿಗಳು ಅವರಿಗೆ ಭಕ್ತಿಭಾವದಿಂದ ಪೂಜನ ಅರ್ಚನಾದಿಗಳನ್ನು ಸಲ್ಲಿಸುತಿದ್ದರು. ಮುಖಂಡರು ನಿಃಸಂಕೋಚ ಭಾವದಿಂದ ಈ ಉಪಚಾರಗಳನ್ನು ಗೃಹಿಸುತಿದ್ದರು.

ಮುಖಂಡರ ಛಿದ್ರಾನ್ವೇಷಣ ಮಾಡುವ ಬುದ್ಧಿಯಿಂದ ಆಗ ಅಕಬರಸಾಹೇಬರೆಂಬ ಒಬ್ಬ ಕವಿಗಳು ಬರೆದುದೇನಂದರೆ—

“ ಕೌಮ ಕೇ ರಾಮ ಮೇ ಡಿನರ ಖಾತೇ ಹೈ  
  ಹುಕ್ಕಾಮ ಕೇ ಸಾಥ,  
ರಂಜ ಲೀಡರ ಕೋ ಬಹುತ ಹೈ,  
  ಮಹರ ಆರಾಮ ಕೇ ಸಾಥ. ”

(ದೇಶದ ಸೇವೆ ಮಾಡುವಾಗ ನಮ್ಮ ಮುಖಂಡರು ಆಳರಸರೊಡನೆ ಊಟ ಹೊಡೆಯುವರು. ಅವರಿಗೆ ಪಾಪ, ಬಹಳ ಕಷ್ಟ— ಆದರೆ ಆ ಕಷ್ಟದೊಡನೆ ಅವರಿಗೆ ಆರಾಮವೂ ಅಷ್ಟೇ ಇದೆ!)

ಇಲ್ಲಿ ಕುದುರೆ ಕತ್ತೆಗಳನ್ನೆಲ್ಲ ಒಂದೇ ಲಾಯದಲ್ಲಿ ಕಟ್ಟಲು ಅಕಬರ ಸಾಹೇಬರು ಯತ್ನಿಸಿದ್ದು ನಿಜ. ಆದರೆ ಇದರಲ್ಲಿ ಅಷ್ಟೊಂದು ಅತ್ಯುಕ್ತಿ ದೋಷವಿದೆ ಎಂದು ಹೇಳಲಿಕ್ಕಾಗದು.

ಹೀಗೆ ಬರೆದು ಹಲವು ಮುಖಂಡರಿಗೆ ಅವರು ಅನ್ಯಾಯ ಮಾಡಿದರೆಂದು ಬಗೆದರೂ ಬಹು ಜನ ಮುಖಂಡರನ್ನು ಕುರಿತು ಅವರು ಯಥಾರ್ಥವಾದುದನ್ನೆ ನುಡಿದರೆಂದು ಹೇಳಬಲ್ಲೆ.

ಗಾಂಧೀವಾದವು ಹುಟ್ಟಿದನಂತರ ಮುಖಂಡತ್ವದ ಒರೆಗಲ್ಲೆ ಬೇರೆಯಾಯಿತು. ಜನರು ಮುಖಂಡರತ್ತ ಬಹಳ ಸೂಕ್ಷ್ಮ ದೃಷ್ಟಿ ಯಿಂದ ನೋಡಲಾರಂಭಿಸಿದರು. ಇತ್ತ ಅವರ ಜೀವನ ಚರಿತ್ರವನ್ನು ನಿರೀಕ್ಷಿಸುವದೂ ಹೆಚ್ಚಾಯಿತು, ಅತ್ತ ಮೋಸವೂ ಹೆಚ್ಚಿತು! ಸ್ವಾರ್ಥವು ಬೆಳೆದರೂ ತ್ಯಾಗವೂ ಹೆಚ್ಚಿತು. ಜೀವನದ ಶಾಂತಸರೋವರದಲ್ಲಿ ಗಾಂಧೀವಾದದ ಕಡಗೋಲು ಆಡಿದ್ದರಿಂದ ಎಲ್ಲವೂ ಕಲಕು ಮಲಕಾಯಿತು. ಅದರಿಂದ ಅಮೃತ ಹೊರಟಿತು ಒಡನೆ ವಿಷವೂ ಹೊರಗೆ ಬಂದಿತು. ದೇವಾಸುರರ ಸಂಗ್ರಾಮವೂ ನಡೆಯಿತು. ಗಾಂಧೀಜಿಯವರು ಮಹಾದೇವನಂತೆ ಎಷ್ಟು ಸಾರೆ ಕಹಿವಿಷದ ಗುಟುಕು ಕುಡಿದು ನೀಲಕಂಠರಾದರೊ ಏನೊ! ಇರಲಿ. ಸಮರವು ಇನ್ನೂ ಸಾಗಿದೆ ಹಾಗೂ ಕೊನೆಗೆ ಜಯವು ಸುರರಿಗೆ ಕಟ್ಟಿಟ್ಟಂತೆ ಎಂಬ ಭರವಸೆ ಜನರಿಗೆ ಇದೆ. ಆದರೆ ನಾನು ಯಾವ ಸಮಯವನ್ನು ಕುರಿತು ಬರೆಯುತಿರುವೆನೊ ಆ ಸಮಯದಲ್ಲಿ ಇದೆಲ್ಲ ಇರಲಿಲ್ಲ. ಸರೋವರದ ನೀರು ನಿಶ್ಚಲವಾಗಿತ್ತು. ಉಷೆಯ ಇನಿಗೆಂಪು ಆಕಾಶದಲ್ಲಿ ಅದೇ ಕಂಗೊಳಿಸುತ್ತಿತ್ತು. ಸೂರ್ಯೋದಯವು ಇನ್ನೂ ಆಗಿರಲಿಲ್ಲ. ಪುನರ್ಜನ್ಮದ ಪೂರ್ವಸಿದ್ಧತೆ ನಡೆದಿತ್ತು. ಹೊಸ ಜನ್ಮದ ಮುಂಚಿನ ಮರಣಮಯ ಶಾಂತಿ ಇಲ್ಲವೆ ಪ್ರಸವವೇದನೆಯಿಂದುಂಟಾದ ಸುಷುಪ್ತಿಯ ಗ್ಲಾನಿ ಇವು ಕಂಡುಬರುತಿದ್ದವು. ಅಧರ್ಮದಿಂದ ನಡೆದ ಬಗ್ಗೆ ಆಗಿನ ಮುಖಂಡರಿಗೆ ಆತ್ಮಗ್ಲಾನಿಯೂ ಇರಲಿಲ್ಲ. ಅವರು ದೊಡ್ಡ ತಪ್ಪು ಮಾಡಿದರು ಎಂದು ಅವರ ಅನುಯಾಯಿಗಳಿಗೂ ಎನಿಸುತಿರಲಿಲ್ಲ.

ಈ ಪರಿಸ್ಥಿತಿಯಲ್ಲಿ ಗಾಂಧೀಜಿಯವರು ಲಂಡನದ ಮೇಲೆ ಹಾಯ್ದು ಆಫ್ರಿಕಾಖಂಡದಿಂದ ಹಿಂದುಸ್ತಾನಕ್ಕೆ ಬಂದರು ಹಾಗೂ ಈ ದೇಶದಲ್ಲಿ ಸಂಚಾರವನ್ನಾರಂಭಿಸಿದರು. ಇದೇ ಸಂದರ್ಭದಲ್ಲಿ ಅವರು ಕಲಕತ್ತೆಗೆ ಬರಲಿದ್ದರು.

ಗಾಂಧೀಜಿಯವರ ಪ್ರಥಮ ದರ್ಶನವೆ ನನ್ನಲ್ಲಿ ಸಾಕಷ್ಟು ಕುತೂಹಲವನ್ನುಂಟುಮಾಡಿತೆಂಬುದು ನನ್ನ ಸ್ಮರಣೆಗೆ ಬರುತಿದೆ. ಒಂದು ಬಿಳಿಯ ಸಾದಾ ಉದ್ದಂಗಿ, ತಲೆಯ ಮೇಲೆ ಕಾಠೇವಾಡಿ ಪದ್ಧತಿಯ ಮುಂಡಾಸ, ಬರಿಗಾಲು, ಇದೇ ಅವರ ಉಡುಪು. ನಾವು ಒಳ್ಳೆ ವಿಜೃಂಭಣೆಯಿಂದ ಅವರ ಸ್ವಾಗತ ಮಾಡಿದೆವು. ಅವರ ಬಂಡಿಯನ್ನು ಕೈಯಿಂದ ಎಳೆಯುತ್ತ ಮೆರವಣಿಗೆ ಹೊರಡಿಸಿದೆವು. ಆದರೆ ಸ್ವಾಗತದ ವಿಷಯದಲ್ಲಿಯೂ ಅವರ ವೃತ್ತಿ ಬೇರೆ ತರಹದ್ದೆ ಇತ್ತು. ಅವರ ಬಂಡಿಯ ಹಿಂಬದಿಗೆ ಬಂದಿಯಂತೆ ನಿಂತು ನಾನು ಗಂಟಲ ಹರಿಯುವಂತೆ ' ಕರ್ಮವೀರ ಗಾಂಧೀ ಕೀ ಜಯ ' ಎಂದು ಒದರುತಿದ್ದೆ. ಗಾಂಧಿಜಿಯವರ ಜೊತೆಗಾರರೊಬ್ಬರು ಅವರ ಬದಿಗೆ ಕುಳಿತಿದ್ದರು. ಅವರು " ಉತ್ತಿಷ್ಠತ, ಜಾಗ್ರತ, ಪ್ರಾಪತ್ಯ ವರಾನ್ ನಿಬೋಧತ " (ಏಳಿರಿ, ಎಚ್ಚರಾಗಿರಿ, ಶ್ರೇಷ್ಠರ ಬಳಿಗೆ ಹೋಗಿ ಉಪದೇಶ ಪಡೆಯಿರಿ.) ಎಂದು ಅನ್ನಿರಿ. ಅದರಿಂದ ಗಾಂಧೀಜಿ ಯವರು ಪ್ರಸನ್ನರಾಗುವರು" ಎಂದು ಹೇಳಿದರು. ನಾನೂ ಅದೇ ಆದೇಶವನ್ನನುಸರಿಸಿದೆನು.

ಈ ಮೆರವಣಿಗೆ ಮುಂತಾದವುಗಳಲ್ಲಿ ಗಾಂಧೀಜಿಯವರಿಗೆ ಅಭಿ ರುಚಿ ಇರಲಿಲ್ಲ ಎಂಬುದು ಒಮ್ಮೆಲೆ ಗೊತ್ತಾಗುತಿತ್ತು. ಅವರ ವ್ಯಾಖ್ಯಾನದಲ್ಲಿಯೂ ಒಂದು ಬಗೆಯ ನಿರಸತೆ ಇತ್ತು. ಅದರಲ್ಲಿ ಅಂಥ ಹುರುಪು, ಅಂಥ ವಿಶೇಷತೆ ಅಥವಾ ಉಪದೇಶ ಮಾಡುವ ವ್ಯಾಸವೃತ್ತಿ ಇವಾವೂ ಇರಲಿಲ್ಲ. ಅವರ ಧನಿಯಲ್ಲಿ ಏರಿಳಿತಗಳೂ ಕಾಣಲಿಲ್ಲ. ಸರಿ, ಒಂದೇ ಒಂದು ಸ್ವರ, ಒಂದೇ ಒಂದು ತಾಲ. ಆದರೆ ಮೇಲಿನ ಈ ನಿರಸತೆಯ ತೆರೆಯ ಮರೆಯಲ್ಲಿ ಒಂದು ಬಗೆಯ

ತೇಜವಿತ್ತು. ಆ ತೇಜವು ಶ್ರೋತೃಗಣದ ಮೇಲೆ ತನ್ನ ವರ್ಚಸ್ಸನ್ನು ಪಸರಿಸಲಾರಂಭಿಸಿತ್ತು.

ಕಲಕತ್ತೆಯಲ್ಲಿ ಅವರು ಅಯ್ದು ಭಾಷಣಗಳನ್ನು ಮಾಡಿರಬಹುದು. ಅವೆಲ್ಲ ಬಹುಶಃ ಹಿಂದೀ ಭಾಷೆಯಲ್ಲಿದ್ದವೆಂಬುದು ನನ್ನ ನೆನಪಿಗೆ ಬರುವುದು. ಎಲ್ಲ ವ್ಯಾಖ್ಯಾನಗಳಲ್ಲಿ ಅವರು ಶ್ರೀ. ಗೋಖಲೆಯವರ ಪ್ರಶಂಸೆಯನ್ನು ಮನದಂದು ಮಾಡಿದರು. ರಾಜಕಾರಣದಲ್ಲಿ ಅವರು ತಮ್ಮ ಗುರುಗಳು ಎಂದು ಗಾಂಧೀಜಿಯವರು ಸಾರಿದರು. ಒಂದು ವರ್ಷದ ಮಟ್ಟಿಗೆ ಹಿಂದುಸ್ತಾನದಲ್ಲಿ ಸಂಚಾರ ಮಾಡಿ, ಅನುಭವ ಪಡೆದು, ಬಳಿಕ ಸಾರ್ವಜನಿಕ ಜೀವನದಲ್ಲಿ ಪ್ರವೇಶಿಸು, ಎಂದು ಅವರೇ ತಮಗೆ ಆದೇಶ ಕೊಟ್ಟರೆಂದು ಹೇಳಿದರು. ಆದುದರಿಂದ ತಮಗೆ ಪೂರ್ಣ ಅನುಭವವಾಗುವ ಮೊದಲು ತಾವು ಯಾವ ಅಭಿಪ್ರಾಯವನ್ನೂ ದೃಢಪಡಿಸುವ ಗೋಜಿಗೆ ಹೋಗುವುದಿಲ್ಲ, ಎಂದರು. ಆಗ ಗೋಖಲೆಯವರ ಮುಖಂಡತ್ವವು ತರುಣ ಪೀಳಿಗೆಯ ಮನಸಿಗೆ ಅಷ್ಟೊಂದು ಬರುತ್ತಿರಲಿಲ್ಲ. ಯಾಕಂದರೆ ಒಳ್ಳೆ ಚೈತನ್ಯ ಯುಕ್ತವಾದ ಹುರುಪಿನ ಭಾಷಣಗಳನ್ನು ಅವರು ಮಾಡುತ್ತಿರಲಿಲ್ಲ. ಅವರ ಸಪ್ಪಗಿನ ಪದ್ಧತಿಯು ಆಗಿನ ತರುಣರಿಗೆ ಸಲ್ಲುತ್ತಿರಲಿಲ್ಲ. ಲೋಕಮಾನ್ಯರು ಜನರಿಗೆ ಆರಾಧ್ಯರಾಗಿದ್ದರು. ಆದರೆ ಗೋಖಲೆಯವರು ಉಪಹಾಸದ ವಿಷಯವಾಗಿದ್ದರು. ಆದುದರಿಂದ ಗೋಖಲೆಯವರು ತಮ್ಮ ಗುರುಗಳು, ಎಂದು ಗಾಂಧೀಜಿಯವರು ಪುನಃ ಪುನಃ ಹೇಳಿದ್ದು ತರುಣರಿಗೆ ಅಷ್ಟೊಂದು ಸರಿ ಎನಿಸಲಿಲ್ಲ.

ಹೀಗಿದ್ದರೂ ಗಾಂಧೀಜಿಯವರ ನಡೆ-ನುಡಿ, ಅವರ ಸಾದಾ ಊಟ-ಉಡಿಗೆ, ವಿನಮ್ರ ಭಾವ, ಮಿತಭಾಷಣ, ಇವೆಲ್ಲ ನಮ್ಮನ್ನು ಒಂದು ಬಗೆಯಾಗಿ ಮೋಹಿಸಿದವು, ಎಂದು ಹೇಳಬಲ್ಲೆನು. ಈ ಹೊಸ ಮುಖಂಡನ ನೆಲೆಯನ್ನು ಆಗ ನಾವು ಕಾಣದೆ ಹೋದೆವೆಂದು ನಾನು ಒಪ್ಪುವೆನು.

ಸಾರ್ವಜನಿಕ ಯಾವುದೋಂದು ವಿಷಯವನ್ನು ಕುರಿತು ನಿಮ್ಮೊಡನೆ ಪತ್ರವ್ಯವಹಾರ ನಡೆಸಬಹುದೋ, ಎಂದು ನಾನು ಆಗ ಒಮ್ಮೆ

ಗಾಂಧೀಜಿಯವರನ್ನು ಕೇಳಿದೆನು. ಕೂಡಲೆ, ಮಾಡಬಹುದು, ಎಂದು ಉತ್ತರ ದೊರಕಿತು. ಯಾವದೇ ಮುಖಂಡನು ಇಷ್ಟೊಂದು ಬೇಗನೆ ಪತ್ರಗಳಿಗೆ ಉತ್ತರಗಳನ್ನು ಬರೆಯಬಲ್ಲನೆಂಬುದನ್ನು ನಾನು ಆಗ ನಂಬಿರಲಿಲ್ಲ. ಮೇಲಾಗಿ ನಾನಂತೂ ಒಬ್ಬ ಅಪರಿಚಿತ ಯುವಕನು. ಆದರೆ ನಾನು ಮುಂದೆ ಸ್ವಲ್ಪೇ ದಿನಗಳಲ್ಲಿ ಈ ಮಾತನ್ನು ಖಟ್ಟಿಗೆ ಹಚ್ಚಿದೆನು. ನಾನು ಬರೆದುದಕ್ಕೆ ಕೂಡಲೆ ಒಂದು ಪೋಸ್ಟಕಾರ್ಡಿನ ಮೇಲೆ ಉತ್ತರವು ಬಂದಿತು. ಅದರಲ್ಲಿ ಗಾಂಧೀಜಿಯವರ ಮಿತವ್ಯಯ ಹಾಗೂ ಮಿತಭಾಷೆ ಈ ಎರಡೂ ಗುಣಗಳು ಕಂಡುವು.

ಈ ರೀತಿ ಗಾಂಧೀಜಿಯವರು ಎಷ್ಟು ತರುಣರ ಮನಸಿನ ಮೇಲೆ ತಮ್ಮ ವರ್ಚಸ್ಸನ್ನು ಬೀರಿರುವರೋ, ಎಷ್ಟು ತರುಣರ ಮನಸು ಅವರನ್ನು ಕುರಿತು ತೂಡಕಿನಲ್ಲಿ ಬಿದ್ದಿರುವದೊ, ಎಷ್ಟು ಜನರ ಕುತೂಹಲಕ್ಕೆ ಅವರು ಪಾತ್ರರಾಗಿರುವರೊ ಹೇಳಲಾರೆ! ಇಷ್ಟು ಮಾತ್ರ ಹೇಳಬಹುದು—೧೯೧೫ ರಲ್ಲಿ ಅವರು ಒಂದು ಒಗಟಿನಂತೆ ಎಷ್ಟು ರಹಸ್ಯಮಯವಾಗಿದ್ದರೋ ಅಷ್ಟೇ ಈಗ್ಯೂ ಇರುವರು.

# ೩. ಗಾಂಧೀ— ಒಂದು ಒಗಟು

೧೯೩೨ರ ಸತ್ಯಾಗ್ರಹದ ಸಮರದ ಸಮಾಪ್ತಿಯ ನಂತರ, ಬಹುಶಃ ೧೯೩೪ರಲ್ಲಿ ಒಮ್ಮೆ ಆಗಿನ ವ್ಹಾಯಿಸರಾಯರಾದ ಲಾರ್ಡ ವಿಲಿಂಗ್ಡನ್‌ರೊಡನೆ ಮಾತಾಡುವಾಗ ನಾನು ಅವರಿಗೆ ಅಂದದ್ದು, 'ಈ ರೀತಿ ನೀವು ಗಾಂಧೀಜಿಯವರಿಂದ ದೂರವಿರಲು ಯತ್ನಿಸಬೇಡಿರಿ. ಅವರಿಗೆ ಭೆಟ್ಟಿಯಾಗಿರಿ, ಅವರ ಮನವರಿಕೆ ಮಾಡಲು ಯತ್ನಿಸಿರಿ. ಹೀಗೆ ಮಾಡುವುದರಿಂದಲೆ ಹಿಂದುಸ್ತಾನ ಹಾಗೂ ಇಂಗ್ಲಂಡ ಈ ಎರಡೂ ದೇಶಗಳ ಕಲ್ಯಾಣವಾದೀತು.' ಆದರೆ ವ್ಹಾಯಿಸರಾಯರ ಮನಸಿನ ಮೇಲೆ ಈ ಮಾತಿನ ಪರಿಣಾಮವೇನೂ ಆಗಲಿಲ್ಲ. ಗಾಂಧೀಜಿಯವರು ತಮ್ಮ ಮನವೊಲಿಸಿ ತಮ್ಮನ್ನು ಹೇಗೋ ತಮ್ಮ ಕಡೆಗೆ ಮಾಡಿಕೊಂಡು ಬಿಡಬಹುದು ಎಂದು ವಿಲಿಂಗಡನ್ನರು ಭಯ ಪಡುತ್ತಿದ್ದರು. ಗಾಂಧೀಜಿಯವರೊಡನೆ ಒಪ್ಪಂದ ಮಾಡಿಕೊಳ್ಳಿರಿ, ಎಂದು ಭಾರತ ಮಂತ್ರಿಗಳು ಸಹ ವ್ಹಾಯಿಸರಾಯರಿಗೆ ಒತ್ತಿ ಹೇಳಿದ್ದ ರೆಂಬದನ್ನು ನಾನು ಬಲ್ಲೆ. ಅದೂ ನಿಷ್ಫಲವಾಯಿತು. ಲಾರ್ಡ ಆಯರ್ವಿನ್ನರು ಹೋದೊಡನೆ ಹರಿದ ಸ್ನೇಹಸೂತ್ರವು ಮುಂದೆ ಲಾರ್ಡ ಲಿನ್‌ಲಿಥಗೊ ಇವರು ವ್ಹಾಯಿಸರಾಯರಾಗಿ ಬರುವವರೆಗೆ ಪುನಃ ಕೂಡಿಕೊಳ್ಳಲಿಲ್ಲ.

ಅತ್ಯಂತ ನಿರ್ಭಯಚಿತ್ತದಿಂದ ನಾವು ಗಾಂಧೀಜಿಯವರಲ್ಲಿ ಪೂರ್ಣ ವಿಶ್ವಾಸವಿಡಬಹುದೆಂದು ನಾನು ಭಾವಿಸಿರುವೆನು. ಆದರೆ ಅದೇ ಗಾಂಧೀಜಿಯವರಲ್ಲಿ ವಿಶ್ವಾಸವಿಡಲು ವಿಲಿಂಗಡನ್ನರು ಸಿದ್ಧ ರಿದ್ದಿಲ್ಲ. ವ್ಹಾಯಿಸರಾಯರು ಅಂದದ್ದು, 'ಅವರು ಅತಿ ಚತುರರು. ಅವರ ಮಾತು ಬೆಲ್ಲದಂಥ ಮಾತು. ಅವರ ಶಬ್ದಗಳು ಎರಡರ್ಥ

ವುಳ್ಳವುಗಳು. ಅವರ ವಾಕ್‌ಪಾಶದಲ್ಲಿ ನಾನು ಪೂರಾ ಸಿಕ್ಕಿಬೀಳುವ ವರೆಗೆ ನಾನು ಆ ರೀತಿ ಸಿಕ್ಕಿದ್ದೇನೆ, ಎಂಬುದು ಸಹ ಗೊತ್ತಾಗುವುದಿಲ್ಲ! ಆದುದರಿಂದ ಅವರಿಗೆ ಭೆಟ್ಟಿಯಾಗದಿರುವುದೆ ಉತ್ತಮ ಮಾರ್ಗ. ಅವರಿಂದ ದೂರ ಇರುವುದರಿಂದಲೆ ನಾನು ನಿರ್ಭಯನಾಗಿರಬಲ್ಲೆ.' ಗಾಂಧೀಜಿಯವರ ಬಗ್ಗೆ ಈ ಬಗೆಯ ವಿಚಾರವುಳ್ಳ ವ್ಯಕ್ತಿಯೂ ಒಂದು ಇರುವುದೆಂಬುದನ್ನು ನೋಡಿ ನನಗೆ ಅಚ್ಚರಿಯುಂಟಾಯಿತು. ಆದರೆ ಮುಂದೆ, ವ್ಹಾಯಿಸರಾಯರೊಬ್ಬರೆ ಇಂಥ ವಿಚಾರದವರಿಲ್ಲ, ಇನ್ನು ಹಲವರಿದ್ದಾರೆ, ಎಂಬುದು ಗೊತ್ತಾಯಿತು.

ಅಮೇರಿಕಾ ದೇಶದ ಒಬ್ಬ ಪ್ರತಿಷ್ಠಿತ ಗ್ರಂಥಕಾರನಾದ ಶ್ರೀ. ಗುಂಥರ ಎಂಬವನು ಗಾಂಧೀಜಿಯವರನ್ನು ಕುರಿತು ಈ ರೀತಿ ಬರೆದಿದ್ದಾನೆ:—'ಮಹಾತ್ಮಾ ಗಾಂಧಿಯವರಲ್ಲಿ ಏಸೂ, ಚಾಣಕ್ಯ, ಹಾಗೂ ಬಾಪೂ (ಎಲ್ಲರನ್ನು ತಂದೆಯಂತೆ ಪ್ರೀತಿಸುವ ವ್ಯಕ್ತಿ) ಈ ಮೂವರ ಅದ್ಭುತವಾದ ಮಿಶ್ರಣವಿದೆ. ಬುದ್ಧನ ತರುವಾಯ ಅವರು ಎಲ್ಲಕ್ಕೂ ಮಹಾದೊಡ್ಡ ವ್ಯಕ್ತಿ. ಈ ಪ್ರಪಂಚದಲ್ಲಿ ಅವರಿಗಿಂತ ಹೆಚ್ಚು ಚಾಣಾಕ್ಷ ಮನುಷ್ಯನಿರುವುದು ಅಶಕ್ಯ. ಯಾವದೇ ಹಿಡಿತದಲ್ಲಿ ಸಿಗಲಾರದ ವ್ಯಕ್ತಿಯದು. ನಾನು ಅನಾದರಭಾವದಿಂದ ಹೀಗೆ ಹೇಳುವುದಿಲ್ಲ. ಏಕಕಾಲಕ್ಕೆ ಅದೇ ವ್ಯಕ್ತಿಯು ಮಹಾತ್ಮಾ, ಮುತ್ಸದ್ದಿ, ಅವತಾರೀ ಪುರುಷ, ಹಾಗೂ ಅತ್ಯಂತ ಪ್ರತಾಪಿ ಪ್ರಸಂಗಪಟು ಇರುವದು, ಮಾನವೀ ಸ್ವಭಾವಕ್ಕೆ ಅಪವಾದರೂಪವು, ಅಥವಾ ಮಾನವೀ ನಿಯಮಕ್ಕೆ ವಿರುದ್ಧವು. ಅವರಲ್ಲಿ ಕಾಣುವ ವಿಸಂಗತ ಸಂಗತಿಗಳನ್ನು ಸ್ವಲ್ಪಮಟ್ಟಿಗೆ ಲಕ್ಷಿಸಬಹುದು. ಇತ್ತ ಅಹಿಂಸೆ ಹಾಗೂ ಅಸಹಕಾರದಲ್ಲಿ ಗಾಂಧೀಜಿಯವರು ಅತ್ಯಂತ ವಿಶ್ವಾಸವುಳ್ಳವರು; ಆದರೆ ಯುದ್ಧದಲ್ಲಿ ಇಂಗ್ಲಂಡಕ್ಕೆ ಸಹಾಯ ಮಾಡಲೂ ಅವರು ಸಿದ್ಧರೇ! ಸೆರೆಮನೆಯಲ್ಲಿರುವಾಗ ಅವರು ನೈತಿಕ ವಿಚಾರದಿಂದ ಉಪವಾಸ ಮಾಡಿದರು, ಆದರೆ ಅದೇ ಉಪವಾಸವು ಅವರ ಬಿಡುಗಡೆಯ ಸಾಧನವಾಯಿತು! ಆ ಬಿಡುಗಡೆ ಅವರ ಉದ್ದೇಶವಿರಲಿಲ್ಲ, ಅವರಿಗೆ ಅವಶ್ಯವೂ ಇರಲಿಲ್ಲ. ಅವರು ಚಿಕ್ಕ ಪುಟ್ಟ ವಿವರಗಳಲ್ಲಿ ಹೆಚ್ಚುಕಡಿಮೆ

ಮಾಡಬಹುದು, ಆದರೆ ಸ್ವೀಕೃತ ಸಿದ್ಧಾಂತದಿಂದ ಅವರು ಎಂದಿಗೂ ಎಳ್ಳಷ್ಟೂ ಕದಲುವುದಿಲ್ಲ. ಈ ಮಾತನ್ನು ನಾವು ಚನ್ನಾಗಿ ಅರಿತು ಕೊಳ್ಳದಿದ್ದರೆ ಅವರ ನಡವಳಿಕೆಯಲ್ಲಿಯ ಚಿಲ್ಲರೆ ವಿಸಂಗತಿಗಳು ನಮಗೆ ದೊಡ್ಡವಾಗಿ ಕಾಣುವವು. ಈ ಹೊತ್ತು ಇಂಗ್ಲಂಡದೊಡನೆ ಅವರು ಅಸಹಕಾರ ಹೂಡಿದ್ದರೂ ಅವರಿಗಿಂತ ಹೆಚ್ಚಿನ ಇಂಗ್ಲಂಡದ ಸ್ನೇಹಿತರಿನ್ನಾರೂ ಇಲ್ಲ! ಆಧುನಿಕ ವಿಜ್ಞಾನದ ಬಗ್ಗೆ ಅವರಲ್ಲಿ ಒಂದು ಬಗೆಯ ಹೇಯ ಭಾವವಿದೆ, ಆದರೆ ಅವರು ಉಷ್ಣಮಾಪಕ ಯಂತ್ರ ವನ್ನು (ಥರ್ಮಾಮಿಟರ) ಹಾಗೂ ಕನ್ನಡಕಗಳನ್ನು ಉಪಯೋಗಿಸು ತಿರುವರು. ಹಿಂದು-ಮುಸಲ್ಮಾನರ ಐಕ್ಯವನ್ನು ಅವರು ಬಯಸುವರು, ಆದರೆ ಅವರ ಮಗನು ಸ್ವಲ್ಪ ದಿನ ಮುಸಲ್ಮಾನ ಧರ್ಮವನ್ನು ಸ್ವೀಕರಿಸಿದಾಗ ಅವರ ಮನಸಿಗೆ ಅತೀವ ದುಃಖವಾಗಿತ್ತು. ಅವರು ಕಾಂಗ್ರೆಸದ ಜೀವ, ಕಾಂಗ್ರೆಸ್ಸಿನ ಆಧಾರ, ಕಾಂಗ್ರೆಸ್ಸಿನ ಕಣ್ಣು, ಕಾಂಗ್ರೆಸ್ಸಿನ ಕೈಕಾಲು ಇದ್ದರೂ ಆ ಸಂಸ್ಥೆಯಲ್ಲಿ ಅವರು ನಾಲ್ಕಾಣೆ ಸಭಾಸದರು ಸಹ ಇಲ್ಲ! ಪ್ರತಿಯೊಂದು ಸಂಗತಿಯನ್ನು ಅವರು ಧಾರ್ಮಿಕ ದೃಷ್ಟಿಯಿಂದ ನೋಡುವರು; ಆದರೆ ಅವರ ಧರ್ಮವಾವು ದೆಂಬುದನ್ನು ವಿವರಿಸಿ ಬೆರಳಿಟ್ಟು ಹೇಳುವುದು ಕಠಿಣ. ಇದಕ್ಕೂ ಹೆಚ್ಚಿನ ಕಣ್ಣುಕಟ್ಟು ಹೇಗೆ ಇರಬಲ್ಲದು ? ಆದರೂ ಗಾಂಧೀಜಿಯವರು ಒಂದು ಮಹಾ ದೊಡ್ಡ ವ್ಯಕ್ತಿ, ಅವರ ಜೀವನವು ಶುದ್ಧ ಶೌರ್ಯಮಯ ವಿರುವುದು ಎಂಬ ಮಾತು ನಿಜವು, ಪರಸ್ಪರ ವಿರುದ್ಧವಿರುವ ಗುಣಗಳ ಸುಂದರ ಸಂಮಿಶ್ರಣವು ಗಾಂಧೀಜಿಯವರಲ್ಲಿ ಕಾಣುತ್ತಿರುವುದು ನಿರ್ವಿವಾದವು. ಅವರು 'ವಜ್ರಾದಪಿ ಕಠೋರಾಣಿ ಮೃದೂನಿ ಕುಸು ಮಾದಪಿ' (ವಜ್ರಕ್ಕಿಂತ ಬಿರುಸು, ಹೂವಿಗಿಂತ ಮೃದು) ಎಂಬ ಸಂಸ್ಕೃತ ಸುಭಾಷಿತಕ್ಕೆ ಅನ್ವಯಿಸುವರು. ಅವರು ಅತಿ ಸರಲರು, ಆದರೆ ದೃಢರು. ಅವರು ಅತ್ಯಂತ ಜಿಪುಣರೂ ಸೈ, ಉದಾರರೂ ಸೈ. ಅವರು ಅನ್ಯರಲ್ಲಿ ಅಸೀಮ ವಿಶ್ವಾಸವಿಡಬಲ್ಲರು, ಆದರೆ ಅತ್ಯಂತ ಸಂಶಯ ತಾಳಿದುದನ್ನು ನಾನು ನೋಡಿರುವೆ. ನೋಡಿದರೆ ಅತಿಶಯ ಕುರೂಪರು, ಆದರೆ ಅವರ ಕಣ್ಣು ಹಾಗೂ ಪ್ರತ್ಯೇಕ ಅವಯವದಿಂದ

ದೈವೀ ತೇಜ ಸೌಂದರ್ಯಗಳು ಹೊರಹೊಮ್ಮುತ್ತಿವೆ. ಅವರ ಆಲ್ಹಾದವು ಅನೇಕರನ್ನು ಮೋಹಿಸಿದೆ. ಅವರು ಮಾತಾಡುವ ರೀತಿ ನಿರಸ ಕಂಡರೂ ಅದರಲ್ಲಿ ಒಂದು ಮೋಹಿಸಿಮಂತ್ರವಿದೆ. ಅದರಿಂದ ಅನೇಕರು ಮುಗ್ಧರಾಗಿದ್ದಾರೆ.

ಗಾಂಧೀಜಿಯವರನ್ನು ಶಬ್ದಗಳಿಂದ ಬಣ್ಣಿಸುವದು ದುಷ್ಕರ. ಯಾವ ವಿಶಿಷ್ಟ ಗುಣದ ಮೂಲಕ ಗಾಂಧೀಜಿಯವರು 'ಮಹಾತ್ಮಾ' ಆದರು, ಎಂದು ಯಾರಾದರೂ ಪ್ರಶ್ನಿಸಿದರೆ ಎಷ್ಟು ಬಣ್ಣಿಸಿ ಹೇಳಿದರೂ ಕೇಳಿದವರನ್ನು ಸಮಾಧಾನ ಪಡಿಸುವದು ಸಾಧ್ಯವಿಲ್ಲ. ನಾನು ಈ ಮೊದಲೆ ಹೇಳಿದಂತೆ ಅವರು ಪರಸ್ಪರ ವಿರುದ್ಧ ಗುಣಗಳ ಒಳ್ಳೆ ಉತ್ತಮವಾದ ನೆಲೆವೀಡಾಗಿರುವುದರಿಂದ ಅವರ ಗುಣಗಳನ್ನು ವಿಂಗಡಿಸಿ ಹೇಳುವದು ದುಸ್ತರ. ವಸ್ತುಸ್ಥಿತಿ ಹೀಗೆ ಇದೆ. ಅವರಲ್ಲಿ ಎಲ್ಲ ಗುಣಗಳೂ ಇವೆ, ಅವೇ ಅವರನ್ನು ದೊಡ್ಡವರನ್ನಾಗಿ ಮಾಡಿವೆ, ಎಂದು ಹೇಳಿ ಸುಮ್ಮನಿರಬೇಕಾಗುವದು. ಬರಿಯ ಗಾಂಧೀವಾಙ್ಮಯವನ್ನು ಓದಿ ಅವರ ಜ್ಞಾನವಾಗುವದು ಅಶಕ್ಯ. ಒಡನೆ ಅವರ ಹತ್ತಿರ ಇದ್ದರೂ ಚನ್ನಾಗಿ ಹಾಗೂ ಪೂರ್ಣವಾಗಿ ಅವರನ್ನು ಅರಿತುಕೊಳ್ಳುವದು ಕಠಿಣ.

ಗಾಂಧೀಜಿಯವರ ಜೀವನವೆಂದರೊಂದು ದೊಡ್ಡ ದೈವೀ ಉತ್ಸವವಿದ್ದಂತೆ ಇದೆ. ಅವರ ಉಲ್ಹಾಸ ಉತ್ಸಾಹಗಳಿಂದ ಅದು ಮೊದಲು ಮಾಡಿತು, ಈಗ್ಯೂ ಅದು ಸಾಗಿರುವದು ಹಾಗೂ ಅವರು ಸಾಯುವತನಕ ಹೀಗೆಯೆ ನಡೆಯುವದು. ಇದರಲ್ಲಿ ಬೇರೆ ಬೇರೆ ದೃಶ್ಯಗಳೆಷ್ಟು, ವಿವಿಧ ಅಂಗಗಳೆಷ್ಟು ಇದನಾರು ಬಲ್ಲರು ? ಆದರೆ ಈ ಎಲ್ಲ ದೃಶ್ಯಗಳ ಮತ್ತು ಅಂಗಗಳ ಧ್ಯೇಯವು ಒಂದೇ ಒಂದು. ಈ ಉತ್ಸವಯಾತ್ರೆ ಒಂದೇ ಒಂದು ದಿಕ್ಕಿನಲ್ಲಿ ಒಂದೇ ಧ್ಯೇಯದತ್ತ ದ್ರುತಗತಿಯಿಂದ ಸಾಗಿರುವದು. ಪ್ರತಿಕ್ಷಣವೂ ಅವರಿಗೆ ಆ ಧ್ಯೇಯದ ಎಚ್ಚರವಿದೆ, ಅದರತ್ತ ಸಾಗಲು ಉಗ್ರಪ್ರಯತ್ನ ನಡೆದಿದೆ, ಹಾಗೂ ಪ್ರತಿಕ್ಷಣವೂ ಆ ಯಾತ್ರೆ ಅವರನ್ನು ಧ್ಯೇಯದ ಬಳಿ ಒಯ್ಯುತಿದೆ.

ಹಲವರಿಗೆ ಗಾಂಧೀಜಿಯುವರು ಕೇವಲ 'ಬಾಪೂ' ಎಂಬ ರೂಪದಿಂದ ಕಾಣಿಸಿಕೊಂಡಿರುವರು, ಹಲವರಿಗೆ ಅವರು ಮಹಾತ್ಮ ರಂತೆ ಪ್ರತೀತರಾಗಿರುವರು, ಹಲವರಿಗೆ ಅವರು ಕೇವಲ ರಾಜಕೀಯ ಮುಖಂಡರು ಮಾತ್ರ, ಮತ್ತೆ ಹಲವರಿಗೆ ಅವರು ಕ್ರಾಂತಿಕಾರಿ ಇಲ್ಲವೆ ಬಂಡಾಯ ಮಾಡುವವನಂತೆ ಗೋಚರವಾಗಿರುವರು.

ಗಾಂಧೀಜಿಯುವರು ಸತ್ಯದ ಸಾಧನೆ ಮಾಡಿರುವರು, ಬ್ರಹ್ಮ ಚರ್ಯವನ್ನು ಪಾಲಿಸಿರುವರು, ಭಗವಂತನ ಭಕ್ತರಿರುವರು, ಹರಿಜನ ಹಿತಸಾಧಕರವರು, ದರಿದ್ರನಾರಾಯಣನ ಪೂಜಕರವರು, ಸ್ವರಾಜ್ಯ ಕ್ಕಾಗಿ ಅವರು ಹೋರಾಡುತಿರುವರು, ಖಾದೀ ಆಂದೋಲನವನ್ನು ಆತ್ಮೀಯ ಭಾವದಿಂದ ನಡಿಸುತಿರುವರು, ಹಿಂದು-ಮುಸಲ್ಮಾನರ ಐಕ್ಯಕ್ಕಾಗಿ ಅವರು ಬಣ್ಣಿಸಲಾರದಷ್ಟು ರೀತಿಯಿಂದ ದಣಿಯದೆ ದುಡಿದಿರುವರು. ರೋಗನಿವಾರಣೆಗಾಗಿ ನಿಸರ್ಗೋಪಾಯದ ಪ್ರಯೋಗ ಗಳನ್ನು ಮಾಡಿರುವರು, ಗೋರಕ್ಷಣೆಯ ಯೋಜನೆಗಳನ್ನು ಹೂಡಿರು ವರು. ಶರೀರ ಸ್ವಾಸ್ಥ್ಯ ಹಾಗೂ ಆಧ್ಯಾತ್ಮ ಈ ಎರಡೂ ದೃಷ್ಟಿಯಿಂದ ಆಹಾರದ ಪ್ರಯೋಗಗಳನ್ನು ಮಾಡಿರುವರು. ಇವೆಲ್ಲ ಗಾಂಧೀಜಿ ಯುವರ ಅಂಗಾಂಗಗಳು. ಈ ಎಲ್ಲ ಪ್ರಯತ್ನಗಳ ಏಕೀಕರಣ ಹಾಗೂ ಪರಿಸಮಾಪ್ತಿ ಸ್ಥಾನವೆ ಗಾಂಧೀಜಿ!

'ನನ್ನ ಜೀವನವೆಂದರೇನು? ಅದೊಂದು ಸತ್ಯದ ಪ್ರಯೋಗ ಶಾಲೆ. ನನ್ನ ಇಡೀ ಜೀವನದಲ್ಲಿ ನಾನೊಂದೇ ಒಂದು ಗುರಿಯಿಟ್ಟು ಯತ್ನ ಮಾಡುತಿರುವೆ- ಮೋಕ್ಷಪ್ರಾಪ್ತಿ, ಪರಮಾತ್ಮನ ಸಾಕ್ಷಾತ್ಕಾರ, ಇದೇ ಆ ಗುರಿ. ಕೂತಿರಲಿ ನಿಂತಿರಲಿ, ಎಚ್ಚರಿರಲಿ ಮಲಗಿರಲಿ, ಉಣ್ಣಲಿ ಉಪವಾಸವಿರಲಿ, ನನ್ನೆದುರು ಒಂದೇ ಒಂದು ಗುರಿ. ಅದನ್ನೆ ಅವಚಿಕೊಂಡು ನಾನು ಜೀವಿಸುತಿರುವೆ. ನನ್ನ ಬರಹ, ಭಾಷಣ, ರಾಜಕೀಯ ಚಟುವಟಿಕೆ ಮುಂತಾದವುಗಳೆಲ್ಲ ಆ ಒಂದು ಗುರಿಯತ್ತ ಕಣ್ಣಿಟ್ಟು ಸಾಗಿರುವುವು. ನಾನು ತಪ್ಪು ಮಾಡುವುದೆ ಇಲ್ಲ ಎಂದು ನಾನು ಹೇಳುವುದಿಲ್ಲ. ನಾನು ಮಾಡಿದುದೆಲ್ಲ ನಿರ್ದೋಷವೆಂದು ಸಾರುವುದಿಲ್ಲ, ಆದರೆ ಒಂದು ಮಾತನ್ನು ನಾನು ಎದೆತಟ್ಟಿ ಹೇಳಬಲ್ಲೆ.

ಅದೇನಂದರೆ, ಸರಿ ಎಂದು ತೋರಿದುದನ್ನೆ ಆಯಾ ಕಾಲಕ್ಕೆ ನಾನು ಮಾಡಿದೆನು. ಆಯಾ ಕಾಲಕ್ಕೆ ನನಗೆ 'ಧರ್ಮ' ಎಂದು ಪ್ರತೀತವಾದುದನ್ನೆ ನಾನು ಪಾಲಿಸಿದೆನು. ಅದರಿಂದ ನಾನೆಂದಿಗೂ ಚ್ಯುತನಾಗಲಿಲ್ಲ. ಸೇವೆಯೆ ಪರಮ ಧರ್ಮ, ಸೇವೆಯಲ್ಲಿಯೆ ಪರಮಾತ್ಮ ಸಾಕ್ಷಾತ್ಕಾರ, ಎಂದು ನನ್ನ ನಂಬಿಗೆ ಇದೆ.'

ತಮ್ಮ ಜೀವನರಹಸ್ಯವನ್ನು ಕುರಿತು ಗಾಂಧೀಜಿಯವರ ಮೇಲಿನ ಉಕ್ತಿಯು ನಮಗೆ ಸಾಕಷ್ಟು ಬೆಳಕು ಕೊಡುತಿದೆ. ಅಂತರ್ಜ್ಯೋತಿಯಿಂದ ಸ್ಫೂರ್ತಿಗೊಂಡು ಸತತ ನಡೆಯುತಿರುವ ವ್ಯಕ್ತಿಯೆ ಈ ಬಗೆಯ ದೊಡ್ಡ ಮಾತನ್ನುಸಿರಬಲ್ಲದು:

'ನ ತ್ವಹಂ ಕಾಮಯೇ ರಾಜ್ಯಂ
ನ ಸ್ವರ್ಗಂ ನಾಪುನರ್ಭವಮ್ ।
ಕಾಮಯೇ ದುಃಖತಪ್ತಾನಾಂ
ಪ್ರಾಣಿನಾಮಾರ್ತಿನಾಶನಮ್' ॥

'ನನಗೆ ರಾಜ್ಯ ಬೇಡ, ಸ್ವರ್ಗಬೇಡ, ಮೋಕ್ಷಬೇಡ. ದುಃಖ ಸಂತಪ್ತ ಜೀವದ ಸಂತಾಪ ನಿವಾರಣೆಯೆ ನನಗೆ ಬೇಕಾದ ವಿಷಯ'— ಇವಾದರೂ ಅಷ್ಟೇ ಶ್ರೇಷ್ಠ ಮಾತುಗಳಲ್ಲವೆ ?

# ೪. ಅಹಿಂಸೆ- ಅವರ ಜೀವನ ಸೂತ್ರ

'ನಿಮ್ಮ ಎಲ್ಲ ಕೆಲಸಗಳಲ್ಲಿ ಯಾವುದು ಅತಿ ಶ್ರೇಷ್ಠ ? ಸೈ, ಇದೇ ಕೆಲಸವು ಶಿಖರ ಸ್ಥಾನದಲ್ಲಿ ಮೆರೆಯಬಲ್ಲದು, ಎಂದು ಯಾವುದರ ಬಗ್ಗೆ ನೀವು ಹೇಳಬಲ್ಲಿರಿ,' ಎಂದು ನಾನೊಮ್ಮೆ ಕುತೂಹಲ ದಿಂದ ಅವರನ್ನು ಕೇಳಿದೆನು.

ಗಾಂಧೀಜಿಯವರು ಇದರ ಉತ್ತರವನ್ನು ಕೂಡಲೆ ಕೊಡಲಾರದೆ ಹೋದರು. ಒಂದು ಕ್ಷಣ, ಒಂದೇ ಕ್ಷಣ ತಡೆದರು. ಯಾವ ವಿಶೇಷ ನೀರಿನ ಮೂಲಕ ನೀನು 'ಸಾಗರ' ಎನಿಸುವಿ, ಎಂದು ಸಾಗರವನ್ನು ಕೇಳಿದರೆ ಅದೇನು ಹೇಳಬಲ್ಲದು ? 'ಎಲ್ಲಕ್ಕೂ ಹಿರಿಗೆಲಸವೆಂದರೆ ಖಾದಿ ಹಾಗೂ ಹರಿಜನಕಾರ್ಯ' ಎಂದು ಉತ್ತರವಿತ್ತರು. ಈ ಉತ್ತರವು ನನಗೆ ಅಷ್ಟೊಂದು ಮನಸಿಗೆ ಬರಲಿಲ್ಲ. ಆದುದರಿಂದ ನಾನು ಸೂಚನೆಯೆಂದು 'ಅಹಿಂಸೆಯಲ್ಲವೆ ನಿಮ್ಮ ಎಲ್ಲಕ್ಕೂ ಹೆಚ್ಚಿನ ಕಾಣಿಕೆ' ಎಂದೆನು. 'ಅದು ನನ್ನ ಸಕಲ ಕರ್ಮಗಳಲ್ಲಿಯೂ ಓತ ಪ್ರೋತವಿರುವದು. ಆದರೆ ಸಮಷ್ಟಿರೂಪ ಅಹಿಂಸೆ, ವ್ಯಷ್ಟಿರೂಪ ಕಾರ್ಯ ಇವು ಬೇರೆ ಬೇರೆ ಎಂದು ಬಗೆದು ಹೇಳಬೇಕಾದರೆ ಖಾದಿ ಹಾಗೂ ಹರಿಜನ ಕಾರ್ಯ, ಇವೇ ನನ್ನ ಶ್ರೇಷ್ಠತಮ ಕಾರ್ಯ ಗಳೆಂದು ಹೇಳಬಲ್ಲೆ. ಅಹಿಂಸೆಯಂತೂ ನನ್ನ ಜಪಮಾಲೆಯ ಮಣಿಗಳನ್ನು ಪೋಣಿಸುವ ಸೂತ್ರವಿದ್ದಂತೆ. ಅದು ನನ್ನ ಎಲ್ಲ ಕೆಲಸಗಳಲ್ಲಿಯೂ ವ್ಯಸ್ತವು.'

ಹರಿಜನ ಕಾರ್ಯವು ಈಗ ಬಹಳ ದೊಡ್ಡದಾಗಿ ಬೆಳೆದಿದೆ ಎಂಬುದು ನಿಃಸಂಶಯ. ಆದರೆ ಇದರ ಪ್ರಾರಂಭವೆಲ್ಲಿಂದ ಎಂಬುದನ್ನು ಯಾರೂ ಹೇಳಲರಿಯರು. ಗಾಂಧಿಯವರು ೧೨ ವರ್ಷದವರಿರುವಾಗಲೆ ಅವರ ಹೃದಯದಲ್ಲಿ ಈ ವಿಷಯವನ್ನು ಕುರಿತು ವಿಚಾರಮಂಥನವು ಪ್ರಾರಂಭಿಸಿತು. ಇವರಲ್ಲಿ ಕೆಲಸ ಮಾಡುವ ಭಂಗಿಯ ಹೆಸರು ಉಕಾ. ಅವನು ಅವರ ಪಾಯಖಾನೆ ಉಡುಗಲು ಬರುತಿದ್ದನು. 'ಅವನನ್ನು ಮುಟ್ಟಕೂಡದು' ಎಂದು ಗಾಂಧೀಜಿಯವರ ತಾಯಿ ಹೇಳಿದಳು. ಆದರೆ ಆಗ ಸಹ ಗಾಂಧೀಜಿಯವರಿಗೆ ಆ ಅಸ್ಪೃಶ್ಯತೆಯಲ್ಲಿ ಏನೂ ಅರ್ಥವಿದ್ದಂತೆ ತೋರಲಿಲ್ಲ. ಅಸ್ಪೃಶ್ಯತೆ ಎಂಬುದು ಅಧರ್ಮ, ಎಂಬ ಭಾವನೆ ಆಗಿನಿಂದ ಅವರಲ್ಲಿ ಬಲಗೊಳ್ಳಲಾರಂಭಿಸಿತ್ತು. ಅಸ್ಪೃಶ್ಯ ಭಾವನೆಯು ಹಿಂದೂ ಧರ್ಮಕ್ಕೆ ಕಲಂಕರೂಪವಾಗಿದೆ, ಎಂಬ ವಿಚಾರವು ಅವರ ಬಾಲ್ಯದಲ್ಲಿಯ ಭಾವನೆಗಳಲ್ಲಿಯೂ ಕಂಡುಬರುವುದು. ಹಿಂದೂ ಧರ್ಮದಲ್ಲಿ ಪೂರ್ಣ ಶ್ರದ್ಧೆಯುಂಟಾಗುವ ಪೂರ್ವದಲ್ಲಿ ಸಹ ಅವರಿಗೆ ಅಸ್ಪೃಶ್ಯತೆಯ ಮೂಲಕ ಬಹಳ ದುಃಖವಾಗುತ್ತಿತ್ತು. ಇವೇ ಸಂಸ್ಕಾರಗಳ ಮೂಲಕ ಅವರು ಅಸ್ಪೃಶ್ಯೋದ್ಧಾರ ಕ್ಷೇತ್ರದಲ್ಲಿ ಮುಂದಡಿ ಇಡುತ್ತ ಹೋದರು. ಈಗ ನಾಲ್ವತ್ತು ವರ್ಷಗಳಾಚೆ ಒಮ್ಮೆ ರಾಜಕೋಟದಲ್ಲಿ ಪ್ಲೇಗು ಹಬ್ಬುತಿರುವಾಗ ಅವರು ಜನಸೇವಾ ಕಾರ್ಯವನ್ನು ಕೈಕೊಂಡೊಡನೆ ಮೊದಲು ಅಸ್ಪೃಶ್ಯರ ವಸತಿಯ ನಿರೀಕ್ಷಣೆ ಮಾಡಲಾರಂಭಿಸಿದರು. ಈ ಅವರ ಪ್ರವೃತ್ತಿಗೂ ಮೇಲಿನ ಅವರ ಬಾಲ್ಯ ಸಂಸ್ಕಾರಗಳೆ ಕಾರಣ. ಆಗಿನ ಅವರ ಜೊತೆಗಾರರಿಗೆ ಈ ಅವರ ಉಪಕ್ರಮವು ತೀರ ಹೊಸದೆನಿಸಿತು. ಆದರೆ ಹರಿಜನ ಸೇವೆಯ ಈ ಬೀಜವು ಆಗಲೆ ಅಂಕುರಿಸಿತ್ತು ಹಾಗೂ ಅನುಕೂಲ ಸಮಯ ಸಿಕ್ಕಾಗ ಅದು ವೃಕ್ಷರೂಪವಾಗಿ ಬೆಳೆಯತೊಡಗಿತ್ತು. ಹರಿಜನ-ಉಪವಾಸದ ಕಾಲಕ್ಕೆ (೧೯೩೩) ಆ ವೃಕ್ಷದ ವಿಶಾಲ ವಿಸ್ತಾರವು ಎಲ್ಲರಿಗೂ ಪ್ರತ್ಯಕ್ಷವಾಯಿತು. ಹರಿಜನ—ಉಪವಾಸವೆಂದರೆ, ಹಿಂದೂ ಸಮಾಜವು ಛಿನ್ನಭಿನ್ನವಾಗದಂತೆ ಅದನ್ನು ಸಂರಕ್ಷಿಸುವ ಒಂದು ಘೋರ ತಪವು. ಆ ಪ್ರಯತ್ನದಲ್ಲಿ ಗಾಂಧೀಜಿಯವರಿಗೆ ಪೂರ್ಣ ಗೆಲವಾಯಿತು.

ಅಯ್ದು ಕೋಟಿ ಹರಿಜನರನ್ನು ಹಿಂದೂ ಸಮಾಜದಿಂದ ಬೇರ್ಪಡಿಸಿ ಬಿಡುವ ಒಂದು ದುಷ್ಟ ಒಳಸಂಚು ನಡೆದಿತ್ತು. ಆ ಸಂಚಿನಲ್ಲಿ ದೊಡ್ಡದೊಡ್ಡವರು ಭಾಗವಹಿಸಿದ್ದರು. ಈ ಸುದ್ದಿ ಹಲವರಿಗೆ ಗೊತ್ತಿತ್ತು. ಗಾಂಧೀಜಿಯವರಿಗೆ ಇದರ ಜ್ಞಾನವಿತ್ತು. ಹರಿಜನರ ರಕ್ಷಣಕ್ಕಾಗಿ ನಾನು ಪ್ರಾಣದ ಹಂಗುದೊರೆದು ಹೋರಾಡುವೆ, ಎಂದು ಅವರು ಎರಡನೆ ದುಂಡುಮೇಜಿನ ಪರಿಷತ್ತಿನಲ್ಲಿಯು ತಮ್ಮ ಭಾಷಣದಲ್ಲಿ ಹೇಳಿಬಿಟ್ಟಿದ್ದರು. ಈ ಅವರ ಮರ್ಮಸ್ಪರ್ಶಿಯಾದ ಆಹ್ವಾನವನ್ನು ಆಗ ಯಾರೂ ಅಷ್ಟೊಂದು ಗಂಭೀರತೆಯಿಂದ ವಿಚಾರಿಸಿರಲಿಲ್ಲ. ಆದರೆ ಗಾಂಧೀಜಿಯವರು ಅದೇ ಕ್ಷಣಕ್ಕೆ ತಮ್ಮ ನಿರ್ಣಯವನ್ನು ಮಾಡಿಬಿಟ್ಟಿದ್ದರು. ಆದುದರಿಂದ ಆಗಿನ ಬ್ರಿಟಿಶ ಪ್ರಧಾನ ಮಂತ್ರಿಗಳು ತಮ್ಮ ಹರಿಜನ ನಿರ್ಣಯವನ್ನು ಪ್ರಕಟಿಸಿದೊಡನೆ ಹರಿಜನ ರಕ್ಷಣೆಗಾಗಿ ಗಾಂಧೀಜಿಯವರು ತಮ್ಮ ಪ್ರಾಣವನ್ನು ಪಣಕ್ಕೆ ಹಚ್ಚಿದರು. ಈ ರೀತಿ ಆಮರಣ ಉಪವಾಸವನ್ನು ಕೈಕೊಂಡು ಹಿಂದೂ ಸಮಾಜ ಹಾಗೂ ಹರಿಜನರು ಈ ಇಬ್ಬರನ್ನೂ ಉದ್ಧರಿಸಿದರು. ಅಹಿಂಸಾ ಶಸ್ತ್ರದ ಈ ಪ್ರಯೋಗವು ಉತ್ತಮ ರೀತಿಯಿಂದ ಫಲಕಾರಿಯಾಯಿತು. ಈ ಅವರ ಉಪವಾಸದಲ್ಲಿ ರಾಜಕಾರಣವೇನೂ ಇರಲಿಲ್ಲ. ಆದರೂ ಇದರ ರಾಜಕೀಯ ಫಲ ಪರಿಣಾಮಗಳು ಅವರಿಗೆ ಗೊತ್ತಿರದೆ ಇರಲಿಲ್ಲ. ಅವರ ಉದ್ದೇಶವು ಮಾತ್ರ ಕೇವಲ ಧಾರ್ಮಿಕವಿತ್ತು.

‘ಹರಿಜನರನ್ನು ನಾವು ಬಹಳ ಪೀಡಿಸಿದ್ದೇವೆ. ನಾವು ಪ್ರಾಯಶ್ಚಿತ್ತದಿಂದಲೆ ಆ ಪಾಪವನ್ನು ತೊಳೆಯಬಲ್ಲೆವು.’—ಈ ಅವರ ಮನೋವೃತ್ತಿಯಲ್ಲಿ ಧರ್ಮ ಅರ್ಥಗಳೆರಡೂ ಅಡಕವಾಗಿವೆ. ಆದರೆ ಧರ್ಮವು ಮುಖ್ಯ, ಅರ್ಥವು ಗೌಣ. ಈ ಅವರ ಉಪವಾಸದ ಪರಿಣಾಮವು ಬಹಳ ವ್ಯಾಪಕವಾಯಿತು. ಹಿಂದೂ ಸಮಾಜವು ತುಂಡುತುಂಡಾಗಿ ಹೋಗುವುದುಳಿಯಿತು. ಶತ್ರುಗಳ ಒಳಸಂಚು ವ್ಯರ್ಥವಾಯಿತು. ಈ ಒಳಸಂಚಿನ ಜ್ಞಾನವಿಲ್ಲದವರು ಹರಿಜನ ಕಾರ್ಯದ ಮಹತ್ವವನ್ನು ಗುರುತಿಸುವುದು ಕಠಿಣ. ಹರಿಜನ ಕಾರ್ಯಕ್ಕೆ ಕೊಟ್ಟ ಮಹತ್ವವನ್ನೆ

ಗಾಂಧೀಜಿಯುವರು ಖಾದೀ ಕಾರ್ಯಕ್ಕೆ ಕೊಟ್ಟಿರುವರು. ಈ ಮಾತಿನ ರಹಸ್ಯವನ್ನು ಈಗಲೆ ತಿಳಿದುಕೊಳ್ಳುವುದು ಜಡವಿದ್ದರೂ ಮುಂದೆ ಸಮಯವಶಾತ್ ಅದೂ ಸ್ಪಷ್ಟವಾಗಬಹುದು.

'ಅಹಿಂಸೆ? — ಏಕೆ, ಅಹಿಂಸೆಯೆ ನಿಮ್ಮ ಎಲ್ಲಕ್ಕೂ ಹೆಚ್ಚಿನ ಕಾಣಿಕೆಯಲ್ಲವೆ?' 'ಆಹುದು. ಸೈ. ಆದರೆ ಅದು ನನ್ನ ಎಲ್ಲ ಕೆಲಸಗಳಲ್ಲಿಯೂ ಓತಪ್ರೋತವಿರುವುದು. ಅಹಿಂಸೆಯು ನನ್ನ ಜಪ ಮಾಲೆಯ ಮಣಿಗಳಲ್ಲಿಯ ಸೂತ್ರವು.' ಈ ಪ್ರಶ್ನೋತ್ತರವು ಗಾಂಧೀಜಿ ಯುವರ ಜೀವನದ ಸೂತ್ರರೂಪ ವರ್ಣನೆಯಿದೆ. ಸತ್ಯ ಇಲ್ಲವೆ ಅಹಿಂಸೆ ಈ ಎರಡೂ ಗಾಂಧೀಜಿಯುವರ ಮಟ್ಟಿಗೆ ಪರ್ಯಾಯ ಶಬ್ದಗಳು. ಸತ್ಯ ಹಾಗೂ ಪರಮಾತ್ಮ ಇವಾದರೂ ಅವರಿಗೆ ಪರ್ಯಾಯ ಶಬ್ದಗಳು. ಪರಮಾತ್ಮನೆಂದರೆ ಸತ್ಯ ಎಂದು ಮೊದಲು ಅವರು ಹೇಳುತಿದ್ದರು. ಆದರೆ ಈಗ ಸತ್ಯವೆ ಪರಮಾತ್ಮ ಎಂದು ಹೇಳುವರು. ಅಹಿಂಸೆಯೆ ಸತ್ಯ, ಸತ್ಯವೆ ಅಹಿಂಸೆ, ಪರಮಾತ್ಮನೆ ಸತ್ಯ, ಸತ್ಯವೆ ಪರಮಾತ್ಮ, ಹೀಗೆ ಹೇಳಿದ ಪಕ್ಷದಲ್ಲಿ ಪರಮಾತ್ಮನೆ ಅಹಿಂಸೆ, ಅಹಿಂಸೆಯೆ ಪರಮಾತ್ಮ, ಎಂದು ಹೇಳಲು ಅಡ್ಡಿ ಇಲ್ಲ. ಸತ್ಯ, ಅಹಿಂಸೆ, ಪರಮಾತ್ಮ ಈ ಮೂರರ ಪೂರ್ಣ ಪ್ರಾಪ್ತಿಯು ಮಾನವಜೀವಿತದಲ್ಲಿ ಅಸಂಭವವೆ ಸೈ. ಆದುದರಿಂದ ಈ ತ್ರಿಕೂಟ ವನ್ನೂ ಸಿಂಹಾಸನದ ಮೇಲಿರಿಸಿ ಗಾಂಧೀಜಿಯುವರು ಈ ಮೂರನ್ನೂ ಏಕಕಾಲಕ್ಕೆ ಪೂಜಿಸುತಿರುವರು. ಈ ಮೂರೂ ಅವರಿಗೆ ಶ್ರೋತವ್ಯ, ಮಂತವ್ಯ, ನಿದಿಧ್ಯಾಸಿತವ್ಯವಾದ ಧ್ಯೇಯ ವಸ್ತುಗಳು.

ಈ ಅವರ ಭಾವನೆಯ ಮೂಲಕ, ಮನುಷ್ಯನ ಶರೀರದ ಎಲ್ಲ ಕ್ರಿಯೆಗಳಿಗೂ ಪ್ರಾಣವಾಯುವು ಆಧಾರಭೂತವಾಗಿರುವಂತೆ ಗಾಂಧೀಜಿಯುವರ ಎಲ್ಲ ಚಟುವಟಿಕೆಗಳಿಗೂ ಅಹಿಂಸೆಯೆ ಮೂಲಾ ಧಾರ, ಮೂಲ ಚೈತನ್ಯ. ಈ ವಿಷಯವನ್ನು ಕುರಿತು ಗಾಂಧೀಜಿ ಯುವರು ಎಷ್ಟು ಭಾಷಣಗಳನ್ನು ಮಾಡಿರಬಹುದು, ಎಷ್ಟು ಲೇಖ ಗಳನ್ನು ಬರೆದಿರಬಹುದು? ಆದರೆ ಅವುಗಳ ತಾತ್ಪರ್ಯವನ್ನರಿತು

ಕೊಂಡವರು ಎಷ್ಟು ಜನ? ಅರಿತುಕೊಂಡವರಲ್ಲಿ ಆ ತಾತ್ಪರ್ಯ ವನ್ನು ಅರಗಿಸಿಕೊಂಡವರೆಷ್ಟು ಜನ? ಆಚರಣೆಯಲ್ಲಿ ತಂದವರೆಷ್ಟು ಜನ? ಗಾಂಧೀಜಿಯವರ ಈ ಅಹಿಂಸಾನೀತಿಯು ಸಾಕಷ್ಟು ಟೀಕೆಗೂ ಈಡಾಗಿದೆ. ಈ ಬಗ್ಗೆ ಕುತರ್ಕ ವಿತರ್ಕಗಳನ್ನು ನಡೆಸಿದ ಜನರೂ ಕಡಿಮೆಯಿಲ್ಲ. ಆದರೆ ಕೇವಲ ತಮ್ಮ ಸಮಾಧಾನವಾಗ ಬೇಕೆಂದು ಸರಲ ಸ್ವಭಾವದ ಜನರು ಕೇಳುವ ಹಲವು ಪ್ರಶ್ನೆಗಳೂ ಇವೆ.

ಅಹಿಂಸೆಯು ಸನ್ಯಾಸಿಯ ಧರ್ಮವು, ರಾಜಕಾರಣದಲ್ಲಿ ಅಹಿಂಸೆಯೇಕೆ? ಸಿರಿಸಂಪತ್ತುಗಳನ್ನು ಅಹಿಂಸೆಯಿಂದ ರಕ್ಷಿಸುವ ಬಗೆ ಯಾವುದು? ಇಡೀ ಸಮಾಜವು ಎಂದಾದರೂ ಅಹಿಂಸಾತ್ಮಕ ವಾಗಬಲ್ಲದೆ? ಹಾಗೆ ಆಗದಿದ್ದರೆ, ಹಲಪರು ಮಾತ್ರ ಅಹಿಂಸಾವ್ರತ ಸ್ಥರಾಗುವುದರಿಂದ ಉಪಯೋಗವೇನು? ಅಹಿಂಸೆಯ ಉಪದೇಶದಿಂದ ಅಂಜುಬುರುಕತನವು ಹೆಚ್ಚುವುದಿಲ್ಲವೆ? ಗಾಂಧೀಜಿಯವರ ಪಶ್ಚಾತ್ ಅಹಿಂಸೆಯ ಪ್ರಗತಿ ಹೇಗೆ ಆಗಬಲ್ಲದು?

ಈ ಬಗೆಯ ಪ್ರಶ್ನೆಗಳು ದಿನಾಲು ಕೇಳಲಾಗುತ್ತಿವೆ. ಗಾಂಧೀಜಿ ಯವರೂ ಉತ್ತರ ಕೊಡುತ್ತಾ ಇರುತ್ತಾರೆ. ಆದರೂ ಪ್ರಶ್ನೆಗಳ ಪ್ರವಾಹವು ಹಾಗೆ ಹರಿಯುತ್ತಲೆ ಇದೆ. ಯಾಕೆಂದರೆ ಆಚರಣೆಯ ಪ್ರಯತ್ನ ಮಾಡದೆ ಕೇವಲ ಜಿಜ್ಞಾಸುಗಳಾಗಿ ಕೊನೆವರೆಗೆ ಪ್ರಶ್ನೆ ಕೇಳುತ್ತಲೆ ನಡೆದರೆ ನಮ್ಮ ಸಮಾಧಾನವಾದರೂ ಆಗುವ ಬಗೆ ಯಾವುದು? ಬೆಲ್ಲದ ಸವಿಯು ಕೊನೆಗೆ ತಿನ್ನುವುದರಿಂದಲೆ ಗೊತ್ತಾಗ ಬೇಕಲ್ಲವೆ?

‘ಅಹುದು, ಅಹಿಂಸೆಯು ಸನ್ಯಾಸಿಗಳ ಧರ್ಮವು. ರಾಜ ಕಾರಣದಲ್ಲಿ ಹಿಂಸೆ, ಸುಳ್ಳು, ಕಪಟ ಇವೆಲ್ಲ ನಡೆಯುವವು. ನಾವು ನಿಃಶಸ್ತ್ರರಾಗಿ ‘ಆತತಾಯಿ’ಗಳನ್ನೆದುರಿಸಹೋದರೆ (ದುಷ್ಟ ಅಪ ರಾಧಿ) ಅವರು ನಮ್ಮನ್ನು ಹತ್ತಿಕ್ಕಿಬಿಡುವರು, ನಾವು ಸೋತು ಹೋಗುವೆವು. ಆತತಾಯಿ ಇದ್ದವರು ಗೆಲ್ಲುವರು. ‘ಆತತಾಯೀ

ವಧಾರ್ಹಃ,' (ದುಷ್ಟರಿದ್ದವರು ವಧಕ್ಕೆ ಯೋಗ್ಯರು.) ' ಆತತಾಯಿನ ಮಾಯಾಂತಂ ಹನ್ಯಾದೇವಾವಿಚಾರಯನ್ ' (ದುಷ್ಟರು ಬಂದರೆ ಹೆಚ್ಚಿನ ವಿಚಾರ ಮಾಡದೆ ಕೊಂದುಬಿಡಬೇಕು) ಇವು ಶಾಸ್ತ್ರ ವಚನ ಗಳು. ಅಗ್ನಿದೋ ಗರದಶ್ಚೈವ ಶಸ್ತ್ರಪಾಣಿಃ ಧನಾಪಹಃ। ಕ್ಷೇತ್ರದಾರ ಹರಶ್ಚೈವ ಷಡೈತೆ ಆತತಾಯಿನಃ ॥ (ಬೆಂಕಿ ಹಚ್ಚುವವ, ವಿಷ ಹಾಕುವವ, ಶಸ್ತ್ರದಿಂದ ಹೊಡೆಯಲು ಬಂದವ, ಧನದ ಅಪಹಾರ ಮಾಡುವವ, ಹೊಲ ಹೆಂಡತಿ ಕಸುಕೊಳ್ಳುವವ, ಈ ಆರು ತರಹದ ಜನರು ಆತತಾಯಿ ಎನಿಸುವರು.) ಇವರನ್ನು ಕೊಲ್ಲುವುದೇ ವಿಹಿತ. ನಾವು ಆತತಾಯಿ ಇದ್ದವರನ್ನು ದಂಡಿಸದೆ ಹೋದರೆ ಪ್ರಪಂಚದಲ್ಲಿ ದುಷ್ಟರ ಜುಲುಮೆ ಹೆಚ್ಚುವುದು, ಸಜ್ಜನರಿಗೆ ಪೀಡೆಯಾಗುವುದು, ಧರ್ಮವು ಅಳಿದು ಅಧರ್ಮದ ಪ್ರಾಬಲ್ಯವಾಗುವುದು. '

ಈ ಬಗೆಯ ಯುಕ್ತಿವಾದವು ದಿನಾಲು ನಮ್ಮ ಮುಂದೆ ಬರು ವುದು. ಆದರೆ ಆಶ್ಚರ್ಯದ ಸಂಗತಿಯೇನಂದರೆ, ಯಾವ ರಾಜ ಮಹಾರಾಜರಾಗಲಿ, ರಾಜಧರ್ಮವನ್ನು ಪಾಲಿಸುವ ಅಧಿಕಾರಿ ವರ್ಗ ದವರಾಗಲಿ, ಈ ಬಗೆಯ ತರ್ಕಕೋಟಿಗಳನ್ನು ಮುಂದೆ ಮಾಡುವುದಿಲ್ಲ. ಹಲವು ತಾರ್ಕಿಕರು ಈ ಮಾತು ಮುಂದೆ ಮಾಡುವರು. ಓರ್ವ ನ್ಯಾಯಾಧೀಶನ ಧರ್ಮವೇನೆಂಬುದನ್ನು ಹಾದಿಹೋಕರು ಚರ್ಚಿಸು ವುದು ಪ್ರಪಂಚದಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಹೀಗಿರುವಾಗ ತಾವು ರಾಜಧರ್ಮದ ಚರ್ಚೆ ಮಾಡಲು ಅಧಿಕೃತರೆಂದು ಅನೇಕರು ಏಕೆ ತಿಳಿದುಕೊಳ್ಳುವರು ? ಒಬ್ಬ ನ್ಯಾಯಾಧೀಶನು ಯಾವನೊಬ್ಬ ಅಪರಾಧಿಗೆ ಗಲ್ಲಿನ ಶಿಕ್ಷೆ ಕೊಟ್ಟಾಕ್ಷಣಕ್ಕೆ ಜನಸಾಮಾನ್ಯರೆಲ್ಲರು ಅಂಥ ಶಿಕ್ಷೆ ಕೊಡಲು ಅಧಿಕೃತರಾಗಬಲ್ಲರೊ ? ಈ ಬಗೆಯ ಚರ್ಚೆ ಮಾಡು ವವರು ಮೊದಲು ಮೇಲಿನ ಪ್ರಶ್ನೆಗಳಿಗೆ ಉತ್ತರ ಕೊಡಬೇಕು. ಬಹುಶಃ ನಮ್ಮ ಪ್ರತಿಪಕ್ಷಿಯೆ ಆತತಾಯಿಯು, ನಾವು ಅವನನ್ನು ದಂಡಿಸಲು ಅಧಿಕೃತರು, ಹೀಗೆ ನಾವು ಸಹಜವಾಗಿ ತಿಳಿದುಕೊಂಡು ಬಿಡುವೆವು. ಇದಕ್ಕಾದರೂ ಆಧಾರವೇನು? ನಾವೇ ಆತತಾಯಿ ಇದ್ದರೆ ಮುಂದೇನು ?

ಚರ್ಚಿಲ್ಲನು ಆತತಾಯಿಯೆಂದು ಹಿಟ್ಲರನು, ಹಿಟ್ಲರನು ಆತತಾಯಿ ಎಂದು ಚರ್ಚಿಲ್ಲನು, ಹೀಗೆ ಪರಸ್ಪರ ದೋಷಾರೋಪವು ಒಳ್ಳೆ ತುರಸಿನಿಂದ ನಡೆದಿದೆ. ಅವನನ್ನು ದಂಡಿಸಲು ತಾವು ಅಧಿಕೃತರು, ಎಂದು ಇಬ್ಬರೂ ಭಾವಿಸಿರುವರು. ಇಂಥ ಪರಿಸ್ಥಿತಿಯಲ್ಲಿ ಒಬ್ಬ ತಟಸ್ಥನೆ ನಿರ್ಣಯ ಮಾಡಬಲ್ಲನು. ಆದರೆ ತಟಸ್ಥನು ಹೇಳಿದುದನ್ನು ಕೇಳಲು ಇಬ್ಬರೂ ಸಿದ್ಧರಿದ್ದರೆ ಇವರು ಪರಸ್ಪರರನ್ನು ದಂಡಿಸುವ ಅಥವಾ ದಂಡ ಭೋಗಿಸುವ ಪ್ರಶ್ನೆಯೆ ಉಳಿಯಲಾರದು. ತಟಸ್ಥನು ಆ ನಿರ್ಣಯ ಮಾಡುವನು.

ವಾಸ್ತವಿಕ ನಾವು ಯಾವಾಗಲೂ ನಮ್ಮ ಹಿಂಸಾವೃತ್ತಿಯ ಸಮರ್ಥನಕ್ಕಾಗಿ ಶಾಸ್ತ್ರಪ್ರಮಾಣಗಳನ್ನು ಆಶ್ರಯಿಸುತ್ತೇವೆ. 'ಆತತಾಯಿನಮಾಯಾಂತಂ ಹನ್ಯಾದೇವಾವಿಚಾರಯನ್' ಎಂಬ ಶಾಸ್ತ್ರ ವಚನದ ಪ್ರಯೋಗವನ್ನು ನಮ್ಮ ಪ್ರತಿಪಕ್ಷಿಗಳನ್ನು ಕುರಿತೇ ಮಾಡುತ್ತೇವೆ. ಯಾವನೊಬ್ಬನೂ 'ನಾನು ಆತತಾಯಿ ಇರುವೆನು, ನನ್ನನ್ನು ದಂಡಿಸಬೇಕು,' ಎಂದು ಹೇಳಿದುದನ್ನು ಯಾರೂ ಕಂಡಿಲ್ಲ! ಹೀಗೆ ಯಾರಾದರೂ ಅಂದರೆ ಮಾತ್ರ ತನ್ನ ತರ್ಕದ ಯಥಾರ್ಥ ಉಪಯೋಗ ಮಾಡಿದಂತಾಗುವುದು. ಆದರೆ 'ಮೋ ಸಮ ಕೌನ ಕುಟಿಲ ಖಲ ಕಾಮೀ' ನನ್ನಂತಹ ಕುಟಿಲ, ಖಲ, ಹಾಗೂ ಕಾಮುಕನು ಯಾರಿರುವರು, ಎಂದು ಸಾಧು ಸೂರದಾಸನಂಥವರು ಮಾತ್ರ ಕೇಳುವರು. ಆದರೆ ಪ್ರತಿಪಕ್ಷಿಗಳ ದುರ್ಗುಣಗಳತ್ತ ದುರ್ಲಕ್ಷ ಮಾಡಿ ನಾವು ಆತ್ಮ ನಿರೀಕ್ಷಣೆಯನ್ನು ಹೆಚ್ಚು ಸೂಕ್ಷ್ಮ ರೀತಿಯಿಂದ ಮಾಡಿದರೆ ಪ್ರಪಂಚದಲ್ಲಿಯ ಪಾಪಪರಂಪರೆಯು ಅಡಗಿ ಹೋಗುವುದು.

ಸಿರಿಸಂಪತ್ತಿಯ ಸಂಗ್ರಹ, ಆಸ್ತಿಪಾಸ್ತಿಗಳ ರಕ್ಷಣೆ ಅಹಿಂಸೆಯಿಂದ ಆಗಬಲ್ಲದೊ? ಈ ಪ್ರಶ್ನೆಗೆ ಅಹುದು, ಇಲ್ಲ, ಎಂದು ಇಬ್ಬಗೆಯ ಉತ್ತರ ಕೊಡಬೇಕಾಗುವುದು. ತಮ್ಮ ಸ್ವಂತ ಉಪಯೋಗಕ್ಕಾಗಿ ಸಂಗ್ರಹ ಮಾಡಿಟ್ಟುಕೊಂಡವರಿಗೆ ಅಹಿಂಸಾನೀತಿ ಅನ್ವಯಿಸಲಾರದು. ಅಹಿಂಸೆಯೆಂದರೆ, ನಾನು ಸಂಗ್ರಹ ಮಾಡದಿದ್ದರೆ ಸಾಯುವೆನು, ಎಂಬ

ಭಯಭೀತಿಯ ವೃತ್ತಿಯಲ್ಲ, ನಿಜವಾದ ಅಹಿಂಸೆಯು ಸ್ವಾರ್ಥಕ್ಕಾಗಿ ಸಂಗ್ರಹ ಮಾಡಿಡಲು ಹೇಳುವುದಿಲ್ಲ. ಅಹಿಂಸಕನಿಗೆ ಲೋಭವೆಲ್ಲಿಯದು ? ತನ್ನ ಸ್ವಂತ ಉಪಯೋಗಕ್ಕಾಗಿ ಸಂಗ್ರಹಿಸುವ ಇಲ್ಲವೆ ಸಂರಕ್ಷಿಸುವ ಪ್ರಸಂಗವು ಅಹಿಂಸಕನ ಮೇಲೆ ಬರುವುದೇ ಇಲ್ಲ. ಅಹಿಂಸೆಯ ಪೂಜಕನು ಯೋಗಕ್ಷೇಮದ ಗದ್ದಲದಲ್ಲಿ ಸಿಕ್ಕುವದು ಕ್ವಚಿತ.

'ನಿರ್ಯೋಗ ಕ್ಷೇಮ ಆತ್ಮವಾನ್' ನೀನು ಆತ್ಮವಂತನೂ ಯೋಗಕ್ಷೇಮಗಳ ಚಿಂತೆ ಬಿಟ್ಟವನೂ ಆಗು ಎಂದು ಅರ್ಜುನನಂಥ ಗೃಹಸ್ಥಾಶ್ರಮಿಗೆ ಗೀತೆಯು ಹೇಳಿರುವುದು. ಇದು ಸನ್ಯಾಸಧರ್ಮವೆಂದು ಗೀತೆಯು ಹೇಳಿಲ್ಲ. ಗೀತೆಯು ಸನ್ಯಾಸಧರ್ಮವನ್ನು ಕಲಿಸಲು ಪ್ರವೃತ್ತವಾಗಿಲ್ಲ. ಕರ್ಮವನ್ನು — ಗೃಹಸ್ಥರ ಧರ್ಮವಾದ ಕರ್ಮವನ್ನು-ಉಪದೇಶಿಸಲು ಗೀತೆಯ ಅವತಾರವಿರುವುದು. ಅಹಿಂಸಾವಾದಿಯ ಶುದ್ಧ ಧರ್ಮವೂ ಅವನಿಗೆ ಯೋಗಕ್ಷೇಮದ ಜಂಜಾಟದಿಂದ ದೂರವಿರಲು ಹೇಳುವುದು. ಆದರೆ ಸಂಗ್ರಹ ಹಾಗೂ ರಕ್ಷಣೆ ಇವು 'ಸ್ವ' ಹಾಗೂ 'ಪರ' ಈ ಎರಡೂ ಕಾರಣಗಳಿಗಾಗಿ ಇರಬಲ್ಲವು. ಸ್ವಾರ್ಥಕ್ಕಾಗಿ ಸಂಗ್ರಹ ಮಾಡುವವರು ಗಾಂಧೀಜಿಯವರ ದೃಷ್ಟಿಯಿಂದ ಟ್ರಸ್ಟಿಗಳು, ವಿಶ್ವಸ್ತರು ಧರ್ಮದರ್ಶಿಗಳು. ಅವರು ಅನಾಸಕ್ತರಾಗಿ ಯೋಗಕ್ಷೇಮಗಳನ್ನು ಲಕ್ಷಿಸಬಹುದು. ಅವರು ಸಂಗ್ರಹಿಗಳಾದರೂ ಅಹಿಂಸಾವಾದಿಗಳೇ. ಯಾಕಂದರೆ ಆ ಸಂಗ್ರಹದಲ್ಲಿ ಅವರಿಗೆ ಆಸಕ್ತಿ ಇಲ್ಲ. ಧರ್ಮಕ್ಕಾಗಿ ಮಾಡಿದ ಸಂಗ್ರಹವನ್ನು ಅನಾಯಾಸವಾಗಿ ಬಿಟ್ಟುಬಿಡುವುದೂ ಸಾಧ್ಯವು. ಆ ಸಂಗ್ರಹವನ್ನು ಸಂರಕ್ಷಿಸುವ ಪ್ರಶ್ನೆ ಬಂದರೆ ಧರ್ಮದಿಂದಲೆ ಹಾಗೆ ಮಾಡಬೇಕಾಗುವುದು, ಅಧರ್ಮದಿಂದಲ್ಲ. ಇದಕ್ಕೆ ವಿಪರೀತವಾಗಿ, ಸಂಗ್ರಹದಲ್ಲಿ ಆಸಕ್ತಿಯುಳ್ಳವರು ಅಹಿಂಸಾವಾದಿಗಳಾಗಲಾರರು, ಅಹಿಂಸೆಯಿಂದ ಸಂರಕ್ಷಣೆ ಮಾಡುವ ತತ್ವವೂ ಅವರ ವಿಷಯದಲ್ಲಿ ಉಪಯುಕ್ತವಾಗಲಾರದು. ಆದರೆ ಪೂರ್ಣ ಅಹಿಂಸಾತ್ಮಕ ರೀತಿಯಿಂದ ವರ್ತಿಸುವವರು, ಎಲ್ಲ ರೀತಿಯಿಂದಲೂ ಯೋಗ್ಯರಿದ್ದವರು, ತಮಗೆ ಅದು

ಧರ್ಮವೆಂದು ತೋರಿದರೆ ಕೇವಲ ಆತ್ಮಶಕ್ತಿಯಿಂದ ಯಾವುದೊಂದು ಸಂಗ್ರಹದ ಸಂರಕ್ಷಣೆ ಮಾಡುವುದು ಶಕ್ಯವಿರುವುದು.

ಹಿಂಸಾ ಹಾಗೂ ಅಹಿಂಸಾ ಮಾರ್ಗಗಳನ್ನು ಪರಸ್ಪರ ಹೋಲಿಸಿ ನೋಡುವುದು ಅಷ್ಟೊಂದು ಸಮಂಜಸವಲ್ಲ ಎಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು. ಈ ಎರಡು ಮಾರ್ಗಗಳ ಗುರಿಗಳೇ ಭಿನ್ನವಿರುವವು. ಹಿಂಸೆಯಿಂದ ಸಾಧಿಸತಕ್ಕ ಸಾಧ್ಯ — ಅದು ಕ್ಷಣಿಕವೇ ಇದ್ದರೂ — ಅಹಿಂಸೆಯಿಂದ ಸಾಧಿಸದು. ಉದಾ: ನಾವು ಅಹಿಂಸಾ ಮಾರ್ಗದಿಂದ ಸಾಮ್ರಾಜ್ಯವನ್ನು ಕಟ್ಟಲಾರೆವು, ಅನ್ಯರ ದೇಶವನ್ನೂ ಸೂರೆಗೊಳ್ಳಲಾರೆವು. ಇಟಲಿಯು ಅಬಸೀನಿಯಾ ಗೆದ್ದು ತನ್ನ ಸಾಮ್ರಾಜ್ಯ ಸ್ಥಾಪನೆ ಮಾಡಿತು. ಇಂಥ ಕೆಲಸಗಳು ಹಿಂಸೆಯಿಂದಲೆ ಆಗಬಲ್ಲವು, ಅಹಿಂಸೆಯಿಂದಲ್ಲ.

ತಾತ್ಪರ್ಯವೇನಂದರೆ, ಅಹಿಂಸೆಯಿಂದ ನಾವು ಧರ್ಮವನ್ನು ರಕ್ಷಿಸಬಲ್ಲೆವು, ಅಧರ್ಮವನ್ನಲ್ಲ. ಸಂಗ್ರಹವು ಅಧರ್ಮಮೂಲಕವಿದ್ದಲ್ಲಿ ಅದರಸಂರಕ್ಷಣೆಯೂ ಅಹಿಂಸೆಯಿಂದಾಗಲಾರದು. ಅಹಿಂಸೆಯನ್ನು ಪ್ರೀತಿಸುವವರು ಅಧರ್ಮವನ್ನು ಇಲ್ಲವೆ ಪಾಪವನ್ನು ರಕ್ಷಿಸುವ ವಿಚಾರವನ್ನು ಮಾಡರು. ಈ ರೀತಿ ಅಹಿಂಸಾ ಕ್ಷೇತ್ರದ ಮರ್ಯಾದೆಗಳನ್ನು ನಾವು ಚನ್ನಾಗಿ ಅರಿತುಕೊಂಡರೆ ನಮ್ಮ ಅನೇಕ ಸಂಶಯಗಳ ನಿರಸನವು ತನ್ನಿಂದ ತಾನೇ ಆಗಬಲ್ಲದು. ನಾವು ಯಾವುದೊಂದು ವಸ್ತುವನ್ನು ಸಂರಕ್ಷಿಸುವುದು ನಮ್ಮ ಧರ್ಮ, ಎಂದೆನಿಸಿದರೆ ನಾವು ನಮ್ಮ ವಿರೋಧಿಗಳನ್ನು ಅಹಿಂಸೆಯಿಂದ ಸಫಲತಾಪೂರ್ವಕವಾಗಿ ಎದುರಿಸಬಲ್ಲೆವು. ಹಾಗೆ ಸಂರಕ್ಷಿಸುವುದು ಪಾಪವೆಂದೆನಿಸಿದರೆ ಆ ವಸ್ತುವನ್ನು ನಾವಾಗಿ ತ್ಯಜಿಸಿಬಿಡತಕ್ಕದ್ದು. ಆ ಸಂದರ್ಭದಲ್ಲಿ ಪ್ರತಿಕಾರ ಮಾಡಬೇಕೆಂಬುದಕ್ಕೆ ಎಡೆ ಇಲ್ಲ.

ಇನ್ನು ಧರ್ಮ, ಅಧರ್ಮ ಇವುಗಳ ನಿರ್ಣಯ ಮಾಡುವ ಬಗೆ ಹೇಗೆ? ಸತ್ಯದ ಅನುಯಾಯಿಗೆ ಈ ಪ್ರಶ್ನೆ ಎಂದೂ ತೊಂದರೆ ಕೊಡಲಾರದು. ಒಬ್ಬ ಹಿಂದೀ ಕವಿಯಿತ್ರಿ ಜಿನ ಬೋಜಾ ಪಿನ

ಪಾಯಿಯಾ ಗಹರೇ ಪಾನೀ ಪೈಠ, ಮೈ ಬೌರೀ ಢೂಂಢನ ಗಯೀ, ರಹೀ ಕಿನಾರೆ ಬೈಠ. 'ನೀರೊಳಗೆ ಮುಳುಗಿ ಹುಡುಕಿದವಗೆ ಸಿಗತಕ್ಕದ್ದು ಸಿಕ್ಕುಹೋಯಿತು. ಬಣ್ಣ (ಕೆಂಪು) ಹುಡುಕುತ್ತ ನಾನು ದಂಡೆಯ ಮೇಲೆ ಹಾಗೆಯೆ ಕುಳಿತೆನು, ಹೀಗೆ ಹೇಳಿರುವಳು. ನಮಗೆ ಅಡಚಣೆ ಬರುವ ಕಾರಣವೇನಂದರೆ, ನಾವು ಅಧರ್ಮ ರಕ್ಷಿಸಲು ಎಸಗುವೆವು. ಅಹಿಂಸೆಯಿಂದ ಅಧರ್ಮದ ರಕ್ಷಣೆ ಆಗದು. ಆದುದರಿಂದ ಅಹಿಂಸೆಯ ಪ್ರಭಾವವನ್ನು ಕುರಿತು ನಮಗೆ ಸಂಶಯವುಂಟಾಗುವುದು ಹಾಗೂ ತಲೆತುಂಬ ತರ್ಕ-ವಿತರ್ಕಗಳ ಗೊಂದಲವು ಏಳುವುದು.

ನಮ್ಮ ಕಣ್ಣುಮುಂದೆ ಈಗ ಯುರೋಪದ ರಾಜನೀತಿಯ ಚಿತ್ರವೆ ಇರುವುದು. ಆ ಮಾನದಂಡದಿಂದ ಎಲ್ಲವನ್ನು ಅಳೆಯುವೆವು. ಆದುದರಿಂದ ಈ ರಾಜಕೀಯ ಕ್ಷೇತ್ರದಲ್ಲಿ ಅಹಿಂಸೆಯ ಪ್ರವೇಶವಾದೊಡನೆ ನಮಗೆ ಒಂದು ದೊಡ್ಡ ತೊಡಕು ಉಂಟಾದಂತೆ ಆಗಿದೆ. ಜಾತಿಯ ಹಾಗೂ ರಾಷ್ಟ್ರದ ಅಭಿಮಾನ, ಪರಸ್ಪರ ವೈರ, ಇತರ ದೇಶಗಳನ್ನು ಹತ್ತಿಕ್ಕುವ ಲೋಭ, ಇತರರ ನಾಶದಿಂದಲೆ ತಮ್ಮ ಅಭಿವೃದ್ಧಿ ಆಗಬಲ್ಲದು ಎಂಬ ಭ್ರಮ, ಈ ಭಾವನೆಯ ಮೂಲಕ ಕೋಟೆ, ಕಟ್ಟೆ, ಗಡಿಗಳನ್ನು ಭದ್ರಪಡಿಸುವ ಉದ್ಯೋಗ, ಹಿಂಸಾತ್ಮಕ ಶಸ್ತ್ರಾಸ್ತ್ರಗಳ ಸಿದ್ಧತೆ, ಇತ್ಯಾದಿ ಅವ್ಯಾಹತವಾಗಿ ನಡೆದಿರುವವು. ಹೊರದೇಶಗಳ ಬಗ್ಗೆ ಕೈಕೊಂಡ ನೀತಿಯೆ ಆಯಾ ದೇಶದ ಆಂತರಿಕ ರಾಜಕಾರಣದಲ್ಲಿಯೂ ಪ್ರವೇಶಿಸಿದೆ. ಪರಿಸ್ಥಿತಿಯು ಹೀಗಿರುವಾಗ ನಮ್ಮ ಶಸ್ತ್ರವು ಹಿಂಸೆಯೊ ಅಹಿಂಸೆಯೊ ಎಂಬುದು ಮುಖ್ಯ ಪ್ರಶ್ನೆಯಲ್ಲ. ವ್ಯಕ್ತಿಯನ್ನು ಕುರಿತು ಇಲ್ಲವೆ ಸಮಾಜವನ್ನು ಕುರಿತು ನಾವು ಶುದ್ಧ ಧರ್ಮಮಾರ್ಗವನ್ನು ಹಿಡಿದು ಹೋಗತಕ್ಕದ್ದೊ, ಅಧರ್ಮದ ಅಥವಾ ಪಾಪದ ಮಾರ್ಗವನ್ನು ಹಿಡಿದು ಸಾಗತಕ್ಕದ್ದೊ, ಇದು ಮುಖ್ಯ ಪ್ರಶ್ನೆ, ಮೊದಲನೆ ಪ್ರಶ್ನೆ. ನಾವು ನಮ್ಮ ರಾಜನೀತಿಯ ರಚನೆಯನ್ನು ಹಲವು ವ್ಯಕ್ತಿಗಳ ಸಂಕುಚಿತ ಸ್ವಾರ್ಥದ ತಳಹದಿಯ ಮೇಲೆ ಮಾಡಬೇಕೋ ಅಥವಾ ಮಾನವಹಿತದ ವಿಶಾಲ ಆಧಾರದ ಮೇಲೆ ಮಾಡಬೇಕೋ ಇದೇ ಪ್ರಶ್ನೆ. ನಮ್ಮ ಕುಟುಂಬದವರೇ ಇರಲಿ,

ಗುಂಪಿನವರೇ ಇರಲಿ, ಪ್ರಾಂತದವರೇ ಇರಲಿ, ದೇಶದವರೇ ಇರಲಿ ಅವರನ್ನು ಕುರಿತು ನಮ್ಮ ನೀತಿ ಏನಿರಬೇಕು, ಇದು ಮುಖ್ಯ ಪ್ರಶ್ನೆ.

ಯುರೋಪದಲ್ಲಿ ಅನೇಕ ನಿಜವಾದ ತ್ಯಾಗಿಗಳು ಇರುವರು. ಅವರು ತಮ್ಮ ವೈಯಕ್ತಿಕ ಜೀವನದಲ್ಲಿ ಕೇವಲ ಸತ್ಯವನ್ನಾಶ್ರಯಿಸಿರುವರು. ಆದರೆ ತಮ್ಮ ದೇಶದ ಲಾಭ ಹಾನಿಗಳ ಪ್ರಶ್ನೆ ಬಂದಾಗ ಸತ್ಯ, ಪ್ರಾಮಾಣಿಕತನ, ಉದಾರಭಾವ, ದೊಡ್ಡಸ್ತಿಕೆ ಮುಂತಾದವುಗಳನ್ನು ಮೂಲೆಗೊತ್ತುವರು. ನಿಜವಾದ ಅಹಿಂಸೆಯನ್ನು ಅವರು ಪಾಲಿಸುವುದಾದರೆ ಪಾಪವೃತ್ತಿಯನ್ನು, ಅಧರ್ಮವನ್ನು, ( ಅದು ಸ್ವಾರ್ಥಕ್ಕಾಗಿರಲಿ ಸ್ವದೇಶಕ್ಕಾಗಿರಲಿ ) ಪೂರ್ಣ ಬಿಟ್ಟುಬಿಡುವುದೊಂದೇ ಮಾರ್ಗವು.

ಅಯಂ ನಿಜಃ ಪರೋವೇತಿ ಗಣನಾ
ಲಘುಚೇತಸಾಮ್ ।
ಉದಾರಚರಿತಾನಾಂತು ವಸುಧೈವ
ಕುಟುಂಬಕಮ್ ॥

ಇದು ನನ್ನದು, ಇದು ಪರರದು ಎಂಬ ಭಾವನೆ ಕಿರಿ ಮನಸಿನವರದು. ಉದಾರಚರಿತರಿಗೆ ಪರಮಾತ್ಮನ ಸೃಷ್ಟಿಯೆಲ್ಲ ಸ್ವಂತ ಕುಟುಂಬವೆ ಇದ್ದಂತೆ. ಗೀತೆಯಲ್ಲಿ ಹೇಳಿದ ಆಸುರೀವೃತ್ತಿಯ ನಾಶ ಹಾಗೂ ದೈವೀವೃತ್ತಿಯ ಅಭಿವೃದ್ಧಿ, ಇದೇ ಹಿರಿಮನಸಿನವರ ಧ್ಯೇಯವು.

ಈ ಮೂಲಕವೆ ಗಾಂಧೀಜಿಯವರು ಆತ್ಮಶುದ್ಧಿಗೆ ಇಷ್ಟೊಂದು ಮಹತ್ವವನ್ನು ಕೊಡುವರು. ಇದು ಯಥಾಯೋಗ್ಯವೆ ಇರುವುದು. ಯಾಕಂದರೆ, ಅಹಿಂಸಾಶಸ್ತ್ರದ ಉಪಯೋಗವು ಹೊರ ಮಾತುಗಳಿಗಿಂತ ಆಂತರಿಕ ವೃತ್ತಿಯನ್ನೆ ಅವಲಂಬಿಸಿದೆ. ಮುರುಕ ಬಂದೂಕಿನಲ್ಲಿ ಗುಂಡು ಹಾಕಿ ಹೊಡೆದರೆ ಅದು ಗುರಿಯನ್ನು ಭೇದಿಸಬಲ್ಲುದೆ? ಅದೇ ರೀತಿ ಶುದ್ಧ ಹೃದಯವಿಲ್ಲದವನು, ದೈವೀವೃತ್ತಿಯಿಲ್ಲದವನು ಅಹಿಂಸಾ ಶಸ್ತ್ರವನ್ನು ನಡೆಸುವ ಬಗೆ ಹೇಗೆ? ನಿಜವಾಗಿ ನೋಡಿದರೆ ಶುದ್ಧ

ಮನಸ್ಸಿನ ಮನುಷ್ಯನು ಸ್ವತಃ ಒಂದು ಶಸ್ತ್ರವೆ ಇದ್ದಂತೆ. ಆತ್ಮಶುದ್ಧಿ ಇಲ್ಲದವನು, ಆಸುರೀ ವೃತ್ತಿಯವನು ಮುರುಕು ಬಂದೂಕು ಇದ್ದಂತೆ. ಅವನ ವಿಷಯದಲ್ಲಿ ಅಹಿಂಸೆಯೆಂಬುದು ಅರ್ಥಹೀನ ಶಬ್ದವು. ಅಹಿಂಸಕವೃತ್ತಿಯುಳ್ಳವನಲ್ಲಿಯೆ ನಿಜವಾದ ಅಹಿಂಸೆ ಇರಬಲ್ಲದು. ಅಹಿಂಸಾ ಮಾರ್ಗವನ್ನು ಕೈಕೊಳ್ಳುವ ಮೊದಲು ಸಾಧಕನು ತನ್ನಲ್ಲಿ ಅಹಿಂಸಾವೃತ್ತಿಯನ್ನು ನೆಲೆಗೊಳಿಸಲಿಕ್ಕೆಬೇಕು. ಅಹಿಂಸಾವೃತ್ತಿ ಎಂಬುದರ ಸಂಕುಚಿತ ಅರ್ಥವನ್ನು ನಾವು ಮಾಡಿದರೂ ನ್ಯಾಯ ಪೂರ್ವಕವಾಗಿ ನಡೆಯುವ ನಾಗರಿಕನ ವೃತ್ತಿ ಎಂದು ಅದರ ಅರ್ಥ ವಾಗುವುದು.

‘ ಏನು, ಇಡೀ ಸಮಾಜವು ಅಹಿಂಸಾತ್ಮಕವಾಗಬಲ್ಲದೆ ? ಇಲ್ಲ ವಾದರೆ, ಈ ತತ್ವದ ವ್ಯಾವಹಾರಿಕ ಮಹತ್ವವೇನು?’ ಇಡೀ ಸಮಾಜವು ಹಿಂಸೆಯನ್ನು ಪೂರ್ಣವಾಗಿ ಬಿಟ್ಟುಬಿಡುವುದೆಂದು ಗಾಂಧೀಜಿಯವರು ಎಂದೂ ಭಾವಿಸಿಲ್ಲ. ಅವರು ಈ ಆಶೆಯನ್ನು ಕಟ್ಟಿಕೊಂಡು ಅದರ ತಳಹದಿಯ ಮೇಲೆ ತಮ್ಮ ವಿಚಾರವ್ಯೂಹವನ್ನು ರಚಿಸಿಲ್ಲ. ಪೂರ್ಣ ಅಹಿಂಸೆಯನ್ನು ತನ್ನ ಆಚರಣೆಯಲ್ಲಿ ತರದೆ ಹೋದರೂ ಸಮಾಜದ ಬಹುಭಾಗವು ಹಿಂಸೆಯ ಪೂಜೆ ಮಾಡುವದನ್ನು ಬಿಟ್ಟುಬಿಟ್ಟರೆ ಸಾಕೆಂದು ಅವರು ಭಾವಿಸಿರುವರು.

ಸಮಾಜದ ಪ್ರತಿಯೊಬ್ಬ ಮನುಷ್ಯನು ಅಹಿಂಸಾವೃತ್ತಿಯುಳ್ಳವ ನಾಗುವನೆಂದು ಯಾರೂ ಭಾವಿಸಿಲ್ಲ. ಹಿಂಸಾತ್ಮಕ ಸೈನ್ಯದ ಬಲದಿಂದ ಶಾಂತಿಸಾಮ್ರಾಜ್ಯಗಳನ್ನು ಸ್ಥಾಪಿಸುವವರು ಸಹ ಪ್ರತಿಯೊಬ್ಬ ವ್ಯಕ್ತಿಯು ಯುದ್ಧಕಲೆಯಲ್ಲಿ ನಿಪುಣನಾಗಬೇಕೆಂದು ಅಪೇಕ್ಷಿಸುವುದಿಲ್ಲ. ಕೋಟ್ಯಾನುಕೋಟಿ ಜನರ ಸಂರಕ್ಷಣಕ್ಕಾಗಿ ಹಲವು ಲಕ್ಷ ಜನರು ಸಾಕೆಂದು ಅವರು ತಿಳಿಯುವರು. ನೂರರಲ್ಲಿ ಒಬ್ಬನು ಸೈನಿಕನಾದರೆ ಸಾಕೆಂದು ಅವರ ಭಾವನೆ. ಆ ಸೈನಿಕರಲ್ಲಿ ಕೂಡ ಗಣನಾಯಕ ರಿರುವವರ ಜಾಣತನವನ್ನು ಅವಲಂಬಿಸಿ ಎಲ್ಲ ವ್ಯವಹಾರಗಳೂ ನಡೆಯುತಿವೆ.

ಈ ಹೊತ್ತು ಸೈನ್ಯದ ನಾಯಕತ್ವವನ್ನು ವಹಿಸಲು ಯೋಗ್ಯರಾದ ದಕ್ಷ ದಂಡನಾಯಕರು ಇಂಗ್ಲಂಡದಲ್ಲಿ ಎಷ್ಟು ಜನರಿರುವರು? ಬಹಳವಾದರೆ ಹತ್ತಿಪ್ಪತ್ತು. ಉಳಿದ ಲಕ್ಷಾಂತರ ಸೈನ್ಯವು ಆ ನಾಯಕರ ಆಜ್ಞೆಗನುಸರಿಸಿ ಸಾಯಲು ಸಿದ್ಧವಿದ್ದರೆ ಸಾಕು. ಅದೇ ರೀತಿ ನಾವು ಒಂದು ಅಹಿಂಸಾತ್ಮಕ ಸೈನ್ಯವನ್ನು ಕಲ್ಪಿಸಬಲ್ಲೆವು. ಆ ಅಹಿಂಸಾತ್ಮಕ ಬಲದ ನಾಯಕರು ಆತ್ಮಶುದ್ಧಿಯುಳ್ಳವರು ಹಾಗೂ ಅವರ ಅನುಯಾಯಿಗಳು, ಅಷ್ಟೊಂದು ಬುದ್ಧಿವಂತರು ಇಲ್ಲದಿದ್ದರೂ ಶ್ರದ್ಧಾಯುಕ್ತರಿದ್ದು ಸತ್ಯ ಅಹಿಂಸೆಗಳ ಸಲುವಾಗಿ ಸಾಯಲು ಸಿದ್ಧರಿದ್ದವರು ಇದ್ದರಾಯಿತು. ಈ ದೃಷ್ಟಿಯಿಂದ ನೋಡಿದರೆ ಒಂದು ಅಹಿಂಸಾತ್ಮಕ ದಲದ ಕಲ್ಪನೆಯು ಅಷ್ಟೊಂದು ಅವ್ಯವಹಾರಿಕವಲ್ಲ, ಎಂದು ಒತ್ತಿ ಹೇಳಬಹುದು.

ಇನ್ನು ನಾವು ಸಾಮ್ರಾಜ್ಯವನ್ನು ಸ್ಥಾಪಿಸಿ ಬೆಳೆಸಬೇಕೆಂದರೆ, ಪರರ ಸಿರಿಯನ್ನು ಸೂರೆಗೊಳ್ಳಬೇಕೆಂದರೆ, ಉಪವಾಸ ಬಳಲುವ ನೆರೆಯವರ ಬಗ್ಗೆ ನಮ್ಮಲ್ಲಿ ದಯಾದೃಷ್ಟಿ ಇಲ್ಲದಿದ್ದರೆ, ನಾವು ನಮ್ಮ ಸ್ವಾರ್ಥದಲ್ಲಿಯೆ ನಿಮಗ್ನರಾಗಿ ಭೋಗಲಾಲಸೆಯಿಂದ ಪೀಡಿತರಾಗಿದ್ದರೆ, ನಮ್ಮ ಭೋಗವಸ್ತುಗಳನ್ನಷ್ಟೆ ಸಂರಕ್ಷಿಸುವ ಆಕಾಂಕ್ಷೆಯನ್ನು ನಾವು ಇಟ್ಟುಕೊಂಡಿದ್ದರೆ, ಇಂಥಲ್ಲಿ ಅಹಿಂಸೆಗೆ ಯಾವ ಎಡೆಯೂ ಇಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು.

ಹೊಲಸು ಅರಿವೆ, ಅವುಗಳ ಕೊಳೆ ಇವುಗಳನ್ನೆ ನಾವು ಕಾಪಾಡುವುದಾದರೆ ಸಬಕಾರದ ಕೆಲಸವೇನು? ಇನ್ನಿಷ್ಟು ಧೂಳು, ಕೆಸರು ಬೇಕಾಗಬಹುದು! ಹೊಲಸು, ಕೊಳೆ ಇವು ರೋಗವನ್ನು ಹುಟ್ಟಿಸುವವು, ಸಾವನ್ನು ಕರೆತರುವುವು, ಇದು ನಮಗೆ ಗೊತ್ತು. ಆದುದರಿಂದ ಕೊಳೆಯನ್ನು ಕಾಪಾಡುವ ವೃತ್ತಿಯವರಾದರೆ ನಾವು ದಯಾಪಾತ್ರರು. ಅಹಿಂಸಾವಾದಿಯು ನಮ್ಮ ತಪ್ಪುಗಳನ್ನು ತಿದ್ದಲು ಯತ್ನಿಸುವನು, ಆದರೆ ನಮ್ಮ ಕೊಳೆಯನ್ನು ಎಂದೂ ರಕ್ಷಿಸಲು ಯತ್ನಿಸಲಿಕ್ಕಿಲ್ಲ. ನಾವು ಅವನ ದೇಶದವರಿದ್ದರೂ ಅಷ್ಟೇ, ಅವನ ಪ್ರತ್ಯಕ್ಷ ಮಕ್ಕಳಿದ್ದರೂ ಅಷ್ಟೇ.

ರಾಜನೀತಿಯಲ್ಲಿ ಅಧರ್ಮವು ವಿಹಿತವು ಎಂದು ನಾವು ಇದು ವರೆಗೆ ತಿಳಿದುಕೊಂಡಿದ್ದೆವು. ಆ ಮೂಲಕ ನಾವು ಆತ್ಮವಂಚನೆಗೆ ಈಡಾಗಿದ್ದೆವು. ಇದನ್ನೆಲ್ಲ ಅರಿತು ಬುದ್ಧಿಪುರಸ್ಸರವಾಗಿ ಗಾಂಧೀಜಿಯವರು ಅಹಿಂಸೆಯನ್ನು ರಾಜಕಾರಣ ಕ್ಷೇತ್ರದಲ್ಲಿ ಸೇರಿಸಿದ್ದಾರೆ. ಈ ಅವರ ಧೋರಣದಿಂದ ನಮಗೆ ತೊಡಕುಂಟಾಗಿದೆ. ಯಾಕಂದರೆ ಕೊಳೆಯನ್ನು ಸಂರಕ್ಷಿಸುವ ಉದ್ಯೋಗದಲ್ಲಿ ನಾವು ತೊಡಗಿರುವಾಗ ಗಾಂಧೀಜಿಯವರು ನಮಗೆ ನೀರು ಸಬಕಾರಗಳ ಉಡುಗರೆ ಕೊಟ್ಟಿದ್ದಾರೆ! ಈ ಅವರ ಪುಣ್ಯದಾನದಿಂದ ನಮ್ಮ ಕೊಳೆಯ ಸಂರಕ್ಷಣೆ ಹೇಗೆ ಆಗಬೇಕೆಂಬ ಬಗ್ಗೆ ನಮಗೆ ಈಗ ಚಿಂತೆ! ಈ ನಮ್ಮ ಚಿಂತೆ ಯಥಾರ್ಥವಾಗಿದೆ. ಯಾಕಂದರೆ ಆ ಕೊಳೆಯನ್ನು ನಾವು ಇನ್ನು ಮುಂದೆ ಕಾಪಾಡಲಾರೆವು. ಸರಿ, ಇದೇ ನಮ್ಮ ತೊಡಕು. ಇದರ ಜ್ಞಾನವು ನಮ್ಮ ಸಂಶಯಗಳನ್ನು ಓಡಿಸಿಬಿಡುವದು.

ಅಹಿಂಸೆ ಅಥವಾ ಸತ್ಯ ಇಲ್ಲವೆ ಮೋಕ್ಷ ಇವು ಸಂಪೂರ್ಣ ಸಾಧಿಸುವವರೆಗೆ ವ್ಯರ್ಥವಾದವುಗಳು ಎಂದು ಯಾರೂ ತಿಳಿಯಲಾಗದು. ನಿಜವಾಗಿ ನೋಡಿದರೆ ಇವುಗಳ ಸಂಪೂರ್ಣ ಪ್ರಾಪ್ತಿಯು ಈ ಜೀವನದಲ್ಲಿ ಅಶಕ್ಯವೆ ಸೈ. ಆದರೆ 'ಅಧಿಕಸ್ಯಾಧಿಕಂ ಫಲಮ್' ಹೆಚ್ಚಾದಂತೆ ಹೆಚ್ಚು ಫಲ, ಅಥವಾ 'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋಭಯಾತ್' ಧರ್ಮದ ಸ್ವಲ್ಪಾಂಶವು ಕೂಡ ನಮ್ಮನ್ನು ದೊಡ್ಡ ಭಯದಿಂದ ರಕ್ಷಿಸುವುದು, ಎಂಬ ಮಾತುಗಳು ಸತ್ಯ ಅಹಿಂಸೆಗಳಿಗೆ ಅನ್ವಯಿಸುವವು. ನಾವು ಎಸೆಯುವ ಬಾಣವು ಶತ್ರು ಶರೀರ ಹೊಕ್ಕರೆ ಮಾತ್ರ ಸಫಲ, ಇಲ್ಲವೆ ವ್ಯರ್ಥ, ಎಂದು ತಿಳಿಯುವ ಕಾರಣವಿಲ್ಲ. ಸೋಲೆಂಬುದು ಈ ಮಾರ್ಗದಲ್ಲಿ ಇಲ್ಲೇಇಲ್ಲ. ಆತ್ಮಶುದ್ಧಿಯಾದ ಮಟ್ಟಿಗೆ ಫಲವು ಕಟ್ಟಿಟ್ಟಂತೆಯೆ.

ಗಾಂಧೀಜಿಯವರು ಸತ್ಯ ಅಹಿಂಸೆಗಳ ಉಪದೇಶ ಮಾಡಿ ಒಂದು ವಿಧವಾಗಿ ಜನರಿಗೆ ಉತ್ತಮ ನಾಗರಿಕರಾಗಲು ಹೇಳುತ್ತಿರುವರು. 'ಅತಿ ತೃಷ್ಣೆಯನ್ನು ಬಿಟ್ಟು ಬಿಡಿ' ಎಂದು ಅವರು ಹೇಳುವರು.

ಯಾಕಂದರೆ ಸ್ವಾರ್ಥಮೂಲಕ ಮಾಡಿದ ಸಂಗ್ರಹವನ್ನು ಅಹಿಂಸೆಯಿಂದ, ಧರ್ಮದಿಂದ ರಕ್ಷಿಸುವದು ಅಶಕ್ಯವು. ಇನ್ನು ಅಧರ್ಮದಿಂದ ನಮ್ಮ ಸೊತ್ತನ್ನು ಸಂರಕ್ಷಿಸುವ ಕ್ರಮವನ್ನೇ ನಾವು ಎತ್ತಿದರೆ ಅಧರ್ಮದ ಅಭಿವೃದ್ಧಿಯಾಗುವದು. ಆದುದರಿಂದ ಅವರು, 'ಅತಿತೃಷ್ಣೆ ಬಿಟ್ಟು ಬಿಡಿರಿ, ನೆರೆಯುವರ ಸೇವೆ ಮಾಡಲು ಕಲಿಯಿರಿ, ವ್ಯವಹಾರದಲ್ಲಿ ಸತ್ಯವನ್ನು ಅನುಸರಿಸಿರಿ, ತಾಳ್ಮೆಯಿಂದ ನಡೆಯಿರಿ, ಪರಮಾತ್ಮನಲ್ಲಿ ವಿಶ್ವಾಸವಿಡಿರಿ, ಲೋಭವಶರಾಗಿ ಯಾರ ಮೇಲೂ ಆಕ್ರಮಣ ಮಾಡಬೇಡಿರಿ. ಯಾವನಾದರೂ ದುಷ್ಟ ಬುದ್ಧಿಯಿಂದ ನಿಮ್ಮ ಮೇಲೆ ಏರಿ ಬಂದರೆ ಅವನನ್ನು ಹೊಡೆಯದೆ ಸಾಯಲು ಕಲಿಯಿರಿ. ಹೇಡಿತನ ಹಾಗೂ ಅಹಿಂಸೆ ಒಂದೇ ಅಲ್ಲ. ಶೌರ್ಯದ ಚರಮ ಸೀಮೆಯ ಹೆಸರು ಅಹಿಂಸೆ. ಬಲವಂತನೆ ಕ್ಷಮಾಶೀಲನಾಗಬಲ್ಲನು. ಆದುದರಿಂದ ಅತಿ ಶೂರರಾಗಿರಿ, ಶೂರರಾಗಲು ಅವಶ್ಯವಿದ್ದ ಗುಣಗಳ ವಿಕಾಸವನ್ನು ಸಾಧಿಸಿರಿ, ಶೂರರಾಗಿರಿ ಹಾಗೂ ಕ್ಷಮಾವಂತರಾಗಿರಿ. ಹೀಗೆ ಮಾಡುವುದು ನಿಮ್ಮಿಂದಾದರೆ ಮತ್ತು ಪರಮಾತ್ಮನಲ್ಲಿ ನಿಮ್ಮ ಶ್ರದ್ಧೆ ವಿಶ್ವಾಸಗಳಿದ್ದರೆ ನೀವು ನಿರ್ಭಯರಾಗಿ ಪ್ರಪಂಚದಲ್ಲಿ ವಿಹಾರ ಮಾಡಿರಿ,' ಎಂದು ಹೇಳುವರು.

ಗಾಂಧೀಜಿಯವರ ಪಶ್ಚಾತ್ ಅಹಿಂಸೆಯ ವೃದ್ಧಿಯಾಗುವುದೊ? ಗಾಂಧೀಜಿಯವರು ತೀರಿಹೋದನಂತರ ಅಹಿಂಸಾ ತತ್ವವು ಪ್ರಗತಿ ಹೊಂದುವುದೊ, ಹಿಮ್ಮೆಟ್ಟುವುದೊ ?

ಬುದ್ಧ ಮತ್ತು ಏಸು ಇವರಿಬ್ಬರ ಜೀವನಕಾಲದಲ್ಲಿ ಅವರವರ ಉಪದೇಶಗಳು ಎಷ್ಟು ಬಲಗೊಂಡವೊ ಅದಕ್ಕೂ ಹೆಚ್ಚಾಗಿ ಅವರ ಪಶ್ಚಾತ್ ಅವು ಬೇರುಬಿಟ್ಟವು. ಅವರ ಮರಣಾನಂತರ ಅವರ ಉಪದೇಶಗಳ ಬಾಹ್ಯರೂಪವು ವಿಸ್ತಾರ ಹೊಂದುತ್ತ ಹೋಗಿ ಅವುಗಳ ಅಂತಃಸ್ವರೂಪವು ಕ್ಷೀಣವಾಗುತ್ತ ನಡೆಯಿತೆಂಬ ಮಾತು ನಿಜವು. ಆದರೇನು, ಈಹೊತ್ತು ಬುದ್ಧನ ಉಪದೇಶವು ಮಾಯವಾಗಿದೆ, ಏಸುವಿನ ಉಪದೇಶದ ತೇಜವು ಅಡಗಿದೆ, ಎಂದು ಹೇಳಬಲ್ಲೆವೆ?

ಮಳೆ ಸುರಿದಾಗ ಸುತ್ತಲೆಲ್ಲ ನೀರೇ ನೀರು ಕಾಣುವುದು. ಮುಂದೆ ಅದೆಲ್ಲ ಇಲ್ಲದಾಗುವುದು. ಹಾಗೆ ಆದಾಕ್ಷಣಕ್ಕೆ ಮಳೆಯ ಪ್ರಯೋಜನವೇ ಆಗಲಿಲ್ಲ ಎನ್ನಬಹುದೆ? ಶರತ್ಕಾಲದಲ್ಲಿ ಧಾನ್ಯದ ತೆನೆ-ಗೊನೆಗಳಿಂದ ತುಂಬಿದ ಹೊಲಗಳೇ ಮಳೆಯ ಮಹಾತ್ಮ್ಯವನ್ನು ಸಾರುವವು. ಮಳೆಯ ನೀರು ಮಣ್ಣಿನಲ್ಲಿ ಮಾಯವಾದಂತೆ ತೋರಿದರೂ ಅದೇ ನೀರು ಜೀವನದಾಯಿ ಧಾನ್ಯದಲ್ಲಿ ತುಂಬಿಕೊಂಡು ಜೀವಂತವಿರುವುದು. ಹೊಲಗಳಲ್ಲಿ ಆ ನೀರು ಹಾಗೆ ಬಿದ್ದುಕೊಂಡಿದ್ದರೆ ಅಲ್ಲಿ ಹೊಲಸು ನಾತು ಇಡುಗುತ್ತಿತ್ತು, ಕೆಸರು, ಕೊಳೆ, ಸೊಳ್ಳೆಗಳ ತವರೂರಾಗುತಿತ್ತು. ಆದರೆ ಅದು ಕಾಳಿನಲ್ಲಿ ಸೇರಿ ಅಮೃತರೂಪ ಅನ್ನವನ್ನು ನಿರ್ಮಿಸಿ ಸಾರ್ಥಕವಾಯಿತು.

ಮಹಾಪುರುಷರ ಉಪದೇಶವು ಇದೇ ರೀತಿಯಿಂದ ಯೋಗ್ಯ ಜನರ ಹೃದಯದಲ್ಲಿ ಸೇರಿ ನೆಲೆಗೊಂಡು ಚಿರವಾದ ಅಮೃತವಾಗುವುದು. ಮಳೆಯ ನೀರೆಲ್ಲಿ, ಎಂದು ಗೋದಿಯ ಕಾಳನ್ನು ಕೇಳಿದರೆ, ಅದು ನನ್ನ ಮೈಯಲ್ಲಿ ಬದುಕಿ ಬಾಳುತಿದೆ, ಎಂದು ಹೇಳುವುದು. ಇದೇ ತರಹ ಸತ್ಪುರುಷರ ಜೀವನಫಲವು ಯೋಗ್ಯರ ಹೃದಯದಲ್ಲಿ ಅಮರರಸವಾಗಿ ನಲಿಯುವುದು. ಗಾಂಧೀಜಿಯವರ ಜೀವನವೆಲ್ಲ ಸತತ ಕರ್ಮದಿಂದ ವ್ಯಾಪ್ತವು. ಅವರ ಭೌತಿಕ ಶರೀರದ ಪತನದ ನಂತರ ಸಹ ಆ 'ಜೀವನವು' ಅವರು ನಿರ್ಮಿಸಿದ ನವಚೈತನ್ಯವು ಅಮರವೆ ಉಳಿಯುವುದು. ಮಾತುಮಾತಿನಲ್ಲಿ ಒಮ್ಮೆ ಅವರು ಅಂದದ್ದು, 'ನಾನು ಸತ್ತನಂತರ ಅಹಿಂಸಾ ತತ್ವವು ನಾಶಹೊಂದಿದರೆ ನನ್ನಲ್ಲಿ ಅಹಿಂಸೆ ಇರಲೇ ಇಲ್ಲ ಎಂದು ತಿಳಿಯತಕ್ಕದ್ದು.' ಇದು ನಿಜವು. ಯಾಕೆಂದರೆ ಧರ್ಮದ ನಾಶವು ಆಗುವ ಬಗೆ ಯಾವುದು?

ಈಗಿನ ಕಾಲದಲ್ಲಿ ಹಿಂಸೆಯಲ್ಲಿ ಶ್ರದ್ಧೆಯುಳ್ಳವರಿಗೆ ಕೂಡ ಎಚ್ಚರ ಬರಲಾರಂಭಿಸಿದೆ. ಪ್ರಥಮ ಅಬಿಸಿನಿಯಾದ ಪತನವಾಯಿತು. ಮುಂದೆ ಒಂದರ ಹಿಂದೊಂದು ದೇಶಗಳು ಪತನ ಹೊಂದಿದವು. ಜರ್ಮನಿಯು ಯುದ್ಧ ಹೂಡಿದಂದಿನಿಂದ ಹೆಚ್ಚು ಬಲವುಳ್ಳ ಹಿಂಸೆಯ

ಎದುರು ದುರ್ಬಲ ಹಿಂಸೆ ನಿಲ್ಲಲಾರದು, ಎಂಬುದು ಸಿದ್ಧವಾಯಿತು. ಕಬ್ಬಿಣ ಗುಂಡಿನೆದುರು ಕಾಜಿನ ಪಾತ್ರೆ ನಿಲ್ಲಬಲ್ಲದೆ? ಪೋಲಂಡ ಹೋಯಿತು, ಫಿನ್‌ಲಂಡ ಕುಸಿಬಿದ್ದಿತು, ನಾರ್ವೆ, ಬೆಲ್ಜಿಯಂ, ಹಾಲಂಡ, ಮತ್ತು ಮುಂದೆ ಫ್ರಾನ್ಸ ಹಾಂ ಹಾಂ ಎನ್ನುವಷ್ಟರಲ್ಲಿ ಬಿದ್ದುಹೋದವು. ಹಾಗೆ ಬೀಳುವುದಕ್ಕಿಂತ ಮೊದಲು ಘೋರನಾಶದ ಮೂಲಕ ಅವು ಸ್ಮಶಾನದಂತಾದವು. ಒಂದು ಡೆನ್ಮಾರ್ಕ ಮಾತ್ರ ಅಷ್ಟು ಹಾಳು ಆಗಲಿಲ್ಲ.

ಈಗ ನಮಗೆ ಎದುರಾಗುವ ಪ್ರಶ್ನೆಯೆಂದರೆ, ಆಯಾ ದೇಶದ ಜನರು ಕೊಲ್ಲದೆ ಸಾಯಲು ಸಿದ್ಧರಾಗಿದ್ದರೆ ಅವರ ಸ್ಥಿತಿಯು ಈಗಿನ ಗಿಂತ ವಾಸಿಯಾಗಿರುತಿರಲಿಲ್ಲವೆ? ಈ ಹೊತ್ತು ಆ ದೇಶಗಳ ಶರೀರ ಆತ್ಮಗಳೆರಡೂ ನಷ್ಟವಾಗಿವೆ. ಅವರು ಕೊಲ್ಲದೆ ಸಾಯಲು ಸಿದ್ಧ ರಾಗಿದ್ದರೆ ಕದಾಚಿತ್ ಅವರ ದೇಶವು ಅವರ ಕೈಯಿಂದ ಹೋಗುತಿತ್ತು. ಆದರೆ ಅವರ ಆತ್ಮವು ಈಗಿನಕಿಂತ ಹೆಚ್ಚು ಸ್ವತಂತ್ರ ಉಳಿಯುಬಹು ದಾಗಿತ್ತು. ಸಂಭವತಃ ಅವರ ದೇಶವು ಸಹ ಅವರ ಕೈಬಿಡುತಿತ್ತೊ ಇಲ್ಲವೊ. ಈಗಂತೂ ಅವರ ದೇಶಗಳೆಲ್ಲ ಪೂರಾ ಅವರ ಕೈಬಿಟ್ಟಿವೆ. ಆಯಾ ಜನಾಂಗದವರು ಅಹಿಂಸೆಯಿಂದ ಹೋರಾಡಿದ್ದರೆ ಇದಕ್ಕೂ ಹೆಚ್ಚಿನ ಪರಿಣಾಮವು ಜರ್ಮನಿಯ ಮೇಲೆ ಆಗುತಿತ್ತು.

'ಅಕ್ರೋಧೇನ ಜಯೇತ್ ಕ್ರೋಧಂ' ಕ್ರೋಧವನ್ನು ಅಕ್ರೋಧ ದಿಂದ ಗೆಲ್ಲಬೇಕು, ಎಂಬ ಉಕ್ತಿಯು ನಿಷ್ಫಲವಲ್ಲ. ಈಗ ಯುರೋಪ ದಲ್ಲಿ ನಡೆದ ಭಯಂಕರ ಸಂಗ್ರಾಮದ ಅರ್ಥವಾದರೂ ಏನು? ಅದೊಂದು ಲೋಭಾಗ್ನಿಯ ಜ್ವಾಲಾಮುಖಿಯು. ಇಡೀ ಖಂಡವನ್ನೇ ಸುಡುತ್ತ ನಡೆದಿದೆ. ಇಂಥ ಪ್ರಲಯಾಗ್ನಿಯ ಸಮಯದಲ್ಲಿ ಅಹಿಂಸೆಯು ಮಳೆಯೋಪಾದಿಯಲ್ಲಿ ಕೆಲಸ ಮಾಡಬಲ್ಲದು. ಏನೇ ಆದರೂ ಈಗ ಹಿಂಸಾ ಮಾರ್ಗದಿಂದ ಕೂಡ ಸ್ವಾತಂತ್ರ್ಯ ಸಂರಕ್ಷಣೆ ಆಗಲಿಲ್ಲ ಎಂಬುದು ಸಿದ್ಧವು. ಬೆಲ್ಜಿಯಂ, ಫ್ರಾನ್ಸ, ಇಂಗ್ಲಂಡ ಈ ಮೂರು ದೇಶಗಳ ಕೂಟ ಶಕ್ತಿ ಕೂಡ ಬೆಲ್ಜಿಯಂ ದೇಶವನ್ನು ಸಂರಕ್ಷಿಸಲು

ಅಸಮರ್ಥವಾಯಿತು. ಇದನ್ನೆಲ್ಲ ನೋಡಿದ ಬಳಿಕ ಯಾರಾದರೂ 'ಆಯಿತು' ಹಿಂಸೆಯ ಆಟ ತಿಳಿಯಿತು. ಇನ್ನು ಅತಿಶೌರ್ಯದ ಅಪರ . ನಾಮವಾದ ಅಹಿಂಸೆಯನ್ನು ಜಾಗ್ರತಗೊಳಿಸಿ ಅದರ ಸಹಾಯದಿಂದ ಶತ್ರುಗಳನ್ನು ಎದುರಿಸಲು ಕಲಿಯಿರಿ' ಅಂದರೆ ಅವನಿಗೆ ಹುಚ್ಚನೆಂದು ಅನ್ನುವ ಧೈರ್ಯ ಯಾರಿಗಿದೆ? ಅಹಿಂಸಾ ವಾದಿಯು ಮಾಡುವ ಉಪದೇಶವಾದರೂ ಏನು, ಎಂಬುದನ್ನು ನೋಡಿದರೆ, 'ಪಾಪವನ್ನು ಬಿಡು, ಅವರವರ ವಸ್ತು ಅವರಿಗೆ ಕೊಡು. 'ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯಸ್ವಿತ್ ಧನಮ್,' ದೇವರು ಕೊಟ್ಟದ್ದನ್ನು ತ್ಯಾಗವೃತ್ತಿಯಿಂದ ಉಪಯೋಗಿಸು; ಯಾರ ಧನವನ್ನೂ ಅಪೇಕ್ಷಿಸಬೇಡ, ಧರ್ಮದಿಂದ ನಡೆ, ಇಲ್ಲದಿದ್ದರೆ ಪಾಪವು ನುಂಗಿಬಿಡುವುದು. ಧರ್ಮವೆ ರಕ್ಷಕ, ಅಧರ್ಮವೆ ಮಾರಕ ಅಂಜ ಬೇಡ, ಅಂಜಿಸಬೇಡ, ಎಂಬುದಿಷ್ಟೇ ಇರುವುದು.

ಈಹೊತ್ತು ಹೊತ್ತಿ ಧಗಧಗಿಸಿ ಉರಿಯುತಿರುವ ಸ್ವಾರ್ಥವೆಂಬ ಅಗ್ನಿಯ ಸಂಯಮವೆ ಧರ್ಮ ಎಂಬುದರ ಅರ್ಥವು, ಧರ್ಮದ ಉದ್ದೇಶವು. ಧರ್ಮದಿಂದ ನಡೆದರೆ ಈ ಬಗೆಯ ಭೀಷಣ ಸಂಗ್ರಾಮಕ್ಕೆ ಅವಕಾಶವೆಲ್ಲಿ, ಹಿಂಸೆಗೆ ಎಡೆಯಲ್ಲಿ ?

'ಆದರೇನು, ಇದನಾರು ಒಪ್ಪುವರು ?' ಎಂದು ಜನರು ಅನ್ನು ವರು. ಸರಿ, ಒಪ್ಪದಿದ್ದರೇನು. ಇದನ್ನು ಮನ್ನಿಸದಿದ್ದರೇನು ? ಪಾಪ ಮಾಡಿರಿ, ಕಳವು ಮಾಡಿರಿ, ಸುಳ್ಳು ಹೇಳಿರಿ, ವ್ಯಭಿಚಾರವನ್ನಾಚರಿಸಿರಿ, ಎಂದು ನಾವು ಹೇಳಬಹುದೇ? ಇದನಾರು ಕೇಳುವರೆಂದು ಅನ್ನುವ ಇಂಥ ತಾರ್ಕಿಕರು ಗೀತಾಕಾರರಿಗೆ ಸಹ ನಿಮ್ಮ ಉಪದೇಶದಿಂದೇನು ಎಂದು ಪ್ರಶ್ನೆ ಮಾಡಬಹುದು.

ಶೌರ್ಯದ ಪರಮಾವಧಿಯ ಎರಡನೆ ಹೆಸರೇ ಅಹಿಂಸೆ. ಅಂಜುಬುರುಕತನದ ಹೆಸರು ಅಹಿಂಸೆ ಎಂದು ಯಾರೂ ತಿಳಿಯ ಕೂಡದು. ಪೂರ್ಣ ನಿರ್ಭಯವೃತ್ತಿಯಿಂದಲೆ ಅಹಿಂಸೆ ನಿರ್ಮಾಣ

ವಾಗಬಲ್ಲದು. ಅತ್ಯಂತ ಶೂರನಿದ್ದವನೆ ಅತ್ಯಂತ ನಿರ್ಭಯನಿರಬಲ್ಲನು. ಅಭಯ ಹಾಗೂ ಎಚ್ಚರಿಲ್ಲದ ಸ್ಥಿತಿ ಇವು ಪ್ರತ್ಯೇಕ ವಸ್ತುಗಳಿರುವುವು. ಉನ್ಮತ್ತನಿಗೆ ಇಲ್ಲವೆ ಮದ್ಯಾದಿ ಸೇವನದಿಂದ ಎಚ್ಚರ ದಪ್ಪಿದವನಿಗೆ ಭಯದ ಜ್ಞಾನವೆ ಇರುವುದಿಲ್ಲ. ಅವನು ನಿರ್ಭಯ ಎನಿಸಲಾರ. ಭಯವು ಮುಂದೆ ನಿಂತಾಗ ಅದರ ಎಚ್ಚರ, ತೀವ್ರತೆ ಇದ್ದರೂ ಅದರಿಂದ ಕಂಪಿತನಾಗದೆ ಅದನ್ನು ಎದುರಿಸುವವನೆ ನಿರ್ಭಯನೆನಿಸುವನು, ಅವನೇ ಪರಮ ಶೂರನು, ಅವನೇ ಅಹಿಂಸಾ-ವಾದಿಯು.

ಒಬ್ಬ ಧಷ್ಟಪುಷ್ಟ ತಂದೆಗೆ ಚಿಕ್ಕಪುಟ್ಟ ಮಗನೊಬ್ಬನು ಸಿಟ್ಟಿನಿಂದ ಒಂದು ಏಟು ಬಡಕೊಂಡರೆ ಆ ತಂದೆಗೆ ಕೋಪವೂ ಬರುವುದಿಲ್ಲ ಅಥವಾ ತಿರುಗಿ ಹೊಡೆಯಬೇಕು ಎಂಬ ಹಿಂಸಾವೃತ್ತಿಯೂ ಅವನಲ್ಲಿ ಜಾಗ್ರತವಾಗುವುದಿಲ್ಲ. ಅದೇ ಒಬ್ಬ ಗಟ್ಟಿಮುಟ್ಟ ಮನುಷ್ಯನು ಹಾಗೆ ಏಟು ಹೊಡೆದರೆ ಆ ತಂದೆಗೆ ಸಿಟ್ಟುಬರುವದು ಹಾಗೂ ತಿರುಗಿ ಏಟು ಕೊಡಬೇಕೆಂಬ ಹಿಂಸಾಭಾವನೆಯೂ ಜಾಗ್ರತವಾಗುವುದು. ಹೀಗೆ ಆಗುವ ಕಾರಣವೇನಂದರೆ, ಮಗನ ಏಟಿನ ಬಗ್ಗೆ ತಂದೆ ನಿರ್ಭಯ ನಿದ್ದನು. ಅದೇ ಆ ಬೇರೆ ಮನುಷ್ಯನು ಹೊಡೆದೊಡನೆ ಅವನಲ್ಲಿ ಭಯದ ಭಾವನೆ ಹುಟ್ಟಿತು. ಈ ರೀತಿ ಹಿಂಸೆ ಹಾಗೂ ಭಯ ಇವೆರಡೂ ಜೊತೆಭಾವನೆಗಳು. ಭಯದೊಡನೆ ಹಿಂಸೆಯು ಹುಟ್ಟು, ಅಭಯದೊಡನೆ ಅಹಿಂಸೆಯು ಹುಟ್ಟು, ಹೀಗಿದೆ. ಹಿಟ್ಲರ ಹಾಗೂ ಚರ್ಚಿಲ್ ಇವರಿಬ್ಬರಿಗೂ ಪರಸ್ಪರರ ಭಯ. ಇಬ್ಬರಿಯಲ್ಲಿಯೂ ನಿಜ ಶೌರ್ಯದ ಹೆಸರಿನಿಂದ ಶೂನ್ಯ. ಆದುದರಿಂದ ಇಕ್ಕೆಲದಲ್ಲಿಯೂ ಹಿಂಸೆಯ ಸಾಮ್ರಾಜ್ಯವಿದೆ. ಶೌರ್ಯವು ಆತ್ಯಂತಿಕವಿದ್ದಲ್ಲಿ ಅಹಿಂಸೆಯ ಸಾಮ್ರಾಜ್ಯವಿರುವಂತೆ ಭಯದ ರಾಜ್ಯವಿದ್ದಲ್ಲಿ ಅಂಜುಬುರುಕತನ ಹಾಗೂ ತನ್ಮೂಲಕ ಹಿಂಸೆ ಇದ್ದೇ ಇರುವುದು.

ಇನ್ನೊಂದು ಲಕ್ಷದಲ್ಲಿಡತಕ್ಕ ಸಂಗತಿಯಾಗಿದೆ. ಒಂದು ಪ್ರಾಣಿಯನ್ನು ಕೇವಲ ಕೊಲ್ಲುವುದರಲ್ಲಿಯೆ ಹಿಂಸೆ ಇದೆ ಎಂದು ಹೇಳಲಾಗುವುದಿಲ್ಲ. ಒಬ್ಬ ಹುಚ್ಚನ ಕೈಯಲ್ಲಿ ಒಂದು ಮಶಿನಗನ್ನು ಸಿಕ್ಕಿತೆಂದು

ಕಲ್ಪಿಸುವ. ಅವನು ಕದಾಚಿತ್ ನೂರಾರು ಜನರನ್ನು ಕೊಂದುಹಾಕ ಬಹುದು. ಅಂಥವನನ್ನು ಕೊಲ್ಲುವುದು ಹಿಂಸೆ ಎನಿಸಲಿಕ್ಕಿಲ್ಲ. ದ್ವೇಷ ರಹಿತನಾಗಿ ಸಮಬುದ್ಧಿಯಿಂದ ಲೋಕಕಲ್ಯಾಣಾರ್ಥವಾಗಿ ಮಾಡಿದ ಕೊಲೆ ಹಿಂಸೆಯಾಗಲಾರದು. ಪೋಲಂಡದವರು ಸ್ವದೇಶ ರಕ್ಷಣಕ್ಕಾಗಿ ಆಗ ಮಾಡುತ್ತಿದ್ದ ಯುದ್ಧವನ್ನು ಕುರಿತು ಬರೆಯುವಾಗ ಗಾಂಧೀಜಿ ಯವರು ಅಂದದ್ದು, 'ಪೋಲಂಡದ ಜನರು ಅತ್ಯಂತ ಸ್ವಾರ್ಥತ್ಯಾಗ ಹಾಗೂ ಅತೀವ ಶೌರ್ಯ ಇವುಗಳನ್ನು ತೋರಿದ್ದಾದರೆ ಅವರು ಹಿಂಸಾಮೂಲಕ ಆತ್ಮರಕ್ಷಣೆ ಮಾಡಿಕೊಂಡರೆಂಬದನ್ನು ಜಗತ್ತು ಮರೆತುಬಿಡುವುದು. ಪೋಲಂಡದವರು ಮಾಡಿದ ಹಿಂಸೆ ಸಮ ಸಮೀಪ ಅಹಿಂಸೆಯೆಂದೇ ಗಣಿಸಲಾಗುವುದು.'

ಪೋಲಂಡದವರು ಆತ್ಮರಕ್ಷಕ ಯುದ್ಧದಲ್ಲಿ ಉಪಯೋಗಿಸಿದ ಹಿಂಸೆ ಅಹಿಂಸೆಯಿದ್ದಂತೆಯೆ ಎಂದು ಏಕೆ ತಿಳಿಯಬೇಕು? ಹೀಗೆ ಒಬ್ಬ ಜಿಜ್ಞಾಸುವು ಕೇಳಿದಾಗ ಗಾಂಧೀಜಿಯವರು ಒಂದು ಹೊಸ ಬಗೆಯಿಂದ ತಮ್ಮ ವಿಧಾನದ ವಿವೇಚನೆ ಹೇಳಿದರು. ಆ ವಿವೇಚನೆ ಕೂಡ ಪೂರ್ಣವಿದ್ದಿಲ್ಲ ಎಂದು ನನ್ನ ಭಾವನೆ. ಹಾಗೆ ಪೂರ್ಣ ವಿವೇಚನೆ ಹೇಳುವದು ಸಾಧ್ಯವೂ ಇಲ್ಲ. ಯಾಕಂದರೆ ಒಂದೇ ಬಗೆಯ ಕರ್ಮವು ಒಂದು ಪ್ರಸಂಗದಲ್ಲಿ ಧರ್ಮ ಇನ್ನೊಂದು ಪ್ರಸಂಗ ದಲ್ಲಿ ಅಧರ್ಮ, ಎಂದು ಎನಿಸಬಲ್ಲದು. ಯಾವದೊಂದು ಕರ್ಮವು ಧರ್ಮಸಮ್ಮತವೊ ಅಲ್ಲವೊ ಎಂಬ ಮಾತನ್ನು ಅವರವರೆ ನಿರ್ಣಯಿಸ ಬೇಕು. ಪೋಲಂಡದವರು ಮಾಡಿದ ಹಿಂಸೆ ಸಮಸಮೀಪ ಅಹಿಂಸೆಯೆ ಸೈ, ಎಂಬ ವಿಧಾನವು ಮನಸಿನಲ್ಲಿ ಗೊಂದಲವನ್ನುಂಟುಮಾಡಬಲ್ಲದು. ಆದರೆ ಆ ವಿಧಾನವು ವಿಸಂಗತವಲ್ಲ.

ಈ ಮೇಲಿನ ಎಲ್ಲ ಪೃಥಕ್ಕರಣದಿಂದ ಅಹಿಂಸೆಯ ಶುದ್ಧಸ್ವರೂಪ ಹಾಗೂ ಅದರ ವ್ಯಾವಹಾರಿಕತೆ ಇವು ಸ್ಪಷ್ಟವಾಗಿ ತಿಳಿಯಲು ಅಡ್ಡಿ ಇಲ್ಲ ಎಂದು ತೋರುವದು.

# ೫ 'ಕ್ಷಮಾ ವೀರಸ್ಯ ಲಕ್ಷಣಂ'

ಅಹಿಂಸಾವೃತ್ತಿಯ ಜಾಗೃತಿಯು ಗಾಂಧೀಜಿಯವರಲ್ಲಿ ಯಾವಾಗ ಆಯಿತು, ರಾಜಕಾರಣದಲ್ಲಿ, ಸಮಾಜ ಕಾರಣದಲ್ಲಿ, ಪರಸ್ಪರ ವೈಯಕ್ತಿಕ ವ್ಯವಹಾರದಲ್ಲಿ ಈ ತತ್ವದ ಪ್ರಯೋಗವನ್ನು ಅವರು ಯಾವಾಗ ಆರಂಭಿಸಿದರು, ಇದರ ಗುಣ ಹಾಗೂ ಮಹತ್ವದ ಬಗ್ಗೆ ಅವರ ಶ್ರದ್ಧೆ ಯಾವಾಗ ದೃಢವಾಯಿತು, ಇದನ್ನು ಹೇಳುವುದು ಕಷ್ಟಸಾಧ್ಯವಾದುದು. ಈಗ ನಮ್ಮಲ್ಲಿರುವ ಎಷ್ಟೋ ಗುಣಗಳು ಒಮ್ಮೆಲೆ ಉದ್ಭೂತವಾದವೆಂದು ನಮಗೆ ತೋರಿದರೂ ಸೂಕ್ಷ್ಮವಾಗಿ ನಿರೀಕ್ಷಿಸಿದರೆ ಅವು ನಿಜವಾಗಿ ಮೆಲ್ಲಮೆಲ್ಲನೆ ಬೆಳೆಯುತ್ತ ಬಂದವುಗಳೆಂದು ಕಂಡುಬರುವುದು. ಎಷ್ಟೋ ಗುಣಗಳ ಬೀಜಗಳು ಮೊದಲು ನಮ್ಮಲ್ಲಿ ಹುದುಗಿಕೊಂಡಿದ್ದು ಮುಂದೆ ಕ್ರಮವಾಗಿ ಮೊಳೆತು ಬೆಳೆಯುವವು. ದುರ್ಗುಣಗಳ ಹಾಗೂ ದುಷ್ಟಪ್ರವೃತ್ತಿಗಳ ಕಥೆಯಾದರೂ ಹೀಗೆಯೆ ಇರುವುದು.

ಚಿಕ್ಕಂದಿನಿಂದಲೆ ಗಾಂಧೀಜಿಯವರ ಮನಸಿನ ಮೇಲೆ ಸತ್ಯ ಮತ್ತು ಅಹಿಂಸೆಯು ಅಚ್ಚಳಿಯದ ಚಿತ್ರವು ಒಡಮೂಡಿತ್ತೆಂಬುದನ್ನು ನಾವು ಬಲ್ಲೆವು. ಮಾಂಸಾಹಾರವು ಸಮಾಜಕ್ಕೆ ಹಿತಕರವು ಎಂಬ ತಿಳಿವಳಿಕೆಯ ಮೂಲಕ, ಒಬ್ಬ ಗೆಳೆಯನ ಸಂಗತಿಯಿಂದ ಅಧರ್ಮವೆ ಧರ್ಮವೆಂದು ಮನ್ನಿಸಿ ಗಾಂಧೀಜಿಯವರು ತೀರ ಚಿಕ್ಕಂದಿನಲ್ಲಿ ಮಾಂಸವನ್ನು ತಿನ್ನಲಾರಂಭಿಸಿದರು. ಇದು ಅವರ ಮನಸಿಗೆ ಕಟಿಯ

ಲಾರಂಭಿಸಿತು. ಯಾಕಂದರೆ ಈ ಕೆಲಸವನ್ನು ಅವರು ಕಚ್ಚಿಮುಚ್ಚಿ ಮಾಡುತ್ತಿದ್ದರು. ಮಾಂಸಾಶನವು ಮೂಲತಃ ಅವರಿಗೆ ಅಷ್ಟೊಂದು ಸೇರುತ್ತಿರಲಿಲ್ಲ ಹಾಗೂ ಆ ಅವರ ಕೆಲಸದಲ್ಲಿ ಅಸತ್ಯವು ತುಂಬಿತ್ತು. ಈ ಒಂದು ಕೆಡುಕನ್ನು ಬೆಂಬತ್ತಿ ಇನ್ನೊಂದು ಬಂದಿತು. ಕೆಡುಕಿನ ಮಾತೇ ಹಾಗೆ. ಮಾಂಸವಾದ ಬಳಿಕ ತಂಬಾಕಿನ ಮೇಲೆ ಮನಸು ಹೋಯಿತು. ಅದನ್ನು ಕೊಳ್ಳಲು ಕಾಸು ಬೇಕು. ಆದಕಾಗಿ ಮನೆಯಲ್ಲಿ ಕಳವು ಮಾಡಬೇಕಾಯಿತು. ಬರಬರುತ ಇದೆಲ್ಲ ಗಾಂಧೀಜಿಯವರಿಗೆ ಅಸಹ್ಯವಾಯಿತು. ತಂದೆಯವರೆದುರು ಇದನ್ನೆಲ್ಲ ಒಪ್ಪಿ ಅವರಿಂದ ಕ್ಷಮೆ ಬೇಡಬೇಕೆಂದು ಅವರು ನಿರ್ಧರಿಸಿದರು. ತಂದೆಯವರ ಮನಸಿಗೆ ಎಷ್ಟು ಕೆಡಕೆನಿಸುವದೋ ಏನೋ ಎಂಬ ಭಯ ಗಾಂಧೀಜಿಯವರಿಗೆ ಇತ್ತು. ಆದರೂ ಇದ್ದ ಸಂಗತಿಯನ್ನೆಲ್ಲ ಬರೆದು ಅವರು ತಂದೆಯ ಕೈಯಲ್ಲಿಟ್ಟರು. ತಂದೆಯವರು ಓದಿಕೊಂಡು ಕಣ್ಣೀರು ಸುರಿಸಲಾರಂಭಿಸಿದರು. ಗಾಂಧೀಜಿಯವರಿಗೂ ತಡೆಯುವದಾಗಲಿಲ್ಲ. ಅವರಿಗೂ ಅಳು ತುಂಬಿಬಂದಿತು. ಮಗನು ಇಂಥ ಕುಕರ್ಮ ಮಾಡಲೆಸಗಿದನೆಂಬ ವಿಷಾದದ ಮೂಲಕ ತಂದೆಯ ಕಣ್ಣಿನಿಂದ ಈ ದುಃಖಾಶ್ರುಗಳು ಉದುರಿದವೊ ಅಥವಾ ಅವನು ಸತ್ಯವನ್ನಾಶ್ರಯಿಸಿದನೆಂಬ ಉಬ್ಬಿನ ಮೂಲಕ ಆನಂದಾಶ್ರುಗಳುದುರಿದವೊ ಯಾರು ಹೇಳಬಲ್ಲರು ? 'ನನ್ನಮಟ್ಟಿಗಂತೂ ಅದೊಂದು ಅಹಿಂಸೆಯ ಪಾಠವಾಗಿತ್ತು. ಆಗ ನನಗೆ ಅಹಿಂಸೆಯ ಜ್ಞಾನವಿರಲಿಲ್ಲ ಎಂಬ ಮಾತು ನಿಜ. ಆದರೆ ಅದೊಂದು ಶುದ್ಧ ಅಹಿಂಸೆಯ ಮೂಲಕ ಕೈಕೊಂಡ ಕ್ರಮವಿತ್ತು ಎಂದು ಹೇಳಬಲ್ಲೆ,' ಗಾಂಧೀಜಿಯವರು ಆ ಸಂಗತಿಯ ಬಗ್ಗೆ ಹೀಗೆ ಬರೆದಿರುವರು. ತಂದೆಯವರು ಮಗನನ್ನು ಪೂರ್ಣ ಕ್ಷಮಿಸಿಬಿಟ್ಟರು, ಮಗನು ಆ ವಸ್ತುಗಳನ್ನು ಪೂರ್ಣ ತ್ಯಜಿಸಿದನು. ತಂದೆ-ಮಕ್ಕಳ ಮನಸು ಹಗುರಾಯಿತು.

ಈ ಘಟನೆಯಿಂದ ಗಾಂಧೀಜಿಯವರ ಮನಸಿನಲ್ಲಿ ಯಾವ ಹೆಚ್ಚು ಕಡಿಮೆಯಾಯಿತು ಎಂಬುದನ್ನು ಯಾರೂ ಹೇಳಲಾರರು. ಆದರೆ ಅಹಿಂಸೆಯ ಬೀಜವು ಆ ಸಮಯದಲ್ಲಿ ಅಂಕುರಿಸಿತು, ಎಂದು

ಹೇಳಬಹುದು. ಆಗ ಗಾಂಧೀಜಿಯವರು ತೀರ ಒಂದು ಮಗುವಿನಂತೆ ಇದ್ದರು. ಅವರು ಇಂಗ್ಲಂಡಕ್ಕೆ ಹೋಗುವ ಸಮಯದಲ್ಲಿ ದೊಡ್ಡವರಾಗಿದ್ದರು. ಅಷ್ಟೊತ್ತಿಗೆ ಅವರ ತಂದೆಯವರು ತೀರಿಕೊಂಡಿದ್ದರು. ಪರದೇಶದಲ್ಲಿ ಎಂಥ ಪ್ರಸಂಗ ಬಂದರೂ ಮದ್ಯ ಮಾಂಸಗಳನ್ನು ಸೇವಿಸಲಿಕ್ಕಿಲ್ಲ ಎಂಬ ಪ್ರತಿಜ್ಞೆಯನ್ನು ಅವರು ತಾಯಿಯ ಮುಂದೆ ಮಾಡಿಬಿಟ್ಟಿದ್ದರು. ಆದರೆ ಜಾತಿಬಾಂಧವರ ಸಮಾಧಾನವು ಇಷ್ಟರಿಂದ ಆಗಬಲ್ಲದೆ? 'ಅಲ್ಲಿ ಇವನು ಧರ್ಮಭ್ರಷ್ಟನಾಗಬಹುದು' ಎಂದು ಅವರು ಇವರನ್ನು ತಡೆದರು. 'ಅಭೋಜ್ಯ ಭೋಜನ ಮಾಡಲಿಕ್ಕಿಲ್ಲವೆಂದು ನಾನು ಪ್ರತಿಜ್ಞೆ ಮಾಡಿರುವೆನು' ಎಂದು ಗಾಂಧೀಜಿಯವರು ಹೇಳಿದರು. ಆದರೆ ಜಾತಿಬಾಂಧವರಿಗೆ ಅದರಿಂದ ಸಮಾಧಾನವಾಗಲಿಲ್ಲ. ಅವರು ಗಾಂಧೀಜಿಯವರನ್ನು ಜಾತಿಯ ಹೊರಗೆ ಇಟ್ಟರು.

ಗಾಂಧೀಜಿಯುವರು ಇಂಗ್ಲಂಡಕ್ಕೆ ಹೋದರು. ತಮ್ಮ ಪ್ರತಿಜ್ಞೆಯನ್ನು ಅಕ್ಷರಶಃ ಪಾಲಿಸಿದರು. ತಿರುಗಿ ಬಂದೊಡನೆ ಬಹಿಷ್ಕಾರವು ಅವರೆದುರು ನಿಂತಿತು. 'ಆದರೆ ನಾನು ಪಂಚರನ್ನು ಕುರಿತು ದ್ವೇಷಭಾವನೆಯನ್ನೂ ತಾಳಲಿಲ್ಲ, ಜಾತಿಯಲ್ಲಿ ಸೇರಲು ಯತ್ನವನ್ನೂ ಮಾಡಲಿಲ್ಲ. ನಾನು ಬಹಿಷ್ಕಾರದ ಎಲ್ಲ ನಿಯಮಗಳನ್ನು ಸರಿಯಾಗಿ ಪಾಲಿಸುತ್ತ ಬಂದೆನು. ಜಾತಿಭಾಂಧವರೊಡನೆ ಅನ್ನೋದಕ ವ್ಯವಹಾರವನ್ನು ನಾನಾಗಿ ಬಿಟ್ಟು ಬಿಟ್ಟೆನು. ಮಾವನ ಹಾಗೂ ಬೀಗರ ಮನೆಯವರು ನಾನು ಅವರಲ್ಲಿ ಉಣಬೇಕು ತಿನಬೇಕು ಎಂದು ಇಚ್ಛಿಸುತಿದ್ದರು. ಆದರೆ ಮುಚ್ಚುಮರೆಯಿಂದ ನಾನು ಹಾಗೆ ಮಾಡಬೇಕು ಎಂದು ಅವರ ಮನೀಷೆ! ನನಗೆ ಅದು ಸಲ್ಲದ ಮಾತು. ಆದುದರಿಂದ ಈ ಸಮೀಪದವರಲ್ಲಿ ಕೂಡ ನಾನು ನೀರು ಕುಡಿಯುವುದನ್ನು ಸಹ ಬಿಟ್ಟುಬಿಟ್ಟೆನು. ಈ ನನ್ನ ಕ್ರಮದ ಪರಿಣಾಮವೇನಾಯಿತೆಂದರೆ, ಅವರು ನನ್ನನ್ನು ಜಾತಿಯ ಹೊರಗೆ ಇಟ್ಟದ್ದೇನೋ ನಿಜ. ಆದರೆ ನನ್ನ ಬಗ್ಗೆ ಅವರಲ್ಲಿ ಪ್ರೀತಿ ಹೆಚ್ಚಾಯಿತು. ನನ್ನ ಇತರ ಕಾರ್ಯಗಳಲ್ಲಿ ಅವರು ಬಹಳ ಸಹಾಯ ಮಾಡಿದರು. ಈ ಶುಭ

ಫಲವು ನನ್ನ ಅಹಿಂಸೆಯ ಪರಿಣಾಮವು ಎಂದು ನನ್ನ ನಂಬಿಗೆ.' ಹೀಗೆ ಆ ಬಗ್ಗೆ ಗಾಂಧೀಜಿಯವರ ಅಂಬೋಣವಿದೆ.

ಗಾಂಧೀಜಿಯವರು ಆಫ್ರಿಕೆಯಲ್ಲಿ ಸಮುಸಮೀಪ ಇಪ್ಪತ್ತು ವರ್ಷ ಕಳೆದರು. ಮೊದಲು ವಕೀಲರೆಂದು ಒಂದು ಸಾಧಾರಣ ಕೆಲಸಕ್ಕಾಗಿ ಹೋದರು. ಆದರೆ ಅಲ್ಲಿ ಕಪ್ಪು ಜನರ ಬಗ್ಗೆ ಇದ್ದ ಬಿಳಿಯರ ಹೇಯಭಾವ, ಬಿಳಿಯರ ಜೋರು ಜುಲುಮೆ ಇವುಗಳನ್ನು ನೋಡಿ ತಮ್ಮ ಸಮಾಜದ ಸೇವೆಗಾಗಿ ಅವರು ಹಲವು ದಿನ ಅಲ್ಲಿ ಇದ್ದುಬಿಟ್ಟರು. ಮುಂದೆ ಹಿಂದೀಯರು ಅವರನ್ನು ಅಲ್ಲಿಂದ ಹೋಗ ಗೊಡಲಿಲ್ಲ ಹಾಗೂ ಒಂದೊಂದಾಗಿ ಇಪ್ಪತ್ತೊಂದು ವರುಷಗಳು ಅಲ್ಲಿಯೆ ಕಳೆದುಹೋದವು. ಈ ಅವಧಿಯಲ್ಲಿ ಅವರು ಸಾಕಷ್ಟು ಹೋರಾಡಬೇಕಾಯಿತು. ಆಗ ಅಹಿಂಸೆಯ ದೃಢವಾದ ಅವರ ಶ್ರದ್ಧೆ ಚಿರಸ್ಥಿರವಾಯಿತು. ಅಲ್ಲಿ ದೊಡ್ಡ ಪ್ರಮಾಣದಲ್ಲಿ ಅಹಿಂಸೆಯ ಪ್ರಯೋಗಗಳನ್ನು ಅವರು ಮಾಡಿದರು. ಅದರಲ್ಲಿ ಅವರಿಗೆ ಸಾಫಲ್ಯ ದೊರೆಯಿತು. ವಿರುದ್ಧ ಪಕ್ಷದವರ ಹೃದಯಪರಿವರ್ತನೆ ಆಯಿತು. ಯಾವ ಜನರಲ್ ಸ್ಮಟ್ಸರೊಡನೆ ಅವರು ಹೋರಾಟ ಹೂಡಿದ್ದರೊ ಅವರು ಕೊನೆಗೆ ಅವರ ಮಿತ್ರರಾದರು. ಎರಡನೆ ದುಂಡುಮೇಜಿನ ಪರಿಷತ್ತಿಗಾಗಿ ಗಾಂಧೀಜಿಯವರು ಲಂಡನಕ್ಕೆ ಹೋದಾಗ ಅವರು ಸ್ಮಟ್ಸರಅಲ್ಲಿಯೆ ಇದ್ದರು. ನನ್ನಿಂದ ಏನಾದರೂ ಕೆಲಸವಾಗುವಂತಿದ್ದರೆ ಅವಶ್ಯವಾಗಿ ನನ್ನನ್ನು ಸಂಕೋಚವಿಲ್ಲದೆ ಯೋಜಿಸಬೇಕೆಂದು ಅವರು ಹೇಳಿ ಕಳಿಸಿದರು. ಗಾಂಧೀಜಿಯವರು ಕೆಲಮಟ್ಟಿಗೆ ಅವರ ಉಪ ಯೋಗವನ್ನು ಮಾಡಿಕೊಂಡರು.

ಅಹಿಂಸಾತ್ಮಕ ಆಚರಣೆಯಿಂದ ಶತ್ರುಗಳು ಹೇಗೆ ಮಿತ್ರರಾಗು ವರು ಎಂಬ ಬಗ್ಗೆ ಉಜ್ವಲ ಉದಾಹರಣೆಗಳು ಬೇಕಿದ್ದರೆ ಅಂಥ ಉದಾಹರಣೆಗಳು ಗಾಂಧೀಜಿಯವರ ಈ ಇಪ್ಪತ್ತೊಂದು ವರ್ಷದ ತಪಶ್ಚರ್ಯೆಯ ಅವಧಿಯಲ್ಲಿ ಸಾಕಷ್ಟು ದೊರೆಯುವುವು. ಆಫ್ರಿಕೆ ಯಲ್ಲಿ ಗಾಂಧೀಜಿಯವರು ಅತ್ಯಂತ ಸೂಕ್ಷ್ಮರೀತಿಯಿಂದ ಅಹಿಂಸೆಯ

ಆಚರಣೆ ಮಾಡಿದರು, ಹೊಡೆತ ತಿಂದರು, ಬೈಸಿಕೊಂಡರು, ಸೆರೆಯಲ್ಲಿ ಕೊಳೆತರು, ಎಲ್ಲ ಪೀಡೆಗಳನ್ನು ಸಹಿಸಿದರು. ಆದರೂ ವಿರೋಧಿಗಳನ್ನು ಕುರಿತು ಎಂದೂ ಸಿಟ್ಟಿಗೇಳಲಿಲ್ಲ, ತಮ್ಮ ಧೈರ್ಯವನ್ನು ಬಿಡಲಿಲ್ಲ, ಎದೆಗುಂದಲಿಲ್ಲ. ಕೊನೆಯವರೆಗೂ ಕ್ರೋಧವನ್ನು ತ್ಯಜಿಸಿ ಹೋರಾಡುತ್ತ ಸಾಗಿದರು. ಪರಿಣಾಮತಃ ಅವರಿಗೆ ಫಲವು ದೊರೆಯಿತು. ಕಾರಣ, 'ಅಹಿಂಸಾಯಾಂ ಪ್ರತಿಷ್ಠಾಯಾಂ ತತ್ಸನ್ನಿಧೌ ವೈರತ್ಯಾಗಃ' (ಅಹಿಂಸೆಯ ಪ್ರತಿಷ್ಠಾಪನೆಯಾದಲ್ಲಿ ಅಹಿಂಸಕನನ್ನು ಕುರಿತು ಎಲ್ಲರೂ ತಮ್ಮ ವೈರಭಾವವನ್ನು ಬಿಟ್ಟುಬಿಡುವರು) ಎಂದು ಶಾಸ್ತ್ರವಚನವಿರುವದು.

ಆಫ್ರಿಕೆಯಲ್ಲಿ ಕಪ್ಪು ಹಾಗೂ ಬಿಳಿಯರ ಭೇದವು ಬಹಳ ವ್ಯಾಪಿಸಿತ್ತು. ಹಿಂದೀಯರು ಕಪ್ಪೆಂದೆಣಿಸಲಾಗಿದ್ದರು. ಕಪ್ಪು ಜನರು ಬೀದಿಯ ಬದಿಯ ಫರಸಿಯ ಮೇಲೆ ಸಹ ನಡೆಯಕೂಡದೆಂಬ ನಿರ್ಬಂಧವಿತ್ತು. ರಾತ್ರಿ ವಿಶಿಷ್ಟ ವೇಳೆಯನಂತರ ಅವರು ಮನೆಯಿಂದ ಹೊರಬೀಳುವದು ನಿಷಿದ್ಧವಿತ್ತು. ಹೊರಗೆ ಅಡ್ಡಾಡುವ ಚಟವು ಗಾಂಧೀಜಿಯವರಿಗೆ ಸಾಕಷ್ಟು ಇತ್ತು. ವೇಳೆ ಅವೇಳೆ ನೋಡದೆ ಹೊರಗೆ ಹೋಗುವ ಪ್ರಸಂಗಗಳೂ ಅವರಿಗೆ ಬರುತಿದ್ದವು. ಒಂದು ದಿನ ಪ್ರೆಸಿಡೆಂಟ ಕ್ರೂಗರರ ಮನೆ ಎದುರಿನಿಂದ ಅವರು ಸಾಗಿದ್ದರು. ಆಗ ಅಕಸ್ಮಾತ್ತಾಗಿ ಪಹರಿಯು ಇವರನ್ನು ನೂಕಿ ಫರಸಿಯ ಕೆಳಗೆ ಕೆಡವಿದನು. ಸಾಲದೆ ಅವರಿಗೊಂದು ಲತ್ತೆಯನ್ನು ಕೊಟ್ಟನು. ಸುಮ್ಮನೆ ಹೊಡೆತ ತಿಂದು ಗಾಂಧೀಜಿಯವರು ಎದ್ದು ನಿಂತರು. ಇವರಿಗೆ ಎಳ್ಳಷ್ಟೂ ಸಿಟ್ಟು ಬರಲಿಲ್ಲ. ಹತ್ತರವೆ ಹೋಗುತ್ತಿದ್ದ ಇವರೊಬ್ಬ ಬಿಳಿಯ ಮಿತ್ರನು ಇದನೆಲ್ಲ ನೋಡಿದನು. ಅವನಿಗೆ ಬ್ರಹ್ಮಾಂಡ ಸಿಟ್ಟುಬಂದಿತು. ಅವನು ಅಂದದ್ದು, 'ಗಾಂಧೀಯವರೆ, ನಾನು ಎಲ್ಲ ಸಂಗತಿಗಳನ್ನು ಪ್ರತ್ಯಕ್ಷ ನೋಡಿದ್ದೇನೆ. ಕೋರ್ಟಿನಲ್ಲಿ ನೀವು ಖಟ್ಲೇ ನಡೆಸಿರಿ. ನಾನು ಸಾಕ್ಷಿ ಹೇಳುತ್ತೇನೆ. ನಿಮ್ಮೊಡನೆ ಈ ಪಹರಿಯು ಇಷ್ಟು ದುಷ್ಟರೀತಿ ನಡೆದುಕೊಂಡ ಬಗ್ಗೆ ನನಗೆ ಅತ್ಯಂತ ವಿಷಾದವಾಗಿರುವದು.' ಗಾಂಧೀಜಿಯವರು ಉತ್ತರ ಕೊಟ್ಟದ್ದು,

‘ನೀವು ವಿಷಾದಿಸಬೇಡಿ. ವ್ಯಕ್ತಿಗತ ಅನ್ಯಾಯದ ಪ್ರತೀಕಾರಕ್ಕಾಗಿ ಕೋರ್ಟು ಕಚೇರಿಗಳ ಕಟ್ಟೆ ಏರಿ ಅವುಗಳ ಸಹಾಯ ಪಡೆಯಬಾರದೆಂದು ನನ್ನ ನಿಯಮವಿದೆ. ಪಾಪ, ಈ ಮೂರ್ಖನ ತಪ್ಪೇನು? ಇಲ್ಲಿಯ ವಾತಾವರಣವೆ ಹಾಗಿದೆ. ಇವನ ಮೇಲೆ ಖಟ್ಲೇ ನಡೆಸುವದು ನನಗೆ ಇಷ್ಟವಿಲ್ಲ.’ ಇದೆಲ್ಲ ಆದನಂತರ ಆ ಪಹರಿಯು ಗಾಂಧೀಜಿಯವರ ಕ್ಷಮೆ ಬೇಡಿದನು!

ಹೀಗೆ ಅನೇಕ ಘಟನೆಗಳನ್ನು ಹೇಳಬಹುದು. ನಡುವೆ ಒಮ್ಮೆ ಗಾಂಧೀಜಿಯವರು ಸ್ವದೇಶಕ್ಕೆ ಬಂದು ಮರಳಿ ಆಫ್ರಿಕಾಕ್ಕೆ ಹೋದರು. ಆಗ ಇವರನ್ನು ಕುರಿತು ಅನೇಕ ಸುಳ್ಳು ಸೊಟ್ಟು ಮಾತುಗಳನ್ನು ಬರೆದು ಬಿಳಿಯ ವೃತ್ತಪತ್ರಕಾರರು ಅಲ್ಲಿಯ ಜನರನ್ನು ಇವರ ವಿರುದ್ಧ ಉದ್ರೇಕಗೊಳಿಸಿದರು. ಹಡಗದಿಂದ ಗಾಂಧೀಜಿಯವರು ಇಳಿಯತಕ್ಕವರಿದ್ದರು. ಆಗ ಬಿಳಿಜನರು ಇವರ ವಿರುದ್ಧ ಭಾವಪ್ರದರ್ಶನವನ್ನು ನಡೆಸಿದರು. ಈಗ ಇಳಿದರೆ ಭಯವಿದೆ, ರಾತ್ರಿ ಇಳಿಯುವುದು ವಾಸಿ, ಎಂದು ಇವರ ಮಿತ್ರರು ಹಾಗೂ ಪೋಲೀಸರು ಹೇಳಿದರು. ಹಡಗದ ಕಪ್ತಾನನು ಕೇಳಿದ್ದು, ‘ಬಿಳಿಯರು ನಿಮ್ಮನ್ನು ಥಳಿಸಿದರೆ ನೀವು ಅವರನ್ನು ಹೇಗೆ ಪ್ರತಿಕರಿಸುವಿರಿ?’ ಇದಕ್ಕೆ ಗಾಂಧೀಜಿಯವರು ಅಂದದ್ದು, ‘ನಾನು ಅವರನ್ನು ಕ್ಷಮಿಸಿಬಿಡುವಂತೆ ದೇವರು ನನಗೆ ಬುದ್ಧಿ ಹಾಗೂ ಶಕ್ತಿಯನ್ನು ದಯಪಾಲಿಸುವನು. ಅವರು ಅಜ್ಞಾನಕ್ಕೀಡಾಗಿರುವರು. ಆದುದರಿಂದ ಅವರ ಬಗ್ಗೆ ನನಗೆ ಕ್ರೋಧವಿಲ್ಲ. ನಾನು ಕೆಡುಕನೆಂದು ಅವರು ನಿಜವಾಗಿ ಭಾವಿಸಿರುವರು. ಅಂದ ಬಳಿಕ ಅವರ ಮೇಲೆ ನಾನು ಹೇಗೆ ಸಿಟ್ಟಾಗಲಿ?’

ಗಾಂಧೀಜಿಯವರು ಕೊನೆಗೆ ಹಡಗದಿಂದ ಇಳಿದರು. ಒಬ್ಬ ಬಿಳಿಯ ಮಿತ್ರನು ಇವರ ರಕ್ಷಣಕ್ಕಾಗಿ ಇವರೊಡನೆ ಸಾಗಿದನು. ಕಾಲುನಡಿಗೆಯಿಂದಲೆ ಮನೆಗೆ ಹೋಗತಕ್ಕದ್ದೆಂದು ಇವರು ನಿಶ್ಚಯಿಸಿದರು. ಯಾವ ಬಗೆಯ ಭಯವೂ ತಮಗೆ ಸೋಂಕಿಲ್ಲ ಎಂಬದು ಹೀಗೆ ಮಾಡುವುದರಿಂದ ಸಿದ್ಧವಾಗುವುದು, ಎಂದು ಅವರ ಅಭಿ

ಪ್ರಾಯ. ಸರಿ, ಇವರನ್ನು ನೋಡಿದ್ದೊಂದೇ ತಡ. ಬಿಳಿಯರ ಸಿಟ್ಟು ತಲೆಗೇರಲಾರಂಭಿಸಿತು. ಜನಸಂದಣಿ ಹೆಚ್ಚಾಗಲಾರಂಭಿಸಿತು. ಮುಂದೆ ಸಾಗುವದು ಸಹ ಕಠಿಣವಾಯಿತು. ಜನಜಂಗುಳಿಯು ಇವರ ಬಿಳಿ ಮಿತ್ರನನ್ನು ಹಿಡಿದು ಇವರಿಂದ ದೂರ ಎಳೆದು ಒಂದು ಅಂಚಿಗೆ ಒಯ್ಯಿತು. ಇವರ ಮೇಲೆ ಕಲ್ಲು, ಇಟ್ಟಂಗಿಯ ತುಣುಕು, ಕೊಳೆತ ತತ್ತಿ ಇವುಗಳ ಸುರಿಮಳೆ ನಡೆಯಿತು. ಜನರು ಇವರ ಮುಂಡಾಸವನ್ನು ತಲೆಯಿಂದ ಹಾರಿಸಿ ದೂರ ಚಲ್ಲಿಬಿಟ್ಟರು. ಗುದ್ದು ಲತ್ತೆಗಳ ಪ್ರಹಾರ ನಡೆಯಿತು, ಗಾಂಧೀಜಿಯವರಿಗೆ ಎಚ್ಚರ ತಪ್ಪಿತು. ಆದರೂ ಒದಿಕೆಗಳು ನಿಲ್ಲಲಿಲ್ಲ. ಇಷ್ಟೆಲ್ಲ ನಡೆದರೂ ಇವರನ್ನು ಸಂರಕ್ಷಿಸುವುದು ಪರಮಾತ್ಮನ ಮನಸಿನಲ್ಲಿತ್ತು. ಹತ್ತರ ನಡೆದ ಈ ದುರ್ಘಟನೆಯನ್ನು ಪೋಲೀಸ ಸುಪರಿಂಟೆಂಡೆಂಟನ ಹೆಂಡತಿಯು ನೋಡಿದಳು. ಆಕೆ ಈ ಗದ್ದಲದಲ್ಲಿ ಒಮ್ಮೆಲೆ ಸೇರಿದಳು ಹಾಗೂ ತನ್ನ ಛತ್ತರಿಗೆಯನ್ನು ತೆರೆದು ಗಾಂಧೀಜಿಯವರ ರಕ್ಷಣೆಗೆ ನಿಂತಳು. ಜನಜಂಗುಳಿ ಕಡಿಮೆಯಾಯಿತು. ಇಷ್ಟರಲ್ಲಿ ಪೋಲೀಸ ಸುಪರಿಂಟೆಂಡೆಂಟನೆ ಸ್ವತಃ ಬಂದನು. ಅವರನ್ನು ಸುಖರೂಪ ಕರೆದುಕೊಂಡು ಹೋದನು. ಗಾಂಧೀಜಿಯವರು ಬದುಕಿದರು.

ಉಕ್ಕಿದ ಉದ್ರೇಕವು ಇಳಿದ ಬಳಿಕ ಬಹುಶಃ ಜನರಿಗೆ ಪಶ್ಚಾತ್ತಾಪವಾಗಿರಲಿಕ್ಕೆ ಸಾಕು. ಈ ರೀತಿ ವರ್ತಿಸಿದ ಬಿಳಿಯ ಪುಂಡರನ್ನು ಶಿಕ್ಷಿಸಲಿಕ್ಕೆಬೇಕೆಂದು ಬ್ರಿಟಿಶ ಸರಕಾರದವರು ಆಫ್ರಿಕಾ ಸರಕಾರಕ್ಕೆ ಬರೆದರು. ಆದರೆ ಗಾಂಧೀಜಿಯವರು, ‘ ಯಾರೊಡನೆಯೂ ನನ್ನ ವೈರವಿಲ್ಲ. ನನ್ನನ್ನು ಈಗ ಹೊಡೆಯಲನುವಾದವರು ಸತ್ಯೋದಯವಾದಾಗ ತಮ್ಮಷ್ಟಕ್ಕೆ ತಾವೆ ಪಶ್ಚಾತ್ತಾಪವನ್ನು ವ್ಯಕ್ತಮಾಡುವರು. ನಾನು ಯಾರಿಗೂ ಶಿಕ್ಷೆ ಕೊಡಿಸಲಿಚ್ಛಿಸುವುದಿಲ್ಲ,’ ಎಂದರು. ಆ ಬಗೆಯಾಗಿ ಯಾರಾದರೂ ಗಾಂಧೀಜಿಯವರನ್ನು ಬೈಯ್ಯಬಹುದು ಇಲ್ಲವೆ ಒದೆಯಬಹುದು ಎಂಬ ಕಲ್ಪನೆ ಸಹ ನಮಗೆ ಈಗ ಅಸಹ್ಯವೆನಿಸುವದು.

ಈಗ ಒಂದೂವರೆ ವರುಷದ ಮಾತು. ಗಾಂಧೀಜಿಯವರು ದಿಲ್ಲಿಯಲ್ಲಿ ಲಕ್ಷ್ಮೀನಾರಾಯಣರ ಗುಡಿಯ ಉದ್ಘಾಟನ ಸಮಾರಂಭ ವನ್ನು ಮಾಡುವ ಪ್ರಸಂಗವದು. ಸುಮಾರು ಒಂದು ಲಕ್ಷ ಜನರು ನೆರೆದಿದ್ದರು. ಇರುವೆ ಹರಿದಾಡಲು ಸಹ ಅವಕಾಶವಿರಲಿಲ್ಲ. ಸಮಾರಂಭಕ್ಕಾಗಿ ಆಯಾಸ ಪ್ರಯಾಸದಿಂದ ಗಾಂಧೀಜಿಯವರನ್ನು ಒಳತನಕ ಒಯ್ದೆವು. ಮಂದಿರದ ಹೊರಗೆ ನೋಡಿದಲ್ಲೆಲ್ಲ ಬರಿ ತಲೆಗಳೆ ಕಾಣುತ್ತಿದ್ದವು. ಅನೇಕರು ಗಿಡಗಳನ್ನೇರಿ ನಿಂತದ್ದರಿಂದ ಆ ಗಿಡಗಳ ಟೊಂಗೆಗಳಿಗೆ ಜನ ಹತ್ತಿಕೊಂಡಂತೆ ತೋರಿತು. ಆ ಜನ ಜಂಗುಳಿ ಸ್ವಾಭಾವಿಕವಾಗಿಯೆ ಗಾಂಧೀ ದರ್ಶನಕ್ಕಾಗಿ ಹಾತೊರೆಯು ತ್ತಿತ್ತು. ಅವರು ಗುಡಿಯ ಮಾಳಿಗೆಯ ಮೇಲೆ ನಿಂತು ಜನರಿಗೆ ದರ್ಶನವಿತ್ತರು. ಒಂದೇ ಕ್ಷಣ ಮೊದಲು ಎತ್ತೆತ್ತಲೂ ಕೋಲಾಹಲ ನಡೆದಿತ್ತು. ಗಾಂಧೀಜಿಯವರು ಕೈಜೋಡಿಸಿಕೊಂಡು ಮೌನದಿಂದ ಮಾಳಿಗೆಯ ಮೇಲೆ ಬಂದು ನಿಲ್ಲುವದೊಂದೇ ತಡ, ಆ ಪ್ರಚಂಡ ಅಸ್ತವ್ಯಸ್ತ ಗೊಂದಲವೆಲ್ಲ ಅಡಗಿಹೋಗಿ, ಮಹಾತ್ಮಾ ಗಾಂಧೀ ಕೀ-ಜಯ, ಎಂಬ ಒಂದೇ ಒಂದು ಸ್ವರ ಸಹಸ್ರಾರು ಕಂಠಗಳಿಂದ ಹೊರ ಹೊಮ್ಮಿ ಗಗನವನ್ನು ಭೇದಿಸಿತು.

ವಿಚಾರಪೂರ್ವಕವಾಗಿ ಈ ವಿಲಕ್ಷಣ ದೃಶ್ಯವನ್ನು ನೋಡುವವನು ಗದ್ಗದಿತನಾಗದೆ ಇರನು. ನನ್ನ ಗಂಟಲವು ಬಿಗಿಯಿತು. ನಾನು ವಿಚಾರಪ್ರವಾಹದಲ್ಲಿ ಹರಿಬಿದ್ದೆನು. ಇವನೆಂತಹ ಮನುಷ್ಯ, ಎಂಬ ವಿಚಾರವು ನನ್ನನ್ನಾವರಿಸಿತು. ಅರ್ಧ ನಗ್ನವಾದ ಕಿರಿದೇಹದ ಇವನು ಈ ಲಕ್ಷಾಂತರ ಜನರನ್ನು ಅದೆಂತು ಮೋಹಿಸಿರುವನು! ಅದೆಂತು ಇವರಿಗೆಲ್ಲ ಹುಚ್ಚು ಹಿಡಿಸಿರುವನು! ಆ ಸಾಗರಸಮ ಸಮು ದಾಯದಲ್ಲಿ ಪರಿಚಯದವರು ಗಾಂಧೀಜಿಯವರೊಡನೆ ಮಾತುಕತೆ ಮಾಡಿದವರು ಹತ್ತು ಜನ ಸಹ ಇರಲಿಕ್ಕಿಲ್ಲ. ಆದರೆ ಕೇವಲ ದರ್ಶನಮಾತ್ರದಿಂದ ಅವರೆಲ್ಲ ಹುಚ್ಚರಾದಂತೆ ಕಂಡರು. ಗಿಡಗಳ ನ್ನೇರಿದವರಿಗೆ ತಮ್ಮ ಸುರಕ್ಷಿತತೆಯ ಎಚ್ಚರ ಕೂಡ ಉಳಿದಂತೆ ಕಾಣ ಲಿಲ್ಲ. ಅವರು ಮಹಾತ್ಮಾ ಗಾಂಧೀ ಕೀ- ಜಯ, ಎಂಬ ಮಹಾ ಧ್ವನಿಯಲ್ಲಿ ಮಗ್ನರಾದರು.

ಒಂದು ಗಿಡದ ಟೊಂಗೆ ಮುರಿಯಿತು. ಅದರ ಮೇಲೆ ಹತ್ತಿಪ್ಪತ್ತು ಜನರ ಭಾರವಿತ್ತು. ಆ ಟೊಂಗೆ ಕಡಕಡಲ್ ಎಂದು ಕೆಳಗೆ ಒರಗಲಾರಂಭಿಸಿತು. ಆದರೂ ಆ ಟೊಂಗೆಯ ಮೇಲಿನ ಜನರು ಗಾಂಧೀಜಿಯವರ ಜಯನಿನಾದದಿಂದ ಮತ್ತರಾಗಿದ್ದರು. ತಮ್ಮ ಗತಿಯೇನು ಎಂಬ ಎಚ್ಚರ ಅವರಿಗಿದ್ದಂತೆ ತೋರಲಿಲ್ಲ. ಟೊಂಗೆ ನೆಲಕ್ಕೆ ಬಿದ್ದಿತು. ಸುದೈವದಿಂದ ಯಾರಿಗೂ ಧಕ್ಕೆ ತಗಲಲಿಲ್ಲ. ಗಾಂಧೀಜಿ ಕೀ ಜಯ ಎಂದು ಘೋಷಿಸುತ್ತಲಿರುವ ಗಾಂಧೀ ಹುಚ್ಚು ಹಿಡಿದವರದಿದೊಂದು ದೃಶ್ಯ. ಗಾಂಧೀಜಿಯವರ ಒಂದೊಂದು ರೋಮ ರೋಮಕ್ಕಾಗಿ ತಮ್ಮ ಪ್ರಾಣಾರ್ಪಣ ಮಾಡಲು ಸಿದ್ಧವಿದ್ದ ಜನ ಜಂಗುಳಿಯ ದೃಶ್ಯವಿದೊತ್ತಟ್ಟಗೆ! ಗಾಂಧೀಯವರನ್ನು ಹೊಡೆಯಿರಿ, ಕೊಲ್ಲಿರಿ, ಎಂದು ಆ ಹುಚ್ಚೆದ್ದು ಚೀರುವ ಆಫ್ರಿಕೆಯಲ್ಲಿಯ ಬಿಳಿಯರ ಜನಜಂಗುಳಿಯ ದೃಶ್ಯ ಒತ್ತಟ್ಟಗೆ! ಆ ಚಿತ್ರ ನೋಡಿರಿ, ಈ ಚಿತ್ರ ನೋಡಿರಿ !

ಗಾಂಧೀಜಿಯವರು ಎರಡನೆ ದುಂಡುಮೇಜಿನ ಪರಿಷತ್ತಿಗೆ ಹೋದಾಗ ಅಲ್ಲಿ ಸಮಸಮೀಪ ಮೂರುವರೆ ತಿಂಗಳಿದ್ದರು. ಹೋದ ಲ್ಲೆಲ್ಲ ಜನಜಂಗುಳಿಯು ಮೋಹಿತವಾಗುತಿತ್ತು, ಪ್ರೇಮದಿಂದ ಮುಗ್ಧವಾಗುತಿತ್ತು. ಅವರು ಈಹೊತ್ತು ಆಫ್ರಿಕಾಕ್ಕೆ ಹೋದರೂ ಅಲ್ಲಿಯ ಬಿಳಿಯ ಜನಸಾಮಾನ್ಯರು ಅವರ ಮೇಲೆ ಮುಗ್ಧರಾಗುವರು. ಹೀಗೆ ಅವರೆಲ್ಲರೂ ಗಾಂಧೀಜಿಯವರನ್ನು ಪ್ರೀತಿಸುವ ರಹಸ್ಯವೇನೆಂಬು ದನ್ನು ನೋಡಿದರೆ, ಅವರು ಹೊಡೆತ ತಿಂದರೂ ಲತ್ತೆ ತಿಂದರೂ ಕ್ಷಮಾ ಧರ್ಮದಿಂದ ಕದಲಲಿಲ್ಲ. ಆಫ್ರಿಕೆಯಲ್ಲಿಯ ಆ ಹೊಡೆಯಲೆದ್ದ ಬಿಳಿ ಯರ ದೃಶ್ಯವನ್ನು ನಾವು ಈಹೊತ್ತು ನೆನಿಸಿದರೆ ನಮಗೆ ಸಿಟ್ಟೇರ ಬಹುದು. ಆದರೆ ಅದೇ ದೃಶ್ಯ ಹಾಗೂ ಅದೇ ತರಹದ ಅನೇಕ ಘಟನೆಗಳು ಈ ಹೊತ್ತಿನ ಗಾಂಧೀಜಿಯವರನ್ನು ಹೆತ್ತವು, ನಿರ್ಮಿಸಿದವು ಎಂದು ಹೇಳಬಹುದು. ಏಸುವು ಕ್ರಾಸಿನಮೇಲೆ ಬಲಿ ಹೋಗದಿದ್ದರೆ ಅವನ ಮಹಾತ್ಮ್ಯವು ಪ್ರಕಟವಾಗುತಿರಲಿಲ್ಲ. ಗಾಂಧೀಜಿಯವರು ಶಾಂತಿಸಮಾಧಾನಗಳಿಂದ ಲತ್ತೆತಿನ್ನದೆ ಹೋಗಿದ್ದರೆ ಅವರ ಕ್ಷಮಾ ಗುಣವು ಒರೆಗೆ ಹತ್ತುತಿರಲಿಲ್ಲ, ಅವರು ಮಹಾತ್ಮರಾಗುತಿರಲಿಲ್ಲ.

ಗಾಂಧೀಜಿಯವರು ಯಥಾರ್ಥವಾಗಿ ಮಹಾತ್ಮರು, ಯಾಕಂದರೆ ತಮ್ಮನ್ನು ಹೊಡೆದವರನ್ನು ಸಹ ಅವರು ಪ್ರೀತಿಸಿದರು. 'ನನ್ನೊಡನೆ ಸಂಬಂಧ ಬಂದವರೆಲ್ಲ ಈ ನನ್ನ ವೃತ್ತಿಯ ಮೂಲಕ ನನ್ನ ಮಿತ್ರರಾದರು. ಸರಕಾರೀ ಖಾತೆಗಳೊಡನೆ (ಡಿಪಾರ್ಟಮೆಂಟ) ಮೇಲಿಂದ ಮೇಲೆ ನಾನು ಜಗಳಾಡಬೇಕಾಗುತ್ತಿತ್ತು. ಆಗ ಒಳ್ಳೆ ಬಿರುಸಾದ ಭಾಷೆಯನ್ನು ಉಪಯೋಗಿಸಬೇಕಾಗುತ್ತಿತ್ತು. ಆದರೂ ಆಯಾ ಅಧಿಕಾರಿಗಳು ಯಾವಾಗಲೂ ನನ್ನೊಡನೆ ಪ್ರಸನ್ನಚಿತ್ತರಾಗಿರುತ್ತಿದ್ದರು. ಈ ವೃತ್ತಿಯು ನನ್ನ ಸ್ವಭಾವವೆ ಆಗಿಹೋಗಿದೆ, ಎಂಬ ಮಾತು ನನಗೆ ಆಗ ಗೊತ್ತೂ ಇರಲಿಲ್ಲ. ಮನುಷ್ಯ ಹಾಗೂ ಅವನ ಕರ್ಮ ಇವೆರಡೂ ಭಿನ್ನಭಿನ್ನ ವಸ್ತುಗಳು, ಎಂಬ ಮಾತನ್ನು ತಿಳಿದುಕೊಂಡು ನಾವು ವರ್ತಿಸುವದು ಸತ್ಯಾಗ್ರಹದ ಅಂಗವಿರುವದು ಹಾಗೂ ಇದು ಅಹಿಂಸಾಧರ್ಮದ ಭಾಗವಿರುವದು ಎಂಬುದು ನನಗೆ ಮುಂದೆ ತಿಳಿಯಿತು. ಕುಕರ್ಮವನ್ನು ತೆಗಳುವದು ಸತ್ಕರ್ಮವನ್ನು ಹೊಗಳುವದು ಯೋಗ್ಯವು. ಅದೇ ಕಾಲಕ್ಕೆ ಕುಕರ್ಮಿಯೊಡನೆ ದಯೆಯಿಂದ ಸತ್ಕರ್ಮಿಯೊಡನೆ ಆದರಭಾವದಿಂದ ನಡಕೊಳ್ಳುವದು ಅವಶ್ಯವು. 'ಪಾಪವನ್ನು ನಾವು ದ್ವೇಷಿಸಬೇಕು, ಪಾಪಿಯನ್ನಲ್ಲ' ಈ ಮಂತ್ರವು ಬಹುಜನರಿಗೆ ತಿಳಿಯುವದು. ಆದರೆ ವ್ಯವಹಾರದಲ್ಲಿ ಇದರ ಆಚರಣೆ ಬಹಳ ಕಡಿಮೆ. ಇದೇ ಕಾರಣದಿಂದ ಪ್ರಪಂಚದಲ್ಲಿ ವೈರದ ವಿಷವೃಕ್ಷವು ಮನದಂದು ಹಬ್ಬುವದು.'

'ಅಹಿಂಸೆಯು ಸತ್ಯದ ತಳಹದಿ. ಅಹಿಂಸೆಯ ಆಧಾರವನ್ನು ಬಿಟ್ಟರೆ ಸತ್ಯಧರ್ಮವನ್ನು ಪರಿಪಾಲಿಸುವದು ಅಸಂಭವ, ಎಂಬ ನನ್ನ ಶ್ರದ್ಧೆ ದಿನದಿನವೂ ದೃಢವಾಗುತಲಿದೆ. ದುಷ್ಟ ಪದ್ಧತಿಗಳನ್ನೆಲ್ಲ ನಾವು ತೆಗೆದುಹಾಕಬೇಕು, ಅವುಗಳೊಡನೆ ಹೋರಾಡಬೇಕು, ಇದು ನಿಜ. ಆದರೆ ಆ ಪದ್ಧತಿಗಳನ್ನು ಪ್ರಚಾರಕ್ಕೆ ತಂದವರನೆಲ್ಲ ದ್ವೇಷಿಸುವುದೆಂದರೆ ಆತ್ಮದ್ವೇಷವನ್ನೆ ಮಾಡಿದಂತೆ, ನಾವೆಲ್ಲರೂ ಪರಮಾತ್ಮನ ಮಕ್ಕಳು. ನಮ್ಮೆಲ್ಲರಲ್ಲಿಯೂ ಅದೇ ಪರಮಾತ್ಮನು ವ್ಯಾಪ್ತನು, ಧರ್ಮಾತ್ಮನಲ್ಲಿದ್ದವನೆ ಪಾಪಾತ್ಮನಲ್ಲಿಯೂ ಇರುವನು. ಆದುದರಿಂದ

ಒಂದು ಜೀವಕ್ಕೆ ಸಹ ನೋವನ್ನುಂಟುಮಾಡುವುದೆಂದರೆ ಪರಮಾತ್ಮನ ಅಪಮಾನ ಮಾಡಿದಂತೆ, ಇಡೀ ಸೃಷ್ಟಿಗೆ ಪೀಡೆ ಕೊಟ್ಟಂತೆ.'

ಶ್ರದ್ಧೆಯಿಂದ ಅಹಿಂಸಾವ್ರತವನ್ನು ಪಾಲಿಸಿದವನ ಉಕ್ತಿಯಿದು.

**ಕಾಮ ಏಷ ಕ್ರೋಧ ಏಷ ರಜೋಗುಣ ಸಮುದ್ಭವಃ ।**
**ಮಹಾಶನೋ ಮಹಾಪಾಪ್ಮಾವಿದ್ಧ್ಯೇನಮಿಹ ವೈರಿಣಮ್ ॥**

ರಜೋಗುಣದಿಂದ ಉತ್ಪನ್ನವಾದ, ಎಂದೂ ತೃಪ್ತವಾಗದ, ಮಹಾ ಪಾಪಯುಕ್ತವಾದ ಈ ಕಾಮವು ಮತ್ತು ಕ್ರೋಧವು ಈ ಲೋಕದಲ್ಲಿ ನಮ್ಮ ಶತ್ರುಗಳೆಂದು ತಿಳಿ.

ಹೀಗೆ ಗೀತೆಯ ಉಪದೇಶವಿರುವದು. ಇಲ್ಲಿ ಕೆಡುಕಿನ ದ್ವೇಷವಿದೆ ಹೊರತು ಕೆಡುಕು ಜನರ ದ್ವೇಷವಿಲ್ಲ. ಕೆಡುಕು ಜನರೊಡನೆ ಹೇಗೆ ವರ್ತಿಸಬೇಕೆಂಬ ಬಗ್ಗೆ ಬೇರೆ ಆದೇಶವಿದೆ:—

'ಮೈತ್ರೀ ಕರುಣಾಮುದಿತೋಪೇಕ್ಷಾನಾಮ್, ಸುಖ ದುಃಖ ಪುಣ್ಯಾಪುಣ್ಯ ವಿಷಯಾನಾಮ್ ಭಾವನಾ ತಚ್ಚಿತ್ತ ಪ್ರಸಾದನಮ್'—

**ಯೋಗ ಸೂತ್ರ**

ಕೆಡುಕು ಜನರೊಡನೆ ಅಥವಾ ಕುಕರ್ಮಿಗಳೊಡನೆ ಮಿತ್ರಭಾವ, ಕರುಣೆ, ಸಂತೋಷ, ಉಪೇಕ್ಷೆ, ಈ ಭಾವನೆಗಳಿಂದ ಯುಕ್ತರಾಗಿ ನಡೆಯಬೇಕು- ಸುಖ ದುಃಖ, ಪುಣ್ಯಾಪುಣ್ಯ ವಿಷಯಗಳನ್ನೂ ಕುರಿತು ಭಾವನೆಗಳು ಜಾಗ್ರತವಾಗಿ ಅವರ ಚಿತ್ತವು ಪ್ರಸನ್ನವಾಗುವಂತೆ ನಡೆಕೊಳ್ಳಬೇಕು, ಇದೇ ಉಪದೇಶವಿರುವದು.

# ೬ ಹಾವನ್ನೂ ಹೊಡೆಯಲಾರೆ

ಆಫ್ರಿಕೆಯಲ್ಲಿ ಗಾಂಧೀಜಿಯವರು ಸ್ಥಾಪಿಸಿದ ಆಶ್ರಮದ ಹೆಸರು ಟಾಲಸ್ಟಾಯ ಫಾರ್ಮ ಎಂದು ಇತ್ತು. ಈ ದೇಶಕ್ಕೆ ಅವರು ಮರಳಿ ಬಂದಬಳಿಕ ಸಾಬರಮತಿಯಲ್ಲಿ ಸತ್ಯಾಗ್ರಹ ಆಶ್ರಮವೆಂಬುದನ್ನು ಸ್ಥಾಪಿಸಿ ಅಲ್ಲಿ ಇರುತ್ತಿದ್ದರು. ಈಗ ಸೇವಾಗ್ರಾಮದಲ್ಲಿ ಆಶ್ರಮ ಕಟ್ಟಿ ಕೊಂಡು ಇರುವರು. ಈ ಎಲ್ಲ ಆಶ್ರಮಗಳಲ್ಲಿಯೂ ಹಾವು ಚೇಳು ಬಹಳ. ಇದೊಂದು ವಿಲಕ್ಷಣ ಯೋಗಾಯೋಗ. ಸ್ವತಃ ಗಾಂಧೀಜಿ ಯವರು ಹಾವನ್ನು ಸಹ ಹೊಡೆಯುವುದಿಲ್ಲ. ಎರಡನೇಯವರು ಹೊಡೆಯಬಾರದೆಂದು ಅವರು ನಿರ್ಬಂಧಿಸಿಲ್ಲ. ಆದರೆ ಅವರು ಹೊಡೆ ಯದೆ ಇರುವುದರಿಂದ ಇತರ ಆಶ್ರಮವಾಸಿಗಳೂ ಆ ಕೆಲಸ ಮಾಡಲು ಹಿಂಜರಿಯುವರು.

ಸೇವಾಗ್ರಾಮದಲ್ಲಿ ಒಮ್ಮೆ ರಾತ್ರಿ ಒಬ್ಬ ಹೆಣ್ಣುಮಗಳ ಕಾಲು ಚೇಳಿನ ಮೇಲೆ ಬಿದ್ದಿತು. ಅದು ಆಕೆಯನ್ನು ಒಳ್ಳೆ ರೊಚ್ಚಿನಿಂದ ಕಚ್ಚಿತು. ಇಡೀ ರಾತ್ರಿ ಆಕೆ ಆ ನೋವಿನಿಂದ ದುಃಖಿಸುತ್ತಿದ್ದಳು. ಹಿಂದುಸ್ಥಾನದಲ್ಲಿಯಾಗಲಿ ಆಫ್ರಿಕೆಯಲ್ಲಿಯಾಗಲಿ, ಇದುವರೆಗೆ ಆಶ್ರಮದಲ್ಲಿ ಮಾತ್ರ ಹಾವು ಯಾರಿಗೂ ಕಚ್ಚಿಲ್ಲ. ಹಾವು ಬಂದಾಗ ಬಹುಶಃ ಕಣ್ಣೆದುರು ಬರುವವು. ನೋಡಿದ ಆಶ್ರಮವಾಸಿಗಳು ಅವು ಗಳನ್ನು ಹಿಡಿದು ದೂರ ಬಿಟ್ಟುಬರುವರು. ಚೇಳುಗಳು ಎಷ್ಟೋ ಸಾರೆ ಆಶ್ರಮವಾಸಿಗಳನ್ನು ಕಚ್ಚಿರುವವು. ಒಂದು ದಿನ ಮಹಾದೇವಭಾಯಿ ಯವರು ಗಾಂಧೀಜಿಯವರಿಗೆ ಅಂದದ್ದು, ' ಬಾಪೂ, ನೀವು ಹಾವನ್ನು ಹೊಡೆಯಗೊಡುವುದಿಲ್ಲ. ಈ ಬಗ್ಗೆ ನಿಮಗೆ ಒಳ್ಳೆ ಪಶ್ಚಾತ್ತಾಪವಾಗ

ಬಹುದು. ಏನೋ ಈ ವರೆಗೆ ಕಣ್ಣೆದುರು ಬಂದಿವೆ. ಸರಿ, ಈ ವರೆಗೆ ಅವು ಯಾರನ್ನೂ ಕಚ್ಚಿಲ್ಲ. ಆದರೆ ದುರ್ಘಟನೆ ಸಂಭವಿಸಿ ಯಾರೊಬ್ಬರು ಸತ್ತರೆ ನಿಮ್ಮ ಮನಸಿಗೆ ಬಹಳ ಅನುತಾಪವುಂಟಾಗುವುದು, ನಿಮ್ಮ ಶಾಂತಿ ಕೆಡುವುದು.' ಇದಕ್ಕೆ ಪ್ರತ್ಯುತ್ತರವೆಂದು ಗಾಂಧೀಜಿಯವರು, 'ಮಹಾದೇವ, ಹೊಡೆಯಬೇಡಿರೆಂದು ನಾನು ಯಾರನ್ನೂ ಈ ವರೆಗೆ ತಡೆದಿಲ್ಲವಲ್ಲ? ನಾನು ಹೊಡೆಯುವುದಿಲ್ಲ ಎಂಬುದು ನಿಜ. ಆತ್ಮರಕ್ಷಣೆಗಾಗಿ ಕೂಡ ಹಾವನ್ನು ಕೊಲ್ಲುವದು ನನಗೆ ಅಷ್ಟೊಂದು ರುಚಿಸುವುದಿಲ್ಲ. ಆದರೆ ಅನ್ಯರನ್ನು ಗಂಡಾಂತರಕ್ಕೀಡು ಮಾಡುವದು ನನ್ನ ಮನಸ್ಸಿನಲ್ಲಿಲ್ಲ. ಆದುದರಿಂದ ಇತರರು ಹೊಡೆಯುತಿದ್ದರೆ ಹೊಡೆಯಲಿ,' ಎಂದರು. ಆದರೆ ಹೊಡೆಯುವವರಾರು? ಗಾಂಧೀಜಿಯವರು ಹೊಡೆಯುವುದಿಲ್ಲ, ಅಂಪಬಳಿಕ ಆಶ್ರಮದಲ್ಲಿ ಇನ್ನಾರು ಹೊಡೆಯುವವರು?

'ದೇವರ ಕೃಪೆಯಿಂದ ಇದುವರೆಗೆ ನಮ್ಮ ಯಾವ ಆಶ್ರಮದಲ್ಲಿಯೂ ಯಾರಿಗೂ ಹಾವು ಕಚ್ಚಿಲ್ಲ. ಎಲ್ಲ ಕಡೆಯಲ್ಲಿಯೂ ಸಾಕಷ್ಟು ಹಾವುಗಳ ಸುಳಿದಾಟವಿದ್ದಿತು. ಆದರೆ ಒಂದೂ ದುರ್ಘಟನೆ ಆಗಿಲ್ಲ. ಇದರಲ್ಲಿ ನಾನು ದೇವರ ಕೃಪೆಯನ್ನೇ ಕಾಣುವೆ. 'ಈ ನಿಮ್ಮ ನೀರಸವಾದ ಕೆಲಸದಲ್ಲಿ ತಲೆ ಹಾಕಿಕೊಂಡು ಕೂಡಲು ನಿಮ್ಮ ಆಶ್ರಮವಾಸಿಗಳ ಬಗ್ಗೆ ದೇವರದೇನು ಅಷ್ಟೊಂದು ವಿಶೇಷ ಅಕ್ಕರವೆ,' ಎಂದು ಯಾರೂ ಪ್ರಶ್ನೆಮಾಡಲು ಕಾರಣವಿಲ್ಲ. ಇನ್ನು ಹೀಗೆ ಯಾರಾದರೂ ಅನ್ನುತಿದ್ದರೆ ಅನ್ನಲಿ. ಆದರೆ ನನ್ನ ಅನುಭವವನ್ನು ವರ್ಣಿಸಬೇಕಾದರೆ 'ಇದರಲ್ಲಿ ದೇವರ ಕೃಪೆ ಕಾಣುತಿದೆ' ಎಂಬ ಶಬ್ದಗಳ ಹೊರತು ನನಗೆ ಬೇರೆ ಸಾಧನವಿಲ್ಲ. ದೇವರ ಲೀಲೆಯನ್ನು ಮಾನವೀ ಭಾಷೆ ಅದೆಂತು ಬಣ್ಣಿಸಬಲ್ಲುದು? ದೇವರ ಮಾಯೆಯು ಶಬ್ದಾತೀತವು ಹಾಗೂ ಅಗಮ್ಯವು. ಅದನ್ನು ತಿಳಿಸಲು ಮನುಷ್ಯನು ಸಾಹಸಪಟ್ಟರೆ ಕೊನೆಗೆ ತನ್ನ ಅಸ್ಪಷ್ಟ ಹಾಗೂ ಕುಂಟ ಭಾಷೆಗೇ ಅವನು ಮೊರೆಹೋಗಬೇಕಲ್ಲವೆ? 'ಇದುವರೆಗೆ ಹಾವು ಕಡಿದು ನಿಮ್ಮ ಆಶ್ರಮದಲ್ಲಿ ಯಾರೂ ಸತ್ತಿಲ್ಲ ಎಂಬದು ಕೇವಲ ಒಂದು ಆಕಸ್ಮಿಕ ಸಂಗತಿ.

ಇದಕ್ಕೆ ದೇವರ ಕೃಪೆ ಎಂದೆನ್ನುವುದು ಭ್ರಮವು,' ಎಂದು ಕೆಲವರು ನನಗೆ ಹೇಳಬಹುದು. ಯಾರೇ ಏನೇ ಅಂದರೂ ನಾನು ಈ ಭ್ರಮವನ್ನ ಅವಚಿಕೊಂಡು ಇದುವರೆಗೆ ಸುಖದಿಂದ ಬಾಳಿರುವೆನು.'

ಈ ರೀತಿ ಗಾಂಧೀಜಿಯವರ ಅಹಿಂಸೆಯ ಅಗ್ನಿ ಪರೀಕ್ಷೆಯಾಗಿ ಅದು ಒರೆಗೆ ಹತ್ತಿದೆ.

## ೭. ಸತ್ಯನಿಷ್ಠೆ

ಗಾಂಧೀಜಿಯವರು ಅಹಿಂಸೆಯನ್ನು ಕುರಿತು ಮಾತಾಡುವಾಗೆಲ್ಲ 'ಅಹಿಂಸೆ ಸತ್ಯದ ತಳಹದಿ ಇದೆ' ಎಂದು ಹೇಳುವರು ಹಾಗೂ ಒಳ್ಳೆ ಜೋರಿನಿಂದ ಸತ್ಯ ತತ್ವದ ಪ್ರತಿಪಾದನೆ ಮಾಡುವರು. ನಮ್ಮ ಶಾಸ್ತ್ರಗಳಲ್ಲಿ ಆಪದ್ಧರ್ಮಗಳೆಂದು, ಹಲವು ಅಪವಾದಗಳು ವಿಹಿತವೆಂದು, ಮನ್ನಿಸಲಾಗಿವೆ. ಒಮ್ಮೆ ಪ್ರಾಚೀನ ಕಾಲದಲ್ಲಿ ಹನ್ನೆರಡು ವರುಷದ ಬರ ಬಿದ್ದಿತು. ಆಗ ವಿಶ್ವಾಮಿತ್ರನು ಹಸಿದು ಕಕ್ಕಾಂತನಾಗಿ ಆಹಾರವನ್ನು ಹುಡುಕಲು ಹೊರಟನು. ಅವನಿಗೆ ಎಲ್ಲೆಲ್ಲಿಯೂ ಏನೂ ದೊರೆಯಲಿಲ್ಲ. ಆಗ ರಾತ್ರಿ ಚಾಂಡಾಲರಿದ್ದಲ್ಲಿ ಹೋದನು ಹಾಗೂ ಅಲ್ಲಿ ಒಂದು ನಾಯಿಯ ಮಾಂಸವನ್ನು ಕದಿಯಬೇಕೆಂದು ನಿಶ್ಚಯಿಸಿದನು. ಆದರೆ ಇವನು ಕಳವು ಮಾಡುವಾಗ ಚಾಂಡಾಲನ ಕಣ್ಣು ತೆರೆದವು ಹಾಗೂ ಅವನು ಋಷಿಗೆ 'ತಾವು ಈ ಅಧರ್ಮವನ್ನೇಕೆ

ಆಚರಿಸುತಿರುವಿರಿ?' ಎಂದು ಕೇಳಿದನು. ಆಪತ್ಕಾಲದಲ್ಲಿ ಬ್ರಾಹ್ಮಣನು ಕಳವು ಸಹ ಮಾಡಿದರೆ ಅದು ವಿಹಿತವು ಎಂಬುದೆ ವಿಶ್ವಾಮಿತ್ರನ ಹೇಳಿಕೆ.

**ಆಪತ್ಸು ವಿಹಿತಂ ಸ್ತೈನ್ಯಂ ವಿಶೇಷಂ ಚ ಮಹೀಯಸಃ ।**
**ವಿಪ್ರೇಣ ಪ್ರಾಣರಕ್ಷಾರ್ಥಂ ಕರ್ತ್ತವ್ಯಮಿತಿ ನಿಶ್ಚಯಃ ॥**

ಆಪತ್ಕಾಲದಲ್ಲಿ ಕಳವು ವಿಹಿತವು. ದೊಡ್ಡವರು ಹಾಗೆ ಮಾಡಿದರೂ ವಿಶೇಷ ವಿಹಿತವು. ಪ್ರಾಣರಕ್ಷಣಕ್ಕಾಗಿ ಬ್ರಾಹ್ಮಣನು ಕಳವು ಮಾಡುವದು ಅವನ ಕರ್ತವ್ಯವೆಂಬುದು ನಿಶ್ಚಯ.

ಆಗ ಚಾಂಡಾಲನು ಅವನಿಗೆ ಹೊಟ್ಟೆತುಂಬ ಧರ್ಮೋಪದೇಶವನ್ನು ಮಾಡಿದನು! ನೀವು ಪಾಪವನ್ನು ಮಾಡುತ್ತಿರುವಿರಿ, ಎಂದು ಹೇಳಿದನು. ಕೊನೆಗೆ ಉಪದೇಶ ಕೇಳಿ ಕೇಳಿ ವಿಶ್ವಾಮಿತ್ರನು ಸಂತಪ್ತನಾದನು. 'ಕಪ್ಪೆಗಳ ಕೂಗಾಟ ಕೇಳಿ ಆವು ಸರೋವರದ ನೀರು ಕುಡಿಯುವದನ್ನು ಬಿಡುವುದಿಲ್ಲ, ನೀನು ಧರ್ಮದ ಉಪದೇಶ ಕೊಡಲು ಅಧಿಕೃತನಲ್ಲ. ಆದುದರಿಂದ ವ್ಯರ್ಥ ಏಕೆ ಬೊಗಳುತ್ತೀ?

**ಪಿಬಂತ್ಯೇವೋದಕಂ ಗಾವೊ**
**ಮಂಡೂಕೇಷು ರುದತ್ಸ್ವಪಿ ।**
**ನ ತೇऽಧಿಕಾರೋ ಧರ್ಮೇऽಸ್ತಿ**
**ಮಾ ಭೂರಾತ್ಮ ಪ್ರಶಂಸಕಃ ॥**

ನನಗೇನು ಧರ್ಮವು ಗೊತ್ತಿಲ್ಲವೆ? ಬದುಕಿದರೆ ಧರ್ಮಸಾಧನವು ಆಗೇ ಆಗುವದು. ಈ ದೇಹವೆ ಉಳಿಯದಿದ್ದರೆ ಧರ್ಮಕ್ಕೆ ಎಡೆಯೆಲ್ಲಿ? ಆದುದರಿಂದ ಈ ಸಮಯದಲ್ಲಿ ಪ್ರಾಣರಕ್ಷಣೆಯೆ ಪರಮ ಧರ್ಮವು' ಎಂದು ವಿಶ್ವಾಮಿತ್ರನು ನುಡಿದನು.

ಗಾಂಧೀಜಿಯವರು ಈ ಬಗೆಯ ಯುಕ್ತಿವಾದವನ್ನು ಎಂದೂ ಆಶ್ರಯಿಸಲಿಲ್ಲ. ಇದು ಅವರಿಗೆ ಸರಿದೋರುವುದೂ ಇಲ್ಲ.

ಆತ್ಮನ ಆದೇಶದ ವಿರುದ್ಧ ಅವರು ಹಲವು ಕೆಲಸಗಳನ್ನು ಮಾಡಿದ್ದು ನಿಜ. ಉದಾ : ಹಾಲು ಕುಡಿಯದಿರುವ ವ್ರತವನ್ನು ಅವರು ಕೈಕೊಂಡಿದ್ದರು. ಆ ವ್ರತದ ಬುಡದಲ್ಲಿ ಹಲವು ವಿಚಾರಗಳಿದ್ದವು. ನಮ್ಮ ಶಾಸ್ತ್ರಗಳಲ್ಲಿ ಈ ಸಿದ್ಧಾಂತವಿರದಿದ್ದರೂ ಬ್ರಹ್ಮಚಾರಿಗಳಿಗೆ ಹಾಲು ಯೋಗ್ಯವಾದ ಆಹಾರವಲ್ಲ ಎಂಬುದೊಂದು ಅಭಿಪ್ರಾಯ ಅವರದಿತ್ತು. ಆದರೆ ವ್ರತವನ್ನು ಕೈಕೊಂಡಾಗ ಅವರೆದುರು ಕಲಕತ್ತೆಯ ಗವಳಿಗರು ಆಕಳ ಮೇಲೆ ಮಾಡುವ 'ಫೂಕಾ' ಎಂಬ ಅತ್ಯಾಚಾರವು (ರಕ್ತ ಬರುವವರೆಗೆ ಹಾಲು ಹಿಂಡುವ ಒಂದು ವಿಶಿಷ್ಟ ಕ್ರಮು) ಇತ್ತು. ವ್ರತವನ್ನು ಕೈಕೊಂಡರು. ವರ್ಷಾನುವರ್ಷ ನಡೆಯಿತು. ಕೊನೆಗೊಮ್ಮೆ ಒಂದು ರೋಗವು ಗಂಟುಬಿತ್ತು. ಹಾಲು ಕುಡಿಯಬೇಕೆಂದು ಎಲ್ಲರೂ ಹೇಳಿದರು. ಗಾಂಧೀಜಿಯವರು ನಿರಾಕರಿಸುತ್ತಲೆ ಇದ್ದರು. ಗೋಖಲೆಯವರು ಹೇಳಿದರು, ಡಾಕ್ಟರರು ಬಿನ್ನವಿಸಿದರು, ಯಾರದೂ ನಡೆಯಲಿಲ್ಲ. ಮತ್ತೊಂದು ಜಡ್ಡು ಆವರಿಸಿತು. ಅದು ಹೆಚ್ಚು ಮಾರಕವಿತ್ತು. ಆದರೆ ಹಾಲಿನ ಬಗ್ಗೆ ಗಾಂಧೀಜಿಯವರ ಹಟ ಇನ್ನೂ ಇತ್ತು. ಒಂದು ದಿನ ಕಸ್ತೂರಬಾ ಇವರು ಅಂದದ್ದು, 'ತಾವು ಪ್ರತಿಜ್ಞೆ ಮಾಡಿದಾಗ ಎಮ್ಮೆ ಆಕಳುಗಳ ಹಾಲು ಮಾತ್ರ ತಮ್ಮೆದುರು ಇತ್ತು. ಆಡಿನ ಹಾಲಿನ ಸಂದರ್ಭವಿರಲಿಲ್ಲ. ಆದುದರಿಂದ ಆಡಿನ ಹಾಲು ಏಕೆ ಸೇವಿಸಬಾರದು?' ಬಾರವರ ಮಾತು ಮನ್ನಿಸಿ ಆಡಿನ ಹಾಲು ಕುಡಿದರು. ಅಂದಿನಿಂದ ಆಡಿನ ಹಾಲು ಕುಡಿಯುತಿರುವರು. ತಾವು ಆಡಿನ ಹಾಲು ಸೇವಿಸಿದ್ದು ವ್ರತಭಂಗವಾಯಿತೊ ಇಲ್ಲವೊ ಎಂಬ ಬಗ್ಗೆ ಗಾಂಧೀಜಿಯವರ ಮನಸಿನಲ್ಲಿ ಇನ್ನೂ ಸಂಶಯವಿದೆ.

ಕೈಕೊಂಡ ವ್ರತ, ಮಾಡಿದ ಪ್ರತಿಜ್ಞೆ ಇವುಗಳ ಆದಷ್ಟು ವ್ಯಾಪಕ ಅರ್ಥವನ್ನು ಮಾಡಿ ಅದರಂತೆ ಅವುಗಳನ್ನು ಪಾಲಿಸುವುದು ಗಾಂಧೀಜಿಯವರ ರೂಢಿಯು. ತಾವು ಮಾಡುವ ಕೆಲಸವು ಅನೀತಿಯುಕ್ತವು ಎಂದು ಪ್ರತೀತವಾದೊಡನೆ ಎರಡನೆಯವರು ಹೇಳುವ ಹಾದೀ

ನೋಡದೆ ಅದನ್ನು ಕೂಡಲೆ ಬಿಟ್ಟುಬಿಡುವರು. ಅವರ ತಮ್ಮ ಮಾರ್ಗವು ಅನೀತಿಯುಕ್ತವಿದೆ ಎಂದು ಎನಿಸುವವರೆಗೆ ಅವರು ಸಣ್ಣ ಪುಟ್ಟ ಸಂಗತಿಗಳಲ್ಲಿ ಸಹ ಬದಲಾವಣೆ ಮಾಡುವುದಿಲ್ಲ. ಅಡ್ಡಾಡಲು ಹೋದರೆ ಅದೇ ಒಂದು ದಾರಿ, ಮಲಗುವುದು ಒಂದೇ ಕಡೆಗೆ, ಊಟ ಒಂದೇ ಸ್ಥಲದಲ್ಲಿ, ಅವೇ ಪಾತ್ರೆಗಳು, ಅವೇ ವಸ್ತುಗಳು. ದಿಲ್ಲಿಗೆ ಬಂದರೆ ನಿಜಾಮುದ್ದೀನ ಸ್ಟೇಶನ್ನಿನ ಮೇಲೆ ಇಳಿದು, ಹೋಗುವಾಗ ದೊಡ್ಡ ಸ್ಟೇಶನ್ನಿನಲ್ಲಿ ಗಾಡೀ ಹತ್ತುವರು. ಇಳಿಯಲು ನನ್ನಲ್ಲಿ ಬಂದರೆ ಯಾವ ಕೋಣೆಯಲ್ಲಿ ಮೊದಲು ಇಳಿಯುತಿದ್ದರೊ ಅದೇ ಕೋಣೆಯಲ್ಲಿರುವರು. ಮೋಟರು ಬದಲು ಮಾಡುವುದು ಸಹ ಅವರ ಮನಸಿಗೆ ಬರುವುದಿಲ್ಲ. ಯಾವುದೇ ರೂಢಿ-ಪದ್ಧತಿಯನ್ನು ನಿಷ್ಕಾರಣ ಪಲ್ಲಟಿಸುವುದಿಲ್ಲ. ಸಣ್ಣಸಣ್ಣ ಮಾತುಗಳಲ್ಲಿ ಸಹ ಒಂದು ಬಗೆಯ ಜಿಗುವಾದ ಹಿಡಿತವಿದೆ.

'ಯಾವ ಪ್ರಧಾನ ಧರ್ಮದಲ್ಲಿ ಎಲ್ಲ ಧರ್ಮಗಳು ಒಳಗೊಳ್ಳು ವವೋ ಆ ಸತ್ಯಧರ್ಮವೆ ನನ್ನ ಸರ್ವೋತ್ತಮ ಧರ್ಮವು. ಸತ್ಯ ವೆಂದರೆ ಕೇವಲ ವಾಚಿಕ ಸತ್ಯವಲ್ಲ, ಮಾನಸಿಕ ಸತ್ಯವೂ ಅವಶ್ಯ. ಸತ್ಯವೆಂದರೆ ಮಿಶ್ರಸತ್ಯವಲ್ಲ, ಆದರೆ ಆ ನಿತ್ಯ, ಶುದ್ಧ, ಸನಾತನ, ಎಂದೂ ಬದಲಾಗದಂಥ ಸತ್ಯವು. ಅದೇ ಆ ಪರಮಾತ್ಮ ಪರ ಮಾತ್ಮನ ವ್ಯಾಖ್ಯೆಗಳು ಹಲವು, ಯಾಕಂದರೆ ಅವನ ಸ್ವರೂಪಗಳು ಅನೇಕ. ಈ ವ್ಯಾಖ್ಯೆಗಳನ್ನು ಕೇಳಿ ನಾನು ಆಶ್ಚರ್ಯಚಕಿತನಾಗು ವೆನು ಹಾಗೂ ಸ್ತಬ್ಧನಾಗುವೆನು. ಆದರೆ ನಾನು ಪರಮಾತ್ಮನನ್ನು ಸತ್ಯಾವತಾರವೆಂಬ ಸ್ವರೂಪದಲ್ಲಿ ಪೂಜಿಸುವೆನು. ನನಗೆ ಇನ್ನೂ ಅವನು ಪ್ರತ್ಯಕ್ಷನಾಗಿಲ್ಲ. ನಾನು ಅವನನ್ನು ಹುಡುಕುತಿರುವೆನು. ಈ ಶೋಧ ಮಾಡುವಾಗ ಸಾವು ಬಂದರೆ ನಾನು ಸಾವಿಗೂ ಸಿದ್ಧನು. ಆ ಶುದ್ಧ ಸತ್ಯವು ನನಗೆ ಹಸ್ತಗತವಾಗುವತನಕ ನಾನು ಸತ್ಯವೆಂದು ಮನ್ನಿಸಿದುದನ್ನು ಅನುಸರಿಸುವೆನು. ಈ ಸತ್ಯಮಾರ್ಗವು ತೀರ ಬಿಕ್ಕಟ್ಟಿನದು ಹಾಗೂ ಕತ್ತಿಯ ಮೊನೆಯಂತೆ ಕೂರಾದುದು. ಆದರೆ

ನನಗೆ ಇದು ಸುಗಮವು. ನಾನು ಈ ಸತ್ಯಮಾರ್ಗವನ್ನು ಎಂದೂ ಬಿಟ್ಟಿಲ್ಲ. ಆದುದರಿಂದ ಗುಡ್ಡದಂಥ ನನ್ನ ತಪ್ಪುಗಳು ಸಹ ನನ್ನನ್ನು ಸಂತಾಪಗೊಳಿಸಿಲ್ಲ.' ಇದು ಅವರ ಸತ್ಯನಿಷ್ಠೆ.

ಸತ್ಯ, ಅಹಿಂಸೆ, ದೇವರಲ್ಲಿ ಶ್ರದ್ಧೆ ಈ ಮೂರು ಮಾತುಗಳ ಅಂಕುರವು ಗಾಂಧೀಜಿಯವರ ಹೃದಯದಲ್ಲಿ ಚಿಕ್ಕಂದಿನಿಂದಲೆ ಇದ್ದಂತೆ ತೋರುವುದು. ಇವುಗಳಲ್ಲಿ ಮೊದಲು ಮೊಳೆತುದು ಯಾವುದು ಇದನ್ನು ಹೇಳುವವರಾರು ? ಪೂರ್ವಜನ್ಮದ ಹಲವು ಸಂಸ್ಕಾರ ಬೀಜ ಗಳು ಅವರೊಡನೆ ಬಂದಿರಬಹುದು. ಆದರೆ ಈ ಜನ್ಮದಲ್ಲಿ ಸತ್ಯವೆ ಮೊದಲು ಅವರ ಹೃದಯಾಕಾಶದಲ್ಲಿ ಉದಯ ಹೊಂದಿರಬೇಕು. ಅವರು ಹೇಳುವುದೇನಂದರೆ, 'ಚಿಕ್ಕಂದಿನಲ್ಲಿಯೆ ಒಂದು ಸಂಗತಿಯು ನನ್ನ ಮನಸಿನಲ್ಲಿ ಬೇರು ಬಿಟ್ಟಿತು. ಅದಾವುದೆಂದರೆ, ಧರ್ಮವೆ, ಸತ್ಯವೆ ಎಲ್ಲ ಮಾತುಗಳ ಮೂಲವು ಎಂಬುದು. ಆದುದರಿಂದ ಸತ್ಯವೆ ನನ್ನ ಪರಮ ಧ್ಯೇಯವಾಯಿತು. ಈ ಸತ್ಯವು ನನ್ನ ಮನ ದಲ್ಲಿ ರೂಪುಗೊಂಡಂತೆ ಅದರ ವ್ಯಾಖ್ಯೆಯು ವಿಸ್ತಾರ ಹೊಂದ ಲಾರಂಭಿಸಿತು.'

ಚಿಕ್ಕಂದಿನಲ್ಲಿ ಗಾಂಧೀಜಿಯವರು ಬಹಳ ಲಜ್ಜಾಶೀಲ ವೃತ್ತಿ ಯವರಾಗಿದ್ದರು. ಹತ್ತಿಪ್ಪತ್ತೇ ಗೆಳೆಯರು ಇರುವಾಗ ಸಹ ಅವರು ಬಾಯಿಬಿಚ್ಚಿ ಮಾತಾಡುತ್ತಿರಲಿಲ್ಲ. ಸಾರ್ವಜನಿಕ ಸಭೆಗಳಲ್ಲಿಯಂತೂ ಅವರ ಬಾಯಿ ಒಂದು ರೀತಿ ಕಟ್ಟಿಯೆ ಹೋಗುತಿತ್ತು. ಲಂಡನದಲ್ಲಿ ವಿದ್ಯಾಭ್ಯಾಸ ಮಾಡುವಾಗ ಸಣ್ಣ ಪುಟ್ಟ ಸಭೆಗಳಲ್ಲಿ ಎದ್ದುನಿಂತು ಮಾತಾಡುವ ಪ್ರಸಂಗಗಳು ಬಂದಾಗ ಅವರ ವಾಣಿಯು ಅವರಿಗೆ ಸಹಾಯ ಮಾಡಲಿಲ್ಲ. ಇದು ಅವರಿಗೂ ಅಪಮಾನಕಾರಕವೆನಿಸಿತು. ಆದರೆ ಬಹು ದಿನಗಳವರೆಗೆ ಇದೇ ಸ್ಥಿತಿ ಇದ್ದಿತು. ಬ್ಯಾರಿಸ್ಟರರಾಗಿ ಈ ದೇಶಕ್ಕೆ ಮರಳಿ ಬಂದರೂ ಸುಧಾರಣೆಯಾಗಲಿಲ್ಲ. ಮುಂಬಯಿ ಕೋರ್ಟಿನಲ್ಲಿ ಒಂದು ಖಟ್ಲೆ ನಡೆಸಲು ನಿಂತಾಗ ಬಾಯಿ ಬಂದಾಗಿ ಬಿಟ್ಟಿತು. ಕಾಗದಗಳನ್ನು ತಿರುಗಿ ಕೊಟ್ಟು ಇವರು ಮನೆ ಹಾದೀ ಹಿಡಿದರು !

ಆಗ ಈ ಲಜ್ಜಾಶೀಲ ಸ್ವಭಾವವೇಕೆ? ಈ ಹೊತ್ತು ಗಾಂಧೀಜಿಯವರ ವಾಕ್ಪ್ರವಾಹವು ಒಂದು ಹೊಳೆಯಂತೆ ಹರಿಯುವುದು. ಒಂದು ನಿರರ್ಥಕ ಶಬ್ದವೂ ಅದರಲ್ಲಿರುವುದಿಲ್ಲ. ಆ ಸ್ವಭಾವವು ಸತ್ಯದ ಪೋಷಣೆಗೆ ಅವಶ್ಯವೊ? ಅವರು ಶಬ್ದಗಳನ್ನು ತೂಗಿ ತೂಗಿ ಮಾತಾಡಬೇಕೆಂದು ಅಷ್ಟೊಂದು ಆಗ ಹಿಂಜರಿಯುತಿರಬಹುದೊ? ಆ ಸ್ವಭಾವವೆ ಸತ್ಯವನ್ನು ಪೋಷಿಸಿರಲಿಕ್ಕಿಲ್ಲವೆ? 'ನನ್ನ ಈ ಸ್ವಭಾವದ ಮೂಲಕ ನಾನು ಮೇಲಿಂದ ಮೇಲೆ ಚೇಷ್ಟೆಗೆ ಗುರಿಯಾಗುತ್ತಿದ್ದೆನೆಂಬ ಮಾತು ನಿಜವಿದ್ದರೂ ಇದರಿಂದ ನನಗೆ ಯಾವ ಹಾನಿಯೂ ಆಗಿಲ್ಲವೆಂದು ಹೇಳಬಲ್ಲೆ. ಇಷ್ಟೇ ಅಲ್ಲ, ಇದರಿಂದ ನನಗೆ ಲಾಭವೆ ಆಗಿದೆ ಎಂದು ನನ್ನ ಅಭಿಪ್ರಾಯ. ಎಲ್ಲಕ್ಕೂ ಹೆಚ್ಚಿನ ಲಾಭವೇನಂದರೆ ನಾನು ಶಬ್ದಗಳನ್ನು ಮಿತದಿಂದ ಉಪಯೋಗಿಸಲು ಕಲಿತೆನು. ನನ್ನ ವಿಚಾರಗಳಿಗೆ ಸ್ವಾಭಾವಿಕವಾದ ಒಂದು ಸಂಯಮವುಂಟಾಯಿತು. ಈಗ ನನ್ನ ಬಾಯಿಂದ ಇಲ್ಲವೆ ಲೆಕ್ಕಣಿಕೆಯಿಂದ ಕ್ವಚಿತವೇ ವಿಚಾರಹೀನ ಶಬ್ದಗಳು ಹೊರಬೀಳುವವು. ನಾನು ಬರೆದ ಅಥವಾ ಮಾತಾಡಿದ ಯಾವದೊಂದು ಮಾತಿನ ಬಗ್ಗೆ ನನಗೆ ಪಶ್ಚಾತ್ತಾಪವಾದ ಪ್ರಸಂಗವು ನನ್ನ ನೆನಪಿಗೆ ಬರುವುದಿಲ್ಲ. ಸತ್ಯದ ಅರ್ಚಕನಿಗೆ ಮೌನವೆಂಬುದು ಆತ್ಮನಿಗ್ರಹದ ಬಲವಾದ ಆಯುಧವೆಂಬುದನ್ನು ನಾನು ಅನುಭವದಿಂದ ಅರಿತೆನು. ಅತಿಶಯೋಕ್ತಿ ಇಲ್ಲವೆ ಸತ್ಯವನ್ನು ಹತ್ತಿಕ್ಕುವ ಅಥವಾ ಅದನ್ನು ವಿಕೃತಗೊಳಿಸುವ ಪ್ರವೃತ್ತಿಯು ಮನುಷ್ಯನಲ್ಲಿ ಎಷ್ಟೋ ಸಾರೆ ಕಂಡುಬರುವದು. ಮೌನವೆಂಬ ಶಸ್ತ್ರವು ಈ ಹೀನ ವೃತ್ತಿಯನ್ನು ಸವರಿಬಿಡುವುದು. ಕಡಿಮೆ ಮಾತಾಡುವವನು ಪ್ರತಿ ಶಬ್ದವನ್ನು ತೂಗಿನೋಡುವನು. ಆದುದರಿಂದ ಅವನು ವಿಚಾರಗೆಟ್ಟ ಮಾತುಗಳನ್ನು ಆಡುವುದಿಲ್ಲ. ಈ ನನ್ನ ಸ್ವಭಾವವು ಸತ್ಯಶೋಧನೆಯ ಕೆಲಸದಲ್ಲಿ ನನಗೆ ಅಪಾರ ಸಹಾಯ ಮಾಡಿತು.' ಹೀಗೆ ಅವರ ಅನುಭವವಿದೆ.

ಭಗವಂತನ ಅನುಗ್ರಹವಿದ್ದರೆ ದೂಷಣಗಳೆಲ್ಲ ಭೂಷಣವಾಗಿ ಬಿಡುವವು. ನಂಜುಂಡನು ನಂಜನುಂಡು ಪ್ರಪಂಚದ ಹಿತವನ್ನು

ಸಾಧಿಸಿದನು. ಆ ಕಾರಣ ಅವನ ಕೊರಳು ಕಪ್ಪಾಯಿತು. ಅದು ಸಹ ಅವನ ಸೌಂದರ್ಯವನ್ನು ಹೆಚ್ಚಿಸಿತು. ಅವನಿಗೆ ನೀಲಕಂಠ ನೆಂಬ ಬಿರುದಾಯಿತು. ಗಾಂಧೀಜಿಯವರ ಲಜ್ಜಾಶೀಲ ಸ್ವಭಾವವು ಅವರಿಗೆ ಹಲವು ಲಾಭಗಳನ್ನು ಮಾಡಿಕೊಟ್ಟಿತು: ಕಡಿಮೆ ಶಬ್ದಗಳ ಉಪಯೋಗ, ಹಾಗೂ ಒಳ್ಳೇ ತೂಕದಿಂದ ಶಬ್ದಪ್ರಯೋಗ.

ಗಾಂಧೀಜಿಯವರ ಸತ್ಯಶ್ರದ್ಧೆ ಬೆಳೆದು ಅದೊಂದು ಅವರ ಸ್ವಭಾವವಾಗಿ ಹೋಯಿತು. ಅವರು ಚಿಕ್ಕ ವಯಸ್ಸಿನಲ್ಲಿಯೆ ಸತ್ಯದ ಲಾಭಗಳನ್ನು ಕಂಡುಹಿಡಿದಿದ್ದರು. ಲಂಡನಕ್ಕೆ ಹೋಗುವಾಗ ಅಭೋಜ್ಯ ಭೋಜನ ಮಾಡಲಿಕ್ಕಿಲ್ಲ ಹಾಗೂ ಬ್ರಹ್ಮಚರ್ಯವನ್ನು ಪಾಲಿಸುವೆನು ಎಂಬ ಪ್ರತಿಜ್ಞೆಯನ್ನು ತಾಯಿಯ ಎದುರು ಮಾಡಿ ಮುಂದೆ ಸಾಗಿದ್ದರು. ಸತ್ಯನಿಷ್ಠರಾಗಿದ್ದುದರಿಂದ ಅವರಿಗೆ ಈ ಪ್ರತಿಜ್ಞೆ ಪಾಲಿಸುವದು ಕಠಿಣವೆನಿಸಲಿಲ್ಲ. ಧ್ಯೇಯದತ್ತ ಸ್ಥಿರದೃಷ್ಟಿಯಿಟ್ಟು ಅವರು ನಡೆದುದರಿಂದ ತಗ್ಗಿನಲ್ಲಿ ಬೀಳುವ ಪ್ರಸಂಗ ಬರಲಿಲ್ಲ.

# ೮. 'ಎಲ್ಲವೂ ಹರಿಚಿತ್ತ'

'ಪರಮಾತ್ಮನ ರೂಪಗಳು ಅನೇಕ. ಆದರೆ ಯಾವುದು ಸತ್ಯದ ಅವತಾರವೊ ಆ ರೂಪದ ಅರ್ಚಕನು ನಾನು. ಯಾವುದು ನಿತ್ಯ, ಸನಾತನ, ಎಂದೂ ಬದಲಾಗದಂತಹ ಸತ್ಯವೊ ಅದೇ ಪರಮಾತ್ಮ.' ಇದು ಗಾಂಧೀಜಿಯವರ ವಚನ. ಬ್ರಹ್ಮ, ವಿಷ್ಣು, ಮಹೇಶ ಈ ಮೂವರು ಒಂದೇ ಪರಮಾತ್ಮನ ಮೂರು ರೂಪಗಳು ಎಂದು ನಮ್ಮ ಪುರಾಣಾಂತರಗಳಲ್ಲಿ ಎಷ್ಟೋ ಕಡೆಗೆ ಹೇಳಲಾಗಿದೆ. ವ್ಯಾಪಕ ದೃಷ್ಟಿ ಯಿಂದ ನೋಡಿದರೆ ಗಾಂಧೀಜಿಯವರ ಸತ್ಯ, ಅಹಿಂಸೆ ಮತ್ತು ಪರಮಾತ್ಮ ಈ ಮೂರೂ ಒಂದೇ ವಸ್ತು ಎಂಬುದು ಗೊತ್ತಾಗುವುದು. ರಾಮನಾಮದ ಮಹಾತ್ಮ್ಯವು ಗಾಂಧೀಜಿಯವರಿಗೆ ಆ ಮೇಲೆ ಹೊಳೆ ಯಿತು. ಪರಮಾತ್ಮನ 'ಸತ್ಯ' ರೂಪದಲ್ಲಿ ಮೊದಲು ಅವರ ಶ್ರದ್ಧೆ ನೆಲೆಯಿತು.

ಗಾಂಧೀಜಿಯವರು ಚಿಕ್ಕಂದಿನಲ್ಲಿ ಭೂತ ಪಿಶಾಚಿಗಳಿಗೆ ಅಂಜು ತ್ತಿದ್ದರು, ಆದುದರಿಂದ ವೇಳೆ ಅವೇಳೆಯಲ್ಲಿ ಕತ್ತಲೆಯಲ್ಲಿ ಹೋಗಲು ಹಿಂಜರಿಯುತಿದ್ದರು. ಆದರೆ ರಂಭಾ ಎಂಬ ಇವರ ಒಕ್ಕಲಗಿತ್ತಿಯು ಇವರಿಗೆ ರಾಮನಾಮದ ಮಹಾತ್ಮ್ಯವನ್ನು ಹೇಳಿಕೊಟ್ಟಳು. ರಾಮ ನಾಮದ ಉಚ್ಚಾರ ಮಾಡಿದರೆ ಭೂತಗಳು ಓಡಿಹೋಗುವವು ಎಂದು ಹೇಳಿದಳು. ಬಾಲಕ ಗಾಂಧಿಗೆ ಇದೊಂದು ಹೊಸ ಶಸ್ತ್ರವು ದೊರೆ ತಂತಾಯಿತು ಮತ್ತು ಅವನ ಶ್ರದ್ಧೆ ದೃಢವಾಗುತ್ತ ನಡೆಯಿತು. ಮೊದಮೊದಲು ಅಂಧವೂ ಜ್ಞಾನಹೀನವೂ ಇದ್ದ ಶ್ರದ್ಧೆ ಬರಬರುತ್ತ ಜ್ಞಾನಯುಕ್ತವಾಯಿತು ಹಾಗೂ ಆ ಶ್ರದ್ಧೆಗೆ ಅನುಭವದ ಬೆಂಬಲ ದೊರಕುತ್ತ ಹೋಯಿತು.

ಕೂಡುವಾಗ ಏಳುವಾಗ ಆಕಳಿಸುವಾಗ ಒರಗುವಾಗ ಉಸು ರೆಳೆದುಕೊಂಡು ಹೇ ರಾಮ, ಹೇ ರಾಮ, ಎಂದು ಗಾಂಧೀಜಿಯವರು ಉಚ್ಚರಿಸುವುದನ್ನು ನಾನು ಕಂಡಿರುವೆನು. ಹೀಗೆ ಅವರು ಹೇ ರಾಮ, ಹೇ ರಾಮ, ಎಂದು ಉಚ್ಚರಿಸುವಲ್ಲಿ ಸಿಟ್ಟುಸುರು, ಕರುಣೆ, ಸ್ವಲ್ಪ ದಣುವು ಇವು ಇರುವವೆಂಬುದನ್ನು ನಾನು ಲಕ್ಷ್ಯಪೂರ್ವಕವಾಗಿ ಗಮ ನಿಸಿರುವೆನು. ಇದನ್ನು ನೋಡಿ 'ಮುದುಕನಾದ ನನ್ನನ್ನು ಗಾಣದ ಎತ್ತಿನಂತೆ ಏಕೆ ಹೂಡಿಟ್ಟಿರುವೆ? ಮಾಡುವುದನ್ನು ಬೇಗನೆ ಮಾಡಿ ಬಿಡು. ಯಾವ ಕಾರ್ಯಕ್ಕಾಗಿ ನನ್ನನ್ನು ಇಲ್ಲಿ ಕಳಿಸಿರುವೆಯೊ ಅದನ್ನು ಬೇಗನೆ ಪೂರ್ಣಾಹುತಿ ಕೊಟ್ಟು ಪೂರೈಸಿಬಿಡು' ಎಂದು ಇವರು ಅನ್ನುತ್ತಿರಬಹುದೆಂದು ನಾನು ಒಳಗಿಂದೊಳಗೆಯೆ ಮನಸಿನಲ್ಲಿ ಅಂದುಕೊಂಡಿರುವೆನು.

ಜಯಪುರದ ಪ್ರತಾಪಸಿಂಗ ಮಹಾರಾಜರು ಕವಿಗಳಿದ್ದರು. ತಮ್ಮ ಜಡ್ಡಿನ ಅಸಹ್ಯ ದುಃಖದಿಂದ ವಿಹ್ವಲರಾಗಿ ದೇವರಿಗೆ ದೂರಿಟ್ಟು ಮೊರೆ ಇಡುವಾಗ ಅವರು ಹಾಡಿದ್ದು ಹೀಗೆ:

**" ಗ್ವಾಲೀಡಾ ಥೇ ಕಾಯೀ ಜಾಣೋರೇ ಪೀಡ ಪರಾಯೀ ।**
**ಥಾರೆ ಹಾಥ ಲಕುಟಯಾ ಕಾಂಧೇ ಕಮಲಿಯಾ, ಥೇ ಬನ-ಬನ**
**ಧೇನು ಚರಾಯೀ ॥ "**

'(ಕೃಷ್ಣನನ್ನುದ್ದೇಶಿಸಿ) ನೀನೊಬ್ಬ ಗೊಲ್ಲ. ಪರರ ದುಃಖವ ನೀನೇನು ಬಲ್ಲೆ? ಕೈಯಲ್ಲೊಂದು ಕೋಲು, ಹೆಗಲ ಮೇಲೊಂದು ಕಂಬಳಿ. ಗೋವುಗಳನ್ನು ಕಾಯುತ್ತ ಅಡವಿ ಅಡವಿ ತಿರುಗುವವನಾದ ನಿನಗೆ ಪರದುಃಖದ ಪರಿವೆಯೇನು?'

ಆದರೆ ಗಾಂಧೀಜಿಯವರು ಹೀಗೆ ಅನ್ನಲಾರರು. ಅವರಲ್ಲಿ ಅಪಾರ ತಾಳ್ಮೆ ಇದೆ. ತಮ್ಮ ಮೇಲೆ ದೇವರ ಕರುಣೆ ಇದೆ ಎಂಬು ದನ್ನು ಅವರು ಬಲ್ಲರು. ದೇವರಲ್ಲಿ ಅವರಿಗೆ ಪೂರ್ಣ ವಿಶ್ವಾಸವಿದೆ. ಅಧೈರ್ಯ, ಅಸಂತೋಷ ಇವುಗಳ ಸುದ್ದಿಯೆ ಅವರಲ್ಲಿಲ್ಲ.

ಯಾಕಂದರೆ ಯಶಾಪಯಶ, ಲಾಭ ಹಾನಿ ಇವುಗಳ ಚಿಂತೆಯನ್ನು ಅವರು ದೇವರ ಪಾದಪದ್ಮಗಳಲ್ಲಿ ಅರ್ಪಿಸಿಬಿಟ್ಟಿದ್ದಾರೆ. ಆದರೂ ಕರುಣಾಮಯವಾದ ಅವರ 'ಹೇ ರಾಮ, ಹೇ ರಾಮ' ಎಂಬ ಸ್ವರವು ದ್ರೌಪದಿಯ ಇಲ್ಲವೆ ಗಜೇಂದ್ರನ ಆರ್ತನಾದವನ್ನು ನೆನಪಿಗೆ ತಂದು ಕೊಡುವುದು.

ಕೆಲವು ವರುಷಗಳ ಹಿಂದಿನ ಸಂಗತಿ. ಭಕ್ತರೆನಿಸಿಕೊಳ್ಳುವ ಒಬ್ಬ ಸಜ್ಜನರು ಗಾಂಧೀಜಿಯವರಿಗೆ ಬರೆದದ್ದೇನಂದರೆ, 'ರಾತ್ರಿ ನನಗೆ ಒಂದು ಕನಸು ಬಿದ್ದಿತು. ನಾನು ಶ್ರೀಕೃಷ್ಣನನ್ನು ನೋಡಿದೆನು. ಆವನು, ಇನ್ನು ಮುಪ್ಪಾಯಿತು. ಕೆಲಸ ಬೊಗಸೆ ಬಿಟ್ಟು ದೇವರ ಭಜನೆಯಲ್ಲಿಯೆ ಕಾಲ ಕಳೆ, ಎಂದು ಗಾಂಧೀಜಿಯವರಿಗೆ ಹೇಳು, ಎಂದು ನನಗೆ ಆದೇಶ ಕೊಟ್ಟನು.' ಅದಕ್ಕೆ ಗಾಂಧೀಜಿಯವರ ಉತ್ತರ, 'ಮಿತ್ರನೆ, ದೇವರ ಭಜನೆ ಬಿಟ್ಟು ನಾನೊಂದು ಅರಗಳಿಗೆ ಸಹ ಇರುವುದಿಲ್ಲ. ನನ್ನಮಟ್ಟಿಗೆ ಲೋಕಸೇವೆಯೆ ದೇವರ ಭಜನೆ. ಮೇಲಾಗಿ ದಿನ ಸಮೀಪಿಸಿದೆ ಎಂದೇ ನಾನು ಭಜನೆ ಮಾಡಬೇಕೇ? ನಾವು ಹುಟ್ಟಿದಂದಿನಿಂದಲೆ ನಮ್ಮ ಕೊರಳು ಯಮನ ಕೈಯಲ್ಲಿದೆ ಎಂದು ನನ್ನ ಭಾವನೆ. ಅಂದಬಳಿಕ ದೇವರ ಭಜನೆ ಮಾಡಬೇಕಾದರೆ ಮುಪ್ಪಾಗುವವರೆಗೆ ಹಾದೀ ಕಾಯುವ ಕಾರಣವೇನು? ನಾವು ಯಾವಾಗಲೂ ಎಲ್ಲ ಅವಸ್ಥೆಗಳಲ್ಲಿಯೂ ಭಜನೆ ಮಾಡತಕ್ಕದ್ದು ಯೋಗ್ಯವು.'

> 'ಅಜರಾಮರವತ್ ಪ್ರಾಜ್ಞೋ ವಿದ್ಯಾಮರ್ಥಂ ಚ ಚಿಂತಯೇತ್ ।
> ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್ ॥'

'ಜಾಣರು ತಾವು ಅಜರಾಮರರು ಎಂಬ ಭಾವನೆಯಿಂದ ವಿದ್ಯೆ ಹಾಗೂ ಧನ ಇವುಗಳ ಚಿಂತನ ಮಾಡಬೇಕು. ಆದರೆ ಮೃತ್ಯುವು ತಮ್ಮನ್ನು ಪ್ರತಿಕ್ಷಣ ಎಳೆದೊಯ್ಯುತಿದೆ ಎಂಬ ಭಾವನೆಯಿಂದ ಧರ್ಮವನ್ನಾಚರಿಸಬೇಕು.'

ಪ್ರತಿ ಕೃತಿಯಲ್ಲಿಯೂ ಅವರು ದೇವರ ಕೈಯನ್ನು ಕಾಣುವರು. ದೇವರಲ್ಲಿಯ ಅವರ ಶ್ರದ್ಧೆ ಅಷ್ಟೊಂದು ಬಲಗೊಂಡಿರುವುದು. ಆಶ್ರಮ ದಲ್ಲಿ ಯಾರನ್ನೂ ಹಾವು ಕಚ್ಚಲಿಲ್ಲ. ಇದು ಒಂದು ದೇವರ ಚಮತ್ಕಾರ ವೆಂದೆ ಅವರ ಭಾವನೆ. ಸಣ್ಣಪುಟ್ಟ ಯಾವುದೊಂದು ಸಂಗತಿ ನಡೆದರೆ, 'ಅಲ್ಲಿ ದೇವರ ಕೈ ಇದೆ,' ಎಂದು ಅವರು ಹೇಳುವರು.

ಗಾಂಧೀ ಆಯರ್ವಿನ್ ಒಪ್ಪಂದವಾದ ಬಳಿಕ ವ್ಹಾಯಿಸರಾಯರ ನಿವಾಸದಿಂದ ತಿರುಗಿ ಬಂದೊಡನೆ ಅವರು ಪತ್ರಿಕಾ ಪ್ರತಿನಿಧಿಗಳಿ ಗೊಂದು ದೊಡ್ಡ ನಿವೇದನೆ ಕೊಟ್ಟರು. ಆಗ ಅದು ಬಹಳ ಮಹತ್ವ ದ್ದೆಂದು ಭಾವಿಸಲಾಗಿತ್ತು. ಏನು ಹೇಳಬೇಕು, ಯಾವುದು ಯೋಗ್ಯ ಎಂಬ ಬಗ್ಗೆ ಅವರು ಯಾವ ಪೂರ್ವವಿಚಾರವನ್ನು ಮಾಡಿರಲಿಲ್ಲ. ಆದರೆ ಒಮ್ಮೆ ಹೇಳಲಾರಂಭಿಸಿದೊಡನೆ ಸರಸತಿಯೆ ಬಂದು ನಾಲಿಗೆಯ ಮೇಲೆ ನಲಿಯುತಿರುವಳೊ ಎಂಬಂತೆ ವಾಕ್ಪ್ರವಾಹವು ಸಾಗಿತು. ಅದೇ ರೀತಿ ದುಂಡುಮೇಜಿನ ಪರಿಷತ್ತಿನಲ್ಲಿಯ ಅವರ ಮೊದಲನೆಯ ವ್ಯಾಖ್ಯಾನವು ಅಲ್ಲಿಯ ಮಹತ್ವಪೂರ್ಣ ವ್ಯಾಖ್ಯಾನಗಳಲ್ಲಿ ಒಂದಾಗಿತ್ತು. ಆ ವ್ಯಾಖ್ಯಾನದ ಮುಂಚೆ ಸಹ ಅವರು ಯಾವ ವಿಚಾರವನ್ನೂ ಮಾಡಿ ರಲಿಲ್ಲ. ಅವರ ಮಟ್ಟಿಗೆ ಇವೆಲ್ಲ ಸಾಧಾರಣ ಸಂಗತಿಗಳು. ಆದರೆ ಅವರು ಮಾತಾಡಿದ ಬಳಿಕ ನಾನು ಅವರಿಗೆ 'ಈ ನಿಮ್ಮ ವ್ಯಾಖ್ಯಾನವು ಅನುಪಮವಿತ್ತು, ಈ ನಿವೇದನೆ ಅದ್ವಿತೀಯವಿತ್ತು' ಎಂದೆನು. ಆಗ ಅವರು 'ಇದರಲ್ಲಿ ದೇವರ ಕೈ ಇದೆ' ಎಂದರು.

ಈ ನಿಮ್ಮ ಕೆಲಸವು ಬಹಳ ನೆಟ್ಟಗಾಯಿತು, ಎಂದು ಯಾರಾ ದರೂ ನಮ್ಮಂಥವರಿಗೆ ಅಂದರೆ ನಾವು ಬಹುಶಃ, 'ಅಹುದು ತಮ್ಮ ದಯೆಯಿಂದ ಚನ್ನಾಗಿ ಆಯಿತು,' ಇಲ್ಲವೆ 'ಈಶ್ವರಾನುಗ್ರಹ' ಎನ್ನುವೆವು. ಆದರೆ ಬಾಯಿಂದ ನಾವು, ಈಶ್ವರಾನುಗ್ರಹ, ಇಲ್ಲವೆ ನಿಮ್ಮ ದಯೆ, ಎಂದೆನ್ನುವುದು ಕೇವಲ ಶಿಷ್ಟಾಚಾರದ ಮೂಲಕ, ಇಲ್ಲವೆ ಸೌಜನ್ಯದಿಂದ. ಗಾಂಧೀಜಿಯವರ ಮಾತು ಹಾಗಿಲ್ಲ. 'ಇದರಲ್ಲಿ ದೇವರ ಕೈ ಇದೆ' ಎಂದು ಅವರು ಅನ್ನುವಾಗ ಅವರು

ನಿಜವಾದ ಮನವರಿಕೆಯಿಂದ ಹಾಗೆ ಹೇಳುವರು. ಅವರ ಶ್ರದ್ಧೆ ಯೆಂಬುದು ಒಂದು ಪ್ರತ್ಯಕ್ಷ ಜೀವಂತ ಅನುಭವ, ಕೇವಲ ಸೌಜನ್ಯ ಶಿಷ್ಟಾಚಾರಗಳಲ್ಲ.

ಇವರಿಗೊಬ್ಬ ದುಶ್ಚರಿತ ಜೊತೆಗಾರನು ಒಮ್ಮೆ ಗಂಟುಬಿದ್ದಿದ್ದನು. ಅವನನ್ನು ಇವರು ಮನೆಯಲ್ಲಿಟ್ಟುಕೊಂಡಿದ್ದರು. ಇದು ಆಫ್ರಿಕೆಯಲ್ಲಿ ನಡೆದ ಸಂಗತಿ. ಅವನು ಚರಿತ್ರಹೀನನಿದ್ದರೂ ಅವನ ಮೇಲೆ ಗಾಂಧೀಜಿಯವರ ವಿಶ್ವಾಸ. ಅವನ ಹಲವು ಕುಂದುಗಳ ಜ್ಞಾನ ಇವರಿಗೆ ಇತ್ತು. ಆದರೆ ತಮ್ಮ ಸಹವಾಸದಿಂದ ಅವನು ಸುಧಾರಿಸ ಬಹುದೆಂದು ಇವರ ಭರವಸೆ. ಒಂದು ದಿನ ಇವರ ಸೇವಕನು ಕಚೇರಿಗೆ ಬಂದು, ‘ ನಿಮ್ಮ ವಿಶ್ವಾಸದ ಸ್ನೇಹಿತನು ನಿಮಗೆ ಯಾವ ಬಗೆಯ ಮೋಸ ಮಾಡುತಿರುವನೆಂಬುದನ್ನು ಬಂದು ನೋಡಿರಿ ’ ಎಂದನು. ಗಾಂಧೀಜಿಯವರು ಮನೆಗೆ ಹೋಗಿ ನೋಡಿದರು. ಅವರ ಗೆಳೆಯನು ಒಬ್ಬ ವೇಶ್ಯೆಯನ್ನು ಮನೆಗೆ ಕರೆತಂದಿದ್ದನು. ಅವರ ಮನಸಿಗೊಂದು ಆಘಾತವಾಯಿತು. ಅವನನ್ನು ಹೊರಗೆ ಹಾಕಿದರು. ಆದರೆ ಅವನ ಬಗ್ಗೆ ಅವರ ಪ್ರೀತಿ ಕಡಿಮೆಯಾಗಲಿಲ್ಲ. ಅವನನ್ನು ಸುಧಾರಿಸುವ ಕುರಿತು ಅಲ್ಲಿ ಇಟ್ಟುಕೊಂಡಿದ್ದರು. ಅವರಮಟ್ಟಿಗೆ ಇದೂ ಒಂದು ತಮ್ಮ ಕರ್ತವ್ಯವೆಂದು ಅವರ ಭಾವನೆ ಇತ್ತು. ಈ ಬಗ್ಗೆ ಮಾತಾಡುವಾಗ ಸಹ ಅವರು, ‘ ದೇವರು ನನ್ನನ್ನು ಉಳಿಸಿದನು. ನನ್ನ ಉದ್ದೇಶವು ಶುದ್ಧವಿತ್ತು. ಆದುದರಿಂದ ದೇವರು ನನಗೆ ಎಚ್ಚರವಿತ್ತನು ಹಾಗೂ ಮುಂದಿನ ತಪ್ಪುತಡಿಗಳಿಂದ ರಕ್ಷಿಸಿದನು ’ ಎನ್ನುವರು. ಈ ಕಥೆಯೆಂದರೆ, ತಮ್ಮ ಅಂಧವಿಶ್ವಾಸ ಅಥವಾ ತಪ್ಪು ತಮಗೆ ತಿಳಿದೊಡನೆ ಅದನ್ನು ಕೂಡಲೆ ಸುಧಾರಿಸುವ ಅವರ ವೃತ್ತಿಯ ಉತ್ತಮ ಉದಾಹರಣೆ ಇದೆ.

ಇವರ ಎರಡನೆ ಮಗನಾದ ಮಣಿಲಾಲನೆಂಬವನು ವಿಷಮಜ್ವರ ದಿಂದ ಪೀಡಿತನಿರುವಾಗ ಆದ ಒಂದು ಘಟನೆ ಇದೆ. ಅದನ್ನು ಗಾಂಧೀಜಿಯವರ ಶಬ್ದಗಳಲ್ಲಿಯೆ ಕೆಳಗೆ ಕೊಡುತ್ತಿದ್ದೇನೆ.

‘ ನನ್ನ ಎರಡನೆ ಮಗನಿಗೆ ಜಡ್ಡಾಯಿತು. ಕಾಲಜ್ವರವು ಅವನನ್ನು ಆವರಿಸಿಬಿಟ್ಟಿತು. ಜ್ವರ ಇಳಿಯದೆ ಹೋದವು. ಮನಸಿಗೆ ಗಾಬರಿ. ರಾತ್ರಿ ವಾಯು ಕೂಡುವ ಲಕ್ಷಣವು ತೋರಲಾರಂಭಿಸಿತು. ಈ ಜಡ್ಡಿನ ಪೂರ್ವದಲ್ಲಿ, ಚಿಕ್ಕಂದಿನಲ್ಲಿ, ಅವನಿಗೆ ಥಂಡಿ ಬಹಳ ಆಗುತ್ತಿತ್ತು. ಡಾಕ್ತರರ ಸಲಹೆ ಪಡೆದೆನು. ಅವರು ಅಂದದ್ದು, ‘ ಇದಕ್ಕೆ ಔಷಧವಿಲ್ಲ. ಇವನಿಗೆ ತತ್ತಿ ಹಾಗೂ ಕೋಳಿಯ ಸಾರನ್ನು (ಕುದಿಸಿ ತೆಗೆದ ನೀರು) ಕೊಡುವದವಶ್ಯ.’

ಆಗ ಮಣಿಲಾಲನು ಹತ್ತುವರುಷದವನು. ಈ ಬಗ್ಗೆ ಅವನನ್ನೇನು ಕೇಳಬೇಕು ? ನಾನೆ ಹೊಣೆಗಾರನು, ನಾನೆ ನಿರ್ಣಯ ಮಾಡಬೇಕಾಗಿ ಬಂತು. ಡಾಕ್ತರರು ಒಬ್ಬ ದೊಡ್ಡ ಪಾರಸಿ ಗೃಹಸ್ಥರು. ನಾನು ಅಂದದ್ದು, ‘ ಡಾಕ್ತರ ಮಹಾಶಯರೆ, ನಾವೆಲ್ಲ ಶಾಕಾಹಾರಿಗಳು. ನೀವು ಹೇಳಿದ ವಸ್ತುಗಳಲ್ಲಿ ಒಂದನ್ನೂ ಈ ಹುಡುಗನಿಗೆ ಕೊಡುವುದು ನನ್ನ ಮನಸಿನಲ್ಲಿಲ್ಲ. ಇನ್ನೊಂದೇನಾದರೂ ಹೇಳಬಹುದೇ ? ’

ಡಾಕ್ತರರು ಅಂದದ್ದು, ‘ನಿಮ್ಮ ಹುಡುಗನ ಜೀವಕ್ಕೆ ಗಂಡಾಂತರವಿದೆ. ಹಾಲು ನೀರು ಕೂಡಿಸಿ ಕೊಡಬಹುದು. ಆದರೆ ಅದು ಸಾಕಾಗಲಿಕ್ಕಿಲ್ಲ. ನಾನು ಎಷ್ಟೋ ಹಿಂದೂ ಮನೆಗಳಿಗೆ ಹೋಗುವೆನೆಂಬುದನ್ನು ನೀವು ಬಲ್ಲಿರಿ. ಔಷಧವೆಂದು ನಾನು ಹೇಳಿದ್ದನ್ನು ಅವರು ಕೊಡುವರು ಹಾಗೂ ರೋಗಿಗಳು ಸೇವಿಸುವರು. ನೀವಾದರೂ ಈ ವಿಷಯದಲ್ಲಿ ನಿಮ್ಮ ಹಟವನ್ನು ನಡೆಸಬೇಡಿರಿ. ಅಂದರೆ ನೆಟ್ಟಗಾಗುವದು. ’

‘ ತಾವು ಹೇಳುವುದು ಯೋಗ್ಯ. ತಾವು ಹೀಗೆ ಹೇಳುವುದು ಅವಶ್ಯವೆ. ಆದರೆ ನನ್ನ ಹೊಣೆ ದೊಡ್ಡದು. ಮಗನು ದೊಡ್ಡವನಿದ್ದರೆ ಅವನ ಇಚ್ಛೆಯನ್ನು ಕೇಳಿಕೊಂಡು ಅದರಂತೆ ಮಾಡಲು ಅವನಿಗೆ ಅನುವು ಕೊಡುತಿದ್ದೆನು. ಆದರೆ ಈ ಸಂದರ್ಭದಲ್ಲಿ ಅವನ

ಬಗ್ಗೆ ನಾನೇ ವಿಚಾರ ಮಾಡಬೇಕಾಗಿದೆ. ಮನುಷ್ಯನ ಧರ್ಮವೃತ್ತಿಯ ಪರೀಕ್ಷೆ ಇಂತಹ ಸಮಯದಲ್ಲಿಯೆ ಆಗುವುದು. ಮನುಷ್ಯನು ಮಾಂಸಾಹಾರವನ್ನು ಮಾಡದಿರುವುದೆ ಧರ್ಮವೆಂದು ನಾನು ತಿಳಿ ದಿದ್ದೇನೆ. ಅದು ಸರಿಯೆ ಇರಲಿ ತಪ್ಪೇ ಇರಲಿ, ಜೀವ ರಕ್ಷಣೆಯ ಸಾಧನಗಳಿಗೂ ಒಂದು ಮರ್ಯಾದೆ ಇದೆ. ಜೀವದ ಮೇಲಿನ ಪ್ರಸಂಗ ಬಂದಾಗ ಸಹ ನಾವು ಹಲವೊಂದು ವಸ್ತುಗಳನ್ನು ಗ್ರಹಿಸಕೂಡದೆಂದು ನನ್ನ ಭಾವನೆ. ಇಂಥ ಪ್ರಸಂಗದಲ್ಲಿ ಸಹ ಮಾಂಸಾದಿಗಳ ಸೇವನವು ನಿಷಿದ್ಧವೆಂದು ನಮ್ಮ ಧರ್ಮವು ಸಾರುವುದು. ಆದುದರಿಂದ ನೀವು ಹೇಳುತಿರುವ ಗಂಡಾಂತರವನ್ನು ನಾನು ಎದುರಿಸಬೇಕಾಗಿದೆ. ಆದ ರೊಂದು ಮಾತನ್ನು ತಾವು ಮಾಡಿದರೆ ಉಪಕಾರ. ತಾವು ಹೇಳಿದ ಉಪಾಯವನ್ನು ನಾನು ಮಾಡಲಾರೆ. ಆದರೆ ಈ ಬಾಲಕನ ಹೃದಯ ಹಾಗೂ ನಾಡಿ ಇವುಗಳನ್ನು ನೋಡುವ ವಿದ್ಯೆಯನ್ನು ನಾನರಿಯೆ. ನಾನು ಅಲ್ಪಮಟ್ಟಿಗೆ ಜಲಚಿಕಿತ್ಸೆಯನ್ನು ಬಲ್ಲೆನು. ಅದನ್ನು ಮಾಡ ಬೇಕೆಂದಿರುವೆನು. ತಾವು ಮೊದಲಿನಂತೆ ಬಂದು ಮಣಿಲಾಲನ ಪ್ರಕೃತಿ ನೋಡಿ ಅವನ ದೇಹದಲ್ಲಿ ನಡೆದ ಹೆಚ್ಚುಕಡಿಮೆಗಳನ್ನು ನನಗೆ ತಿಳಿಸುತ್ತ ಹೋದರೆ ನಾನು ಉಪಕೃತನಾಗುವೆನು.'

ಸಜ್ಜನರಾದ ಡಾಕ್ತರರು ನನ್ನ ಸಮಸ್ಯೆಗಳನ್ನು ಅರಿತುಕೊಂಡರು ಹಾಗೂ ನನಗೆ ಇಷ್ಟವಿದ್ದಂತೆ ಮಣಿಲಾಲನ ಪ್ರಕೃತಿ ನೋಡಲು ಬರು ವುದಕ್ಕೆ ಒಪ್ಪಿದರು. ಮಣಿಲಾಲನು ಸ್ವಂತ ನಿರ್ಣಯ ಮಾಡುವಷ್ಟು ಪ್ರಬುದ್ಧನಿರಲಿಲ್ಲ. ಆದರೂ ಡಾಕ್ತರರೊಡನೆ ಆದ ನನ್ನ ಮಾತನ್ನು ಅವನಿಗೆ ತಿಳಿಹೇಳಿದೆನು ಹಾಗೂ ತನ್ನ ವಿಚಾರಗಳನ್ನು ಪ್ರಕಟಿಸಲು ಹೇಳಿದೆನು.

'ತಾವು ನಿಶ್ಚಿಂತರಾಗಿ ಜಲಚಿಕಿತ್ಸೆ ಮಾಡಿರಿ. ನಾನು ಮಾಂಸಾ ಹಾರ ಮಾಡಲಾರೆ,' ಎಂದು ಮಣಿಲಾಲನು ಅಂದನು. ಈ ಅವನ ಮಾತನ್ನು ಕೇಳಿ ನಾನು ಪ್ರಸನ್ನನಾದೆನು. ಆ ವಸ್ತುಗಳನ್ನು ಸೇವಿಸ ಬೇಕೆಂದು ನಾನು ಅವನಿಗೆ ಹೇಳಿದ್ದರೆ ಅವನು ಹಾಗೆ ಮಾಡಬಹು ದಾಗಿತ್ತು. ಆದರೆ ಅವನ ಈ ಉತ್ತರವು ಸಮಾಧಾನಕರವಿತ್ತು.

ನಾನು ಕ್ಯೂನಿ ಇವರ ಉಪಚಾರಗಳೊಡನೆ ಪರಿಚಿತನಿದ್ದೆನು. ಅವುಗಳನ್ನು ಉಪಯೋಗಿಸಿದ್ದೆನು. ಜಡ್ಡಾದಾಗ ಉಪವಾಸಕ್ಕೆ ಮಹತ್ವ ಬಹಳ ಎಂಬುದು ನನಗೆ ಗೊತ್ತಿತ್ತು. ಕ್ಯೂನಿ ಪದ್ಧತಿ ಪ್ರಕಾರ ಮಣಿಲಾಲನಿಗೆ ನಾನು ಕಟಿಸ್ನಾನವನ್ನು ಯೋಜಿಸಲಾರಂಭಿಸಿದೆನು. ಟಬ್ಬಿನಲ್ಲಿ ಮೂರು ಮಿನಿಟಿಗಿಂತ ಹೆಚ್ಚುವೇಳೆ ನಾನು ಅವನನ್ನು ಇಡುತ್ತಿರಲಿಲ್ಲ. ಮೂರು ದಿನಗಳವರೆಗಂತೂ ಕಿತ್ತಲಿ ಹಣ್ಣಿನ ರಸದಲ್ಲಿ ನೀರು ಕೂಡಿಸಿ ಕುಡಿಯಲು ಕೊಡುತಿದ್ದೆ. ಮೂರು ದಿನ ಅವನು ಅದರ ಮೇಲೆಯೆ ಇದ್ದನು.

ಜ್ವರ ಇಳಿಯುತಿರಲಿಲ್ಲ. ರಾತ್ರಿ ಅವನು ನೆರಳುತಿದ್ದನು. ಜ್ವರ ೧೦೪ ಅಂಶದವರೆಗೆ ಏರುತಿತ್ತು. ನನಗೆ ದಿಕ್ಕು ತಪ್ಪಿದಂತಾಯಿತು. ನಾನು ಈ ಸಂದರ್ಭದಲ್ಲಿ ಮಗನನ್ನು ಕಳಕೊಂಡರೆ ಜಗತ್ತಿನಲ್ಲಿ ನನಗೆ ಜನರು ಏನನ್ನಬಹುದು? ನನ್ನ ಅಣ್ಣಂದಿರು ಏನು ಅನ್ನಬಹುದು? ಬೇರೆ ಡಾಕ್ತರರನ್ನು ಏಕೆ ಕರೆಯಬಾರದು? ನಾನೇಕೆ ಈಗ ಜೇರೆಯುವರನ್ನು ಕರೆಯಬಾರದು? ಇಂಥ ಪ್ರಸಂಗದಲ್ಲಿ ತಮ್ಮ ಅಲ್ಪ ಬುದ್ಧಿಯ ಪರೀಕ್ಷೆ ಮಾಡುವ ಅಧಿಕಾರವು ತಂದೆ-ತಾಯಿಗಳಿಗೆ ಇದೆಯೆ?

ಈ ಮುಂತಾದ ವಿಚಾರಗಳು ಬರುತಿದ್ದವು. ಅವುಗಳೊಡನೆ 'ಜೀವನೆ, ನೀನು ನಿನ್ನ ಬಗ್ಗೆ ಮಾಡುವುದನ್ನೆ ಮಗನ ಬಗ್ಗೆಯೂ ಮಾಡು. ಇದರಿಂದ ದೇವರು ಸಂತುಷ್ಟನಾಗುವನು. ಜಲ ಚಿಕಿತ್ಸೆಯಲ್ಲಿ ನಿನ್ನ ವಿಶ್ವಾಸವಿದೆ, ಔಷಧಿಗಳಲ್ಲಿಲ್ಲ. ಡಾಕ್ತರರು ಸಾಯುವ ಜೀವವನ್ನಂತೂ ಬದುಕಿಸಲಾರರು. ಅವರಾದರೂ ಪ್ರಯೋಗಗಳನ್ನೆ ಮಾಡುತಿರುವರಲ್ಲವೆ? ಜೀವವನ್ನು ಬದುಕಿಸುವುದು ಬಿಡುವುದು ದೇವರ ಕೈಯಲ್ಲಿ ಮಾತ್ರ ಇದೆ. ದೇವರ ಹೆಸರುಗೊಂಡು ಅವನಲ್ಲಿ ಶ್ರದ್ಧೆಯನ್ನಿಡು, ನಿನ್ನ ಮಗನನ್ನು ಬಿಡಬೇಡ,' ಎಂಬ ವಿಚಾರಗಳೂ ತಲೆದೋರುತಿದ್ದವು.

ಮನಸ್ಸಿನಲ್ಲಿ ಈ ತಿಕ್ಕಾಟ ನಡೆದಿತ್ತು. ರಾತ್ರಿಯಾಯಿತು. ನಾನು ಮಣಿಲಾಲನನ್ನು ಬದಿಗಿರಿಸಿಕೊಂಡು ಮಲಗಿದ್ದೆನು. ತೋಯಿಸಿ ಹಿಂಡಿದ ಬಟ್ಟೆಗಳಲ್ಲಿ ಅವನನ್ನು ಇಡಬೇಕೆಂದು ನಿಶ್ಚಯಿಸಿದೆನು. ನಾನು ಎದ್ದೆ, ಬಟ್ಟೆ ತೆಗೆದುಕೊಂಡೆ. ನೀರಲ್ಲಿ ಅದ್ದಿ ಹಿಂಡಿ ಅದನ್ನು ಮಣಿಲಾಲನ ಕಾಲಿನಿಂದ ತಲೆಯವರೆಗೆ ಸುತ್ತಿದೆ, ಮೇಲೆ ಎರಡು ಕಂಬಳಿಗಳನ್ನು ಹೊಚ್ಚಿದೆ. ಹಣೆಯ ಮೇಲೆ ತೋಯಿಸಿದ ಟಾವೆಲ್ಲನ್ನು ಇಟ್ಟೆ. ಅವನ ಶರೀರವು ಕಾಸಿದ ಹಂಚಿನಂತೆ ಇತ್ತು. ಬೆವರಂತೂ ಕೊಂಚು ಸಹ ಇರಲಿಲ್ಲ.

ನಾನು ಬಹಳ ದಣಿದಿದ್ದೆ, ಮಣಿಲಾಲನನ್ನು ಅವನ ತಾಯಿಗೆ ಒಪ್ಪಿಸಿ ನಾನು ಒಂದು ಅರ್ಧ ತಾಸಿನಷ್ಟು ವೇಳೆ ಬೈಲು ಹವೆಗಾಗಿ ಹಾಗೂ ಶಾಂತಿಗಾಗಿ ಚೌಪಾಟಿಯ ಮೇಲೆ ತಿರುಗಾಡಲು ಹೋದೆ. ರಾತ್ರಿ ಹತ್ತು ಗಂಟೆ ಆಗಿರಬಹುದು, ಜನರು ತಿರುಗಾಡುವದು ಕಡಿಮೆಯಾಗಿತ್ತು. ಆದರೆ ಅತ್ತ ನನ್ನ ಲಕ್ಷವಿರಲಿಲ್ಲ. ವಿಚಾರ-ಸಾಗರದಲ್ಲಿ ನಾನು ಮುಳುಗಿದ್ದೆ--‘ದೇವರೆ, ಈ ಧರ್ಮ ಸಂಕಟದಲ್ಲಿ ನನ್ನನ್ನು ಸಂರಕ್ಷಿಸು. ಬಾಯಿಂದ ರಾಮನಾಮ ಜಪವಂತೂ ನಡೆದೇ ಇತ್ತು. ಸ್ವಲ್ಪ ವೇಳೆಯ ನಂತರ ನಾನು ಮನೆಗೆ ಬಂದೆ. ನನ್ನ ಎದೆ ಹಾರುತಿತ್ತು. ನಾನು ಮನೆ ಹೊಕ್ಕೊಡನೆ ‘ಬಾಪೂ, ಬಂದು ಬಿಟ್ಟಿರಾ ?’ ಎಂದು ಮಣಿಲಾಲನು ಕೂಗಿದನು !

‘ಹೌದಪ್ಪಾ,’ ಎಂದೆನು.

‘ನನ್ನನ್ನು ಇದರಿಂದ ಹೊರಗೆ ತೆಗೆಯುವದಿಲ್ಲವೆ? ನಾನು ಉರಿಯಿಂದ ಸಾಯುತಲಿದ್ದೇನೆ.’

‘ಏಕೆ ? ಬೆವರು ಬಿಡುತಿರುವುದೊ ?’

‘ಏನು ಹೇಳಲಿ ? ಬೆವರಿನಿಂದ ಬೇಸತ್ತಿರುವೆ. ಇನ್ನಾದರೂ ನನ್ನನ್ನು ಇದರಿಂದ ಪಾರುಗಾಣಿಸಿರಿ.’

ಮಣಿಲಾಲನ ಹಣೆಯನ್ನು ನೋಡಿದೆ, ಬೆವರಿನ ಹನಿಗಳು ಮುತ್ತಿನಂತೆ ಹೊಳೆಯುತಿದ್ದವು. ಜ್ವರ ಇಳಿಯಲಾರಂಭಿಸಿತ್ತು. ನಾನು ದೇವರಿಗೆ ಧನ್ಯವಾದಗಳನರ್ಪಿಸಿದೆ.

'ಮಗನೇ, ಗಾಬರಿಯಾಗಬೇಡ. ಇನ್ನು ನಿನ್ನ ಜ್ವರ ಇಳಿದು ಹೋಗುವದು, ಇನ್ನು ಸ್ವಲ್ಪ ಬೆವರು ಬಂದರೆ ಒಳಿತಲ್ಲವೆ?' ಎಂದೆನು. ಅವನು ಅಂದದ್ದು, 'ಇಲ್ಲ ಅಪ್ಪಾ! ಈಗಂತೂ ನನ್ನನ್ನು ಪಾರು ಗಾಣಿಸಿರಿ, ಮುಂದೆ ನೋಡುವ.'

ನನಗೆ ಧೈರ್ಯ ಬಂದಿತ್ತು. ಆದುದರಿಂದ ಮಾತು ಮಾತಿನಲ್ಲಿ ಹಲವು ಕಾಲ ಕಳೆದೆ. ತಲೆಯಿಂದ ಬೆವರಿನ ಧಾರೆ ಹರಿಯಿತು. ಹೊದ್ದುಕೊಳ್ಳುವುದನ್ನು ತೆಗೆದು ಮೈ ಒರಸಿಬಿಟ್ಟೆ. ತಂದೆ-ಮಕ್ಕಳಿಬ್ಬರೂ ಸುಖದಿಂದ ಮಲಗಿದೆವು. ಇಬ್ಬರೂ ಹೊಟ್ಟೆತುಂಬ ಮಲಗಿದೆವು.

ಮುಂಜಾನೆ ನೋಡಲಾಗಿ ಮಣಿಲಾಲನ ಜ್ವರ ಎಷ್ಟೋ ಕಡಿಮೆ ಯಾಗಿತ್ತು. ಹಾಲು, ನೀರು ಮತ್ತು ಹಣ್ಣುಗಳ ಮೇಲೆ ನಾಲ್ವತ್ತು ದಿನ ಇದ್ದನು. ನನ್ನ ಅಂಜಿಕೆ ದೂರಾಗಿತ್ತು. ಜೀರ್ಣ ಜ್ವರ, ಆದರೆ ಹಿಡಿತದಲ್ಲಿ ಬಂದಿದ್ದವು. ಈ ಹೊತ್ತು ನನ್ನ ಎಲ್ಲ ಮಕ್ಕಳಲ್ಲಿ ಮಣಿಲಾಲನೆ ಎಲ್ಲಕ್ಕೂ ನಿರೋಗಿ ಹಾಗೂ ಗಟ್ಟಿಮುಟ್ಟಿ ಇರುವನು.

ಇದೆಲ್ಲ ದೇವರ ಕೃಪೆಯೊ, ಜಲ ಚಿಕಿತ್ಸೆಯ ಪರಿಣಾಮವೊ ಅಲ್ಪಾಹಾರದ ಮಹಾತ್ಮ್ಯವೊ ಇದನ್ನು ನಿರ್ಣಯಿಸುವವರಾರು? ಎಲ್ಲರೂ ತಮ್ಮ ತಮ್ಮ ಶ್ರದ್ಧೆಗನುಸರಿಸಿಯೆ ತಿಳಿಯುತಿರಬಹುದು, ನಡೆಯುತಿರಬಹುದು. ಆದರೆ ಆ ಪ್ರಸಂಗದಲ್ಲಿ ಮಾತ್ರ ದೇವರೆ ನನ್ನ ಕೈವಾರಿಯಾದನು. ಆಗ ಹೀಗೆಯೆ ಭಾವಿಸಿದೆನು. ಈಗ್ಯೂ ಅದೇ ನನ್ನ ಭಾವನೆ.'

ಗಾಂಧೀಜಿಯವರ ಈ ಪ್ರಯೋಗವು 'ಕುಂಟಗಾಲ ವೈದ್ಯ' ರ ಪ್ರಯೋಗದಂತಹದು ಎಂದು ನನಗೆ ಹಾಗೂ ಕದಾಚಿತ್ ನನ್ನಂತೆ

ಹಲವರಿಗೆ ಎನಿಸುವದು. ಅವರು ಈ ಹೊಣೆ ಹೊರತಕ್ಕದ್ದಿದ್ದಿಲ್ಲ. ಆದರೆ 'ಡಾಕ್ತರರಾದರೂ ಎದೆ ಮೇಲಿನ ಕೈ ಎಂದು ಹೇಳುವರೆ? ಧರ್ಮವಿರುದ್ಧವಾದ ಮಾತನ್ನು ಜೀವರಕ್ಷಣೆಗಾಗಿಯಾದರೂ ನಾವು ಹೇಗೆ ಮಾಡಬೇಕು,' ಎಂದು ಗಾಂಧೀಜಿಯುವರು ಕೇಳುವರು.

ಮೂರನೆ ಮಗನಾದ ರಾಮದಾಸನಿಗೆ ಏನೋ ಪೆಟ್ಟು ಬಿದ್ದಿತ್ತು. ಅವನ ಮೇಲೆ ಸಹ ಮಣ್ಣಿನ ಪೋಟೀಸಿನ ಪ್ರಯೋಗವು ಮಾಡಲಾಯಿತು. ಅದೂ ಒಂದು ಸಾಧಾರಣ ಮಾತೇ ಇತ್ತು. ಆದರೆ ಅದನ್ನು ಕುರಿತು ಹೇಳುವಾಗ ಕೂಡ ಗಾಂಧೀಜಿಯುವರು ದೇವರ ಹೆಸರನ್ನೆ ಎತ್ತುವರು. 'ನನ್ನ ಪ್ರಯೋಗಗಳು ಪೂರ್ಣ ಯಶಸ್ವಿಯಾದವೆಂದು ನಾನು ಹೇಳುವುದಿಲ್ಲ. ಆದರೆ ಡಾಕ್ತರರಾದರೂ ತಮ್ಮ ಪ್ರಯೋಗಗಳ ಬಗ್ಗೆ ಈ ಬಗೆಯಿಂದ ಎಲ್ಲಿ ಜಂಭ ಕೊಚ್ಚಿಕೊಳ್ಳುತ್ತಾರೆ? ನಾನು ಇಲ್ಲಿ ಈ ವಿಷಯುವನ್ನು ಹೇಳುವ ಕಾರಣವೇನಂದರೆ, ಇಂಥ ಹೊಸ ಪ್ರಯೋಗಗಳನ್ನು ಮಾಡಲಿಚ್ಛಿಸುವವರು ತಮ್ಮ ಮೇಲೆಯೆ ಮೊದಲು ಪ್ರಯೋಗ ಮಾಡಿ ನೋಡಬೇಕು. ಹೀಗೆ ಮಾಡಿದರೆ ಸತ್ಯವು ಬೇಗನೆ ಹಸ್ತಗತವಾಗುವುದು. ದೇವರು ಇಂಥ ಪ್ರಯೋಗಿಗಳನ್ನು ರಕ್ಷಿಸುವನು.'

ಅವರ ವೃತ್ತಿ ಹೀಗೆ. ಪ್ರಪಂಚದ ದೃಷ್ಟಿಯಿಂದ ನೋಡಿದರೆ ಗಾಂಧೀಜಿಯುವರ ಈ ಮಾತುಗಳು ಅವ್ಯವಹಾರಿಕವೆನಿಸುವವು. ಪ್ರಪಂಚದ ದೃಷ್ಟಿ ಅಂದರೆ ಯಾವುದಕ್ಕೆ ಜನರು ಸಾಮಾನ್ಯ ವ್ಯವಹಾರ ದೃಷ್ಟಿ ಎನ್ನುವರೊ ಅದು. ಯಥಾರ್ಥವಾಗಿ ನೋಡಿದರೆ ಅಧ್ಯಾತ್ಮ ಹಾಗೂ ವ್ಯವಹಾರ ಇವು ವಿಸಂಗತವಿರಲರಿಯುವು. ಅಧ್ಯಾತ್ಮವು ವ್ಯವಹಾರದಲ್ಲಿ ಪ್ರಕಟವಾಗದೆ ಹೋದರೆ ಅದೊಂದು ಕೇವಲ ಕಾಲ್ಪನಿಕ ವಸ್ತು ಆಗಿ ಉಳಿಯುವುದು. ಹೀಗಿದ್ದರೂ ಯಾವುದು ನಮ್ಮ ಕ್ಷೇತ್ರವಲ್ಲವೊ ಅದರಲ್ಲಿ ನಾವು ಕೈಯಿಕ್ಕಲು ನಮಗೆ ಅಧಿಕಾರವೇನು, ಎಂದು ನಾವು ಸಹಜವಾಗಿ ಅನ್ನಬಹುದು. ಡಾಕ್ತರರು ಪೂರ್ಣ ಜ್ಞಾನಿಗಳಲ್ಲ ಎಂಬುದು ನಿಜ. ಆದರೆ ಡಾಕ್ತರ ವಿದ್ಯೆಯನ್ನು

ಕಲಿಯದೆ ಇದ್ದವರು ಅವರಿಗಿಂತ ಅಪೂರ್ಣರು ಎಂದು ಹೇಳಬೇಕಾಗುವುದು. ಇದಕೆ, 'ನಿಸರ್ಗ ಚಿಕಿತ್ಸೆಯ ಪ್ರಯೋಗಗಳಿಂದ ಲಾಭವು ಹೆಚ್ಚಾಗಬಹುದು ಇಲ್ಲವೆ ಕಡಿಮೆಯಾಗಬಹುದು, ಆದರಿಂದ ಹಾನಿ ಎಂದೂ ಆಗದು, ಆ ಚಿಕಿತ್ಸೆಯೆ ಅಂತಹದು,' ಎಂದು ಗಾಂಧೀಜಿಯವರು ಉತ್ತರ ಕೊಡುವರು.

ಈಗ್ಯೂ ಇಂಥ ಪ್ರಯೋಗಗಳತ್ತ ಗಾಂಧೀಜಿಯವರ ಒಲವು ಕಡಿಮೆಯಾಗಿಲ್ಲವೆಂಬುದನ್ನು ನಾನು ಹೇಳಬಲ್ಲೆ. ಈಹೊತ್ತು ಕೂಡ ಆಶ್ರಮದಲ್ಲಿ ಕ್ಷಯ, ಕುಷ್ಟ, ಮುಂತಾದ ರೋಗಗಳಿಂದ ಪೀಡಿತರಾದವರು ಇರುವರು ಹಾಗೂ ಅವರ ಚಿಕಿತ್ಸೆಯತ್ತ ಗಾಂಧೀಜಿಯವರು ಲಕ್ಷ ಪೂರೈಸುವರು. ಅವರ ಸೇವಾಭಾವವೊಂದು ಇದರಲ್ಲಿ ಸ್ಪಷ್ಟವಾಗುವುದು. ರೋಗಿಗಳ ಸೇವೆ ಹಾಗೂ ಪತಿತರ ರಕ್ಷಣ ಇವು ಅವರ ಸ್ವಾಭಾವಿಕ ಪ್ರವೃತ್ತಿಗಳು. ಇದಲ್ಲದೆ ಅವರಿಗೆ ತಿಳಿದು ತಿಳಿಯದೆ ಇನ್ನು ಒಂದು ಭಾವನೆ ಅವರಲ್ಲಿರಬಲ್ಲದು. ಅದೇನೆಂದರೆ, ಈ ಬಡ ದೇಶದಲ್ಲಿ ಬಹಳ ಹಣ ಬೇಕಾಗುವ ಚಿಕಿತ್ಸೆಗಿಂತ ಸುಲಭ, ಸಾದಾ, ಹಳ್ಳಿಗಳಲ್ಲಿ ಸಹ ಮಾಡಲು ಬರುವಂಥ, ಹಣಕಾಸು ವಿಶೇಷ ಬೇಕಾಗದೆ ಇರುವ ಚಿಕಿತ್ಸೆ ಹೆಚ್ಚು ಉಪಯುಕ್ತವಾಗಬಲ್ಲದು. ಈ ದೃಷ್ಟಿಯಿಂದಲೂ ಅವರ ಪ್ರಯೋಗಗಳು ನಡೆದಿವೆ. ಆ ಪ್ರಯೋಗಗಳನ್ನು ಮಾಡುತಿರುವಾಗ ಉಪಯುಕ್ತ ಉಪಾಯಗಳು ದೊರಕುವ ಆಶೆ ಅವರಿಗಿದೆ. ಈ ಪ್ರಯೋಗಗಳು ಸೇವೆಗಾಗಿ ಹಾಗೂ ಸೇವಾದೃಷ್ಟಿಯಿಂದ ಮಾಡಲಾಗುತ್ತಿವೆ. ಈ ಪ್ರಯೋಗಗಳನ್ನು (ದೇವರಲ್ಲಿ ಭರವಸೆ ಇಟ್ಟು) ಮಾಡದೆ ಹೋದರೆ ಮನಸ್ಸಿನಲ್ಲಿ ಸಂಕಲ್ಪ ವಿಕಲ್ಪಗಳ ಗೊಂದಲವು ಸಾಕಷ್ಟು ಎದ್ದು ಅಶಾಂತಿ ಉತ್ಪನ್ನವಾಗುವುದು. ಏನೇ ಇರಲಿ, ಪ್ರಸ್ತುತ ಪ್ರತಿಕೆಲಸದಲ್ಲಿ ಹಾಗೂ ಪ್ರತಿಕ್ಷಣ ಗಾಂಧೀಜಿಯವರ ಈಶ ಶ್ರದ್ಧೆ ಸತತ ಜೀವಂತವಿದೆ, ಎಂದು ಹೇಳುವುದೆ ನನ್ನ ಉದ್ದೇಶ.

ಒಮ್ಮೆ ಗಾಂಧೀಜಿಯವರು ಅಂದದ್ದು, 'ನನ್ನಿಂದಾಗುವ ಎಲ್ಲ ಕೆಲಸಗಳೂ ಪರಮಾತ್ಮ ಪ್ರೇರಣೆಯಿಂದಾಗುವವು ಎಂದು ನಾನು

ನಿಶ್ಚಯಪೂರ್ವಕವಾಗಿ ಹೇಳಲಾರೆ. ಆದರೆ ನನ್ನ ಎಲ್ಲ ಸಣ್ಣ ದೊಡ್ಡ ಕೆಲಸಗಳ ಕಥೆಯನ್ನು ನೋಡಿದರೆ ಅವು ಈಶ ಪ್ರೇರಣೆಯಿಂದ ಮಾಡಲಾದವು' ಎಂದು ಹೇಳುವುದು ಅಯೋಗ್ಯವಾಗಲಿಕ್ಕಿಲ್ಲ. ನಾನು ದೇವರನ್ನು ಪ್ರತ್ಯಕ್ಷ ನೋಡಿಲ್ಲ. ಆದರೆ ಅವನಲ್ಲಿಯ ನನ್ನ ಶ್ರದ್ಧೆ ಅಢಳವಿರುವುದು ಹಾಗೂ ಈಗ ಆ ಶ್ರದ್ಧೆ ಅನುಭವರೂಪದಿಂದ ವ್ಯೈವೆತ್ತಿದೆ. ಶ್ರದ್ಧೆಗೆ ಅನುಭವ ಎಂಬ ಅಪರನಾಮವನ್ನಿಡುವುದು ಸತ್ಯದ ಅಪಮಾನವು ಎಂದು ಹಲವರು ಅನ್ನಬಹುದು. ಆದರೆ ದೇವರಲ್ಲಿರುವ ನನ್ನ ಶ್ರದ್ಧೆಗೆ ಬೇರೆ ಹೆಸರು ಇಡಲು ನನ್ನ ಬಳಿ ಶಬ್ದಗಳಿಲ್ಲ ಎಂದು ನಾನು ಒಪ್ಪುವೆನು.'

ಗಾಂಧೀಜಿಯವರು ಬ್ರಹ್ಮಚರ್ಯದ ಬಗ್ಗೆ ಬರೆಯುವಾಗ ಸಹ ಅದೇ ರಾಮನಾಮವನ್ನು ಸಾಧಕರೆದುರು ಇಡುವರು: 'ಪರಮಾತ್ಮನಿಗೆ ಪೂರ್ಣ ಶರಣಾಗತರಾಗದ ಹೊರತು ಮನಸಿನ ಮೇಲೆ ಪ್ರಭುತ್ವವನ್ನು ದೊರಕಿಸುವುದು ಅಸಂಭವ. ಪೂರ್ಣ ಬ್ರಹ್ಮಚರ್ಯಪಾಲನದ ನನ್ನ ಸತತ ಪ್ರಯತ್ನದಲ್ಲಿ ಪ್ರತಿಕ್ಷಣವೂ ನನಗೆ ಈ ಸಾದಾ ಸತ್ಯದ ಅನುಭವವು ಬರುತಿರುವುದು.'

ಆಫ್ರಿಕೆಯಲ್ಲಿರುವಾಗ ಒನ್ಮೆ ಕಸ್ತೂರಬಾ ಇವರಿಗೆ ಭಯಂಕರ ಜಡ್ಡಾಯಿತು. ಆಗ ಮಾಂಸಾಹಾರದ ಪ್ರಶ್ನೆ ಬಂದಿತು. ಗಾಂಧೀಜಿ ಹಾಗೂ ಕಸ್ತೂರಬಾ ಇವರಿಬ್ಬರೂ ಡಾಕ್ತರರ ಅಭಿಪ್ರಾಯವನ್ನು ನಿರಾಕರಿಸಿದರು. ಆಗ ಸಹ ಸಾಯುವ ಬದುಕುವ ಪ್ರಶ್ನೆ ಇದ್ದಿತು. ಆ ಸಂದರ್ಭದಲ್ಲಿಯೂ ಗಾಂಧೀಜಿಯವರ ಉದ್ಗಾರಗಳು ಅವೇ: 'ದೇವರಲ್ಲಿ ವಿಶ್ವಾಸವಿಟ್ಟು ನಾನು ನನ್ನ ಮಾರ್ಗವನ್ನು ಬಿಡಲಿಲ್ಲ.' ಕೊನೆಗೆ ಅವರಿಗೆ ಗೆಲವಾಯಿತು.

ಇದಕೂ ಸಣ್ಣ ಮಾತುಗಳ ಬಗ್ಗೆ ಮಾತಾಡುವಾಗ ಸಹ ಗಾಂಧೀಜಿಯವರು ಪರಮಾತ್ಮನ ಲೀಲೆಯನ್ನು ವರ್ಣಿಸುವರು. ಈ ದೇಶಕ್ಕೆ ಬಂದಬಳಿಕ ಸಂಚಾರ ಮಾಡುವಾಗೆಲ್ಲ ಮೂರನೆ ವರ್ಗದಲ್ಲಿಯೆ ಪ್ರವಾಸ ಮಾಡುತಿದ್ದರು. ಆ ಕಾಲದಲ್ಲಿ ಗಾಂಧೀಜಿಯವರ

ಹೆಸರು ಸರ್ವಶ್ರುತವಾಗಿದ್ದರೂ ಈಗಿನಂತೆ ಅವರನ್ನು ನೋಡಿದೊಡನೆ ಎಲ್ಲರೂ ಗುರುತಿಸುತಿರಲಿಲ್ಲ. ಹೋದಲ್ಲಿ ಜನರಿಗೆ ತಿಳಿದೊಡನೆ ದರ್ಶನಾರ್ಥವಾಗಿ ಗುಂಪುಗುಂಪಾಗಿ ಜನರು ಬಂದು ಬಿಡುತಿದ್ದರು. ಹಾಗೂ ಅವರಿಗೆ ಏಕಾಂತವು ದೊರೆಯುವುದು ಸಹ ಕಠಿಣವಾಗುತಿತ್ತು. ಆದರೆ ಗಾಡಿಯಂಥ ಸ್ಥಳದಲ್ಲಿ ಜನರು ಅವರನ್ನು ಗುರುತಿಸದೆ ಹೋದಲ್ಲಿ ಅವರಿಗೆ ಸಾಕಷ್ಟು ಸ್ಥಳ ದೊರೆಯುವದು ದುಸ್ತರವಾಗುತಿತ್ತು. ಮೇಲಾಗಿ ಅವರು ಒಂಟಿಗರಾಗಿ ತಿರುಗಾಡುತಿದ್ದರು.

ಈ ಮಾತಿಗೆ ಬಹಳ ವರ್ಷಗಳಾದವು. ಗಾಂಧೀಜಿಯವರು ಲಾಹೋರದಿಂದ ದಿಲ್ಲಿಗೆ ಹೊರಟಿದ್ದರು. ಅಲ್ಲಿಂದ ಮತ್ತೆ ಕಲಕತ್ತೆಗೆ ಹೋಗಬೇಕಾಗಿತ್ತು. ಕಲಕತ್ತೆಯಲ್ಲಿ ಒಂದು ಸಭೆ ಇದ್ದುದರಿಂದ ಸಕಾಲಕ್ಕೆ ಹೋಗಬೇಕಾಗಿತ್ತು. ಆದರೆ ಲಾಹೋರ ಸ್ಟೇಶನ್ನಿನಲ್ಲಿ ಗಾಡೀ ಹತ್ತುವಾಗ ಸ್ಥಳವೇ ಇರಲಿಲ್ಲ. ಕೊನೆಗೆ ಹನ್ನೆರಡು ಆಣೆ ಕೊಟ್ಟರೆ ಸ್ಥಳಮಾಡಿ ಕೂಡಿಸುವೆನೆಂದು ಒಬ್ಬ ಕೂಲಿಯು ಇವರೊಡನೆ ಕರಾರು ಮಾಡಿದನು. ಗಾಂಧೀಜಿ ಅದಕೆ ಒಪ್ಪಿದರು. ಆದರೂ ಸ್ಥಳವಿರಲಿಲ್ಲ. ಒಂದು ಡಬ್ಬಿಯವರು ಅಂದದ್ದು, 'ಸ್ಥಳವಂತೂ ಇಲ್ಲ, ಬೇಕಾದರೆ ನಿಲ್ಲಬಹುದು.' ಹೇಗಾದರೂ ಗಾಡಿಯಲ್ಲಿ ಕೂಡ ಬೇಕಿತ್ತು. ಆದುದರಿಂದ ನಿಲ್ಲಲು ಒಪ್ಪಿದರು. ಇವರನ್ನು ಕೂಲಿಯು ಖಿಡಕಿಯೊಳಗಿಂದ ಒಳಗೆ ನೂಕಿ ತನ್ನ ಹನ್ನೆರಡು ಆಣೆ ದೊರಕಿಸಿದನು!

ರಾತ್ರಿಯ ವೇಳೆ, ನಿಂತು ಕಳೆಯಬೇಕು. ಹಾಗೆ ಎರಡು ತಾಸು ಗತಿಸಿದವು. ದುರ್ಬಲ ಶರೀರ, ದಣುವು, ಗಾಡಿಯಲ್ಲಿಯ ಗದ್ದಲ, ಹೊಗೆ, ಧೂಳ ಮೇಲೆ ಮತ್ತೆ ನಿಂತು ಪ್ರವಾಸ. ಲಕ್ಕಾಲಕ್ಕಿ ಮಾಡುವ ಜನರೆಲ್ಲ ಕಾಲುಚಾಚಿ ಯಥೇಚ್ಛ ಮಲಗಿಬಿಟ್ಟಿದ್ದರು. ಇವರು ಕೂಡಲು ಸಹ ಸ್ಥಳವನ್ನು ಬೇಡಲಿಲ್ಲ. ಇದೊಂದು ವಿಲಕ್ಷಣ ವ್ಯಕ್ತಿ ಇದೆ, ಕೂಡಲು ಸಹ ಇವನು ಧಡಪಡಿಸುವುದಿಲ್ಲ, ಎಂಬುದನ್ನು ಹಲವರು ನೋಡಿದರು. ಬರಬರುತ್ತ ಜನರ ಕುತೂಹಲ ಹೆಚ್ಚಾಯಿತು.

'ಹಿರಿಯರೇ, ಕೂಡುವದಿಲ್ಲೇಕೆ?' ಎಂದು ಹಲವರು ಕೇಳಿದರು. 'ಸ್ಥಳವೆಲ್ಲಿ?' ಎಂದು ಇವರು ಪ್ರಶ್ನೆ ಮಾಡಿದರು. ಕೊನೆಗೆ ಜನರು ಹೆಸರು ಕೇಳಲಾರಂಭಿಸಿದರು. ಹೆಸರು ತಿಳಿದೊಡನೆ ಒಮ್ಮೆಲೆ ಅಲ್ಲಿ ಶಾಂತಿ ಪಸರಿಸಿತು. ನಾಚಿಕೆಯಿಂದ ಜನರು ತಲೆ ಕೆಳಗೆ ಹಾಕಿದರು. ಕೈಕಾಲು ಚಾಚಿದವರು ಮೆಲ್ಲನೆ ಎಳಕೊಳ್ಳಲಾರಂಭಿಸಿದರು. ಹಲವರು ಕ್ಷಮೆ ಬೇಡಿದರು, ಸ್ಥಳ ಕೊಟ್ಟು ಮಲಗಲು ಅವಕಾಶ ಮಾಡಿ ಕೊಟ್ಟರು. ದಣಿದು ಅವರಿಗೆ ಪ್ರೈಮರೆತಂತಾಗಿತ್ತು, ತಲೆ ತಿರುಗಲಾರಂಭಿಸಿತ್ತು. ಈ ಮಾತನ್ನು ಹೇಳುವಾಗ ಕೂಡ ಗಾಂಧೀಜಿಯವರು ಇದರಲ್ಲಿ ದೇವರ ಕರುಣೆ ಇತ್ತು ಎನ್ನುವರು: 'ಅತ್ಯಂತ ಅವಶ್ಯವಿದ್ದಾಗ ದೇವರು ನನಗೆ ಸಹಾಯ ಮಾಡಿರುವನು.'

ನೀಲಿ ತೋಟಗಳಲ್ಲಿ ಬಿಳಿಯರ ಅತ್ಯಾಚಾರದಿಂದ ಪೀಡಿತರಾದ ಒಕ್ಕಲಿಗರ ಕಷ್ಟಗಳನ್ನು ಕಳೆಯಲು ಅವರು ಚಂಪಾರಣ್ಯಕ್ಕೆ ಹೋದಾಗ ಅಲ್ಲಿ ರೈತರ ಸಭೆ ಕೂಡುತಿದ್ದುವು. ದೂರದೂರದಿಂದ ಬಂದು ಒಕ್ಕಲಿಗರು ಸಭೆಯಲ್ಲಿ ಭಾಗವಹಿಸುತಿದ್ದರು. ಆ ಸಭೆಗಳಿಗೆ ಹೋದಾಗ ಪರಮಾತ್ಮನ ಮುಂದೆ ನಿಂತಂತೆ ಅವರ ಭಾವನೆಯಾಗುತಿತ್ತು: 'ಇದು ಅತ್ಯುಕ್ತಿಯಲ್ಲ, ಸಾಕ್ಷಾತ್ ಸತ್ಯವಿದು. ನಾನು ಆ ಸಭೆಯಲ್ಲಿ ಪರಮಾತ್ಮ, ಅಹಿಂಸೆ, ಸತ್ಯ ಈ ಮೂರೂ ವಸ್ತುಗಳ ಸಾಕ್ಷಾತ್ಕಾರವನ್ನು ಪಡೆದೆನು.' ಅವರನ್ನು ಅಲ್ಲಿ ಸೆರೆಹಿಡಿದರು. ಅವರು ಅಧಿಕಾರಿಗಳೆದುರು ನಿವೇದನೆ ಕೊಟ್ಟರು. ಅದು ಅತ್ಯಂತ ಪ್ರಭಾವಶಾಲಿಯೂ ಸೌಜನ್ಯ ಪೂರ್ಣವೂ ಇತ್ತು. ಆ ಸಂದರ್ಭದಲ್ಲಿಯೂ ಕೊನೆಗೆ, 'ಮ್ಯಾಜಿಸ್ಟ್ರೇಟ ಸಾಹೇಬರೆ, ನನ್ನ ಅಪರಾಧವನ್ನು ದುರ್ಲಕ್ಷಿಸಿ, ನನಗೆ ಕಡಿಮೆ ಶಿಕ್ಷೆ ಕೊಡಬೇಕೆಂದು ನಾನು ಈಗ ಈ ಮಾತುಗಳನ್ನು ಹೇಳುವುದಿಲ್ಲ. ಸರಕಾರದ ಬಗ್ಗೆ ನನಗೆ ಆದರ ಬುದ್ಧಿ ಇಲ್ಲ ಎಂದು ನಾನು ನಿಮ್ಮ ಆಜ್ಞೆಯ ಭಂಗಮಾಡಿಲ್ಲ. ಆದರೆ ದೇವರ ಆಜ್ಞೆಯನ್ನು ಮೀರಿ ನಿಮ್ಮ ಆಜ್ಞೆಯನ್ನು ನಾನು ಪಾಲಿಸುವುದು ಅಶಕ್ಯವಿತ್ತು,' ಎಂದು ಗಾಂಧೀಜಿಯವರು ಹೇಳಿದರು.

ಇದು ಅಸಾಧಾರಣವಾದ ವಚನವು. ಒಂದು ಬಗೆಯಿಂದ ನೋಡಿದರೆ ಇದು ಭಯಂಕರವಾದುದು. ಪ್ರತಿಯೊಬ್ಬನು ಈ ರೀತಿ ಹೇಳತೊಡಗಿದರೆ ಮುಂದೆ ಗತಿಯೇನು ? 'ಒಳನುಡಿ,' 'ಅಂತ-ರ್ನಾದ,' 'ಆಕಾಶವಾಣಿ,' ಕೇಳುವುದು ಪ್ರತಿಯೊಬ್ಬನ ದೈವದಲ್ಲಿ ಇರಲರಿಯದು. ಇದಕೆ ಯೋಗ್ಯತೆ ಬೇಕು, ತ್ಯಾಗತಪಗಳಿಂದ ಪುನೀತವಾದ ಕರ್ಮ ಬೇಕು, ಸತ್ಯ ಬೇಕು, ಸಾಹಸ ಬೇಕು, ವಿವೇಕ ಸಮಾನತ್ವ ಅಪರಿಗ್ರಹಾದಿ ಗುಣಗಳು ಬೇಕು. ಕೇವಲ ಸೇವೆಗೆ ಜೀವನವನ್ನು ಧಾರೆ ಎರೆದವನು, ಲಾಭ ಹಾನಿಗಳನ್ನು ಕುರಿತು ಅನಾ ಸಕ್ತನಿರುವವನು, ಮಮತ್ವರಹಿತನು, ಕರ್ಮಯೋಗಿಯು, ದೇವರಲ್ಲಿ ಆತ್ಯಂತಿಕ ಶ್ರದ್ಧೆ ಇದ್ದವನು, ನಿತಾಂತ ನಿರಭಿಮಾನಿಯು—ಇಂಥವ ನಿಗೆ ಅಂತರ್ನಾದವು ಕೇಳಿಸಬಲ್ಲದು. ಇನ್ನು ಬರಿ ನಕಲನ್ನು ಬೇಕಾ ದವರು ಮಾಡಬಲ್ಲರು. 'ನನ್ನ ಒಳನಾಡಿ ಹೀಗೆ ಹೇಳುವುದು' ಎಂದು ಹಲವರು ಸಾರಲಾರಂಭಿಸಿದ್ದಾರೆ. ಹೀಗೆ ಗಾಂಧೀಜಿಯವರ ನಕಲು ಮಾಡುವುದು ಭಯಪ್ರದವೆಂಬುದು ನಿಜ. ಆದರೆ ಜಗತ್ತಿನಲ್ಲಿ ಯಾವ ಒಳ್ಳೆ ವಸ್ತುವಿನ ದುರುಪಯೋಗವನ್ನು ಜನರು ಮಾಡದೆ ಬಿಡುವರು ?

ಇಲ್ಲಿ ಗಾಂಧೀಜಿಯವರು ದೇವರಲ್ಲಿ ಇಟ್ಟ ದೃಢ ಶ್ರದ್ಧೆಯನ್ನು ತೋರಿಸುವುದೆ ಉದ್ದೇಶವು. ಮಗನ ಜ್ವರ ದೇವರ ಇಚ್ಛೆಯಿಂದ ಇಳಿ ಯುವುದು, ಗಾಡಿಯಲ್ಲಿ ಸ್ಥಳ ದೊರೆಯುವುದು ಅವನ ಕೃಪೆಯಿಂದ. ಸರಕಾರೀ ಹುಕುಮಿನ ಭಂಗವೂ ದೇವರ ಆಜ್ಞೆಯಿಂದ ಆಗುವುದು, ಇದು ಗಾಂಧೀಜಿಯವರ ವೃತ್ತಿ. ವ್ಯವಹಾರಿಕ ಭಾಷೆ ನುಡಿಯುವವರು ಇಂಥವರೊಡನೆ ಮಾತಾಡುವಾಗ ಒಮ್ಮೊಮ್ಮೆ ರೊಚ್ಚಿಗೇಳುವರು. ವ್ಹಾಯಿಸರಾಯ ವಿಲಿಂಗಡನ್ನನೂ ಅದೇ ರೀತಿ ರೊಚ್ಚಿಗೇಳುತ್ತಿದ್ದನು. ಆದರೆ ಗಾಂಧೀಜಿಯಂಥವರ ಹೊರತು ಕೆಲಸವೂ ನಡೆಯುವುದಿಲ್ಲ ! ಸಿಟ್ಟಿದ್ದರೂ ಇರಲಿ. ಒಗಟಿನಂಥ ಮಾತಿನ ತೊಡಕು ಎದುರಾದರೂ ಆಗಲಿ. ಗಾಂಧೀಜಿಯವರಂಥವರಿಂದಲೆ ಕೆಲಸವಾಗಬೇಕಲ್ಲವೆ ? ರಾಜಕೋಟದಲ್ಲಿ ಗಾಂಧೀಜಿಯವರು ಆಮರಣ ಉಪವಾಸವನ್ನು

ಹೊಡಿದಾಗ ಲಿನ್‌ಲಿಥ್‌ಗೋ ಇವರು ತಂತೀ ಕೊಟ್ಟರು: 'ನೀವು ಉಪವಾಸ ಮಾಡುವ ಪೂರ್ವದಲ್ಲಿ ಕನಿಷ್ಟ ನನಗೆ ತಿಳಿಸಬೇಕಿತ್ತು. ನೀವು ನನ್ನನ್ನು ಚನ್ನಾಗಿ ಅರಿತಿರುವಿರಿ. ನೀವು ಒಮ್ಮೆಲೆ ಇದನೇಸು ಮಾಡಿದಿರಿ?' ಗಾಂಧೀಜಿ ಅವರಿಗೆ ಉತ್ತರಿಸಿದ್ದೇನಂದರೆ, 'ನಾನೇನು ಮಾಡಬಲ್ಲೆ? ಅಂತರ್ನಾದದ ಆದೇಶವಾದ ಬಳಿಕ ಎಲ್ಲಿಯ ಸಲಹೆ, ಎಲ್ಲಿಯ ಮಾತುಕತೆ?'

ಮಾತುಮಾತಿಗೆ ದೇವರನ್ನು ಮುಂದಿಟ್ಟುಕೊಂಡು ಕೆಲಸ ಮಾಡುವ ಹಾಗೂ ಮಾತಾಡುವ ಇವರ ರೂಢಿಯು ಅವ್ಯವಹಾರಿಕ ವಲ್ಲ. ಪ್ರತಿಮಾತಿನಲ್ಲಿಯೂ ಇರುವ ಗಾಂಧೀಜಿಯವರ ಧರ್ಮದೃಷ್ಟಿ ಯನ್ನು ನಾವು ಎಲ್ಲರೂ ಚನ್ನಾಗಿ ಅರಿತುಕೊಳ್ಳುವುದು ಕಠಿಣ. ದೇವ ರಲ್ಲಿರುವ ಅವರ ಜೀವಂತ ಸತತ ಶ್ರದ್ಧೆಯನ್ನು ನಾವು ಅರಿಯಲಾರೆವು. ಆದುದರಿಂದ ಒಮ್ಮೊಮ್ಮೆ ನಾವು ಉದ್ವಿಗ್ನರಾಗುವೆವು, ಇನ್ನೊಮ್ಮೆ ರೊಚ್ಚಿಗೇಳುವೆವು! ಆದರೆ ಅದು ತಪ್ಪು. ತಂತಿ ಇಲ್ಲದ ತಾರಾ ಯಂತ್ರದ (ವಾಯರಲೆಸ್) ಶಾಸ್ತ್ರವು ನಮಗೆ ತಿಳಿಯುವದಿಲ್ಲವೆಂದು ಕಲ್ಪಿಸುವ. ಒಬ್ಬ ವಿಜ್ಞಾನಿಯು ಆ ಶಾಸ್ತ್ರವನ್ನು ನಮಗೆ ತಿಳಿಸಲೆತ್ನಿ ಸಿದರೆ ನಾವು ಉದ್ವಿಗ್ನರಾಗುವುದು ವಿಹಿತವೆ? ಅದೇ ರೀತಿ ಆ ವಿಜ್ಞಾನಿಯು ವೈಜ್ಞಾನಿಕ ಭಾಷೆಯಲ್ಲಿ ಆ ಶಾಸ್ತ್ರವನ್ನು ನಮ್ಮೊಡನೆ ಚರ್ಚಿಸಹೋದರೆ ಅದು ನಮಗೆ ತಿಳಿಯಲೊಲ್ಲದೆಂದು ಅಥವಾ ಆ ಭಾಷೆಯ ಪರಿಚಯ ನಮಗೆ ಇಲ್ಲವೆಂದು ನಾವು ಅವನ ಮೇಲೆ ರೊಚ್ಚಿ ಗೇಳುವುದು ಯೋಗ್ಯವೆ? ಗಾಂಧೀಜಿಯವರ ಸ್ಥಿತಿ ಹೀಗೆಯೆ ಇರು ವುದು. ಅವರು ಕೇವಲ ಓದಿ ಅಲ್ಲ, ಪ್ರತ್ಯಕ್ಷ ಆಚರಣೆಯಿಂದ ಅಧ್ಯಾತ್ಮಜ್ಞಾನದ ಮರ್ಮವನ್ನರಿತಿರುವರು. ಅವರು ಓರ್ವ ಶ್ರೇಷ್ಠ 'ವಿಜ್ಞಾನಿ' ಗಳು.

ತಮ್ಮಲ್ಲಿ ಧರ್ಮಭಾವನೆಯ ಜಾಗೃತಿಯಾದ ಮೇಲೆ ಗಾಂಧೀಜಿ ಯವರು ಅನೇಕ ಶಾಸ್ತ್ರಗಳ ಅಧ್ಯಯನವನ್ನು ಮಾಡಿರುವರು. ಹಿಂದೂ ಧರ್ಮವನ್ನು ಪರಿಶೀಲಿಸಿರುವರು. ಕ್ರಿಶ್ಚನ್ ಮತವನ್ನು

ಅಭ್ಯಸಿಸಿರುವರು. ಇಸ್ಲಾಮ ಧರ್ಮಗ್ರಂಥಗಳನ್ನು ಓದಿರುವರು. ಝುರತುಷ್ಟನ ರಚನೆಗಳನ್ನು ಪಠಿಸಿರುವರು. ಚಿತ್ತವನ್ನು ನಿರ್ವಿಕಾರ ಗೊಳಿಸಿ ಪಕ್ಷಪಾತವಿಲ್ಲದೆ ಎಲ್ಲ ಧರ್ಮಗಳ ತತ್ವದರ್ಶನವನ್ನು ಮಾಡಿ ಕೊಳ್ಳಲು ಯತ್ನಿಸಿರುವರು. ಅನಾಸಕ್ತರಾಗಿ ಸತ್ಯಧರ್ಮದ, ಗೂಢ ಧರ್ಮದ ಜ್ಞಾನವನ್ನು ಪಡೆಯಲು ಯತ್ನಿಸಿರುವರು. 'ಧರ್ಮಸ್ಯ ತತ್ವಂ ನಿಹಿತಂ ಗುಹಾಯಾಂ' ಧರ್ಮತತ್ವವು ಗುಹೆಯಲ್ಲಿ ಗೂಢವಾಗಿ ರುವುದು, ಎಂದು ಶಾಸ್ತ್ರವಚನವಿರುವುದು. ಈ ಅವರ ಅಭ್ಯಾಸದಿಂದ ಅವರ ನಿರಪೇಕ್ಷ ವೃತ್ತಿ ಹೆಚ್ಚಿತು, ಅವರ ಪ್ರಯತ್ನ ತೇಜಸ್ವಿಯಾಯಿತು, ಅವರಿಗೆ ಸತ್ಯದ ದರ್ಶನವಾಯಿತು. ಅವರ ಬಲ ಬೆಳೆಯಿತು. ಅವರ ನೀರಕ್ಷೀರವಿವೇಕಶಕ್ತಿ ಸೂಕ್ಷ್ಮವಾಯಿತು. ಅವರ ನಿಶ್ಚಯಾತ್ಮಿಕಾ ಬುದ್ಧಿ ದೃಢವಾಯಿತು. ಅವರ ನಿರ್ಣಯಗಳು ಉಕ್ಕಿನ ಕವಚದಂತೆ ಬಲಿಷ್ಠವಾಗತೊಡಗಿದವು. ಒಳಗಣ ಸೂಳುನುಡಿಯು, ಅಂತರ್ನಾದವು ಸುಳಿಯಲಾರಂಭಿಸಿತುದವು. ಈ ಅಂತರ್ನಾದದ ಮೂಲಕ ಅವರ ಸಂಕೋಚ ಸಂಶಯಗಳೆಲ್ಲ ಓಡಿಹೋದವು.

---

# ೯. ವ್ಯವಹಾರಿಕ ವೇದಾಂತಿ

ಇವರೇನು ಕೇವಲ ಗಾಳಿಯಲ್ಲಿ ಗೋಪುರ ಕಟ್ಟುವವರೊ, ಇವರು ಅವ್ಯವಹಾರಿಕರೊ, ಎಂದು ಕೇಳಿದರೆ, ವೈಜ್ಞಾನಿಕನು ಅವ್ಯವಹಾರಿಕನೊ, ಎಂದು ತಿರುಗಿ ಪ್ರಶ್ನಿಸಬೇಕಾಗುವುದು. ಈಗ ಗಾಂಧೀಜಿಯವರು ಎಪ್ಪತ್ತೊಂದು ವರುಷದವರು, ಈ ವರೆಗೆ ಯಾವ ಮಹಾಪುರುಷನೂ ತನ್ನ ಜೀವಮಾನದಲ್ಲಿ ಪಡೆಯದೆ ಇರುವಷ್ಟು ದೊಡ್ಡ ಹೆಸರನ್ನು ಇವರು ಈ ಎಪ್ಪತ್ತೊಂದು ವರುಷಗಳಲ್ಲಿ ಗಳಿಸಿರುವರು. ಮಹಾತ್ಮರೆಂದು ಪರಿಚಿತರಿರುವುದಕಿಂತ ಜಗತ್ತಿಗೆ ಇವರು ಒಬ್ಬ ರಾಜನೀತಿಜ್ಞ ಮುಖಂಡರೆಂದು ಹೆಚ್ಚು ಪರಿಚಿತರು. ಇವರೊಬ್ಬ ಮೋಸಗಾರರು, ದ್ರೋಹಿಗಳು, ಒಳಗಂಟಿನವರು, ಕೂಟನೀತಿಪ್ರವೀಣ ರಾಜಕಾರಣೀ ಪುರುಷರು ಎಂದು ಸಂಕುಚಿತವೃತ್ತಿಯ ಇಂಗ್ಲೀಷರು ತಿಳಿಯುವರು. ಇವರು ಹಿಂದೂರಾಜ್ಯಸ್ಥಾಪನೆ ಮಾಡುವ ಏಕಮಾತ್ರ ಉದ್ದೇಶದಿಂದ ಪ್ರೇರಿತರಾದ ಧೂರ್ತ ಹಾಗೂ ಮೋಸಗಾರ ಹಿಂದೂ, ಎಂದು ಕಟ್ಟರ ಮುಸಲ್ಮಾನರು ತಿಳಿಯುವರು. ಈ ಭಾವನೆಗಳ ಅರ್ಥವು ಹಾಗೂ ಕಾರಣಗಳು ಏನೇ ಇರಲಿ, ಗಾಂಧೀಜಿಯವರು ಕೇವಲ ಕಲ್ಪನಾರಾಜ್ಯದಲ್ಲಿ ತೇಲಾಡುವ ಅವ್ಯವಹಾರಿಕರಲ್ಲ ಎಂಬುದು ಮಾತ್ರ ಇದರಿಂದ ಸಿದ್ಧವಾಗುವುದು. ಮೊದಲು ಇಪ್ಪತ್ತು ವರುಷ ಆಫ್ರಿಕೆಯಲ್ಲಿ ಬಳಿಕ ಈ ದೇಶದಲ್ಲಿ ಇಪ್ಪತ್ತೈದು ವರುಷ ಇವರು ದೇಶದ ರಾಜಕಾರಣವನ್ನು ನಡೆಸಿದ ಚಾತುರ್ಯ, ಧೈರ್ಯ, ಎದೆಗಾರಿಕೆ ಇವುಗಳನ್ನು ನೋಡಿದರೆ ಬೆರಳು ಕಚ್ಚಬೇಕಾಗುವುದು. ಇದೇನು ಒಬ್ಬ ಅವ್ಯವಹಾರಿಕ ಮನುಷ್ಯನ ಕೆಲಸವಲ್ಲ. ಈ ಕಳೆದ

ಇಪ್ಪತ್ತು ವರುಷಗಳಲ್ಲಿ ಹಿಂದೀ ರಾಜಕಾರಣದಲ್ಲಿ ಇವರು ಏಕ ಛತ್ರಾಧಿಪರಾಗಿ ಆಳುತಿದ್ದಾರೆ ಎಂದು ಹೇಳಬಹುದು. ಇವರಿಗೇನು ಯಾರೂ ಅಧಿಕಾರಪತ್ರವನ್ನು ಕೊಡಲಿಲ್ಲ, ಕೊಟ್ಟರೂ ಅದು ತನ್ನಿಂತಾನೆ ಹೋಗಿಬಿಟ್ಟಿತು. ಈ ಹೊತ್ತು ಹಿಂದೀ ರಾಜನೀತಿಯಲ್ಲಿ ಅವರು ಅತ್ಯಾವಶ್ಯಕ ಹಾಗೂ ಬಿಡಲಿಕ್ಕೆಬಾರದ ವ್ಯಕ್ತಿಯಾಗಿದ್ದಾರೆ. ಇದೇನು ಅವರ ಅವ್ಯವಹಾರಿಕತೆಯ ಸಾಕ್ಷಿಯೆ ? ಪ್ರೇಮದ ಬಲದ ಹೊರತು ಇವರ ಬಳಿ ಇನ್ನಾವ ಬಲವಿದೆ ? ಆದರೆ ಈ ಪ್ರೇಮಬಲವು ಇವರ ಅನುಯಾಯಿಗಳ ಹೃದಯದಲ್ಲಿ ಒಂದು ಮುದ್ರೆಯನ್ನು ಒತ್ತಿದೆ. ಪ್ರತಿಪಕ್ಷಿಗಳ ಮೇಲೂ ಈ ಪ್ರೇಮದ ಪ್ರಭಾವ ಬಿದ್ದಿದೆ. ಇಂಥ ಮುಖಂಡನಿಗೆ ಅವ್ಯವಹಾರಿಕನೆನ್ನುವವರಾರು ? ರಾಜಕಾರಣ, ಆತ್ಮ ಕಾರಣ, ಸಂಸ್ಕೃತಿ ಈ ಮೂರೂ ಕ್ಷೇತ್ರಗಳಲ್ಲಿ ಒಂದು ಬಲವಾದ ಪ್ರಗತಿಯ ಪ್ರೇರಣೆಯನ್ನುಂಟು ಮಾಡುವ ಮನುಷ್ಯನಿಗೆ, ಇವನು ಕನಸಿನಲ್ಲಿ ಕನವರಿಸುವವನು, ಎಂದು ಯಾರು ಅನ್ನಬಲ್ಲರು ? ಗಾಂಧೀಜಿಯವರಿಗಿಂತ ಹೆಚ್ಚು ಚತುರ ಹಾಗೂ ವ್ಯವಹಾರಿಕ ರಾಜ ಕಾರಣಿ ಪುರುಷರು ದೊರೆಯುವುದು ಕಠಿಣ ಎಂದು ನನ್ನ ಅಭಿಪ್ರಾಯ.

ಇನ್ನು ನಿಜವಾಗಿ ನೋಡಿದರೆ ಗಾಂಧೀಜಿಯವರ ಜೀವನದಲ್ಲಿ ರಾಜನೀತಿಗೆ ಗೌಣಸ್ಥಾನವಿದೆ. ಧರ್ಮನೀತಿಯೆ ಅವರ ಜೀವಜೀವಾಳ. ರಾಜನೀತಿಯನ್ನು ಅವರು ಕೈಕೊಂಡ ಕಾರಣವೇನಂದರೆ ಅವರಿಗೆ ಅದೂ ಒಂದು ಮೋಕ್ಷದ ಸಾಧನವು. ಖಾದಿ ಆಗಲಿ, ಹರಿಜನ ಸೇವೆ ಯಾಗಲಿ, ಜಲಚಿಕಿತ್ಸೆಯಾಗಲಿ, ಆಶ್ರಮದಲ್ಲಿಯ ಕರುವಿನ ಹತ್ಯೆ ಯಾಗಲಿ, ಇವೆಲ್ಲ ಚಟುವಟಿಕೆಗಳು ಅವರಿಗೆ ಮೋಕ್ಷದ ಸಾಧನಗಳು. ಪರಮಾತ್ಮಸಾಕ್ಷಾತ್ಕಾರವೆ ಅವರ ಪರಮ ಧ್ಯೇಯ. ಮೇಲೆ ಕಾಣಿ ಸಿದ ಎಲ್ಲ ವ್ಯವಸಾಯಗಳು ಕೇವಲ ಸಾಧನಸಾಮಗ್ರಿಯು. ಗಾಂಧೀಜಿಯವರು ಒಬ್ಬ ರಾಜಕೀಯ ಮುಖಂಡರು, ಎಂಬ ಒಂದೇ ದೃಷ್ಟಿಯಿಂದ ನೋಡುವವರಿಗೆ ಗಾಂಧೀಜಿಯವರ ನಾಮ, ಜಪ, ಅವರ ಪ್ರಾರ್ಥನೆ, ಅವರ ಅಂತರ್ನಾದ, ಅವರ ಇತರ ಆಧ್ಯಾತ್ಮಿಕ ಚಟು ವಟಿಕೆಗಳು ಇವೆಲ್ಲ ಒಂದು ಒಗಟಿನಂತೆ ತೋರುವುವು. ಅವರೊಬ್ಬ

ಅಧ್ಯಾತ್ಮಜ್ಞಾನಿಗಳು ಎಂಬ ದೃಷ್ಟಿಯಿಂದ ನೋಡುವವರಿಗೆ ಅವರ ರಾಜಕಾರಣವು ಸಾಧನಮಾತ್ರವೆಂದು ಸ್ಪಷ್ಟವಾಗಿ ಕಂಗೊಳಿಸುವುದು.

**ಆರುರುಕ್ಷೋರ್ಮುನೇರ್ಯೋಗಂ ಕರ್ಮಕಾರಣಮುಚ್ಯತೇ ।**
**ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥**

ಯೋಗಸಿದ್ಧಿಯನ್ನು ಪಡೆಯಲಿಚ್ಛಿಸುವವಗೆ ಕರ್ಮವು ಯೋಗದ ಸಾಧನವಾಗುವುದು. ಸಿದ್ಧಿಯನ್ನು ಪಡೆದವಗೆ ಆ ಸ್ಥಿತಿಯಲ್ಲಿ ಸ್ಥಿರವಾಗಿರಲು ಶಾಂತಿಯು ಸಾಧನವಾಗುವುದು.

ಗೀತೆಯು ಈ ಮೇಲಿನ ತತ್ವವನ್ನರಿತು ನಾವು ಗಾಂಧೀಜೀವನದ ಅಭ್ಯಾಸ ಮಾಡಿದರೆ ಒಗಟು ಒಡೆದು ತಿಳಿ ಜ್ಞಾನವಾಗುವುದು.

‘ ಒಬ್ಬ ಆಧ್ಯಾತ್ಮವಾದಿಯು ರಾಜನೀತಿಯನ್ನು ಚನ್ನಾಗಿ ನಡೆಸಬಲ್ಲನೇ ’ ಎಂದು ಹಲವರು ಪ್ರಶ್ನೆ ಮಾಡುವರು.

‘ ಹಾಗಾದರೇನು ? ಒಬ್ಬ ಸುಳ್ಳುಗಾರ, ಕೈಲಾಗದವ, ಲೋಭಿ, ಸ್ವಾರ್ಥಿ, ಧರ್ಮಹೀನ ಮನುಷ್ಯನು ನಡೆಸಬಲ್ಲನೇ ? ’ ಎಂಬ ಪ್ರಶ್ನೆಯೆ ಅದಕೆ ಉತ್ತರ. ಒಬ್ಬ ನಿಃಸ್ವಾರ್ಥಿ ಭಕ್ತನು ರಾಜಕಾರಣದ ಶಕಟವನ್ನು ನಡೆಸಲು ಅಸಮರ್ಥನೆಂದು ಹೇಳುವುದಾದರೆ ಗೀತೆಯನ್ನು ಹರಿದು ಕಸದ ಬುಟ್ಟಿಯಲ್ಲಿ ಚಲ್ಲಿಬಿಡಬಹುದು. ಸುಳ್ಳು ಹಾಗೂ ಮೋಸ ಇವೇ ರಾಜನೀತಿಯಲ್ಲಿ ಮುಖ್ಯವಾಗಿದ್ದರೆ ‘ ಧರ್ಮವೇ ಜಯ ’ ಎಂಬ ಮಾತಿಗೆ ಬೆಲೆಯೇ ಇಲ್ಲ ಎನ್ನಬೇಕಾದೀತು.

ನಾವು ತಪ್ಪುತಿಳಿವಳಿಕೆಯ ಮೂಲಕ ಧರ್ಮ ಹಾಗೂ ರಾಜನೀತಿ ಇವು ವಿಸಂಗತ ವಸ್ತುಗಳು ಎಂದು ತಿಳಿದಿದೇವೆ. ಈ ಭ್ರಮವನ್ನು ಗಾಂಧೀಜಿಯುವರು ಭಂಗಿಸಿದರು; ಹಾಗೂ ಧರ್ಮ, ಅರ್ಥ ಇವೆರಡೂ ಬೇರೆ ವಸ್ತುಗಳಲ್ಲ ಎಂದು ತಮ್ಮ ಆಚರಣೆಯಿಂದ ತೋರಿಸಿಕೊಟ್ಟರು. ಎಲ್ಲಕ್ಕೂ ಹೆಚ್ಚಿನ ಅರ್ಥವೆ ( ಪರಮ + ಅರ್ಥವು, ) ಪರಮಾರ್ಥವು. ಗೀತೆ ಉಚ್ಚರಿಸಿದುದನ್ನು ಗಾಂಧೀಜಿಯುವರು ಆಚರಿ

ಸಿದರು. ಗೀತೆ ನುಡಿದಂತೆ ಗಾಂಧಿ ನಡೆದರು. ಇದು ಕೇವಲ ಓದ ತಕ್ಕ ವಿಷಯ ಎಂದು ನಾವು ತಿಳಿದುಕೊಂಡದ್ದನ್ನು ಅವರು, ಅದು ಆಚರಿಸುವ ತತ್ವ, ಕೇವಲ ಓದುವ ಮಾತಲ್ಲ, ಎಂದು ಪ್ರತ್ಯಕ್ಷ ತೋರಿದರು. ಗಾಂಧೀಜಿಯವರು ಹೊಸ ಮಾತನ್ನೇನೂ ಮಾಡಲಿಲ್ಲ. ರಾಜನೀತಿ ಧರ್ಮನೀತಿಗಳನ್ನು ಶ್ರೀಕೃಷ್ಣನು ಸಮನ್ವಯಿಸಿ ಆಚರಿಸಿ ತೋರಿಸಿದಂತೆ, ಜನಕನು ರಾಜನಿದ್ದು ವಿರಕ್ತನಂತೆ ಆಚರಿಸಿ ತೋರಿದಂತೆ, ಗಾಂಧೀಜಿಯವರು ಕರ್ಮಯೋಗವನ್ನು ಆಚರಿಸಿ ತೋರಿದರು. ಜಂಗು ಏರಿದ ಕತ್ತಿಯನ್ನು ಒರೆಯಿಂದ ಹಿರಿದು ಅದಕೆ ಸಾಣೆ ಹಿಡಿಸಿ ಅದನ್ನು ಮತ್ತೆ ಹಿರಿದಾದ ಹೊಸ ಖಡ್ಗವನ್ನಾಗಿ ಮಾಡಿದರು.

# ೧೦. ಉಪವಾಸ - ಅಂತರ್ವಾಣಿ

ಇದು ೨೯-೪-೩೩ ರಲ್ಲಿ ನಡೆದ ಸಂಗತಿ. ಆಗ ಹರಿಜನರ ಪ್ರಶ್ನೆ ಗಾಂಧೀಜಿಯವರ ಹೃದಯದಲ್ಲಿ ಅಲ್ಲೋಲಕಲ್ಲೋಲವನ್ನೆಬ್ಬಿಸಿತ್ತು. ಯರವಡಾ ಹರಿಜನ ಒಪ್ಪಂದದ ನಂತರ ದೇಶದಲ್ಲಿ ಹೊಸ ಗಾಳಿ ಸುಳಿಯಲಾರಂಭಿಸಿತ್ತು. ಸಾವಿರಾರು ವರುಷದಿಂದ ಹರಿಜನರ ಮೇಲೆ ನಡೆಸಿದ ಅತ್ಯಾಚಾರದ ಮೂಲಕ ಉಂಟಾದ ಆತ್ಮಗ್ಲಾನಿ ಹೋಗಿ ಅಲ್ಲಲ್ಲಿ ಉಚ್ಚವರ್ಣ ಹಿಂದುಗಳಲ್ಲಿ ಜಾಗ್ರತಿಯಾಗತೊಡಗಿತ್ತು. ಹರಿ ಜನ ಸೇವಕ ಸಂಘವು ಒಳ್ಳೆ ಜೋರಿನಿಂದ ತನ್ನ ಕಾರ್ಯವನ್ನು ಬೆಳೆ ಸುತಲಿತ್ತು. ಗಾಂಧೀಜಿಯವರ ಲೇಖಗಳು ಹರಿಜನ ಕಾರ್ಯದಲ್ಲಿ ಒಂದು ಹೊಸ ಪ್ರಗತಿಯ ಮಾರ್ಗವನ್ನು ತೋರಲಾರಂಭಿಸಿದ್ದವು. ಸತ್ಯಾಗ್ರಹವು ತಣ್ಣಗಾಗಿತ್ತು. ಗಾಂಧೀವಾದವು, ಗಾಂಧೀ ಪ್ರಭಾವವು ಮಾಯವಾಗುತ್ತ ನಡೆದಿದೆ ಎಂದು ವ್ಹಾಯಿಸರಾಯ ವಿಲಿಂಗಡನ್ನರು ತಿಳಿದುಕೊಂಡಿದ್ದರು. ಆದರೆ ಪ್ರಧಾನಮಂತ್ರಿಯಾದ ರ್‍ಯಾಮಸೇ ಮ್ಯಾಕ್ಡೊನಲ್ಡರ ನಿರ್ಣಯದ ವಿರುದ್ಧ ಗಾಂಧೀಜಿಯವರು ಹೂಡಿದ ಆಮರಣ ಉಪವಾಸದ ಮೂಲಕ ಒಂದು ಕ್ಷಣದಲ್ಲಿ ದೇಶದಲ್ಲಿಯ ಶೈಥಿಲ್ಯವು ನಷ್ಟವಾಯಿತು ಹಾಗೂ ಹೊಸ ಚೈತನ್ಯವು ತಲೆದೋರಿತು. ರಾಜಕೀಯವೆನಿಸಿದ ಸತ್ಯಾಗ್ರಹವನ್ನು ಜನರು ಅಲ್ಲಿಯೆ ಬಿಟ್ಟು ಸುತ್ತಲು ಎಲ್ಲರೂ ಹರಿಜನ ಕಾರ್ಯದಲ್ಲಿ ತೊಡಗಿದರು. ಇದೊಂದು ಚಮತ್ಕಾರವೆ ನಡೆಯಿತು. ಆ ಮುಂಚೆ ವರ್ಷಾನುವರ್ಷ ಗಾಂಧೀಜಿ ಯವರು ಹರಿಜನ ಕಾರ್ಯವನ್ನು ಮಾಡುತಿದ್ದರು. ಆದರೆ ಉಚ್ಚ ವರ್ಣ ಹಿಂದುಗಳ ಆತ್ಮವನ್ನು ಜಾಗ್ರತಗೊಳಿಸುವುದು ಅವರಿಂದ

ಆಗಿರಲಿಲ್ಲ. ಆ ಕೆಲಸವು ಉಪವಾಸದಿಂದ ಅಕಸ್ಮಾತ್ತಾಗಿ ಆಗಿ ಹೋಯಿತು. ಇನ್ನು ಕ್ರಿಯೆಗೆ ಪ್ರತಿಕ್ರಿಯೆ ಇದ್ದೇಇರುವುದು. ಹರಿಜನ ಕಾರ್ಯದ ವಿಷಯದಲ್ಲಿಯೂ ಹಾಗೆಯೆ ಆಯಿತು. ಇತ್ತ ಹರಿಜನರ ಬಗ್ಗೆ ಬಲವಾದ ಸಹಾನುಭೂತಿ ಉಕ್ಕೇರಿತು, ಅತ್ತ ರೂಢಿಗ್ರಸ್ತರಾದ ಹಳೇವಿಚಾರದ ಹಲವರಲ್ಲಿ ಹೆಚ್ಚು ಬಿಗುವು ಉಂಟಾಯಿತು.

ಹರಿಜನರ ಸಂಬಂಧದಲ್ಲಿ ನಡೆದ ದುರ್ವ್ಯವಹಾರಗಳ ಕಲ್ಪನೆ ಪಟ್ಟಣಿಗರಿಗೆ ಹಾಗೂ ಸುಶಿಕ್ಷಿತರಿಗೆ ಆಗುವುದು ದುಃಸಾಧ್ಯ. ಈಗ ಏಳು ವರ್ಷಗಳಲ್ಲಿ ಉಚ್ಚ ವರ್ಗೀಯ ಹಿಂದುಗಳ ಮನಸಿನಲ್ಲಿ ಕಲ್ಪನಾತೀತವಾದ ಬದಲು ಆಗಿದೆ. ಏಳು ವರ್ಷಗಳಾಚೆಯ ಸ್ಥಿತಿ ಭಯಂಕರವಿತ್ತು. ದಕ್ಷಿಣದಲ್ಲಿ ಅಸ್ಪೃಶ್ಯತೆ ಮಾತ್ರವಲ್ಲ ಹಲವು ಬಗೆಯ ಹರಿಜನರನ್ನು ಕಣ್ಣಿನಿಂದ ನೋಡುವುದು ಕೂಡ ಪಾಪವೆಂದು ಬಗೆಯಲಾಗಿತ್ತು. ಪ್ರಸಂಗವಶಾತ್ ಪಕ್ವಾನ್ನ ಮಾಡುವದು, ತುಪ್ಪದಲ್ಲಿ ಪುರಿ ಕರಿಯುವುದು, ಕಾಲಲ್ಲಿ ಬೆಳ್ಳಿಯ ಕಡಗ ಹಾಕಿಕೊಳ್ಳುವುದು, ಕುದುರೆಯ ಮೇಲೆ ಕೂಡುವುದು, ಪಕ್ಕಾ ಮನೆ ಕಟ್ಟುವುದು ಇವುಗಳನ್ನೆಲ್ಲ ಹರಿಜನರು ಮಾಡಕೂಡದು ಎಂಬ ನಿರ್ಬಂಧಗಳು ಎಲ್ಲ ಪ್ರಾಂತಗಳಲ್ಲಿಯೂ ಇದ್ದವು. ಇವು ಸಾಮಾನ್ಯ ದುರ್ವ್ಯವಹಾರಗಳು ಎಂದು ಹೇಳಬಹುದು. ಈಗ ಈ ವಿಪರೀತ ಸ್ಥಿತಿ ಎಷ್ಟೋ ಸುಧಾರಿಸಿದೆ.

ಹರಿಜನರು ಈ ಹೊಸ ಜಾಗ್ರತಿಯ ಮೂಲಕ ಸ್ವಲ್ಪ ನಿರ್ಭಯ ವೃತ್ತಿಯಿಂದ ನಡೆಯಲಾರಂಭಿಸಿದರು. ಕೂಡಲೆ ಕಟ್ಟರ ಹಳೆ ಬಗೆಯ ಜನರು ಸಿಟ್ಟಿಗೇಳಲಾರಂಭಿಸಿದರು. ಅಲ್ಲಲ್ಲಿ ಹರಿಜನರನ್ನು ಹೊಡೆಯುವುದು ಬಡೆಯುವುದು ನಡೆಯಿತು. ಸೆರೆಮನೆಯಲ್ಲಿ ಗಾಂಧೀಜಿಯವರಿಗೆ ಈ ಎಲ್ಲ ಸುದ್ದಿ ಹೋಗಿ ಮುಟ್ಟುತಿತ್ತು. ಈ ದುರ್ಘಟನೆಗಳನ್ನು ಕೇಳಿ ಅವರ ವಿಷಾದವು ಹೆಚ್ಚುತಿತ್ತು. ಅಸ್ಪೃಶ್ಯತೆ ಇದು ಹಿಂದೂ ಧರ್ಮಕ್ಕೆ ಕಲಂಕರೂಪವಿರುವುದು ಹಾಗೂ ಈ ಪಾಪದ ಹೊಣೆ ಉಚ್ಚ ವರ್ಗದವರ ಮೇಲೆ ಇದೆ, ಎಂದು ಅವರು ಸರಿಯಾಗಿ

ಹೇಳುತ್ತ ಬಂದಿರುವರು. ಹರಿಜನರೊಡನೆ ಸದ್ವ್ಯವಹಾರ ನಡೆಸಿ ನಾವು ಪ್ರಾಯಶ್ಚಿತ್ತ ಮಾಡಬೇಕು, ಎಂದು ಸತತ ಅವರ ಪಲ್ಲವಿ ಇದೆ. ಗಾಂಧೀಜಿಯವರು ಸ್ವತಃ ಉಚ್ಚ ವರ್ಣದವರು, ಆದುದರಿಂದ ಈ ಅತ್ಯಾಚಾರವು ಅವರ ಮನಸಿಗೆ ಬಹಳ ಪೀಡೆ ಕೊಡುತಿತ್ತು. ಹೃದಯದಲ್ಲಿ ಒಂದು ದೊಡ್ಡ ಮಂಥನ, ಏನು ಮಾಡಬೇಕೆಂಬ ಬಗ್ಗೆ ಸಂಕಲ್ಪ ವಿಕಲ್ಪಗಳು ನಡೆಯುತಿದ್ದವು. ಪಂಡಿತರೊಡನೆ ಅವರ ಪತ್ರ ವ್ಯವಹಾರ ಸಾಗಿತ್ತು. 'ದೇವರು ಈ ಅತ್ಯಾಚಾರವನ್ನು ಏಕೆ ನಡೆಯ ಗೊಡುವನು ? ರಾವಣನು ರಾಕ್ಷಸನಿದ್ದನು. ಆದರೆ ಈ ಅಸ್ಪೃಶ್ಯತಾ ರೂಪಿ ರಾಕ್ಷಸಿಯು ರಾವಣನಿಗಿಂತ ಭಯಂಕರಳಿರುವಳು. ಈ ರಾಕ್ಷಸಿ ಯನ್ನು ನಾವು ಧರ್ಮದ ಹೆಸರಿನಿಂದ ಪೂಜಿಸುವೆವು. ಆದುದರಿಂದ ನಮ್ಮ ಪಾಪವು ಬಹಳ ಭಯಂಕರವು. ಇದಕ್ಕಿಂತ ಹಬಸೀ ಜನರ ಗುಲಾಮಿಯು ಎಷ್ಟೋ ಪಾಲು ಬೇಕು. ಈ ಧರ್ಮ- ಇದಕ್ಕೆ ಧರ್ಮ ವೆಂದು ಅನ್ನುವುದಾದರೆ- ನನಗೆ ಹೇಸಿಕೆಯುನ್ನುಂಟು ಮಾಡುವುದು. ಇದು ಹಿಂದೂ ಧರ್ಮವೆನಿಸಲಾರದು. ನಾನು ಹಿಂದೂ ಧರ್ಮದ ಮುಖಾಂತರವೆ ಕ್ರಿಶ್ಚನ್ ಮತ್ತು ಇಸ್ಲಾಮ ಧರ್ಮವನ್ನು ಆದರಿಸಲು ಕಲಿತಿದ್ದೇನೆ. ಅಂದಬಳಿಕ ಇದು ಹಿಂದೂ ಧರ್ಮದ ಅಂಗವಾಗುವ ಬಗೆ ಹೇಗೆ ? ಆದರೇನು ಮಾಡಬೇಕು ?' ಈ ಬಗೆಯ ತಳಮಳ ಅವರ ಮನಸಿನಲ್ಲಿ ಕುದಿಯುತಿತ್ತು.

ಈ ಬಗೆಯ ವಿಚಾರಧಾರೆಯಲ್ಲಿ ಸಿಕ್ಕು ಕಳವಳಿಸುತ್ತ ಅವರು ೨೬ನೇ ಎಪ್ರಿಲ್ ದಿವಸ ಸೆರೆಮನೆಯಲ್ಲಿ ನಿದ್ರೆಹೋದರು. ಕೆಲವೇಳೆ ಮಾತ್ರ ಮಲಗಿರಬಹುದು ಇಷ್ಟರಲ್ಲಿ ರಾತ್ರಿ ಹನ್ನೊಂದು ಗಂಟೆ ಯಾಯಿತು. ಜೇಲಿನಲ್ಲಿ ಸರ್ವತ್ರ ಸದ್ದು ಇತ್ತು. ವಸಂತದ ಪ್ರಾರಂಭವಾಗಿತ್ತು. ಒಳ್ಳೆ ಸೊಗಸಾದ ರಾತ್ರಿ ಅದು, ಒಳ್ಳೆ ಸುಳಿಗಾಳಿ ಬೀಸುತಿತ್ತು, ಕೈದಿಗಳೆಲ್ಲ ಮಲಗಿದ್ದರು, ಕೇವಲ ಪಹರೆಯವರು ಎಚ್ಚರಿದ್ದರು. ಹನ್ನೊಂದು ಹೊಡೆದ ನಂತರ ಸ್ವಲ್ಪ ವೇಳೆಗೆ ಗಾಂಧೀಜಿಯವರ ಕಣ್ಣು ಪೂರಾ ತೆರೆದವು, ನಿದ್ರೆ ಹರಿಯಿತು. ಮಹಾಸಾಗರದಲ್ಲಿ ಸುಳಿವ ಬಿರುಗಾಳಿಯಂಥ ಬಿರುಗಾಳಿ ಮನಸಿನಲ್ಲಿ

ಬೀಸಲಾರಂಭಿಸಿತು. ಅಸ್ವಸ್ಥತೆ ಹೆಚ್ಚಿತು. ಹೃದಯದಲ್ಲಿ ಒಂದು ದೊಡ್ಡ ಯುದ್ಧವು ನಡೆದಂತೆ ಎನಿಸಿತು. ಆಚೆಯಿಂದ ಒಂದು ಧ್ವನಿ ಕೇಳಿಸಿತು. ಈ ಧ್ವನಿಯು ದೂರಿನಿಂದ ಬಂದಂತೆ ಪ್ರತೀತವಾದರೂ ಸಮೀಪದಿಂದಲೆ ಯಾರಾದರೂ ಮಾತಾಡುತಿರುವಂತೆ ತೋರಿತು. ಆ ಆದೇಶವನ್ನು ಮನ್ನಿಸದೆ ಇರುವದು ಅಸಾಧ್ಯ, ಅಂತಹ ಪ್ರಭಾವೀ ಧ್ವನಿಯದು. ಆ ಧ್ವನಿ 'ಉಪವಾಸ ಮಾಡು' ಎಂದು ಹೇಳಿತು. ಗಾಂಧೀಜಿಯುವರು ಅದನ್ನು ಕೇಳಿಕೊಂಡರು. ಅವರಿಗೆ ಸಂಶಯುವೇನೂ ಉಳಿಯಲಿಲ್ಲ. ಅದು ದೇವವಾಣಿ ಎಂಬ ಮನವರಿಕೆ ಅವರಿಗೆ ಆಯಿತು. ಬಳಿಕ ಮನಸಿನಲ್ಲಿಯ ಅಲಕಲ್ಲೋಲ ನಿಂತಿತು. ಅಸ್ವಸ್ಥತೆ ಅಳಿಯಿತು. ಗಾಂಧೀಜಿಯುವರು ಶಾಂತರಾದರು. ಎಷ್ಟು ದಿನಗಳ ಉಪವಾಸ, ಯಾವಾಗ ಪ್ರಾರಂಭ, ಇತ್ಯಾದಿ ಸಂಗತಿಗಳನ್ನು ನಿಶ್ಚಯಿಸಿ ಆ ಉಪವಾಸದ ಬಗ್ಗೆ ತಮ್ಮ ನಿವೇದನೆಯನ್ನು ಬರೆದಿಟ್ಟು ಪುನಃ ಗಾಢನಿದ್ರೆಯಲ್ಲಿ ತಲ್ಲೀನರಾದರು.

ಎಂದಿನಂತೆ ಬೆಳಗಿನ ಜಾವದ ಬ್ರಾಹ್ಮಿ ಮುಹೂರ್ತದಲ್ಲಿ ಎದ್ದು ವಲ್ಲಭಭಾಯಿ ಮತ್ತು ಮಹಾದೇವಭಾಯಿಯುವರೊಡನೆ ಪ್ರಾರ್ಥನೆ ಮಾಡಿದರು. 'ಊಠ ಜಾಗ ಮುಸಾಫಿರ ಭೋರಭಯೋ, ಅಬ ರೈನ ಕಹಾಂ ಜೀ ಸೋಬತ ಹೈ' (ಎಲೆ ಪ್ರವಾಸಿಯೇ ಏಳು, ಬೆಳಗಾಯಿತು, ರಾತ್ರಿ ಹೊರಟು ಹೋಯಿತು.) ಎಂಬ ಗೀತವನ್ನು ಅನಾಯಾಸವಾಗಿ ಮಹಾದೇವಭಾಯಿಯುವರು ಹಾಡಿದರು. 'ರಾತ್ರಿ ನಿಮಗೆ ಜಾಗರಣೆ ಆಗಿದೆ, ಸ್ವಲ್ಪ ವಿಶ್ರಮಿಸಿರಿ' ಎಂದು ಆಗ ಗಾಂಧೀಜಿಯುವರು ಮಹಾದೇವಭಾಯಿಗೆ ಹೇಳಿದರು. ಮಹಾದೇವಭಾಯಿ ಅಡ್ಡಾದರು. ಗಾಂಧೀಜಿಯುವರು ಮಾಡಿದ ಭೀಷಣ ಸಂಕಲ್ಪದ ಕಲ್ಪನೆ ಸಹ ಅವರಿಗೆ ಇರಲಿಲ್ಲ. ತಾವು ಬರೆದಿಟ್ಟ ನಿವೇದನೆಯನ್ನು ವಲ್ಲಭಭಾಯಿಗೆ ಕೊಟ್ಟರು. ಸರದಾರರು ಅದನ್ನು ಒಮ್ಮೆ, ಎರಡು ಸಾರೆ ಓದಿ ಸ್ತಿಮಿತರಾದರು. ತರ್ಕ ವಿಚಾರಾದಿಗಳಿಗೆ ಅಲ್ಲಿ ಅನುವೆ ಇರಲಿಲ್ಲ. ಗಾಂಧೀಜಿಯುವರ ಸ್ವಭಾವವನ್ನು ಸರದಾರರು ಚನ್ನಾಗಿ ಅರಿತಿರುವರು. 'ನಾಯುಗರಾ ನದಿಯ ತಡಸಲವನ್ನು ತಡೆಯು

ಲೆತ್ತಿಸುವದು ವ್ಯರ್ಥ. ಮಹಾದೇವ, ಇವರಿಗಿಂತ ಶುದ್ಧ ಬುದ್ಧರಿದ್ದವರಾರು ? ಹಾಗೆ ಇದ್ದವರು ಇವರೊಡನೆ ಚರ್ಚಿಸಬಹುದು. ನಾನಂತೂ ಇವರಿಗೆ ಹೇಳಲಾರೆ' ಎಂದು ಸರದಾರರು ಮಹಾದೇವಭಾಯಿಗೆ ಹೇಳಿದರು. 'ಈಶ್ವರೇಚ್ಛಾ ಬಲೀಯಸೀ' ದೇವರಿಚ್ಛೆ ಎಲ್ಲಕ್ಕೂ ಬಲವುಳ್ಳದ್ದು, ಎಂದು ತಿಳಿದು ಸುಮ್ಮನಾದರು.

ಮಹಾದೇವಭಾಯಿಯವರು ಗಾಂಧೀಜಿಯವರೊಡನೆ ಸ್ವಲ್ಪ ಚರ್ಚೆ ಮಾಡಿದರು. ಕೊನೆಗೆ ದೇವರ ಮೇಲೆ ಭರವಸೆ ಇಟ್ಟು ಸುಮ್ಮನಾದರು. ಮೂರನೆ ದಿನ ಎಲ್ಲೆಲ್ಲಿಯೂ ಸುದ್ದಿ ಹಬ್ಬಿತು. ಇಡೀ ದೇಶದಲ್ಲಿ ಒಂದು ಬಗೆಯ ಸ್ತಬ್ಧತೆ ಪಸರಿಸಿತು. ನಾನು ಆಗ ಹರಿಜನ ಸೇವಕಸಂಘದ ಅಧ್ಯಕ್ಷನು. ನನಗೆ ಸಂದೇಶ ಮುಟ್ಟಿತು. ಪುಣೆಕ್ಕೆ ಬರಕೂಡದು, ಇದ್ದಲ್ಲಿಯೆ ಕರ್ತವ್ಯವನ್ನು ಮಾಡತಕ್ಕದ್ದೆಂದು ಗಾಂಧೀಜಿಯವರು ಬರೆದಿದ್ದರು. ಈ ಸಂದೇಶ ಬಂದಾಗ ನನಗೆ ಹಾಗೂ ಠಕ್ಕರ ಬಾಪಾ ಇವರಿಗೆ ವಿಶೇಷ ಚಿಂತೆ ಉಂಟಾಗಲಿಲ್ಲ ಎಂಬುದು ಚನ್ನಾಗಿ ನೆನಪಿದೆ. ಅನೇಕ ಭೀಕರ ಪ್ರಸಂಗಗಳೊಳಗಿಂದ ಗಾಂಧೀಜಿಯವರು ಈ ವರೆಗೆ ಪಾರಾಗಿರುವರು. ಅದೇ ರೀತಿ ಈ ಅಗ್ನಿಪರೀಕ್ಷೆಯೊಳಗಿಂದಲೂ ಅವರು ಸುರಕ್ಷಿತ ಪಾರಾಗಿ ಯಶವನ್ನು ಪಡೆಯುವರು ಎಂದು ನಾನು ದೃಢವಾಗಿ ನಂಬಿದ್ದೆನು. ಆದುದರಿಂದ 'ಪರಮಾತ್ಮನು ಮಂಗಲವನ್ನೆ ಮಾಡುವನು. ನಾವು ಹಗಲಿರುಳು ನಿಮ್ಮ ಕ್ಷೇಮದ ಬಗ್ಗೆ ಪ್ರಾರ್ಥನೆ ಮಾಡುವೆವು. ನಿಮ್ಮ ಉಪವಾಸವು ಸಫಲವಾಗಿ ಎಲ್ಲರಿಗೆ ಶುಭವಾಗಲಿ' ಎಂದು ನಾನು ಬರೆದೆನು.

ಆದರೆ ರಾಜಾಜಿಯವರಿಗೆ ಬೇಗನೆ ಸಮಾಧಾನವಾಗುವುದು ಕಠಿಣ. ಅವರು ಗಾಂಧೀಜಿಯವರೊಡನೆ ಸಾಕಷ್ಟು ಚರ್ಚೆ ನಡೆಸಿದರು, ಶಾಸ್ತ್ರಾರ್ಥ ಮಾಡಿದರು, ಆದರೆ ಏನೂ ನಡೆಯಲಿಲ್ಲ. ದೇವದಾಸನು ಅತ್ಯಂತ ಉದಾಸ ವೃತ್ತಿಯಿಂದ ತಂದೆಯವರಿಗೆ ಹೇಳಿಕೊಂಡನು. ನೀವು ಹೀಗೆ ಉಪವಾಸ ಮಾಡಬೇಡಿರೆಂದು ಜನರಲ್ ಸ್ಮಟ್ಸನು ಆಫ್ರಿಕೆಯಿಂದ ದೊಡ್ಡದೊಂದು ತಂತಿ ಕಳಿಸಿದನು. ಆದರೆ ದೇವರ ಆದೇಶದ

ಮುಂದೆ ಗಾಂಧೀಜಿಯವರಿಗೆ ಇವೆಲ್ಲ ಎಷ್ಟರವು ? ಉಪವಾಸ ಪ್ರಾರಂಭವಾದುದನ್ನು ನೋಡಿ ಸರಕಾರದವರು ಸಹ ಪುಣೆಯಲ್ಲಿ ಲೇಡಿ ಠಾಕರಸಿಯವರ ಮನೆಗೆ 'ಪರ್ಣಕುಟಿ' ಎಂಬಲ್ಲಿಗೆ ಗಾಂಧೀಜಿಯವರನ್ನು ಒಯ್ದು ಮುಟ್ಟಿಸಿದರು.

ಇಪ್ಪತ್ತೊಂದು ದಿನಗಳ ಈ ಉಪವಾಸವು ಬಹಳ ದುಷ್ಕರವು. ಹಲವು ತಿಂಗಳು ಮುಂಚೆ ಒಂದು ಉಪವಾಸವು ನಡೆದುಹೋಗಿತ್ತು. ಅದರಿಂದ ಶರೀರವು ದುರ್ಬಲವಾಗಿತ್ತು. ಆ ಉಪವಾಸದ ಕಾಲಕ್ಕೆ ಒಮ್ಮೆ ಪ್ರಾಣಸಂಕಟವು ಪ್ರಾಪ್ತವಾಗಿತ್ತು. ಆದುದರಿಂದ ಈ ಉಪವಾಸದೊಳಗಿಂದ ಇವರು ಜೀವಂತ ಪಾರಾಗುವರೊ ಇಲ್ಲವೊ ಎಂಬ ಬಗ್ಗೆ ಅನೇಕರಿಗೆ ಸಂಶಯವಿತ್ತು. ಆದರೆ ಗಾಂಧೀಜಿಯವರು ಅಂದದ್ದು, 'ನನಗೆ ಸಾಯುವ ಅಪೇಕ್ಷೆ ಇಲ್ಲ. ಹರಿಜನ ಸೇವೆಗಾಗಿ ನಾನು ಬದುಕಬಯುಸುವೆ. ಇನ್ನು ಸಾಯುವುದೇ ಆದರೂ ಚಿಂತೆ ಏಕೆ ? ಅಸ್ಪೃಶ್ಯತೆಯ ದೋಷವು ನಾನು ತಿಳಿದುದರಕಿಂತ ಹೆಚ್ಚು ಗಂಭೀರವಾಗಿದೆ. ಆದುದರಿಂದ ನಾನು ಹಾಗೂ ನನ್ನ ಜೊತೆಗಾರರು ಬದುಕುವುದೆ ಆದರೆ ಹೆಚ್ಚು ಶುದ್ಧರಾಗುವ. ನಾನು ಹರಿಜನ ಸೇವೆಗಾಗಿ ಬದುಕಬೇಕೆಂದು ದೇವರು ಬಗೆದುದಾದರೆ ನಾನು ಈ ಭೌತಿಕ ಅನ್ನವನ್ನು ಬಿಟ್ಟರೂ ದೇವರು ಕೊಡುವ ಆಧ್ಯಾತ್ಮಿಕ ಅನ್ನವು ಈ ಶರೀರವನ್ನು ಸಂರಕ್ಷಿಸುವುದು. ಎಲ್ಲರೂ ತಮ್ಮ ತಮ್ಮ ಕರ್ತವ್ಯವನ್ನು ಮಾಡುತಿದ್ದರೆ ಅದೂ ನನಗೆ ಅನ್ನಪ್ರಾಯವಾಗುವುದು. ತಮ್ಮ ಸ್ಥಾನ ಮತ್ತು ಕರ್ತವ್ಯದಿಂದ ಯಾರೂ ಸರಿಯಕೂಡದು. ಉಪವಾಸ ಬಿಡಿರಿ ಎಂದು ಯಾರೂ ನನಗೆ ಹೇಳಬಾರದು.'

೮—೫—೩೩ ನೆ ದಿನ ಉಪವಾಸದ ಪ್ರಾರಂಭವಾಯಿತು. ೨೯—೫—೩೩ ನೆ ದಿನ ದೇವರ ಕೃಪೆಯಿಂದ ಅದು ಸಫಲವಾಗಿ ಸಮಾಪ್ತವಾಯಿತು. ಉಪವಾಸ ಮುಗಿದ ಬಳಿಕ ಎಷ್ಟೊ ದಿನಗಳ ನಂತರ ಗಾಂಧೀಜಿಯವರು ಅಂದದ್ದು, 'ಈ ಉಪವಾಸವೆಂದರೆ ಇಪ್ಪತ್ತೊಂದು ದಿನದ ನಿತ್ಯಪ್ರಾರ್ಥನೆ ಇತ್ತು. ನನ್ನ ಮೇಲೆ ಆದ

ಉತ್ತಮ ಪರಿಣಾಮದ ಅನುಭವವು ಈಗ ನನಗೆ ಬರುತಿರುವುದು. ಈ ಅವಧಿಯಲ್ಲಿ ಹೊಟ್ಟೆಗಷ್ಟೇ ಆಹಾರವಿರಲಿಲ್ಲ ಎಂದಲ್ಲ. ಎಲ್ಲ ಇಂದ್ರಿಯಗಳಿಗೂ ನಿರಾಹಾರ ಉಪವಾಸವಾಯಿತು. ದೇವರಲ್ಲಿ ಸಂಪೂರ್ಣ ಸಂಲಗ್ನವಾಗುವುದೆಂಬುದರ ಅರ್ಥವೇನು ? ಸಕಲ ಶಾರೀರಿಕ ಕ್ರಿಯೆಗಳನ್ನು ನಿರಾಕರಿಸಿ ದೇವರೊಬ್ಬರನ್ನುಳಿದು ಎಲ್ಲವನ್ನೂ ಪೂರ್ಣ ಮರೆತುಬಿಡುವುದು, ಇದೇ ಅದರ ಅರ್ಥವು. ಸತತ ಪ್ರಯತ್ನ ಹಾಗೂ ವೈರಾಗ್ಯ ಈ ಸಾಧನಗಳಿಂದಲೆ ಇಂಥ ಅವಸ್ಥೆ ಪ್ರಾಪ್ತವಾಗ ಬಲ್ಲದು. ಆದುದರಿಂದ ಇಂಥ ಉಪವಾಸಗಳೆಲ್ಲ ಒಂದು ಬಗೆಯಿಂದ ದೇವರ ಏಕಾಂತಿಕ ಭಕ್ತಿಯ ರೂಪಗಳೆ ಎಂದು ಹೇಳಬಹುದು.'

೧೯೨೪ ರಲ್ಲಿ ಬೇಸಿಗೆಯ ಕಾಲದ ಮಾತು. ಗಾಂಧೀಜಿಯವರು ಬಿಡುಗಡೆ ಹೊಂದಿ ಬಂದಿದ್ದರು. ಅಪೆಂಡಿಕ್ಸ್ ಬಗ್ಗೆ ಶಸ್ತ್ರಕ್ರಿಯೆ ಆಗಿ ಹೋಗಿತ್ತು. ದೇಹವು ದುರ್ಬಲವಾಗಿತ್ತು. ಆರೋಗ್ಯಕ್ಕಾಗಿ ಜುಹು ಎಂಬಲ್ಲಿ ಇದ್ದರು. ನಾನು ನಿತ್ಯ ಅವರೊಡನೆ ಅಡ್ಡಾಡುತಿದ್ದೆ, ಸಮೀಪ ಕೂಡುತಿದ್ದೆ, ತಾಸುಗಟ್ಟಲೆ ಅವರೊಡನೆ ಚರ್ಚೆ ನಡೆಸುತಿದ್ದೆ. ಒಂದು ದಿನ ದೇವರ ಬಗ್ಗೆ ಮಾತು ಹೊರಟಿತು. ತಮಗೆ ದೇವರ ಸಾಕ್ಷಾತ್ಕಾರ ವಾಗಿದೆ ಎಂದು ತಾವು ತಿಳಿಯುವಿರೊ, ಎಂದು ನಾನು ಪ್ರಶ್ನಿಸಿದೆನು.

' ಇಲ್ಲ, ನಾನು ಹಾಗೆ ತಿಳಿದಿಲ್ಲ. ನಾನು ಆಫ್ರಿಕೆಯಲ್ಲಿರುವಾಗ ತೀರ ದೇವರ ಸಮೀಪ ಮುಟ್ಟಿರುವೆನೆಂದು ಭಾವಿಸಿದ್ದೆನು. ನಂತರ ನಾನು ಅದಕೂ ಮುಂದೆ ಹೋದಂತೆ ಕಾಣಲಿಲ್ಲ. ವಿಚಾರ ಮಾಡಿ ದರೆ ನಾನು ಸ್ವಲ್ಪ ಹಿಂದೆಯೆ ಬಂದಂತೆ ತೋರುವುದು. ನನಗೆ ಇನ್ನೂ ಕ್ರೋಧರಹಿತ ಅವಸ್ಥೆ ಪ್ರಾಪ್ತವಾಗಿಲ್ಲ. ಆದರೆ ಕ್ರೋಧ ಬಂದಾಗ ನಾನು ಅದರ ಸಾಕ್ಷಿ ಇರುತಿರುವುದರಿಂದ ಅದರ ಸ್ಥಾಯೀ ಪರಿ ಣಾಮವು ನನ್ನ ಮೇಲೆ ಆಗುವುದಿಲ್ಲ. ನನ್ನ ಉದ್ಯೋಗವು ಮಾತ್ರ ಅತ್ಯುಗ್ರವಾಗಿ ನಡೆದಿರುವುದು. ಆದುದರಿಂದ ಇದೇ ಜನ್ಮದಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳುವ ಆಶೆ ನನಗಿದೆ. ಆದರೆ ಎಲ್ಲವೂ ದೇವರ ಕೈಯಲ್ಲಿ. ನನ್ನ ಪ್ರಯತ್ನ ನಡೆದಿದೆ. '

ಈ ಮಾತಿಗೂ ಈಗ ಹದಿನಾರು ವರ್ಷಗಳಾಗಿ ಹೋದವು. ಆ ನಂತರ ನಾನು ಈ ವರೆಗೆ ಅಂಥ ಕುತೂಹಲವನ್ನು ತೋರಿಸಿಲ್ಲ, ಅಂಥ ಪ್ರಶ್ನೆಗಳನ್ನು ಕೇಳಿಲ್ಲ. ಆದರೆ ದೇವರನ್ನು ಕುರಿತು ಇದ್ದ ಅವರ ಶ್ರದ್ಧೆ ಹಾಗೂ ಅವರ ಸ್ವಂತ ಆತ್ಮವಿಶ್ವಾಸ ಇವು ದಿನದಿನಕ್ಕೆ ಬೆಳೆಯುತಲಿವೆ. ಹಲವು ದಿನಗಳ ಹಿಂದೆ ಮಾತುಮಾತಿನಲ್ಲಿ ಅವರು ಅಂದದ್ದು, 'ಇನ್ನು ನನ್ನಿಂದ ಹೆಚ್ಚು ಮಾತಾಡುವುದು, ವ್ಯಾಖ್ಯಾನ, ಚರ್ಚೆ, ಇವು ಆಗುವುದಿಲ್ಲ. ನನಗೆ ಮೌನವು ಹೆಚ್ಚು ಪ್ರಿಯವೆನಿಸುವುದು. ಆದರೆ ಮೂಕವಾಣಿಯ ಪರಿಣಾಮವಾಗುವುದಿಲ್ಲ ಎಂದು ಮಾತ್ರ ನಾನು ತಿಳಿಯುವುದಿಲ್ಲ. ನಿಜವಾಗಿ ಸ್ಥೂಲ ವಾಣಿಗಿಂತ ಮೂಕ ವಾಣಿಯ ಶಕ್ತಿಯು ಹೆಚ್ಚು ಪ್ರಭಾವಿಯು. ಜನರು ಸತ್ಯಾಗ್ರಹದ ಮಾತನ್ನೆತ್ತುವರು. ಈಗ ಸತ್ಯಾಗ್ರಹ ಪ್ರಾರಂಭವಾದರೆ ನಾನು ಮೊದಲಿನಂತೆ ಸಂಚಾರ ಮಾಡುವುದು, ವ್ಯಾಖ್ಯಾನ ಕೊಡುವುದು ಅವಶ್ಯವೆಂದು ತೋರುವುದಿಲ್ಲ. ಇದು ನಿಶ್ಚಯ. ಈಗ ನಾನು ಈ ಸೇವಾಗ್ರಾಮದಲ್ಲಿ ಕುಳಿತೇ ಸೂತ್ರಗಳನ್ನು ಅಲ್ಲಾಡಿಸಬಲ್ಲೆ. ಇಷ್ಟು ಆತ್ಮವಿಶ್ವಾಸವು ನನಗೆ ಉಂಟಾಗಿಬಿಟ್ಟದೆ. ನನಗೆ ದೇವರ ಸಂಪೂರ್ಣ ಸಾಕ್ಷಾತ್ಕಾರವಾಗಿಬಿಟ್ಟರೆ ಇಷ್ಟು ಸಹ ಮಾಡುವ ಅವಶ್ಯಕತೆ ಉಳಿಯಲಿಕ್ಕಿಲ್ಲ. ಸಂಕಲ್ಪಮಾತ್ರದಿಂದ ಕಾರ್ಯವಾಗಬಹುದು. ಆ ಪದವನ್ನು ಪಡೆಯಲು ಸಹ ನಾನು ಯತ್ನಿಸುತ್ತಿದ್ದೇನೆ.'

ಇವು ತೀರ ಒಳಗುಟ್ಟಿನ ಮರ್ಮದ ಮಾತು. ನಮ್ಮ ಅಂತರದಲ್ಲಿ ಯಾವ ಅಚಿಂತ್ಯ ಶಕ್ತಿ ತುಂಬಿಕೊಂಡಿದೆಯೊ, ಯಾವ ಶಕ್ತಿಗೆ ನಾವು ದೇವರೆಂಬ ಹೆಸರನ್ನು ಕೊಡಬಹುದೊ, ಆ ಶಕ್ತಿಯ ಅರಿವನ್ನು ನಮಗೆ ಈ ಮಾತುಗಳು ಮಾಡಿಕೊಡುವವು.

ಇಂತಿಂತಹ ಕೆಲಸದಲ್ಲಿ ದೇವರ ಕೈ ಇದೆ ಎಂದು ಗಾಂಧೀಜಿಯವರು ಎಷ್ಟೋ ಸಾರೆ ಅಂದಿದ್ದಾರೆ. ಆದರೆ ಪ್ರತ್ಯಕ್ಷ ಆಕಾಶವಾಣಿ ಆದ ಅನುಭವ ಇದೇ (ಹರಿಜನ ಉಪವಾಸ) ಮೊದಲಿನದು. ಇದು ದೇವರಲ್ಲಿದ್ದ ಅವರ ಅಪಾರ ಶ್ರದ್ಧೆಯ ಪ್ರದರ್ಶನವೆಂದು ನಾನು ಹೇಳ

ಬಲ್ಲೆ. ಈ ಆಕಾಶವಾಣಿಯ ಚಮತ್ಕಾರವನ್ನು ಕುರಿತು ನಾನು ಅವರೊಡನೆ ದೀರ್ಘಕಾಲ ಮಾತಾಡಿರುವೆನು. ಮಾತಾಡುವಾಗ ನನಗೆ ಪೂರಾ ತಿಳಿಸಿಕೊಡಲು ಸಾಕಷ್ಟು ಶಬ್ದಸಾಮಗ್ರಿಯು ಅವರಲ್ಲಿರಲಿಲ್ಲ ಎಂದು ಕಂಡುಬಂದಿತು. ಎಷ್ಟೇ ಸುಲಭವಾಗಿ ಸುಲಲಿತವಾಗಿ ಪ್ರೌಢ ಭಾಷೆಯಿಂದ ಅವರು ಹೇಳಲು ಹೆಣಗಿದರೂ ಶಬ್ದಾತೀತವಾದುದನ್ನು ಶಬ್ದಗಳಿಂದ ತಿಳಿಸುವ ಬಗೆ ಯಾವುದು? ಒಂದು ಧ್ವನಿ ಕೇಳಿಸಿತು ಎಂದು ನಾವು ಅನ್ನುವಾಗ ನಾವು ಕೇವಲ ಮಾನವೀ ಭಾಷೆಯನ್ನೇ ಉಪಯೋಗಿಸುವೆವು. ದೇವರಿಗೆ ರೂಪವಿಲ್ಲ, ಆಕೃತಿ ಇಲ್ಲ. ಶಬ್ದ ಸ್ಪರ್ಶಾದಿಗಳಿಂದ ಅವನು ಬಾಧಿತನಿಲ್ಲ. ಅಂದಬಳಿಕ ಅವನ ಧ್ವನಿ ಎಂಬುದು ಎಲ್ಲಿಯದು, ಅವನ ಆಕೃತಿ ಎಂದರೇನು? ಆದರೂ ಧ್ವನಿ ಕೇಳಿಸಿದುದು ಸುಳ್ಳಲ್ಲ. 'ಆ ಭಾಷೆ ಎಂತಹದು?' ಎಂದು ಕೇಳಿದೆನು.

'ನಾವೆಲ್ಲರೂ ಮಾತಾಡುವಂತಹದೇ?'

'ನಮಗೆ ಯಾರೋ ಹೇಳುತಿರುವಂತೆ ಎನಿಸುವುದು. ಇದೇ ನಿಮ್ಮ ಮಾತಿನ ಅರ್ಥವಲ್ಲವೆ? ಆದರೆ ಹೀಗೆ ಆಭಾಸವೂ ಆಗಬಲ್ಲದು.'

'ಅಹುದು, ಆಭಾಸವೂ ಆಗಬಲ್ಲದು, ಆದರೆ ಇದು ಆಭಾಸವಿರಲಿಲ್ಲ.'

ಆ ವಾಣಿ ಕೇಳಿಸಲು ಪಾತ್ರತೆಬೇಕು ಎಂಬುದೂ ತಿಳಿದುಕೊಳ್ಳತಕ್ಕ ಮಾತಾಗಿದೆ. ಯಾವನೊಬ್ಬ ಮನುಷ್ಯನಿಗೆ ಭ್ರಮ ಇಲ್ಲವೆ ಆಭಾಸವಾಗಬಲ್ಲದು. ಅವನು ಅದಕ್ಕೆ ಆಕಾಶವಾಣಿ ಎಂದು ಹೇಳಿ ಅಂಧಶ್ರದ್ಧೆಯನ್ನು ಬೀರಬಹುದು. ಇನ್ನೊಬ್ಬನು ಅಧಿಕಾರಿ ಇರಬಲ್ಲನು, ಜಾಗ್ರತನಿರಬಲ್ಲನು. ಇವನು ಅದು ಭ್ರಮವಲ್ಲ ಎಂದು ಹೇಳಬಲ್ಲನು. ಇತರ ಮಾತುಗಳಂತೆ ಆಕಾಶವಾಣಿ ಕೇಳಿಸಬೇಕಾದರೂ ಪಾತ್ರತೆಬೇಕು. ಸೂರ್ಯನ ಪ್ರತಿಬಿಂಬವನ್ನು ಕನ್ನಡಿಯಲ್ಲಿಯೆ ನೋಡಬಲ್ಲೆವು ಕಲ್ಲಿನಲ್ಲಲ್ಲ.

ಇಪ್ಪತ್ತೊಂದು ದಿನಗಳ ಈ ಧಾರ್ಮಿಕ ಉಪವಾಸವು ಗಾಂಧೀಜಿಯವರ ಅನೇಕ ಉಪವಾಸಗಳಲ್ಲಿ ಒಂದು. ಸಣ್ಣ ಪುಟ್ಟ ಉಪವಾಸಗಳ ಲೆಕ್ಕವನ್ನು ಬಿಟ್ಟರೂ ಇವರು ಪ್ರಾಣವನ್ನೇ ಪಣಕ್ಕೆ ಹಚ್ಚಿದ ದೊಡ್ಡ ಉಪವಾಸಗಳ ಸಂಖ್ಯೆ ಈವರೆಗೆ ಸುಮಾರು ಹತ್ತು ಹನ್ನೆರಡು ಆದರೂ ಆಗಿರಬಹುದು.

ಉಳಿದ ಪ್ರವೃತ್ತಿಗಳು ಹೇಗೆ ಯಾವಾಗ ಇವರಲ್ಲಿ ಹುಟ್ಟಿದವು ಎಂಬುದನ್ನು ಹೇಳುವುದು ಕಠಿಣವಿದ್ದಂತೆ ಉಪವಾಸ ಪ್ರವೃತ್ತಿಯ ಹುಟ್ಟನ್ನು ಗೊತ್ತುಹಿಡಿಯುವುದು ಕಠಿಣ. ಗುಲಾಬಿಯ ಹೂವು ಮೊದಲೊ ಅದರ ಸುಗಂಧವು ಮೊದಲೊ ? ಯಾವ ಪ್ರವೃತ್ತಿ ಮೊದಲು, ಯಾವುದು ನಂತರ, ಇದನ್ನು ಕಂಡು ಹಿಡಿಯುವುದು ಕಠಿಣ. ಆದರೂ ಇವರ ತಾಯಿಯು ಮಾಡುತಿರುವ ಉಪವಾಸಗಳ ಪರಿಣಾಮದಿಂದಲೆ ಇವರಲ್ಲಿ ಉಪವಾಸಭಾವನೆ ಜಾಗ್ರತವಾಗಿರಲಿಕ್ಕೆ ಸಾಕು. ಇವರ ತಾಯಿ ಅತ್ಯಂತ ಧಾರ್ಮಿಕವೃತ್ತಿಯವಳು. ಉಪವಾಸದಲ್ಲಿ ಆಕೆಯ ವಿಶ್ವಾಸ; ವರುಷದುದ್ದಕ್ಕೆ ಸಣ್ಣ ಪುಟ್ಟ ಉಪವಾಸಗಳನ್ನು ಮಾಡುತಿದ್ದಳು. ಚಾತುರ್ಮಾಸ್ಯದಲ್ಲಿ ಒಪ್ಪತ್ತೇ ಊಟ. ಆಕೆ ಚಾಂದ್ರಾಯಣ ವ್ರತವನ್ನು ಅನೇಕ ಸಾರೆ ಮಾಡಿದ್ದಳು. ಸೂರ್ಯದರ್ಶನವಿಲ್ಲದೆ ಊಟವಿಲ್ಲ ಎಂಬ ವ್ರತವನ್ನು ಒಂದು ಚಾತುರ್ಮಾಸ್ಯದಲ್ಲಿ ಇವರ ತಾಯಿ ಕೈಕೊಂಡಳು. ಮಳೆಗಾಲದಲ್ಲಿ ಒಮ್ಮೊಮ್ಮೆ ದಿನಗಟ್ಟಲೆ ಸೂರ್ಯನ ದರ್ಶನವಾಗುತಿರಲಿಲ್ಲ. ಒಮ್ಮೊಮ್ಮೆ ಹಲವು ನಿಮಿಷ ಮಾತ್ರ ಕಾಣಿಸಿ ಮಾಯವಾಗುತಿದ್ದ. ಬಾಲ ಗಾಂಧಿಯು ಮಾಳಿಗೆ ಏರಿ ಸೂರ್ಯನತ್ತ ದೃಷ್ಟಿಯಿಟ್ಟು ಸೂರ್ಯದರ್ಶನದ ಹಾದೀ ಕಾಯುತಿದ್ದನು. ಕಂಡೊಡನೆ ತಾಯಿಗೆ ಹೋಗಿ ಹೇಳುತಿದ್ದನು. ಆದರೆ ಪಾಪ ತಾಯಿ ಬಂದು ನೋಡುವಷ್ಟರಲ್ಲಿ ಪುನಃ ಸೂರ್ಯನು ಮೋಡದಲ್ಲಿ ಮುಸುಕಿ ಹೋಗುತಿದ್ದನು. ಇದರಿಂದ ತಾಯಿ ಅಸಂತುಷ್ಟಳಾಗುತಿರಲಿಲ್ಲ. 'ಮಗುವೇ, ಚಿಂತಿಸಬೇಡ ನಾನು ಈ ಹೊತ್ತು ಊಟ ಮಾಡಬಾರದೆಂದೇ ದೇವರ ಇಚ್ಛೆ ಇದೆ' ಇಷ್ಟು ಹೇಳಿ ಆಕೆ ಮತ್ತೆ ತನ್ನ ಕೆಲಸದಲ್ಲಿ ಮಗ್ನಳಾಗುತಿದ್ದಳು.

ಬಾಲ ಗಾಂಧಿಯ ಮನಸ್ಸಿನ ಮೇಲೆ ಈ ಎಲ್ಲ ಘಟನೆಗಳ ಪರಿಣಾಮವೇನಾಗುತಿರಬಹುದೆಂಬುದನ್ನು ನಾವು ಊಹಿಸಬಲ್ಲೆವು. ಒಳ್ಳೆ ಬಲವಾದ ಪರಿಣಾಮವಾಯಿತೆಂಬಲ್ಲಿ ಸಂಶಯವಿಲ್ಲ. ಮೊದಲನೆ ಉಪವಾಸವನ್ನು ಗಾಂಧೀಜಿಯವರು ಆಫ್ರಿಕೆಯಲ್ಲಿ ಮಾಡಿದರು. 'ಟಾಲಸ್ಟಾಯ ಫಾರ್ಮ' ದಲ್ಲಿ ಆಶ್ರಮ ನಡೆಸುತಿರುವಾಗ ಆ ಉಪವಾಸದ ಪ್ರಸಂಗ ಬಂದಿತ್ತು. ಹಲವು ದಿನ ಅವರು ಆಶ್ರಮದ ಹೊರಗೆ ಇರುತಿದ್ದರು. ಆಗ ಆಶ್ರಮವಾಸಿಗಳಲ್ಲಿ ಇಬ್ಬರ ನೈತಿಕ ಪತನವಾಗಿದೆಯೆಂದು ಅವರಿಗೆ ತಿಳಿಯಿತು. ಇದರಿಂದ ಅವರ ಮನಸಿಗೆ ಕೆಡುಕೆನಿಸುವುದು ಸ್ವಾಭಾವಿಕವೆ. ಆದರೆ ಇದರ ಹೊಣೆ ಆಶ್ರಮದ ಗುರುಗಳ ಮೇಲೂ ಇದೆ ಎಂದು ಅವರ ಭಾವನೆ. ಆಶ್ರಮದ ಸಂಚಾಲಕರು ತಾವೇ ಇದ್ದುದರಿಂದ ಈ ದುರ್ಘಟನೆಯ ಹೊಣೆ ತಮ್ಮ ಮೇಲೆ ಇದೆ ಎಂದು ಗಾಂಧೀಜಿಯವರು ತಿಳಿದರು. ಆದುದರಿಂದ ಅವರು ಏಳು ದಿನದ ಉಪವಾಸ ಮಾಡಿದರು. ಮುಂದೆ ಹಲವು ದಿನಗಳ ನಂತರ ಇದೇ ವಿಷಯದ ಸಂಬಂಧದಿಂದ ಹದಿನಾಲ್ಕು ದಿನಗಳ ಉಪವಾಸವನ್ನು ಅವರು ಕೈಕೊಳ್ಳಬೇಕಾಯಿತು.

ಆನಂತರ ಅನೇಕ ಉಪವಾಸಗಳು ಆಗಿವೆ. ಈ ದೇಶಕ್ಕೆ ಬಂದ ಬಳಿಕ ಇಂತಹ ಸಂಗತಿಗಳನ್ನು ಕುರಿತು ಒಂದೆರಡು ಉಪವಾಸಗಳನ್ನು ಅವರು ಮಾಡಿದರು. ಅಹಮದಾಬಾದದ ಗಿರಣಿ ಹರತಾಳದ ಕಾಲಕ್ಕೆ ಒಂದು ಉಪವಾಸ ಮಾಡಿದರು. ಹಿಂದೂ-ಮುಸಲ್ಮಾನರ ಐಕ್ಯಕ್ಕಾಗಿ ದಿಲ್ಲಿಯಲ್ಲಿ ಇಪ್ಪತ್ತೊಂದು ದಿನದ ಉಪವಾಸವೊಂದನ್ನು ಕೈಕೊಂಡರು. ಹರಿಜನರಿಗೆ ಸಾಕಷ್ಟು ಸ್ಥಳಗಳು ( ವಿಧಿ ಮಂಡಳಗಳಲ್ಲಿ ) ದೊರೆಯಬೇಕೆಂದು ಪ್ರಧಾನಮಂತ್ರಿ ಮ್ಯಾಕಡೋನಾಲ್ಡ ಇವರ ನಿರ್ಣಯದ ವಿರುದ್ಧ ಒಂದು ಆಮರಣ ಉಪವಾಸ ಮಾಡಿದರು. ಮತ್ತೆ ಹರಿಜನ ಕಾರ್ಯದ ಸಂಬಂಧದಲ್ಲಿ ಪ್ರಾಯಶ್ಚಿತ್ತವೆಂದು ಒಂದು ಉಪವಾಸ ಮಾಡಿದರು. ಹರಿಜನ ಪ್ರಚಾರ ಕಾರ್ಯಕ್ಕೆ ಸರಕಾರದವರು ಜೇಲಿನಲ್ಲಿರುವಾಗ ತಡೆ ಹಾಕಿದ್ದಕ್ಕೆ ಮತ್ತೊಂದು ಉಪವಾಸವಾಯಿತು. ಹರಿಜನ ಪ್ರವಾಸದ ಮುಕ್ತಾಯದ ನಂತರ ಹಲವು

ಕಾರ್ಯಕರ್ತರ ಅಸಹಿಷ್ಣುತೆಯ ಮೂಲಕ ಪ್ರಾಯಶ್ಚಿತ್ತವೆಂದು ಏಳು ದಿನ ಉಪವಾಸ ಮಾಡಿದರು. ರಾಜಕೋಟದಲ್ಲಿ ಒಂದು ಉಪ ವಾಸ ನಡೆಯಿತು.

ಪ್ರಧಾನಮಂತ್ರಿಗಳ ನಿರ್ಣಯದ ವಿರುದ್ಧ ಅವರು ಮಾಡಿದ ಉಪವಾಸದ ಸಫಲ ಸಮಾಪ್ತಿಗಾಗಿ ನಡೆದ ಪ್ರಯತ್ನಗಳಲ್ಲಿ ನಾನೂ ತಕ್ಕಮಟ್ಟಿಗೆ ಭಾಗವಹಿಸಿದ್ದರಿಂದ ಈ ಉಪವಾಸದ ನಿಕಟ ಪರಿಚಯವು ನನಗೆ ಆಯಿತು. ಆದುದರಿಂದ ಅದರ ಅವಲೋಕನ, ಅಧ್ಯಯನ ಮಾಡಲು ನನಗೆ ಒಳ್ಳೆ ಅವಕಾಶ ದೊರೆಯಿತು.

ಆಗ ಗಾಂಧೀಜಿಯವರು ಜೇಲಿನಲ್ಲಿಯೆ ಇದ್ದರು. ಜನರು ದಣಿ ಯುತ್ತ ನಡೆದಿದ್ದರೂ ಸತ್ಯಾಗ್ರಹ ಚಳವಳಿ ಇನ್ನೂ ಸಾಗಿತ್ತು. ಆಗ ಒಮ್ಮೆಲೆ ಒಂದು ಬಾಂಬು ಬಿದ್ದಂತಾಯಿತು— ಗಾಂಧೀಜಿ ಆಮರಣ ಉಪವಾಸ ಕೈಕೊಂಡರೆಂದು ಜನರಿಗೆ ತಿಳಿಯಿತು. ಸುತ್ತಲು ಅಲ್ಲೋಲ ಕಲ್ಲೋಲವಾಯಿತು. ವರ್ತಮಾನ ಓದಿ ನಾನಂತೂ ದಿಂಗುಬಡೆದಂತೆ ಕುಳಿತೆನು. ನಾನು ಗಾಬರಿಗೊಂಡಿರುವೆ, ಏನು ಮಾಡಲಿ, ಎಂದು ಗಾಂಧೀಜಿಗೆ ತಾರು ಬಿಟ್ಟೆನು. 'ಚಿಂತೆಯ ವಿಷಯವಲ್ಲ, ಇದು ಆನಂದದ ಸಂಗತಿ. ಅತ್ಯಂತ ದಲಿತರಿಗಾಗಿ ಅಂತಿಮ ಯಜ್ಞವನ್ನು ಮಾಡುವ ಸುಸಂಧಿಯನ್ನು ದೇವರು ನನಗೆ ಒದಗಿಸಿಕೊಟ್ಟಿರುವನು- ಉಪವಾಸವನ್ನು ನಾನು ನಿಲ್ಲಿಸಲಾರೆನೆಂಬ ಬಗ್ಗೆ ನನಗೆ ಸಂಶಯವೇ ಇಲ್ಲ. ನಾನು ಇಲ್ಲಿಂದ ನಿಮಗೆ ಸಲಹೆ ಸೂಚನೆ ಕಳಿಸಲು ಬಾಧ್ಯಸಲ್ಲ ಎಂದು ನನ್ನ ಭಾವನೆ,' ಎಂದು ಉತ್ತರ ಬಂದಿತು. ಏನು ಮಾಡ ಬೇಕೆಂಬುದು ಯಾರಿಗೂ ತೋಚಲಿಲ್ಲ. ಆದರೆ ಎಲ್ಲರ ಮುಖ ಪುಣೇದ ಕಡೆಗೆ ತಿರುಗಿತು ಹಾಗೂ ನಾವು ಎಲ್ಲರೂ ಒಬ್ಬೊಬ್ಬರೆ ಅಲ್ಲಿಗೆ ಹೋಗಲಾರಂಭಿಸಿದೆವು.

ರಾಜಾಜಿ, ದೇವದಾಸ, ಮತ್ತು ನಾನು ತೀವ್ರವೆ ಪುಣೆಕ್ಕೆ ತಲುಪಿ ದೆವು. ಪೂಜ್ಯ ಮಾಲವೀಯರು, ಸರ ತೇಜಬಹಾದ್ದೂರ ಸಪ್ರು, ಶ್ರೀ. ಜಯಕರ, ರಾಜೇಂದ್ರ ಬಾಬು, ರಾವಬಹಾದ್ದೂರ ರಾಜಾ,

ಈ ಮುಂತಾದವರೂ ಒಬ್ಬೊಬ್ಬರೆ ಮೊದಲು ಮುಂಬಯಿಗೆ ಬಳಿಕ ಪುಣೆಕ್ಕೆ ಬರಲಾರಂಭಿಸಿದರು. ನಂತರ ಡಾ. ಅಂಬೇಡಕರರನ್ನು ಕರೆ ಕಳುಹಿದರು. ಸರಕಾರದ ಅಪ್ಪಣೆಪಡೆದು ಸರ ಪುರುಷೋತ್ತಮದಾಸ, ಸರ ಚುನ್ನಿಲಾಲ, ಮಥುರಾದಾಸ ವಸನಜಿ ಮತ್ತು ನಾನು ಮೊಟ್ಟ ಮೊದಲು ಗಾಂಧೀಜಿಯುವರಿಗೆ ಜೇಲಿನಲ್ಲಿ ಭೆಟ್ಟಿಯಾದೆವು. ಜೇಲ ಸುಪರಿಂಟೆಂಡೆಂಟರ ಕೋಣೆಯಲ್ಲಿ ನಮ್ಮೆಲ್ಲರ ಭೆಟ್ಟಿಯಾಯಿತು. ಆಗ ಇನ್ನೂ ಉಪವಾಸಕ್ಕೆ ಪ್ರಾರಂಭವಾಗಿರಲಿಲ್ಲ. ಆ ಕೋಣೆ ಕೆಳಗೆಯೆ ಇದ್ದಿತು. ಅದರ ಕಿಡಕಿಗಳಿಂದ ಜೇಲಿನ ಸಾಕಷ್ಟು ಭಾಗವು ಕಾಣುತಿತ್ತು. ಫಾಸೀ ಕೊಡುವ ಸ್ಥಳವು ಕೂಡ ಅಲ್ಲಿಂದ ಕಾಣುತಿತ್ತು. ಗಾಂಧೀಜಿಯುವರು ಬರುವದಾರಿ ಆಫಾಸೀ ಕಟ್ಟೆಯ ಗೋಡೆಯ ಬದಿಗೆ ಹಾಯುತಿತ್ತು. ಒಂಬತ್ತು ತಿಂಗಳಿಂದ ನಾನು ಗಾಂಧೀಜಿಯವರನ್ನು ನೋಡಿರಲಿಲ್ಲ. ಗಾಂಧೀಜಿಯುವರು ಒಳ್ಳೆ ವೇಗದಿಂದ ನಮ್ಮೆಡೆಗೆ ಬರುತಿರುವುದನ್ನು ನಾನು ಕಿಡಕಿಯೊಳಗಿಂದ ಅಕಸ್ಮಾತ್ತಾಗಿ ಕಂಡೆನು. ನನ್ನ ಚಿಂತೆಯೆಲ್ಲ ಬಯಲಾಯಿತು. ಏನೂ ವಿಶೇಷ ಆಗಿಲ್ಲವೆಂಬಂತೆ ಗಾಂಧೀಜಿಯುವರು ಚುರುಕಾಗಿ ನಡೆದಿದ್ದರು! ಎರಡು ಮೂರು ದಿನಗಳ ಮುಂಚೆ ಆ ಗಲ್ಲಿಗೇರಿಸುವ ಸ್ಥಳದಲ್ಲಿ ಒಬ್ಬನಿಗೆ ಫಾಸೀ ಕೊಡಲಾಗಿತ್ತಂತೆ. ಅದರ ಬದಿಯಿಂದಲೆ ಗಾಂಧೀಜಿಯುವರು ನಡೆದಿದ್ದರು! ಇದನ್ನು ನೋಡಿ ನನ್ನ ಎದೆ ತುಂಬಿ ಹೋಯಿತು. ಈ ಗೃಹಸ್ಥನು ಈ ಸ್ಥಳದಲ್ಲಿರಬೇಕೇ ಇದೇನು ವಿಧಿಘಟನೆ, ಎಂದೆನಿಸಿತು. ಗಾಂಧೀಜಿಯುವರು ಕೋಣೆಯಲ್ಲಿ ಬಂದರು. ನಾನು ಅತ್ಯಾದರದಿಂದ ಪಾದ ಮುಟ್ಟಿದೆನು. ಕೂಡಲೆ ಮುಂದಿನ ಕಾರ್ಯದ ಬಗ್ಗೆ ಮಾತುಗಳು ನಡೆದವು. ಅವರು ಒಳ್ಳೆ ಸಾವಧಾನ ರೀತಿಯಿಂದ ಎಲ್ಲ ಸಂಗತಿಗಳನ್ನು ವಿವರವಾಗಿ ತಿಳಿಹೇಳಿದರು. ಉಪವಾಸವು ಹೇಗೆ ನಿಲ್ಲಬಹುದು, ಅರ್ಥಾತ್ ಪ್ರಾರಂಭವಾದಬಳಿಕ ಏನು ಘಟಿಸಿದರೆ ತಾವು ಪಾರಣೆ ಮಾಡಬಹುದು, ಆ ಬಗ್ಗೆ ಕರಾರಗಳಾವುವು ಎಂಬುದರ ವಿವರಗಳನ್ನು ವಿವರಿಸಿದರು. ಅವರ ಈ ಉಪವಾಸದ ವ್ರತವು ಮೊದಲು ಹಟಮಾರಿತನದ್ದೆನಿಸುತಿತ್ತು. ಆದರೆ ಅವರ ಮಾತು ಕೇಳಿದ ಬಳಿಕ

ಅದೊಂದು ಅವರ ಧರ್ಮ, ಅವರು ಮಾಡತಕ್ಕ ಕರ್ತವ್ಯ ಎಂದೆನಿಸ ಲಾರಂಭಿಸಿತು. ಅವರ ಮನಸಿನ ಚಿತ್ರವನ್ನು ನಮ್ಮೊಡನೆ ಕೊಂಡು ನಾವು ಮುಂಬಯಿಗೆ ಹೋದೆವು. ಅಲ್ಲಿ ಪೂಜ್ಯ ಮಾಲವೀಯರಿಗೆ ಹಾಗೂ ಇತರ ಮುಖಂಡರಿಗೆ ಎಲ್ಲ ಸಂಗತಿಯನ್ನು ಹೇಳಿದೆವು.

ಆಗ ನಮ್ಮ ಮುಖಂಡರು ಎಷ್ಟು ಸೋಮಾರಿಗಳಾಗಿದ್ದರು ಹಾಗೂ ದಿಕ್ಕುತಪ್ಪಿ ಎಷ್ಟು ಕಿಂಕರ್ತವ್ಯಮೂಢರಾಗಿದ್ದರು ಎಂಬುದು ನನಗೆ ನೆನಪಿದೆ. ಗಾಂಧೀಜಿಯವರು ಉಪವಾಸ ಮಾಡುವುದು ಯಾರ ಮನಸಿಗೂ ಬಂದಿರಲಿಲ್ಲ. ಅವರು ಮಾಡಿದ ರಚನಾತ್ಮಕ ಸೂಚನೆಗಳ ಉಪಯುಕ್ತತೆಯೂ ಅಷ್ಟೊಂದು ಎಲ್ಲರಿಗೆ ಹೊಳೆದಿರ ಲಿಲ್ಲ. ವೇಳೆ ಕಳೆಯುವುದೆಂದರೆ ಗಾಂಧೀಜಿಯವರ ಜೀವವನ್ನು ಗಂಡಾಂತರಕ್ಕೀಡು ಮಾಡಿದಂತೆ ಎಂಬ ವಿಚಾರವೂ ಅವರಿಗಿರಲಿಲ್ಲ. ಗಾಂಧೀಜಿಯವರು ಹೀಗೆ ಮಾಡಬಾರದಾಗಿತ್ತು ಎಂಬ ಮಾತನ್ನೆ ಅವರು ಮತ್ತೆ ಮತ್ತೆ ಆಡುತಿದ್ದರು. ಇದು ಬಲಾತ್ಕಾರವೆನಿಸುವುದು, ಹೀಗೆ ಉಪವಾಸ ಮಾಡಬೇಡಿರೆಂದು ಅವರಿಗೆ ತಿಳಿಹೇಳಲಿಕ್ಕೆ ಬೇಕು, ಎಂದು ಅವರು ಅನ್ನುತಿದ್ದರು. ಅವರು ಉಪವಾಸ ಮಾಡದಿರುವುದು ಸಾಧ್ಯವಿಲ್ಲ, ಚರ್ಚೆ ಮಾಡುತ್ತ ಕೂಡುವ ಸಮಯವು ಅದಲ್ಲ, ಎಂಬ ಮಾತಿನ ಪ್ರತೀತಿ ಅವರಿಗೆ ಆಗುತಿರಲಿಲ್ಲ. ನಮಗೆದುರಾದ ಆ ಸಮಸ್ಯೆ ಯನ್ನು ಬಿಡಿಸಿ ಗಾಂಧೀಜಿಯವರ ಜೀವವನ್ನು ಹೇಗೆ ಉಳಿಸಬೇಕು ಇದೊಂದೇ ನಮ್ಮ ಪ್ರಶ್ನೆಯಾಗಿತ್ತು. ಆ ಮುಖಂಡರಲ್ಲಿ ಒಬ್ಬನ ಮಿದುಳು ಆ ತೊಡಕಿನೊಳಗಿಂದ ಹಾದೀ ತೆಗೆಯುವ ಕೆಲಸವನ್ನು ಚನ್ನಾಗಿ ನಡೆಸಿತ್ತು ಎಂಬುದು ನನ್ನ ಸ್ಮರಣಕ್ಕೆ ಬರುತಿದೆ. ಸರ ತೇಜ ಬಹಾದ್ದೂರ ಸಪ್ರು ಇವರ ಮಿದುಳೇ ಅದು. ಆದರೆ ಗಾಂಧೀಜಿ ಯವರ ಪ್ರಾಣರಕ್ಷಣೆಯ ಹೊಣೆಯನ್ನು ದೇವರೆ ಹೊತ್ತಿದ್ದನು. ನಾವು ವ್ಯರ್ಥ ಚಿಂತೆಗೀಡಾಗಿದ್ದೆವು.

ಉಪವಾಸವನ್ನು ಪ್ರಾರಂಭಿಸುವ ಪೂರ್ವದಲ್ಲಿ ಗಾಂಧೀಜಿಯವರು ನಮಗೆಲ್ಲರಿಗೂ ಕೆಲಸ ಮಾಡಲು ಸಾಕಷ್ಟು ಅವಕಾಶ ಕೊಟ್ಟಿದ್ದರು.

ಆದರೆ ಅದರ ಉಪಯೋಗವಾಗಲಿಲ್ಲ. ಕಾರ್ಯಸೂತ್ರಗಳನ್ನೆಲ್ಲ ಗಾಂಧೀಜಿಯುವರೆ ಸ್ವತಃ ತಮ್ಮ ಕೈಯಲ್ಲಿ ತಕ್ಕೊಳ್ಳದಿದ್ದರೆ ಆ ಪ್ರಸಂಗದಲ್ಲಿ ಉಪಯುಕ್ತವಾದ ಕೆಲಸವಾಗುತಿತ್ತೊ ಇಲ್ಲವೊ ಎಂಬ ಬಗ್ಗೆ ನನಗೆ ಸಂಶಯು. ಉಪವಾಸ ಸುರುವಾಗುವದೊಂದೇ ತಡ, ಸರಕಾರದವರು ಜೇಲಿನ ಬಾಗಿಲುಗಳನ್ನು ತೆರೆದಿಟ್ಟು ಬಿಟ್ಟರು. ಇದರಿಂದ ಗಾಂಧೀಜಿಯುವರಿಗೆ ಭೆಟ್ಟಿಯಾಗಲು, ಅವರೊಡನೆ ಮಾತುಕಥೆ ನಡೆಸಲು ಮುಕ್ತದ್ವಾರವಾಯಿತು. ಸ್ವಾಭಾವಿಕವಾಗಿ ಎಲ್ಲ ಸೂತ್ರಗಳು ಅವರ ಕೈವಶವಾದವು. ಹರಿಜನರು ಹಾಗೂ ಉಚ್ಚ ವರ್ಣೀಯರು ಇವರ ನಡುವೆ ಆಗಬಹುದಾದ ಒಪ್ಪಿತಕ್ಕೆ ನಾವು ಮುದ್ರೆಯನ್ನಿಕ್ಕುವೆವು ಎಂದು ಸರಕಾರದವರು ಅನ್ನುತಿದ್ದರು. ಆದುದರಿಂದ ಇವರಿಬ್ಬರ ನಡುವೆ ಒಂದು ಬಗೆಯು ಒಪ್ಪಿಗೆ ಕರಾರುಗಳಾಗುವುದೆ ಮುಖ್ಯ ಕೆಲಸವಿತ್ತು.

ಹಾಗೆಯೆ ನಾವು ಆ ಚರ್ಚೆಯಲ್ಲಿ ಹಗಲಿರುಳು ಮಗ್ನರಿದ್ದೆವು. ಆದರೆ ಸಿದ್ಧಾಂತಗಳನ್ನು ಕುರಿತು ಇಬ್ಬರೆ ಮುಖ್ಯವಾಗಿ ನಿರ್ಣಯಿಸಬೇಕಿತ್ತು. ಇತ್ತ ಗಾಂಧೀಜಿ ಅತ್ತ ಡಾ. ಅಂಬೇಡಕರ. ಅವರು ಒಪ್ಪಿದ ಸಿದ್ಧಾಂತಗಳ ತಳಹದಿಯ ಮೇಲೆ ಒಂದು ಗೋಡೆ ಕಟ್ಟುವುದು ನಮ್ಮ ಕೆಲಸ. ಈ ಕೆಲಸದಲ್ಲಿ ಸರ ತೇಜ ಬಹಾದ್ದೂರ ಸಪ್ರು ಇವರ ತೇಜಸ್ವಿ ಬುದ್ಧಿಯು ನಮಗೆ ಒಳ್ಳೇ ಸಹಾಯ ಮಾಡುತಿತ್ತು. ಗಾಂಧೀಜಿಯುವರು ದುರ್ಬಲರಾಗುತ್ತ ನಡೆದಿದ್ದರೂ ಅವರ ಮಾನಸಿಕ ಶಕ್ತಿಯಲ್ಲಿ ಯಾವ ಹೆಚ್ಚು ಕಡಿಮೆಯೂ ಆಗಿರಲಿಲ್ಲ ಎಂಬುದನ್ನು ಹೇಳಬಲ್ಲೆ. ಉಚ್ಚವರ್ಣದ ಮುಖಂಡರೊಡನೆ ಇಲ್ಲವೆ ಡಾ. ಅಂಬೇಡಕರರೊಡನೆ ಇಡೀ ದಿನ ಅವರ ವಿಚಾರವಿನಿಮಯ, ಸಲಹೆ, ನಡೆದೇ ಇರುತಿತ್ತು.

ರಾಜಾಜಿ, ದೇವದಾಸ ಮತ್ತು ನಾನು ನಮ್ಮ ನಮ್ಮ ಪರಿಯಿಂದ ಕೆಲಸವು ಮುಂದರಿಯುವಂತೆ ಯತ್ನಿಸುತಿದ್ದೆವು. ಆದರೆ ಸೂತ್ರವೆಲ್ಲ ಗಾಂಧೀಜಿಯುವರ ಕೈಯಲ್ಲಿಯೆ ಇತ್ತು. ಗಾಂಧೀಜಿಯುವರ ಧೀರತೆ,

ಅಪಾರಶ್ರದ್ಧೆ, ನಿರ್ಭಯತೆ, ಅನಾಸಕ್ತಿ, ಇವೆಲ್ಲಾ ಆ ಸಮಯದಲ್ಲಿ ನೋಡತಕ್ಕಂತಹವು. ಸಾವು ಮನೆ ಬಾಗಿಲಲ್ಲಿ ಹಾದೀ ಕಾಯುತಿತ್ತು. ಸರಕಾರವು ಕಠೋರತೆಯಿಂದ ತಟಸ್ಥವಿತ್ತು. ಅಂಬೇಡಕರರ ಹೃದಯವು ಅತಿ ಕಟುವಾಗಿತ್ತು. ಉಚ್ಚ ವರ್ಣದ ಮುಖಂಡರು ಮಾತನ್ನು ಮುಂದೆ ನೂಕುವುದರಲ್ಲಿದ್ದರು. ಈ ರೀತಿ ಒಪ್ಪಂದವು ಇನ್ನೂ ಬಹಳ ದೂರವಿದ್ದಂತೆ ತೋರುತಿತ್ತು. ರಾಜಾಜಿ, ದೇವದಾಸ ಹಾಗೂ ನಾನು ಒಮ್ಮೊಮ್ಮೆ ಚಿರಡಿಗೇಳುತಿದ್ದೆವು. ಆದರೆ ಗಾಂಧೀಜಿಯವರು, ಎಲ್ಲವೂ ಹರಿಚಿತ್ತ, ಎಂದು ಶಾಂತಚಿತ್ತರಾಗಿ ಬಿದ್ದುಕೊಂಡಿದ್ದರು.

ಜೇಲಿನಲ್ಲಿ ಒಂದು ದಿನ ಸಲಹೆ ಸಂಭಾಷಣೆಗಳು ನಡೆದಾಗ 'ನನ್ನದೊಂದು ಸೂಚನೆಯನ್ನು ಘನಶ್ಯಾಮದಾಸರು ನಿಮಗೆ ತಿಳಿಸಿರಬಹುದು' ಎಂದು ಉಚ್ಚವರ್ಣೀಯ ಮುಖಂಡರಿಗೆ ಗಾಂಧೀಜಿಯವರು ಅಂದರು. ಒಬ್ಬ ಮುಖಂಡರು ಹಿಂದೆ ಮುಂದೆ ನೋಡದೆ 'ಇಲ್ಲ. ನಮಗೇನೂ ಗೊತ್ತಿಲ್ಲ' ಎಂದು ಹೇಳಿಬಿಟ್ಟರು. ಒಂದುಕ್ಷಣ ಸಿಟ್ಟಿಗೆದ್ದು 'ಇದು ನನ್ನ ದುರ್ಭಾಗ್ಯ' ಎಂದು ಗಾಂಧೀಜಿಯವರು ಅಂದರು. ನನ್ನ ಮನಸಿಗೆ ಇದು ಬಹಳ ಹತ್ತಿತು. ಗಾಂಧೀಜಿಯವರ ಎಲ್ಲ ಸೂಚನೆಗಳನ್ನು ಮುಖಂಡರೆದುರು ಇಟ್ಟದ್ದೆನೆಂಬುದು ನನಗೆ ಪೂರಾ ಗೊತ್ತಿತ್ತು. ಆದರೆ ಗಾಂಧೀಜಿಯವರು ಅವ್ಯವಹಾರಿಕರು, ಗಾಳಿಯಲ್ಲಿ ಗೋಪುರ ಕಟ್ಟುವವರು ಎಂದೆನ್ನುವ ಮುಖಂಡರಿಗೆ ನಾನು ಹೇಳುವದನ್ನೆಲ್ಲ ಸಮಾಧಾನದಿಂದ ಕೇಳಿಕೊಳ್ಳುವಷ್ಟು ಪುರಸತಿಗೆ ಇರಲಿಲ್ಲ! ಆ ವಿಶಿಷ್ಟ ಸೂಚನೆಯ ಚೇಷ್ಟೆಮಾಡಿ ಅದನ್ನು ಅವರು ಹಾರಿಸಿಬಿಟ್ಟಿದ್ದರು. ನಾನು ಆ ಎಲ್ಲ ಸಂಗತಿಗಳ ನೆನಪುಗೊಟ್ಟೊಡನೆ ಮುಖಂಡರು ತಮ್ಮ ತಪ್ಪು ಒಪ್ಪಿದರು. ಆದರೆ ಆ ತಪ್ಪಿನ ಕೆಟ್ಟ ಪರಿಣಾಮವು ಆಗಿಹೋಗಿತ್ತು. ಇದೇ ರೀತಿ ಆ ದಿನ ಮತ್ತಾವ ಚಿಲ್ಲರೆ ಕಾರಣಕ್ಕಾಗಿಯೊ ರಾಜಾಜಿ ಹಾಗೂ ದೇವದಾಸನ ಮೇಲೆ ಬಾಪೂ ಸ್ವಲ್ಪ ಸಿಟ್ಟಿಗೆದ್ದಿದ್ದರು. ರಾತ್ರಿ ಒಂಬತ್ತು ಗಂಟೆ, ಮಲಗುವ ಸಮಯ. ಆಗ ಗಾಂಧೀಜಿಯವರಿಗೆ ತಮ್ಮ ಸಿಟ್ಟಿನ ಬಗ್ಗೆ

ವಿಷಾದವಾಗಲಾರಂಭಿಸಿತು: 'ಸಿಟ್ಟಿಗೆದ್ದು ನಾನು ನನ್ನ ಉಪವಾಸದ ಮಹಿಮೆಯನ್ನು ಕಡಿಮೆ ಮಾಡಿಕೊಂಡೆನು.' ಸಿಟ್ಟೆಂದರೆ ಅದು ಸಿಟ್ಟೂ ಅಲ್ಲ, ಅದೊಂದು ಕ್ಷಣದ ಆವೇಶ. ಆದರೆ ಗಾಂಧೀಜಿಯವರ ಸ್ವಭಾವಕ್ಕೆ ಅಷ್ಟೂ ಅಸಹ್ಯವೆನಿಸಿತು. ತಮ್ಮ ದೋಷವು ಕಡ್ಡಿಯಷ್ಟಿದ್ದರೂ ಅದನ್ನು ಗುಡ್ಡದಷ್ಟು ಎಂದು ಭಾವಿಸುವುದು, ಅನ್ಯರದು ಗುಡ್ಡದಷ್ಟಿದ್ದರೂ ಅದು ಕಡ್ಡಿಯಷ್ಟೆಂದು ಲೆಕ್ಕಿಸುವುದು, ಇದು ಅವರ ತತ್ವಜ್ಞಾನ. ಬಿಹಾರದಲ್ಲಿ ಭೂಕಂಪವಾದಾಗ 'ಅದು ನಮ್ಮ ಪಾಪಗಳ ಫಲ' ಎಂದು ಅಂದು ಬಿಟ್ಟದ್ದು ಎಲ್ಲರಿಗೂ ಗೊತ್ತೇ ಇದೆ.

ಕೂಡಲೆ ಗಾಂಧೀಜಿಯವರು ರಾಜಾಜಿಯವರನ್ನು ಹತ್ತಿರ ಕರೆಸಿದರು. ಅತ್ಯಂತ ಕಾತರರಾಗಿ ಕಣ್ಣೀರಿಟ್ಟರು. ರಾತ್ರಿ ಹನ್ನೊಂದು ಗಂಟೆಗೆ ಜೇಲಿನ ಅಧಿಕಾರಿಗಳ ಮುಖಾಂತರ ಡೇರೆಗಳಲ್ಲಿರುವ ನಮ್ಮಿಬ್ಬರನ್ನು ಕರೆಸಿದರು. ನಾನು ಮಲಗಿಬಿಟ್ಟಿದ್ದೆನು. ದೇವದಾಸರು ಹೋದರು. ಗಾಂಧೀಜಿಯವರು ಕ್ಷಮೆ ಬೇಡಿದರು. ಇನ್ನು ತಂದೆಯು ಮಗನ ಕ್ಷಮೆ ಬೇಡುವದವಶ್ಯವೆ? ಆದರೆ ಒಬ್ಬ ಮಹಾಪುರುಷನಾದ ತಂದೆಯು ತನ್ನ ವ್ಯವಹಾರವನ್ನು ಅತಿ ಜೋಕ್ಯಾಗಿ ಇಡದೆ ಹೋದರೆ ಅವನು ಪ್ರಪಂಚಕ್ಕೆ ಏನು ಕಲಿಸಬಲ್ಲನು?

ರಾಜಾಜಿ ಹಾಗೂ ದೇವದಾಸ ಇವರಿಬ್ಬರೆದುರಿಗೆ ಅತ್ಯಂತ ಖೇದವನ್ನು ವ್ಯಕ್ತಮಾಡಿ ಈಗಲೆ ಹೋಗಿ ಘನಶ್ಯಾಮದಾಸರಿಗೂ ಹೇಳಿರೆಂದು ಗಾಂಧೀಜಿಯವರು ಅಂದರು. ಅವರು ನನ್ನನ್ನು ರಾತ್ರಿ ಎಬ್ಬಿಸಲಿಲ್ಲ. ಯಾಕಂದರೆ ನಮ್ಮ ಮಟ್ಟಿಗೆ ನಾವು ಈ ಮಾತಿಗೆ ಎಳ್ಳಷ್ಟೂ ಮಹತ್ವ ಕೊಟ್ಟಿರಲಿಲ್ಲ. ಇದರಲ್ಲಿ ಗಾಂಧೀಜಿಯವರ ಮಹಿಮೆ ತೋರುವುದು. ಮುಂದೆ ಹಲವು ತಿಂಗಳ ನಂತರ ಒಮ್ಮೆ ರಾಜಾಜಿ ಹಾಗೂ ಶಂಕರಲಾಲರ ಮೇಲೆ ಹೀಗೆಯೆ ಸಿಟ್ಟು ಬಂದಾಗ ರಾಜಾಜಿಗೆ ಅವರು ಒಂದು ಕ್ಷಮಾಪತ್ರವನ್ನು ಬರೆದು ಕಳುಹಿದ್ದರು. ರಾಜಾಜಿಯವರು ಅದನ್ನು ಚೇಷ್ಟೆಯ ಮೇಲೆ ಹಾಕಿಬಿಟ್ಟರು. ಯಾಕಂದರೆ ಯಾವುದಕ್ಕೆ ಗಾಂಧೀಜಿಯವರು ಸಿಟ್ಟೆನ್ನುವರೊ ಅದು ನಮ್ಮ ದೃಷ್ಟಿಯಿಂದ ಸಿಟ್ಟೇ ಅಲ್ಲ.

ಇರಲಿ, ಈಗ ಎರಡನೆ ಸಂಗತಿ ನಡುವೆ ಬಂದುಬಿಟ್ಟಿತು. ಪ್ರಸ್ತುತ, ಉಪವಾಸವು ನಡೆದೇ ಇತ್ತು. ಬೆಳಗಾಗುತಿತ್ತು ಮತ್ತೆ ಸಂಜೆಯಾಗುತಿತ್ತು. ಆದರೆ ಒಂದು ಹೆಜ್ಜೆ ಸಹ ಮುಂದೆ ಬೀಳುತಿರ ಲಿಲ್ಲ. ದೇವದಾಸನಂತೂ ವಿಹ್ವಲನಾಗಿ ಒಂದು ದಿನ ಅಳಲಾರಂಭಿ ಸಿದನು. ಗಾಂಧೀಜಿಯವರ ಪ್ರಕೃತಿ ದಿನದಿನಕ್ಕೆ ಸೂಕ್ಷ್ಮವಾಗುತ್ತ ನಡೆದಿತ್ತು. ಅತ್ತ ಅಂಬೇಡಕರರು ಸೆಟಗೊಂಡು ಬಿರುನುಡಿ ನುಡಿ ಯುತಿದ್ದರು. ಇತ್ತ ಉಚ್ಚವರ್ಣೀಯರು ಸಣ್ಣಪುಟ್ಟ ಮಾತುಗಳಲ್ಲಿ ಬಿಗಿಯಾಗುತಿದ್ದರು. ದೊಡ್ಡ ದೊಡ್ಡ ಮಾತುಗಳೆಲ್ಲ ಮುಗಿದು ಒಪ್ಪಿತವಾಗಿದ್ದವು. ಆದರೆ ಒಂದೇ ಒಂದು ವಿಷಯವು ಉಳಿದರೂ ಒಪ್ಪಂದವು ಆಕಾಶಕುಸುಮದಂತೆ ಕಲ್ಪನೆಯಲ್ಲಿಯೇ ಉಳಿಯಬಹು ದಾಗಿತ್ತು. ಕೊನೆಯ ಒಪ್ಪಂದವಾಗದೆ ಹೋದರೆ ಗಾಂಧೀಜಿಯವರ ಜೀವವನ್ನುಳಿಸುವುದು ಅಶಕ್ಯವಿತ್ತು.

ಹರಿಜನರಿಗೆ ಎಷ್ಟು ಸ್ಥಳ (ವಿಧಿಮಂಡಲಗಳಲ್ಲಿ) ಕೊಡತಕ್ಕ ದ್ದೆಂಬುದನ್ನು ಅಂಬೇಡಕರರೊಡನೆ ನಿರ್ಧರಿಸಲಾಗಿತ್ತು. ಯಾವ ಪ್ರಾಂತದಲ್ಲಿ ಎಷ್ಟು ಹರಿಜನರಿರುವರು, ನ್ಯಾಯತಃ ಅವರಿಗೆ ಎಷ್ಟು ಸ್ಥಳಗಳು ದೊರೆಯತಕ್ಕದ್ದು ಇತ್ಯಾದಿ ಸಂಖ್ಯಾಜ್ಞಾನವು ಠಕ್ಕರ ಬಾಪಾ ಇವರಿಗೆ ಚನ್ನಾಗಿ ಇತ್ತು. ಅದು ನಮಗೆ ಅಲ್ಲಿ ಬಹಳ ಸಹಾಯಕ ವಾಯಿತು. ಚಲಾವಣೆ ಯಾವ ಪದ್ಧತಿಯಿಂದ ಆಗಬೇಕು ಎಂಬ ಬಗ್ಗೆ ಸಹ ಅಂಬೇಡಕರರೊಡನೆ ಮಾತಾಗಿ ಒಪ್ಪಿಗೆ ಆಯಿತು. ಆದರೆ ಆ ಪದ್ಧತಿ ಎಷ್ಟು ವರುಷ ನಡೆಯಬೇಕು ಎಂಬ ಬಗ್ಗೆ ಇನ್ನೂ ವಾದ ವಿದ್ದಿತು. ಅಂಬೇಡಕರರ ಅಭಿಪ್ರಾಯವೇನಂದರೆ, ಹತ್ತು ವರುಷ ಗಳವರೆಗೆ ಆ ಪದ್ಧತಿ ನಡೆಯಬೇಕು. ಆದರೆ ಹರಿಜನರಿಗೆ ಕಾದಿಟ್ಟ ಸ್ಥಳಗಳು ಹಾಗೆಯೆ ಇರಬೇಕೊ ಅಥವಾ ಅವು ಇತರ ಹಿಂದುಗಳ ಸ್ಥಳಗಳೊಡನೆ ಕೂಡಿ ಒಂದೇ ಸಮ್ಮಿಲಿತ ಚುನಾವಣೆ ನಡೆಯಬೇಕೊ ಎಂಬ ಮಾತನ್ನು ಹದಿನೈದು ವರುಷದ ನಂತರ ಹರಿಜನರ ಮತದಿಂದ ನಿಶ್ಚಯಿಸಬೇಕು.' ಉಚ್ಚವರ್ಣೀಯ ಮುಖಂಡರು ಇದಕ್ಕೆ ಸಮ್ಮ ತಿಸಲಿಲ್ಲ. ಈ ಎಲ್ಲ ಪದ್ಧತಿ ಒಂದು ವರುಷ ಬಹಳವೆಂದರೆ ಹತ್ತು

ವರುಷ ನಡೆಯತಕ್ಕದ್ದು. ಅಸ್ಪೃಶ್ಯತೆಯು ಒಂದು ಕಲಂಕ. ಹತ್ತು ವರುಷಗಳಲ್ಲಿ ಅದನ್ನು ತೊಡೆದು ಹಾಕಿ ಮುಂದೆ ರಾಜಕಾರಣದಲ್ಲಿ ಸ್ಪೃಶ್ಯ ಅಸ್ಪೃಶ್ಯ ಎಂಬ ಪ್ರಶ್ನೆ ಉತ್ಪನ್ನವಾಗದಂತೆ ಮಾಡಿ ಸಮ್ಮಿಲಿತ ಚುನಾವಣೆಯಾಗುವಂತೆ ಮಾಡಬೇಕೆಂದು ಅವರ ಅಭಿಪ್ರಾಯ.

ಅಂಬೇಡಕರರು ಇದನ್ನು ಪೂರ್ಣ ನಿರಾಕರಿಸಿದರು ಹಾಗೂ ಮತ್ತೆ ತೊಡಕುಂಟಾಯಿತು. ಗಾಂಧೀಜಿಯವರ ಅಭಿಪ್ರಾಯವೊಂದು ಬೇರೆಯೆ ಇತ್ತು. ಈ ವಿಷಯದಲ್ಲಿ ಅಂಬೇಡಕರರು ಜೇಲಿನಲ್ಲಿ ಮಾತು ನಡೆಸಿದಾಗ ಗಾಂಧೀಜಿಯವರು ಅವರಿಗೆ ಅಂದದ್ದು, 'ಅಂಬೇಡಕರರೆ, ಹರಿಜನರ ಮತವನ್ನು ಕೇಳದೆ ಎಲ್ಲ ಸ್ಥಳಗಳನ್ನು ಕಲೆಸಿಬಿಡುವ ಮಾತು ನನಗೆ ಸಮ್ಮತವಿಲ್ಲ. ಆದರೆ ಐದೇ ವರುಷಗಳ ನಂತರ ನಾವು ಹರಿಜನರ ಅನುಮತಿ ಪಡೆಯಲೆತ್ನಿಸುವ ಹಾಗೂ ಆಗ ಅವರ ಅಭಿಮತದಂತೆ ಮಾಡುವ.' ಏನೇ ಆದರೂ ಹತ್ತು ವರುಷಗಳಾಚೆ ಹರಿಜನರ ಅಭಿಮತವನ್ನು ಕೇಳುವುದು ಬೇಡ ಎಂದು ಡಾ. ಅಂಬೇಡಕರರು ಗಟ್ಟಿಯಾಗಿ ಹೇಳಿದರು. ಈ ಚರ್ಚೆ ಸಾಕಷ್ಟು ವೇಳೆ ನಡೆಯಿತು. ಉಚ್ಚವರ್ಣದವರು ಐದೇ ವರುಷಗಳಲ್ಲಿ ತಮ್ಮ ಆಚರಣೆಯಿಂದ ಹರಿಜನರನ್ನು ತಮ್ಮವರನ್ನಾಗಿ ಮಾಡಿಕೊಳ್ಳಬೇಕೆಂದು ಗಾಂಧೀಜಿಯವರ ಉತ್ಕಟ ಇಚ್ಛೆ. ಈ ಕೆಲಸಕ್ಕೆ ಇದಕ್ಕೂ ಹೆಚ್ಚಿನ ಅವಧಿ ಬೇಕಾಗುವ ಮಾತು ಅವರ ಕಲ್ಪನೆಗೆ ನಿಲುಕುತಿರಲಿಲ್ಲ. ರಾಜಾಜಿ ಹಾಗೂ ನಾನು ಚಿಂತಾಕ್ರಾಂತರಾಗಿ ಗಾಂಧೀಜಿಯವರ ಮುಖದತ್ತ ನೋಡುತಿದ್ದೆವು. ಇದು ಪ್ರಾಣದ ಪಣ, ಈ ವಿಷಯದಲ್ಲಿ ಗಾಂಧೀಜಿಯವರು ಇಷ್ಟೊಂದೇಕೆ ಹಟ ಹಿಡಿಯಬೇಕು, ಎಂದು ನನ್ನ ಭಾವನೆ. ಆದರೆ ಗಾಂಧೀಜಿಯವರು ನಿಃಶ್ಚಿಂತರಿದ್ದರು. ಅವರ ಮಟ್ಟಿಗೆ ಸಾಯುವುದು ಬದುಕುವುದು ಎರಡೂ ಅಷ್ಟೇ ಇದ್ದಂತೆ ತೋರಿತು. ಮಾತು ಹಾಗೇ ನಡೆದವು. ಕೊನೆಗೆ ಗಾಂಧೀಜಿಯವರ ಬಾಯಿಂದ ಒಮ್ಮೆಲೆ, 'ಅಂಬೇಡಕರರೆ, ಐದು ವರುಷದ ಅವಧಿ, ನಂತರ ಹರಿಜನರ ಮತಕ್ಕನುಸರಿಸಿ ಅಂತಿಮ ನಿರ್ಣಯ. ಇಲ್ಲದಿದ್ದರೆ ನನ್ನ ಪ್ರಾಣಾರ್ಪಣ,' ಎಂಬ ಮಾತು ಹೊರಬಿದ್ದವು. ನಾವು ಸ್ತಬ್ಧ

ರಾದೆವು. ಗಾಂಧೀಜಿಯವರು ಬಾಣವನ್ನೆಸೆದು ಬಿಟ್ಟರು. ಇನ್ನೇನು ಮಾಡಬೇಕು ?

ನಿಟ್ಟುಸುರು ಬಿಟ್ಟು ನಾವೆಲ್ಲ ನಮ್ಮ ಡೇರೆಗಳಿಗೆ ಹೋದೆವು. ಅಂಬೇಡಕರರಿಗೆ ತಿಳಿಹೇಳಿದೆವು. ಆದರೆ ಅವರು ಕೊಂಚವೂ ಸಡಿಲಾಗ ಲಿಲ್ಲ. ಅಂಬೇಡಕರರ ಈ ಜಿದ್ದು ಅವರ ಕಟ್ಟರ ಹರಿಜನ ಜೊತೆಗಾರ ರಾದ ಡಾ. ಸೋಲಂಕಿಯವರ ಮನಸಿಗೆ ಸಹ ಬರಲಿಲ್ಲ. ನಾನು ರಾಜಾಜಿಯವರಿಗೆ ಅಂದದ್ದು, 'ರಾಜಾಜೀ, ಐದು ವರ್ಷವೇನು, ಹತ್ತು ವರ್ಷವೇನು ? ಮುಂದೆ ಹರಿಜನರ ಅನುಮತಿಯಿಂದ ಇದನ್ನು ಬೇಕಾದಾಗ ಬದಲು ಮಾಡಬಹುದು ಎಂದು ನಾವೇಕೆ ನಿಶ್ಚಯಿಸ ಬಾರದು ?' ರಾಜಾಜಿಯವರು ಅಂದದ್ದು, 'ಇದು ಗಾಂಧೀಜಿ ಯವರ ಮನಸಿಗೆ ಬರಲಿಕ್ಕಿಲ್ಲ.' ಆಗ, 'ನಾವೂ ಸ್ವಲ್ಪ ಹೊಣೆ ಹೊರೋಣ. ಅವರನ್ನು ಕೇಳಲು ಇನ್ನು ಸಮಯವೆಲ್ಲಿದೆ ?' ಎಂದೆನು. ರಾಜಾಜಿಯವರು ಹೂಂ ಎಂದರು. ನಾನು ಡಾ. ಅಂಬೇಡಕರರ ಮುಂದೆ ಈ ಸೂಚನೆ ಮಂಡಿಸಿದೆನು. ಇತರರು ಇದನ್ನು ಸಮರ್ಥಿ ಸಿದರು ಹಾಗೂ ಡಾ. ಅಂಬೇಡಕರರು ಒಪ್ಪಿಕೊಂಡರು. ಒಂದು ಪಕ್ಷ ವಂತೂ ಒಪ್ಪಿತು. ಇನ್ನು ಗಾಂಧೀಜಿಯವರನ್ನು ಕೇಳುವುದುಳಿಯಿತು. ರಾಜಾಜಿಯವರು ಜೇಲಿನಲ್ಲಿ ಹೋಗಿ ಗಾಂಧೀಜಿಯವರಿಗೆ ಈ ಮಾತು ತಿಳಿಸಿದರು. ಅವರು ಕರಾರದ ಈ ಭಾಗದ ಭಾಷೆಯನ್ನು ಚನ್ನಾಗಿ ಲಕ್ಷಪೂರ್ವಕವಾಗಿ ಓದಿಸಿ ಕೇಳಿದರು. ಒಮ್ಮೆ ಕೇಳಿದರು, ಎರಡು ನಾರೆ ಕೇಳಿದರು, ಕೊನೆಗೆ ಮೆಲ್ಲನೆ 'ಒಳಿತು' ಎಂದರು. ಎಲ್ಲರ ಮುಖದಲ್ಲಿ ಪ್ರಸನ್ನತೆ ನಲಿದಾಡಿತು. ಅವರ ಅನುಮತಿ ದೊರೆತೊಡನೆ ನಾನು ಅವರ ಬಳಿ ಹೋಗಿ ಅವರ ಪಾದಸ್ಪರ್ಶಮಾಡಿದೆನು. ಅದಕ್ಕೆ ಪ್ರತಿಯಾಗಿ ಅವರು ಜೋರಿನಿಂದ ನನ್ನನ್ನು ಚಪ್ಪರಿಸಿದರು. ಪಾರಣೆ ಮಾಡಲು ಮತ್ತೆ ಎರಡು ದಿನಗಳು ಬೇಕಾದವು. ಯಾಕಂದರೆ ನಾವೆ ಲ್ಲರೂ ಮಾಡಿಕೊಂಡ ಈ ಯರವಡಾ ಕರಾರಕ್ಕೆ ಕೇವಲ ಸಮ್ಮತಿಸಲು ಸರಕಾರಕ್ಕೆ ಮುಂದೆ ಮತ್ತೆ ಎರಡು ದಿನಗಳು ಬೇಕಾದವು ! ೨೦—೯—೩೨ ಕ್ಕೆ ಉಪವಾಸ ಪ್ರಾರಂಭ, ೨೪—೯—೩೨ ಕ್ಕೆ ಯರ

ವಡಾ ಕರಾರು ಆಯಿತು, ೨೬—೯—೩೨ಕ್ಕೆ ಸರಕಾರದ ಸಮ್ಮತಿ ದೊರೆತು ಈ ಉಪವಾಸದ ಪ್ರಕರಣ ಮುಗಿಯಿತು-

ಈ ಎಲ್ಲ ಘಟನೆಯಲ್ಲಿ ನೋಡತಕ್ಕ ವಿಷಯವೆಂದರೆ ಪ್ರತ್ಯಕ್ಷ ಮೃತ್ಯು ಬಂದು ಎದುರು ಕುಣಿಯುತಿದ್ದರೂ ಗಾಂಧೀಜಿಯವರ ವೃತ್ತಿ ಎಳ್ಳಷ್ಟು ಅತ್ತಿತ್ತ ಕದಲಲಿಲ್ಲ. ಎಲ್ಲ ಉಪವಾಸಗಳಲ್ಲಿಯೂ ಇವರ ವೃತ್ತಿ ಇದೇ. ರಾಜಕೋಟದ ಉಪವಾಸದ ಕಾಲಕ್ಕೂ ಇತ್ತ ಸಾವು ದಾರೀ ಕಾಯುತಿತ್ತು, ಕಾರಿಕೆ ನಡೆದಿತ್ತು, ಅಸ್ವಸ್ಥತೆ ಹೆಚ್ಚುತಿತ್ತು, ಅತ್ತ ವ್ಹಾಯಿಸರಾಯರಿಗೆ ಪತ್ರ ಬರೆಯುವ ಹಾಗೂ ನನಗೂ ಮಹಾದೇವಭಾಯಿಯವರಿಗೂ ( ನಾವಿಬ್ಬರೂ ದಿಲ್ಲಿಯಲಿದ್ದೆವು ) ಸಂದೇಶಗಳನ್ನು ಕಳಿಸುವ ಕೆಲಸವು ನಡೆದಿತ್ತು. ಆದರೆ ಅವರ ಶಾಂತಿ ಅಚಲವಾಗಿತ್ತು. ಪ್ರತಿ ಉಪವಾಸದ ಕಾಲಕ್ಕೆ ಆದ ಅಂತಿಮ ನಿರ್ಣಯವು—ಅದು ಹರಿಜನರು ಮತ್ತು ಉಚ್ಚವರ್ಣೀಯರ ನಡುವೆ ಆಗಿರಲಿ ಅಥವಾ ಗಾಂಧೀ ವ್ಹಾಯಿಸರಾಯರ ನಡುವೆ ಆಗಿರಲಿ—ಜನರಿಗೆ ಉಂಟಾದ ಗಾಂಧೀಜಿಯವರ ಮರಣದ ಭಯದ ಮೂಲಕ ಆಯಿತೆಂಬುದು ನಿಃಸಂಶಯ. ಯಾವದೇ ಸಾರಿ, ಜನರಿಗೆ ಶಾಂತಿಯಿಂದ ವಿಚಾರ ಮಾಡಲು ಸಮಯ ಅಥವಾ ಅವಕಾಶ ದೊರೆಯಲೆ ಇಲ್ಲ. ಆದರೂ 'ಆತುರತೆಯು ಹಿಂಸೆ' ಎಂದು ಗಾಂಧೀಜಿಯವರು ಅನ್ನುವರು ! 'ಸಮರಥಕೋ ನಹಿ ದೋಷ ಗುಸಾಯಿ' (ಸಮರ್ಥರಿಗೆ ದೋಷ ತಟ್ಟದು) ಎಂದು ತುಳಸೀದಾಸರು ಅಂದುದು ವ್ಯಂಗೋಕ್ತಿಯಲ್ಲ. ಸಮರ್ಥರ ಎಲ್ಲ ಕೆಲಸಗಳಲ್ಲಿಯೂ ಒಂದೇ ಒಂದು ತರಹದ ಸುಸಂಗತಿ ಇರಬೇಕೆಂದು ಅಪೇಕ್ಷಿಸುವುದು ನಿಜವಾಗಿ ತಪ್ಪೇ ಸರಿ. ಒಂದುಬಗೆಯ ಸಂಗತಿ ಇರುವುದೇನೋ ನಿಜ. ಸೇವೆ, ಶುದ್ಧಭಾವನೆ, ಯಜ್ಞಾರ್ಥ ಕರ್ಮ ಮಾಡುವ ಪ್ರವೃತ್ತಿ ಇವು ಎಲ್ಲ ಕೆಲಸಗಳಲ್ಲಿಯೂ ಕಂಡು ಬರುವವು. ಆದರೆ ಆಯಾ ಕೆಲಸಗಳಲ್ಲಿ ಬಾಹ್ಯತಃ ಒಮ್ಮೊಮ್ಮೆ ವಿರೋಧ, ವಿಸಂಗತಿ ಇವೂ ಕಂಡುಬರಬಹುದು.

———

# ೧೧. ಉಪವಾಸ - ಅಹಿಂಸಾಶಸ್ತ್ರ

ಗಾಂಧೀಜಿಯವರ ಉಪವಾಸ ವಿಷಯದ ಸಮಾಲೋಚನೆ ಸಾಕಷ್ಟು ಆಗಿದೆ. ಹಲವರು ಅದನ್ನು ಚನ್ನಾಗಿ ಸಮರ್ಥಿಸಿದ್ದಾರೆ. ಆದರೆ ಈ ಸಾಮಾನ್ಯ ವಾದವಿವಾದದಿಂದ ಏನು ನಿರ್ಣಯವಾಗ ಬಲ್ಲದು? ಕೊನೆಗೆ ಅದರ ಇಷ್ಟಾನಿಷ್ಟತೆಯು ಆಯಾ ಪ್ರಸಂಗ ಮತ್ತು ವ್ಯಕ್ತಿಯ ಉದ್ದೇಶವನ್ನೇ ಅವಲಂಬಿಸಿರುವುದು. ಉಪವಾಸ ಎಂಬುದನ್ನು ಯಾವದೊಂದು ವಿಶಿಷ್ಟ ವ್ಯಕ್ತಿ ಮಾಡಿದರೆ ಅದು ಪಾಪ ಮಯ ಹಾಗೂ 'ಧರಣಿ' ಎನಿಸಬಹುದು. ಅದನ್ನೇ ಇನ್ನೊಬ್ಬನು ಮಾಡಿದರೆ ಅದು ಧರ್ಮ ಹಾಗೂ ಕರ್ತವ್ಯ ಎನಿಸಬಹುದು.

ಎಲ್ಲವು ಆಯಾ ಉದ್ದೇಶವನ್ನವಲಂಬಿಸಿರುವುದು. ಆ ಉಪ ವಾಸವು ಯಜ್ಞಾರ್ಥವಿರುವುದೊ? ಫಲಾಸಕ್ತಿರಹಿತವಿರುವುದೊ? ಅದರ ಬುಡಕ್ಕೆ ಶುದ್ಧ ಬುದ್ಧಿ ಇದೆಯೊ? ಆ ಮನುಷ್ಯನು ಸಾತ್ವಿ ಕನೊ? ಈರ್ಷೆ ದ್ವೇಷಗಳಿಲ್ಲದವನೊ? ಈ ಪ್ರಶ್ನೆಗಳ ಉತ್ತರಗಳಿಗೆ ಅನುಸರಿಸಿ ಆಯಾ ಉಪವಾಸವು ಧರ್ಮ ಇಲ್ಲವೆ ಅಧರ್ಮ ಎನಿಸು ವುದು. ಈ ಧರ್ಮದೃಷ್ಟಿಯನ್ನು ಬಿಟ್ಟರೂ ಕೇವಲ ಉಪಯುಕ್ತತೆಯ ದೃಷ್ಟಿಯಿಂದ ಸಹ ನಾವು ಉಪವಾಸ-ನೀತಿಯನ್ನು ವಿಚಾರಿಸಬಹುದು.

ತಪ್ಪು ದಾರಿ ತಪ್ಪಿಸಿ ಜನರನ್ನು ಸರಿ ದಾರಿಗೆ ತರುವ ಉದ್ದೇಶ ದಿಂದಲೆ ಮಹಾಪುರುಷರ ಜನ್ಮವಾಗುವುದು. ತಮ್ಮ ಉದ್ದೇಶ ಸಾಧನೆಗಾಗಿ ಈ ವರೆಗೆ ಭಿನ್ನ ಮಹಾಪುರುಷರು ಭಿನ್ನ ಉಪಾಯ ಗಳನ್ನು ಯೋಜಿಸಿರುವರು. ಈ ಎಲ್ಲ ಉಪಾಯಗಳ ಉದ್ದೇಶ,



ರೇಖಾಚಿತ್ರ - [illegible]

( [illegible] )

ಧ್ಯೇಯ ಒಂದೇ. ನೀತಿಯ ಸ್ಥಾಪನೆ ಅನೀತಿಯ ನಾಶ ಇದೇ ಆ ಉದ್ದೇಶ.

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥**

ಹೇ ಅರ್ಜುನನೆ, ಯಾವ ಕಾಲದಲ್ಲಿ ಧರ್ಮಗ್ಲಾನಿಯೂ ಅಧರ್ಮೋತ್ಕರ್ಷವೂ ಆಗುವುವೊ ಆ ಕಾಲದಲ್ಲಿ ನಾನು ಜನ್ಮ ತಾಳುವೆನು.

ಈ ಧ್ಯೇಯಸಾಧನೆಗಾಗಿ ಬೇರೆ ಬೇರೆ ಮಹಾಪುರುಷರು ಯೋಜಿಸುವ ಮಾರ್ಗಗಳ ಬಾಹ್ಯರೂಪದಲ್ಲಿ ಭೇದವು ಕಂಡೇ ಕಾಣುವುದು. ಜನರಿಗೆ ಒಳ್ಳೆ ಶಿಕ್ಷಣ ಕೊಡುವುದು, ಅವರ ಸುಪ್ತ ಸದ್ಭಾವನೆಗಳನ್ನು ಎಚ್ಚರಿಸುವುದು, ಈ ಉದ್ದೇಶಗಳನ್ನು ಮಹಾಪುರುಷರು ತಮ್ಮ ಸ್ವಂತ ಆಚರಣೆ ಹಾಗೂ ಉಪದೇಶ ಆದೇಶಗಳ ಮುಖಾಂತರ ಸಾಧಿಸುವರು. 'ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ,' ಜನರು ಸರ್ವಥಾ ನಾನು ಹಾಕಿಕೊಟ್ಟ ಮಾರ್ಗವನ್ನೆ ಅನುಸರಿಸುವರು, ಎಂದು ಶ್ರೀ ಕೃಷ್ಣನು ಹೇಳಿರುವನು. ಗಾಂಧೀಜಿಯವರು ಅನ್ನುವದೇನಂದರೆ, ಶಾರೀರಿಕ ವ್ಯಾಯಾಮದಿಂದ ಶರೀರದ ಸುದೃಢತೆ, ಬೌದ್ಧಿಕ ವ್ಯಾಯಾಮದಿಂದ ಬೌದ್ಧಿಕ ತೇಜಸ್ಸು, ಪ್ರಾಪ್ತವಾಗುತಿರುವಂತೆ ಆಧ್ಯಾತ್ಮಿಕ ವ್ಯಾಯಾಮದಿಂದ ಆತ್ಮೋನ್ನತಿ ಉಂಟಾಗುವುದು. ಅಂಥ ಆಧ್ಯಾತ್ಮಿಕ ವ್ಯಾಯಾಮವು ಆವಶ್ಯಕ. ಆಧ್ಯಾತ್ಮಿಕ ವ್ಯಾಯಾಮವು ಬಹು ಅಂಶದಲ್ಲಿ ಗುರುಗಳ ಜೀವನ ಹಾಗೂ ಅವರ ಚರಿತ್ರ ಇವುಗಳನ್ನವಲಂಬಿಸಿದೆ. ಶಿಷ್ಯರಿಂದ ಗುರುವು ಎಷ್ಟೇ ದೂರ ಇರುತಿದ್ದರೂ ತನ್ನ ಚಾರಿತ್ರ್ಯಬಲದಿಂದ ಅವನು ಶಿಷ್ಯರ ಜೀವನವನ್ನು ಪ್ರಭಾವಾನ್ವಿತ ಮಾಡಬಲ್ಲನು. ನಾನೇ ಸುಳ್ಳು ನುಡಿಯುತಿದ್ದರೆ ನಾನು ನನ್ನ ಮಕ್ಕಳಿಗೆ ಸತ್ಯವನ್ನು ಹೇಳಿರಿ ಎಂದು ಕಲಿಸಲು ಹೇಗೆ ಸಮರ್ಥನಾಗಬಲ್ಲೆ ? ಒಬ್ಬ ಅಂಜುಬುರುಕ ಶಿಷ್ಯನು ತನ್ನ ವಿದ್ಯಾರ್ಥಿಗಳಿಗೆ ಶೌರ್ಯದ ಪಾಠಗಳನ್ನು ಕೊಡಲಾರನು.

ಭೋಗಿಯಾದ ಒಬ್ಬ ಶಿಕ್ಷಕನು ವಿದ್ಯಾರ್ಥಿಗಳಿಗೆ ತ್ಯಾಗವನ್ನು ಕಲಿಸಲಾರನು. ಆದುದರಿಂದ ನನ್ನಿಂದ ಎರಡನೆಯದೇನೂ ಆಗದಿದ್ದರೂ ಕನಿಷ್ಟ ನನ್ನ ಮಕ್ಕಳ ಕಲ್ಯಾಣದ ದೃಷ್ಟಿಯಿಂದ ನಾನು ಸತ್ಯವಂತನು, ಶುದ್ಧನು, ಶುಭಕರ್ಮಗಳನ್ನು ಮಾಡುವವನು ಆಗಲಿಕ್ಕೆಬೇಕು, ಎಂಬುದನ್ನು ನಾನು ಕಂಡು ಹಿಡಿದೆನು.' ಹೀಗಿರುವುದರಿಂದ ಎಲ್ಲ ಮಹಾಪುರುಷರು ತಮ್ಮ ಚರಿತ್ರ ಹಾಗೂ ಉಪದೇಶ ಇವುಗಳ ಮುಖಾಂತರವೆ ಧರ್ಮಪ್ರಚಾರ ಮಾಡಿರುವರು. ಧರ್ಮದ ಬೆಳವಣಿಗೆಯಿಂದ ತನ್ನಿಂತಾನೆ ಅಧರ್ಮ ನಾಶವಾಗುವುದು. ಆದರೆ ಒಮ್ಮೊಮ್ಮೆ ಮಹಾಪುರುಷರು ಅಧರ್ಮದ ಮೇಲೆ ಪ್ರತ್ಯಕ್ಷ ಆಕ್ರಮಣವನ್ನು ಮಾಡಿದ್ದಾರೆ. ಅನೀತಿಯ ನಾಶವನ್ನು ಸಾಧಿಸುವುದಕ್ಕಾಗಿ ಮಹಾಪುರುಷರು ಉಪಯೋಗಿಸಿದ ಸಾಧನಗಳನ್ನು ಪರಿಶೀಲಿಸಿದರೆ ಅವುಗಳ ಬಾಹ್ಯಸ್ವರೂಪದಲ್ಲಿ ಸಾಕಷ್ಟು ಭಿನ್ನತೆಯು ಕಂಡು ಬರುತಿದೆ.

ಶ್ರೀಕೃಷ್ಣನು ಭೂಭಾರವನ್ನಿಳಿಸಿದನು, ಪ್ರಪಂಚದಲ್ಲಿಯ ಪಾಪವನ್ನು ಕಡಿಮೆ ಮಾಡಿದನು. ಅವನ ಸಾಧನ ಹಾಗೂ ಬುದ್ಧದೇವನ ಸಾಧನ ಇವುಗಳ ಬಾಹ್ಯರೂಪದಲ್ಲಿ ಭೇದವು ಕಾಣುತಿದೆ. ಮಹಾಭಾರತದ ಯುದ್ಧ, ಕಂಸವಧ, ಶಿಶುಪಾಲ ಜರಾಸಂಧರ ಹತ್ಯೆ ಇವೆಲ್ಲ ಐತಿಹಾಸಿಕವೆಂದು ತಿಳಿದರೆ ಭೂಭಾರ ಇಳಿಸುವ ಕೃಷ್ಣನ ರೀತಿ ಹಾಗೂ ಅದೇ ಉದ್ದೇಶವನ್ನು ಸಾಧಿಸುವ ಬುದ್ಧನ ನೀತಿ ಇವು ಬಾಹ್ಯತಃ ಭಿನ್ನವಿದ್ದವು. ಆದರೆ ಎರಡೂ ರೀತಿ ನೀತಿಗಳ ಮೂಲವು ಒಂದೇ ಎಂದು ನಾವು ಅನ್ನಬಲ್ಲೆವು. ತನ್ನ ಕೈಯಿಂದ ವಧೆಯಾದವರ ಬಗ್ಗೆ ದ್ವೇಷಾಸೂಯೆಗಳು, ಕ್ರೋಧ ಮುಂತಾದ್ದು ಶ್ರೀಕೃಷ್ಣನಲ್ಲಿ ತಿಲಮಾತ್ರವೂ ಇರಲಿಲ್ಲ.

**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।**
**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥**

ಸಾಧುಗಳ ಸಂರಕ್ಷಣಾರ್ಥವಾಗಿಯೂ ದುಷ್ಟರ ಸಂಹಾರಾರ್ಥವಾಗಿಯೂ ಧರ್ಮಸ್ಥಾಪನೆಗಾಗಿಯೂ ನಾನು ಯುಗ ಯುಗದಲ್ಲಿ ಜನ್ಮ ತಾಳುವೆನು.

ಇದೇ ಶ್ರೀಕೃಷ್ಣನ ಧ್ಯೇಯವಿತ್ತು. ನಿಪುಣ ಶಸ್ತ್ರವೈದ್ಯನು ರೋಗಿಯ ಕಲ್ಯಾಣಕ್ಕಾಗಿ ಅವನ ಕೊಳೆತ ಅಂಗವನ್ನು ಕತ್ತರಿಸಿ ಚಲ್ಲುವನು. ಅದರಂತೆ ಶ್ರೀಕೃಷ್ಣನು ಹಾಗೂ ರಾಮಚಂದ್ರನು ಸಮಾಜ ಸಂರಕ್ಷಣೆಗಾಗಿ ಹಾಗೂ ಆಯಾ ರಾಷ್ಟ್ರದ ಹಿತಕ್ಕಾಗಿ ದುಷ್ಟದಮನವನ್ನು ಆ ರೀತಿ ಮಾಡಿದರು. ವಧಿಸಲಾದ ರಾವಣ, ಜರಾಸಂಧ, ಕಂಸಾದಿಗಳಿಗೆ ಶ್ರೀರಾಮ ಮತ್ತು ಶ್ರೀಕೃಷ್ಣ ಇವರು ಸದ್ಗತಿಯನ್ನು ದಯಪಾಲಿಸಿದರೆಂದು ಪುರಾಣಾಂತರಗಳಲ್ಲಿ ಹೇಳಲಾಗಿದೆ.

ಮಹಾಪುರುಷರು ದುಷ್ಟರನ್ನು ಸಂಹರಿಸಿದರು, ಆದುದರಿಂದ ನಾವೂ ಹಾಗೆಯೆ ಮಾಡಬೇಕೆಂದು ಹಿಂಸಾವಾದಿಗಳು ತಟ್ಟನೆ ಅಂದು ತಮ್ಮ ಪಕ್ಷವನ್ನು ಸಮರ್ಥಿಸುವರು. ಆದರೆ ಆ ಹಿಂಸೆಯಲ್ಲಿ ಕ್ರೋಧ, ದ್ವೇಷ, ಆಸಕ್ತಿ, ಇವು ಇದ್ದಿಲ್ಲ, ಅದು ಸಮಾಜರಕ್ಷಣಕ್ಕಾಗಿ ಮಾಡಲಾಯಿತು, ಹಾಗೂ ವಧಿಸಲ್ಪಟ್ಟವರಿಗೆ ದೇವರು ಸದ್ಗತಿ ಕೊಟ್ಟನು ಎಂಬುದನ್ನು ಇವರು ಮರೆತುಬಿಡುವರು. ಆದುದರಿಂದ ಮೂಲದಲ್ಲಿ ನೋಡಹೋದರೆ, ರಾಮನೇ ಆಗಲಿ, ಕೃಷ್ಣನೇ ಆಗಲಿ, ಬುದ್ಧನೇ ಆಗಲಿ, ಎಲ್ಲರೂ ಅಹಿಂಸಾವಾದಿಗಳಿದ್ದರು. ರಾಮ ಹಾಗೂ ಕೃಷ್ಣ ಇವರ ಸಾಧನಗಳ ಬಾಹ್ಯಸ್ವರೂಪವು ಹಿಂಸಾತ್ಮಕ ತೋರಿದರೂ ಅದು ನಿಜವಾಗಿ ಹಿಂಸೆಯಿದ್ದಿಲ್ಲ. ಯಾಕಂದರೆ, 'ನ ಮೇ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇ ಸ್ಪೃಹಾ', ನನಗೆ ಕರ್ಮಗಳ ಲೇಪವಿಲ್ಲ. ಕರ್ಮಫಲದಲ್ಲಿ ನನಗೆ ಆಸಕ್ತಿ ಇಲ್ಲ. ಇದಲ್ಲದೆ,

**"ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ ಜಿತೇಂದ್ರಿಯಃ |**
**ಸರ್ವಭೂತಾತ್ಮಭೂತಾತ್ಮಾ ಕುರ್ವನ್ನಪಿ ನ ಲಿಪ್ಯತಿ ||"**

ಯಾವನು ಪವಿತ್ರನೂ ಮನಸ್ಸನ್ನು ಗೆದ್ದವನೂ ಜಿತೇಂದ್ರಿಯನೂ ತನ್ನ ಆತ್ಮನನ್ನು ಸರ್ವಾಂತರ್ಯಾಮಿಯಲ್ಲಿ ಸ್ಥಿರವಾಗಿ ಇಟ್ಟವನೂ ಇರುವನೋ ಆ ಕರ್ಮಯೋಗಿಯು ಕರ್ಮಮಾಡಿದರೂ ಬದ್ಧನಾಗನು.

ಈ ವಚನಗಳನ್ನು ನಾವು ಧ್ಯಾನಪೂರ್ವಕ ನೋಡಿದರೆ, ರಾಮ ಕೃಷ್ಣಾದಿ ಅವತಾರಿ ಪುರುಷರು ಬುದ್ಧನಷ್ಟೆ ಹಿಂಸೆಯಿಂದ ದೂರಪಿದ್ದ ರೆಂಬುದು ಸ್ಪಷ್ಟವಾಗುವುದು.

ಗಾಂಧೀಜಿಯವರು ಕರುವಿನ ಹತ್ಯೆ ಮಾಡಿದರೂ ಅವರು ಅಹಿಂಸೆ ಯಿಂದಲೆ ಪ್ರೇರಿತರಾಗಿದ್ದರು. ಅವರು ಮಾಡಿದುದು ಹಿಂಸೆಯಲ್ಲ. ಕೇವಲ ಕೊಂದಾಕ್ಷಣಕ್ಕೆ ಅದು ಧಾರ್ಮಿಕ ದೃಷ್ಟಿಯಿಂದ ಪಾಪ ಅಥವಾ ನೈತಿಕ ದೃಷ್ಟಿಯಿಂದ ಹಿಂಸೆ ಎಂದು ಹೇಳಲಿಕ್ಕಾಗದು :

**ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ ।**
**ಹತ್ವಾಪಿ ಸ ಇಮಾಂಲ್ಲೋಕಾನ್ನ ಹಂತಿ ನ ನಿಬಧ್ಯತೇ ॥**

ಯಾವನಿಗೆ ಅಹಂಕಾರವಿಲ್ಲವೊ ಯಾವನ ಬುದ್ಧಿಯು ಕರ್ಮ ಗಳಿಂದ ಅಲಿಪ್ತವೊ ಅವನು ಈ ಎಲ್ಲ ಜನರನ್ನು ಸಂಹರಿಸಿದರೂ ಅವನು ತತ್ವತಃ ಅವರನ್ನು ಸಂಹರಿಸುವುದೂ ಇಲ್ಲ, ಅದರಿಂದ ಅವನು ಬದ್ಧನೂ ಅಲ್ಲ.

ಹಿಂಸೆ ಅಹಿಂಸೆಗಳ ನಿರ್ಣಯ ಮಾಡಬೇಕಾದರೆ ಕೊಂದವನು ಯಾವ ಮಾನಸಿಕ ಸ್ಥಿತಿಯಲ್ಲಿ ಹಾಗೂ ಯಾವ ಮನೋಭಾವನೆ ಯಿಂದ ಆ ಕೆಲಸ ಮಾಡಿದನು ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯ. ಹಿಂಸೆ ಮಾಡಿದವನ ಮನಃಸ್ಥಿತಿ ಹಾಗೂ ಭಾವನೆ ಇವು ಗಳನ್ನು ನೋಡಿದರೆ ಮಾತ್ರ ಅದು ಹಿಂಸೆಯೊ ಅಹಿಂಸೆಯೊ ಎಂಬು ದನ್ನು ನಾವು ನಿರ್ಣಯಿಸಬಲ್ಲೆವು. ಆದರೆ ರಾಗದ್ವೇಷರಹಿತನಾಗಿ, ಕ್ರೋಧವಿಲ್ಲದೆ, ಶುದ್ಧ ಭಾವದಿಂದ, ಲೋಕಕಲ್ಯಾಣಕ್ಕಾಗಿ ಯಾವ ದೊಂದು ಹಿಂಸೆ ಮಾಡುವವನು ಸಾಧಾರಣ ಮನುಷ್ಯನಿರಲಾರನು ಎಂಬುದನ್ನು ನಾವು ಲಕ್ಷದಲ್ಲಿಡಲಿಕ್ಕೆಬೇಕು. ಅವನು ಅಸಾಧಾರಣ ದೈವೀ ಪುರುಷನಿದ್ದರೆ ಮಾತ್ರ ಅಂಥ ವೃತ್ತಿಯುಳ್ಳವನಿರಬಲ್ಲನು. ಇದರ ಅರ್ಥವೇನಂದರೆ, ಉತ್ತಮ ಉದ್ದೇಶದ ಸಾಧನೆಗಾಗಿ ಸಹ ಸಾಧಾರಣ ಮನುಷ್ಯನು ಶಸ್ತ್ರಗ್ರಹಣ ಮಾಡುವುದು ಧರ್ಮವೆನಿಸದು.

ರಾಗ ದ್ವೇಷ ಕ್ರೋಧಾದಿಗಳಿಂದ ವ್ಯಾಪ್ತರಾದ ನಾವು ಹಿಂಸಾಶಸ್ತ್ರವನ್ನು ಧರ್ಮಪೂರ್ವಕವಾಗಿ ಉಪಯೋಗಿಸಲಾರೆವು. ಅದೇ ರೀತಿ ರಾಗ ದ್ವೇಷಗಳಿಂದ ವಿವೇಕಭ್ರಷ್ಟರಾದ ನಾವು, ಯಾರು ವಧಾರ್ಹರು ಯಾರು ಅಲ್ಲ, ಎಂಬುದನ್ನೂ ನಿರ್ಣಯಿಸಲಾರೆವು. ನಾವು ದುಷ್ಟರೊ ನಮ್ಮ ವಿರೋಧಿಗಳು ದುಷ್ಟರೊ ಎಂಬುದನ್ನು ಸಹ ನಾವು ರಾಗದ್ವೇಷ ರಹಿತರಾಗುವವರೆಗೆ ನಿಶ್ಚಯಿಸಲಾರೆವು. ನಾವು ದುಷ್ಟರಿದ್ದು ನಮ್ಮ ವಿರೋಧಿಯು ಸಜ್ಜನನಿದ್ದುದಾದರೆ ಹಾಗೂ ಲೋಕಕಲ್ಯಾಣದ ಹೆಸರಿನಿಂದ ನಾವು ಹಿಂಸಾ ಶಸ್ತ್ರವನ್ನು ಉಪಯೋಗಿಸಿದರೆ ನಾವು ಪಾಪವನ್ನೇ ಎಸಗಿದಂತಾಯಿತು. ಇದು ಆತ್ಮವಂಚನೆಯಾಗುವುದು. ನೀರಿನಲ್ಲಿದ್ದರೂ ನೀರು ಮುಟ್ಟದಂತೆ ಕಮಲದೋಪಾದಿಯಲ್ಲಿರುವ ಶಕ್ತಿ ಇದ್ದ ಕೇವಲ ಉಚ್ಚಕೋಟಿಯ ಮಹಾಪುರುಷರ ವಿಷಯದಲ್ಲಿ ಮಾತ್ರ ಅನಾಸಕ್ತಿಪೂರ್ವಕ ಹಿಂಸಾಶಸ್ತ್ರದ ಉಪಯೋಗವು ಸುರಕ್ಷಿತ ಎಂದು ಹೇಳಬಹುದು. ಸಾಧಾರಣ ಮನುಷ್ಯರಮಟ್ಟಿಗೆ ಅಹಿಂಸೆಯೆ ನಿರ್ದೋಷ್ಟ ಹಾಗೂ ಸುರಕ್ಷಿತ ಧರ್ಮವೆನಿಸುವುದು.

ಅಹಿಂಸಕನಿಲ್ಲದವನು ಅಂದರೆ ಹಿಂಸಾವಾದಿಯು ಆತ್ಮರಕ್ಷಣೆಗಾಗಿ ಹಿಂಸೆಯ ಉಪಯೋಗವನ್ನು ಮಾಡಬಹುದು. ಆದರೆ ಆ ಸಂದರ್ಭದಲ್ಲಿ ಹಿಂಸೆ ಅಹಿಂಸೆಗಳ ನಡುವೆ ತುಲನೆ ಇಲ್ಲ. ಅಲ್ಲಿ ಭಯ ಹಾಗೂ ಆತ್ಮರಕ್ಷಣೆಗಾಗಿ ಮಾಡಿದ ಹಿಂಸೆ ಇವುಗಳ ನಡುವೆ ತುಲನೆ ಇದೆ. ಅಂಥ ಹಿಂಸೆಗಿಂತ ಭಯ ಅಥವಾ ಅಂಜುಬುರುಕತನವು ಹೀನವಾದುದು. ಆತ್ಮರಕ್ಷಣೆಗಾಗಿ ಮಾಡಲ್ಪಟ್ಟ ಹಿಂಸೆ ಇದು ರಜೋಗುಣಿಯೂ ಇರಬಲ್ಲದು. ಅದು ಶುದ್ಧ ಧರ್ಮವಲ್ಲ, ಅಪೇಕ್ಷಾಕೃತ ಧರ್ಮವದು. ಅಹಿಂಸೆಯೆ ಶುದ್ಧ ಧರ್ಮವು.

ಇದನ್ನೇ ಸ್ಪಷ್ಟಪಡಿಸುವ. ದರೋಡೆ ಮಾಡುವ ಉದ್ದೇಶದಿಂದ ಒಬ್ಬ ಕಳ್ಳನು ಹಿಂಸೆ ಮಾಡುವನೆಂದು ತಿಳಿಯುವ. ಆವನು ಅತ್ಯಂತ ಹೀನ ಪಾಪವನ್ನು ಮಾಡುವನು, ಇಂಥ ಹಿಂಸೆಯೊಡನೆ, ಆತ್ಮರಕ್ಷಣಕ್ಕಾಗಿ ದೇಶಕ್ಕಾಗಿ ಧರ್ಮಕ್ಕಾಗಿ ಮಾಡಿದ ಹಿಂಸೆಯನ್ನು ( ಆ ಪಕ್ಷವು

ನ್ಯಾಯ್ಯವಿದ್ದಲ್ಲಿ ) ಹೋಲಿಸಿದರೆ ಇದು ಧರ್ಮವೆನಿಸಬಲ್ಲದು. ಆದರೆ ಒಳ್ಳೆ ಉದ್ದೇಶಸಾಧನೆಗಾಗಿ ಅನಾಸಕ್ತಭಾವದಿಂದ ಮಾಡಲಾದ ಹಿಂಸೆ ಅಹಿಂಸೆ ಎನಿಸುವದು, ಆದುದರಿಂದ ಅದು ಶುದ್ಧ ಧರ್ಮವು. ಅದೇ ರೀತಿ ಭಯಮೂಲಕವಾದ ಅಹಿಂಸೆಯು ಅಹಿಂಸೆಯಲ್ಲ, ಅದೊಂದು ಪಾಪವು. ಅಶೋಕನು ವೀರಪುರುಷನು. ಸಾಮ್ರಾಜ್ಯ ಸ್ಥಾಪನೆಗಾಗಿ ಮಾಡಿದ ಹಿಂಸೆ ಇದು ಪಾಪವೆಂಬುದು ಅವನಿಗೆ ದಿಗ್ವಿಜಯದ ನಂತರ ಹೊಳೆಯಿತು. ಆದುದರಿಂದ ಅವನು ಕ್ಷಮಾ ಧರ್ಮವನ್ನು ತಳೆದನು. ಅದು ವೀರನ ಕ್ಷಮಾವೃತ್ತಿ, ಆದರೆ ಅವನ ಮೊಮ್ಮಗನು ತನ್ನ ಅಂಜುಬುರುಕತನವನ್ನು ಮುಚ್ಚಿಕೊಳ್ಳುವದಕ್ಕಾಗಿ ಅಶೋಕನಂತೆ ಮಾಡಹೋದನು. ಅವನಲ್ಲಿ ನಿಜ ಶೌರ್ಯವೂ ಇರಲಿಲ್ಲ, ಕ್ಷಮಾಗುಣವೂ ಇರಲಿಲ್ಲ. ಆದುದರಿಂದ ಕವಿಗಳು ಅವನಿಗೆ 'ಮಹಾತ್ಮಾ' ಎನ್ನುವ ಬದಲು 'ಮೋಹಾತ್ಮ' ಎಂಬ ಹೆಸರಿಟ್ಟರು. ಬಲಿಷ್ಠನ ವಿವೇಕಯುಕ್ತ ಅಹಿಂಸೆಯೆ ನಿಜವಾದ ಅಹಿಂಸೆ, ಅದೊಂದು ಸತ್ವಗುಣಪೂರ್ಣ ವೃತ್ತಿಯು. ಅಂಜುಬುರುಕನ ಅಹಿಂಸೆ, ಕಳ್ಳನ ಹಿಂಸೆ, ಎರಡೂ ಪಾಪಗಳು. ಅನಾಸಕ್ತನ ಹಿಂಸೆ, ಬಲಿಷ್ಠನ ವಿವೇಕ ಯುಕ್ತ ಅಹಿಂಸೆ ಇವೆರಡೂ ಧರ್ಮಗಳು, ಅಹಿಂಸಾರೂಪಗಳು.

ಧರ್ಮದ ಗತಿಯು ಯಾವಾಗಲೂ ಸೂಕ್ಷ್ಮವು. ಮನುಷ್ಯನಲ್ಲಿ ಕ್ರೋಧ ಲೋಭ ಇವು ಮನೆಮಾಡಿಕೊಂಡಿರುವುದರಿಂದ ಹಿಂಸಕ ವೃತ್ತಿಯನ್ನು ಸಂಯಮದಲ್ಲಿಡುವುದು ಅವನಿಗೆ ಜಡವಾಗುತ್ತಿದೆ. ಆದುದರಿಂದಲೆ ಗಾಂಧೀಜಿಯವರು ಹಿಂಸೆ ತ್ಯಾಜ್ಯ ಹಾಗೂ ಅಹಿಂಸೆ ಗ್ರಾಹ್ಯ ಎಂದು ಹೇಳಿರುವರು. ಗಾಂಧೀಜಿಯವರು ಜೀವನ್ಮುಕ್ತ ಸ್ಥಿತಿಯಲ್ಲಿ— ಆ ಸ್ಥಿತಿಯು ಒಂದರೆಕ್ಷಣವಿದ್ದರೂ ಸೈ, ಈ ಮಾತಿನ ಮಟ್ಟಿಗಿದ್ದರೂ ಸೈ— ಅಹಿಂಸಾತ್ಮಕ ಹಿಂಸೆಯನ್ನು ಮಾಡಬಹುದು. ಆ ಕರುವಿನ ಹಿಂಸೆ ಮಾಡಿದಂತೆ ಮಾಡಬಹುದು. ಆದರೆ ಸಾಧಾರಣ ಪ್ರವೃತ್ತಿಯ ಮನುಷ್ಯನು ಹಾಗೆ ಮಾಡಹೋದರೆ ಕಾಗೆಯು ಕೋಗಿಲೆ ಯಂತೆ ಹಾಡಲು ಹವಣಿಸಿದಂತೆ ಹಾಸ್ಯಾಸ್ಪದವಾಗುವುದು. ಆದುದ ರಿಂದ ಎಲ್ಲ ಜನಸಾಮಾನ್ಯರ ಸಲುವಾಗಿ ಸುಲಭ, ಸುಗಮ, ಸರಳ,

ಸುವರ್ಣಮಯ ಮಾರ್ಗವೆಂದರೆ ಅಹಿಂಸೆಯೆ ಎಂದು ತಿಳಿದು ಗಾಂಧೀಜಿಯವರು ಅಹಿಂಸಾ ಧರ್ಮವನ್ನೆ ಹರಡುತಿದ್ದಾರೆ. ಉಪವಾಸದ ಪ್ರವೃತ್ತಿಯು ಕೂಡ ಈ ಅಹಿಂಸಾ ಮಾರ್ಗದಿಂದ ನಡೆದಾಗ ಹೊಳೆದ ಉಪಾಯ.

ಹಿಂಸೆ ಪೂರ್ಣ ತ್ಯಾಜ್ಯ ಎಂದು ನಾವು ತಿಳಿದುಕೊಂಡರೂ ಅಧರ್ಮದ ನಾಶ ಮಾಡಲು ಒಂದು ಶಸ್ತ್ರದ ಅವಶ್ಯಕತೆ ಇದೆ ಎಂಬ ಮಾತು ನಿಜ. ಧರ್ಮವು ಅತ್ಯಂತ ತೇಜದಿಂದ ಪ್ರಗತಿ ಹೊಂದಿ ಮುಂದೆ ಸಾಗಿದರೆ ಅಧರ್ಮದ ನಾಶವಾಗುವುದು ಸಿದ್ಧಾಂತವು. ಆದರೆ ಅದೇ ರೀತಿ ಅಧರ್ಮದ ನಾಶವಾದರೆ ಮಾತ್ರ ಧರ್ಮವು ಬೇರುಬಿಟ್ಟು ಗಟ್ಟಿಯಾಗಿ ನಿಲ್ಲುವುದು. ಎರಡೂ ಅನ್ಯೋನ್ಯಾಶ್ರಯವುಳ್ಳ ಸಂಗತಿಗಳು. ರಾಜಕೋಟದಲ್ಲಿ ಆದಂತೆ ಒಬ್ಬನು ವಚನದ್ರೋಹ ಮಾಡಬಹುದು ಅಥವಾ ಹರಿಜನರ ವಿಷಯದಲ್ಲಿ ಮುಖ್ಯ ಪ್ರಧಾನರ ನಿರ್ಣಯದಂಥ ನಿರ್ಣಯವು ನಮಗೆ ಎದುರಾಗಬಹುದು. ಬಲವಾದ ಪ್ರತಿರೋಧ ಮಾಡದೆ ಗತ್ಯಂತರವಿಲ್ಲದಂಥ ಒಂದು ಮಾತನ್ನು ಪರರು ನಮ್ಮ ಮೇಲೆ ಹೇರಬಹುದು. ಅಂಥ ಪ್ರಸಂಗದಲ್ಲಿ ಅಹಿಂಸಾವಾದಿಯು ಏನು ಮಾಡಬೇಕು ? ಹಿಂಸೆಯಂತೂ ತ್ಯಾಜ್ಯವು, ಆದುದರಿಂದ ಯಾವ ಶಸ್ತ್ರವು ಜನರಲ್ಲಿ ಕ್ರೋಧವನ್ನುಂಟುಮಾಡದೆ ಅಧರ್ಮದ ವಿರುದ್ಧ ಅವರನ್ನು ಉತ್ತೇಜಿಸಬಲ್ಲದೊ, ದ್ವೇಷವುಂಟಾಗದಂತೆ ಮಾಡಿ ಕೆಡುಕನ್ನು ಕತ್ತರಿಸಲು ಅವರನ್ನು ಚೇತರಿಸಬಲ್ಲದೊ, ಕೆಡುಕು ಮಾಡುವವರನ್ನು ಭಯರಹಿತರನ್ನಾಗಿಡಬಲ್ಲದೊ, ಇಂಥ ಶಸ್ತ್ರವನ್ನುಪಯೋಗಿಸಬೇಕಾಗುವುದು. ನಮ್ಮ ಒಬ್ಬ ಸಮೀಪದ ಆಪ್ತನು ಒಂದು ಕೆಟ್ಟ ವ್ಯಸನದ ಕೈಯಲ್ಲಿ ಸಿಕ್ಕಿದ್ದರೆ ಅವನನ್ನು ಅದರಿಂದ ನಿವೃತ್ತ ಮಾಡುವ ಬಗೆ ಯಾವುದು ? ಅವನನ್ನು ಅದರಿಂದ ನಿವೃತ್ತ ಮಾಡುವುದು ಅವಶ್ಯ, ಆದರೆ ಹಿಂಸೆಯಿಂದಲ್ಲ, ಪ್ರೇಮದಿಂದ ಆ ಕೆಲಸವನ್ನು ಸಾಧಿಸಲಿಕ್ಕೆ ಬೇಕು. ಇಂಥ ಎಲ್ಲ ಪರಿಸ್ಥಿತಿಗಳಲ್ಲಿ ಉಂಟಾಗಬಹುದಾದ ತೊಡಕುಗಳ ಪರಿಹಾರಕ್ಕಾಗಿ ವಿವಿಧ ಅಹಿಂಸಾತ್ಮಕ ಉಪಾಯಗಳ ವಿಧಾನವನ್ನು ಯೋಜಿಸುವುದು ಸಾಧ್ಯವು. ಆ ಉಪಾಯಗಳಲ್ಲಿ

ಉಪವಾಸವೆಂಬುದು ರಾಮಬಾಣವಿದ್ದಂತೆ. ಗಾಂಧೀಜಿಯವರು ಮೇಲಿಂದಮೇಲೆ ಇದನ್ನು ಉಪಯೋಗಿಸಿರುವರು.

ಉಪವಾಸವೆಂದರೊಂದು ಬಲಾತ್ಕಾರ ಎಂದು ಹಲವರು ಆಕ್ಷೇಪಿಸುವುದುಂಟು. ಅಹುದು, ಉಪವಾಸದ ಉಪಾಯವನ್ನು ಯೋಜಿಸುವಾಗ ಬಲಾತ್ಕಾರವಾಗುವುದಿಲ್ಲ ಎಂದು ಹೇಳುವವರಾರು? ಆದರೆ ಬಲಾತ್ಕಾರವಾದಾಕ್ಷಣಕ್ಕೆ ಹಿಂಸೆ ಆಯಿತೆಂದು ಹೇಳಲಿಕ್ಕಾಗದು. ಪ್ರೇಮದ ಬಲಾತ್ಕಾರ ಎಂಬ ವಸ್ತುವೂ ಇರಬಲ್ಲದು. ಪ್ರೇಮದ ಪ್ರಭಾವದ ಮೂಲಕ ನಾವು ಎಷ್ಟೋ ಸಾರೆ ಮನಸಿಲ್ಲದಿದ್ದರೂ ವಿಶಿಷ್ಟ ಕೆಲಸಗಳನ್ನು ಮಾಡುತ್ತೇವೆ. ಪ್ರೇಮವಶರಾಗಿ ಅನಿಚ್ಛೆಯಿಂದ ನಾವು ಏನಾದರೂ ಪಾಪಕರ್ಮವನ್ನು ಮಾಡಿದರೆ ಅದರಿಂದ ಕೆಡುಕಾಗುವುದು. ಅದೇ ಪುಣ್ಯಕರ್ಮವನ್ನು ಮಾಡಿದರೆ ಅದರಿಂದ ಲಾಭವಾಗುವುದು. ಹಿಂಸಾವಾದಿ ಮುಖಂಡನು ನಮ್ಮ ಮಾನಸಿಕ ದುರ್ಬಲತೆಯ ದುರ್ಲಾಭ ಪಡೆದು ತನ್ನ ಹಿಂಸಕ ಶಸ್ತ್ರಗಳಿಂದ ನಮ್ಮನ್ನು ಅಂಜಿಸಿ ನಮ್ಮ ಕೈಯಿಂದ ಪಾಪಕರ್ಮವನ್ನು ಮಾಡಿಸುವನು. ಅಹಿಂಸಾವಾದಿ ಮುಖಂಡನು ನಮ್ಮಲ್ಲಿಯ ಧರ್ಮಭಾವನೆಯನ್ನು ಜಾಗ್ರತಗೊಳಿಸಿ ಅದನ್ನು ಬಲಗೊಳಿಸಿ ತನ್ನ ಪ್ರೇಮಬಲದಿಂದ ನಮ್ಮಿಂದ ಪುಣ್ಯಕರ್ಮಗಳನ್ನು ಮಾಡಿಸುವನು. ಪ್ರೇಮಮಾರ್ಗದಿಂದಾಗುವ ಇನ್ನೊಂದು ಫಲವೇನೆಂದರೆ ಪಾಪದ ಭಾರದಿಂದ ಹತ್ತಿಕ್ಕಲ್ಪಟ್ಟ ನಮ್ಮ ಸತ್ಪ್ರವೃತ್ತಿಗಳು ಸ್ವತಂತ್ರವಾಗುವವು. ಈ ರೀತಿ ಮೊದಲು ನಾವು ಪ್ರೇಮದ ಬಲಾತ್ಕಾರದ ಮೂಲಕ ಮಾಡಿದ ಮಾತುಗಳನ್ನೆ ಮುಂದೆ ಸ್ವತಂತ್ರ ಬುದ್ಧಿಯಿಂದ ಮಾಡಲನುವಾಗುತ್ತೇವೆ, ಪರತಂತ್ರತೆಯನ್ನು ಹೊರದೂಡಿ ಸ್ವತಂತ್ರತೆಯನ್ನು ಪಡೆಯುತ್ತೇವೆ. ಪ್ರೇಮದ ಬಲಾತ್ಕಾರವನ್ನು ಸಹ ಮಾಡುವ ಅವಶ್ಯಕತೆ ಉಂಟಾಗದ ಸ್ಥಿತಿಯು ಆದರ್ಶ ಪರಿಸ್ಥಿತಿ ಎನಿಸಬಹುದು. ಆದರೆ ಅದು ಸತ್ಯಯುಗದಲ್ಲಿಯೆ ಸಾಧ್ಯವು. ಮಹಾಪುರುಷನ ಜನ್ಮವಾಗಬೇಕಾದರೆ ಪರಿಸ್ಥಿತಿ ಕೆಟ್ಟಿರಬೇಕೆಂದು ಸಂಕೇತವಿರುವುದು. ಸಮಾಜವು ನಿರ್ಬಲವಾಗಿರಬೇಕು, ಅಧರ್ಮದ ಬಲ ಬೆಳೆದಿರಬೇಕು, ಜೋರು ಜುಲುಮೆಯಿಂದ ಸಮಾಜವು ದುಃಖಿ

ಯಾಗಿರಬೇಕು, ಧರ್ಮಜಿಜ್ಞಾಸೆ ಉಂಟಾಗಿರಬೇಕು, ಇಂಥ ಪರಿಸ್ಥಿತಿ ಉಂಟಾದಾಗ ಎಲ್ಲವನ್ನೂ ಸರಿಪಡಿಸಲು ಮಹಾಪುರುಷನ ಜನ್ಮವಾಗುವುದು. ಧರ್ಮರಾಜ್ಯ ನಡೆದಿದ್ದರೆ, ಸಮಾಜದಲ್ಲಿ ನಿರ್ಬಲತೆ ಇಲ್ಲದಿದ್ದರೆ, ಮಹಾಪುರುಷನ ಬರವನ್ನು ನಿರೀಕ್ಷಿಸುವ ಕಾರಣವೂ ಇಲ್ಲ, ಉಪವಾಸದ ಅವಶ್ಯಕತೆಯೂ ಇಲ್ಲ. ಆ ಪರಿಸ್ಥಿತಿಯಲ್ಲಿ ಉಪದೇಶ, ಶಿಕ್ಷಣ ಇವುಗಳೇಕೆ ಬೇಕು ?

ಹೀಗೆ ಹೇಳಿದಾಕ್ಷಣಕ್ಕೆ ಈ ಉಪವಾಸಶಸ್ತ್ರವನ್ನು ಪ್ರತಿಯೊಬ್ಬನೂ ಉಪಯೋಗಿಸಬಹುದು ಎಂದು ಹೇಳುವುದು ನನ್ನ ಉದ್ದೇಶವಲ್ಲ. ರಾಮ, ಕೃಷ್ಣ, ಮುಂತಾದವರು ಮಾಡಿದ ಅಹಿಂಸಾತ್ಮಕ ಹಿಂಸೆ, ಗಾಂಧೀಜಿಯವರು ಕರುವಿನ ವಿಷಯದಲ್ಲಿ ಮಾಡಿದ ಹಿಂಸೆ ಇವುಗಳನ್ನು ಮಾಡಲು ಅಸಾಧಾರಣ ಪಾತ್ರತೆ ಬೇಕು ಎಂಬಲ್ಲಿ ಸಂಶಯವಿಲ್ಲ. ಹಿಂಸಾಶಸ್ತ್ರವನ್ನು ಉಪಯೋಗಿಸಬೇಕಾದರೂ ಅಭ್ಯಾಸ ಅಧ್ಯಯನಗಳು ಬೇಕು ಎಂಬುದನ್ನು ನಾವು ಲಕ್ಷದಲ್ಲಿಡಬೇಕು. ಕತ್ತಿ ಕಠಾರಿ ಉಪಯೋಗ, ಗುರಿ ಹೊಡೆಯುವುದು ಮುಂತಾದವುಗಳನ್ನು ಹಿಂಸಾವಾದಿ ಸೈನಿಕರು ಸಹ ಕಲಿಯಬೇಕಾಗುವುದು. ಆ ರೀತಿ ಅಭ್ಯಸಿಸಿದ ನಂತರವೆ ಅವರು ಅವುಗಳನ್ನು ಕುಶಲದಿಂದ ಉಪಯೋಗಿಸಬಲ್ಲರು. ಇದೇರೀತಿ ಉಪವಾಸವನ್ನು, ಅಹಿಂಸಾಮಯ ಉಪವಾಸವನ್ನು, ಆಚರಿಸುವುದಾದರೆ ಪಾತ್ರತೆ ಅವಶ್ಯ. ಎಲ್ಲರೂ ಅಹಿಂಸಾತ್ಮಕ ಉಪವಾಸವನ್ನು ಹೂಡಲಾರರು. 'ಧರಣಿವಾಚಾ' ಕೂಡುವ ಮಾತು ಬೇರೆ, ಧಾರ್ಮಿಕ ಉಪವಾಸ ಬೇರೆ. 'ಧರಣಿ'ಯಲ್ಲಿ ಧರ್ಮ ಎಲ್ಲಿಯದು, ಅಹಿಂಸೆ ಎಲ್ಲಿಯದು ? 'ಧರಣಿ' ಬಹುಶಃ ಸ್ವಾರ್ಥ ಮೂಲಕವಿರುವುದು. ಬೇರೆ ಉಪವಾಸಗಳನ್ನು ಮೋಸಗಾರಿಕೆ, ಪ್ರಸಿದ್ಧಿ, ಮುಂತಾದ್ದಕ್ಕಾಗಿ ಸಹ ಹಲವರು ಮಾಡುವದುಂಟು. ಒಮ್ಮೊಮ್ಮೆ ಇಂಥ ಉಪವಾಸಗಳಲ್ಲಿ ಬಲಾತ್ಕಾರದ ಅಂಶವು ವಿಶೇಷವಿರದಿದ್ದರೂ ಅವು ಅಧಾರ್ಮಿಕ ಉಪವಾಸಗಳ ವರ್ಗಕ್ಕೆ ಸೇರಿದವುಗಳೇ. ಇಲ್ಲಿ ಇವುಗಳನ್ನೆಲ್ಲ ಚರ್ಚಿಸಲು ನಾನು ಹೊರಟಿಲ್ಲ. ಧಾರ್ಮಿಕ ಉಪವಾಸದ ಬಗ್ಗೆಯೇ ಇಲ್ಲಿ ಚರ್ಚೆ ನಡೆದಿದೆ. ಧಾರ್ಮಿಕ

ಉಪವಾಸದ ಪ್ರಯೋಗ ಮಾಡುವವನು ಮೊದಲು ಪಾತ್ರತೆ ಪಡೆಯುವುದು ಅವಶ್ಯ ಎಂಬ ಮಾತನ್ನು ತಿಳಿದುಕೊಳ್ಳುವುದು ಮಹತ್ವದ ಸಂಗತಿಯಾಗಿದೆ. ಯಾಕಂದರೆ ಈ ಬಗೆಯ ಪ್ರತಿಯೊಂದು ಧಾರ್ಮಿಕ ಉಪವಾಸದಲ್ಲಿ ಬಲಾತ್ಕಾರದ ಸಂಭವವಿರುವುದು. ಅಧಾರ್ಮಿಕ ಉಪವಾಸದಲ್ಲಿ ಕದಾಚಿತ್ ಬಲಾತ್ಕಾರವಿರದಿದ್ದರೂ ಜನರು ಅದನ್ನು ತಿರಸ್ಕರಿಸುವರು. ಅವರು ಹಾಗೆ ತಿರಸ್ಕರಿಸುವದೂ ಯೋಗ್ಯವು. ಯಾಕಂದರೆ ಆ ಉಪವಾಸಕ್ಕೆ ಧರ್ಮ ಅಥವಾ ನೀತಿಯ ಬೆಂಬಲವಿರುವುದಿಲ್ಲ. ಆದುದರಿಂದ ಅಂಥ ಉಪವಾಸಕ್ಕೆ ತಲೆ ಬಾಗಿಸುವುದು ಸಹ ಅಧರ್ಮವಾಗುವುದು. ಆದರೆ ಧಾರ್ಮಿಕ ಉಪವಾಸದ ಸಮಯದಲ್ಲಿ ಆ ಪ್ರಯೋಗವು ಸಫಲವಾಗುವ ಸಂಭವವಿರುವುದರಿಂದ ಧಾರ್ಮಿಕ ಉಪವಾಸ ಮಾಡುವವನು ಹೆಚ್ಚು ಸಾವಧಾನದಿಂದ ಸಾಗುವುದು ಹಾಗೂ ಹೆಚ್ಚು ಪಾತ್ರನಿರುವುದು ಅತ್ಯವಶ್ಯ. ಇಲ್ಲದಿದ್ದರೆ ಅನ್ಯಾಯವಾಗುವ ಸಂಭವವಿರುವುದು.

ಈ ಎಲ್ಲ ಕಾರಣಗಳ ಮೂಲಕವೆ ರಾಜಕೋಟದ ಉಪವಾಸದ ನಂತರ ಗಾಂಧೀಜಿಯವರು ಬರೆದುದು:- 'ಸತ್ಯಾಗ್ರಹದ ಶಸ್ತ್ರಾಗಾರದಲ್ಲಿ ಉಪವಾಸವೆಂಬುದು ಒಂದು ಬಲಿಷ್ಠ ಶಸ್ತ್ರವು. ಆದರೆ ಇದನ್ನು ಉಪಯೋಗಿಸುವ ಪಾತ್ರತೆ ಎಲ್ಲರಲ್ಲಿರಲಾರದು. ಪರಮಾತ್ಮನಲ್ಲಿ ಜೀವಂತ ಶ್ರದ್ಧೆ ಇಲ್ಲದ ಸತ್ಯಾಗ್ರಹಿಯು ಉಪವಾಸದ ಅಧಿಕಾರಿಯಾಗಲಾರನು. ಇದು ಕೇವಲ ನಕಲು ಮಾಡಲು ಬರುವಂಥ ವಸ್ತು ಅಲ್ಲ. ಅತ್ಯಂತ ಅಂತರ್ವೇದನೆಯಾಗುತಿದ್ದರೆ ಮಾತ್ರ ಉಪವಾಸ ಮಾಡಬೇಕು. ಅಸಾಧಾರಣ ಪ್ರಸಂಗಗಳಲ್ಲಿಯೆ ಇದರ ಉಪಯೋಗವು ಆವಶ್ಯಕವು. ನಾನು ಉಪವಾಸಕ್ಕಾಗಿ ಹೆಚ್ಚು ಯೋಗ್ಯನಾಗಿದ್ದೇನೆಂದು ಎನಿಸುತ್ತಿದೆ. ಉಪವಾಸವು ಅತಿಶಯ ಶಕ್ತಿಶಾಲಿ ಶಸ್ತ್ರವಿದೆ ಎಂಬ ಮಾತು ನಿಜ. ಆದರೆ ಅದರ ನಿಯಮ, ಮರ್ಯಾದೆ ಇವೂ ಕಠೋರವಾದವುಗಳು. ಆದುದರಿಂದ ಇದರ ಉಪಯೋಗವನ್ನು ಹೇಗೆ ಮಾಡಬೇಕೆಂಬ ಬಗ್ಗೆ ಯಾವನು ಶಿಕ್ಷಣ ಪಡೆದಿಲ್ಲವೊ ಅವನ ಮಟ್ಟಿಗೆ ಇದು ಅಷ್ಟು ಬೆಲೆಯುಳ್ಳ ವಸ್ತು ಅಲ್ಲ. ಎಷ್ಟೋ ಜನರು ಮಾಡುತಿರುವ

ಉಪವಾಸಗಳನ್ನು ನಾನು ನನ್ನ ಅಳತೆಗೋಲಿನಿಂದ ಪರೀಕ್ಷಿಸಿ ನೋಡಿದರೆ ಅವುಗಳಲ್ಲಿ ಅನೇಕ ಉಪವಾಸಗಳು 'ಸತ್ಯಾಗ್ರಹ'ವೆನಿಸಲಾರವು. ಅವುಗಳಿಗೆ 'ಧರಣಿ' ಇಲ್ಲವೆ ಕೇವಲ ಅನ್ನತ್ಯಾಗ ಎಂಬ ಹೆಸರು ಹೆಚ್ಚು ಯೋಗ್ಯವಾದುದು.'

'ಅಂತರ್ವಾಣಿ' ಅದೇ ರೀತಿ ಉಪವಾಸ ಈ ಎರಡು ವಿಷಯಗಳಲ್ಲಿ ಹಲವರು ತಮ್ಮ ಸ್ವಾರ್ಥದ ಸಲುವಾಗಿ ನಕಲು ಮಾಡಿದ್ದಾರೆ. ಹಲವರು ಮೋಸಮಾಡುವುದೂ ಉಂಟು. ಆದರೆ ಈ ಜಗತ್ತಿನಲ್ಲಿ ದುರುಪಯೋಗವಾಗದೆ ಇದ್ದ ವಸ್ತು ಆವುದು? ಯಾವುದೊಂದು ವಸ್ತುವಿನ ದುರುಪಯೋಗವಾದಾಕ್ಷಣಕ್ಕೆ ಆ ವಸ್ತು ದುಷ್ಟವಾಗದು. ನಿಜವಾಗಿ ಎಲ್ಲ ವಸ್ತುಗಳ ಉಪಯೋಗದಲ್ಲಿಯೂ ವಿವೇಕ ಬೇಕು. ಆದುದರಿಂದ 'ಒಳನುಡಿ' ಅರ್ಥಾತ್ 'ಅಂತರ್ವಾಣಿ' ಯನ್ನು ಕೇಳಿದ ಹಾಗೂ ಅನೇಕ ಉಪವಾಸಗಳನ್ನು ಮಾಡಿದ ಗಾಂಧೀಜಿಯವರು ತಮ್ಮ ಲೇಖಗಳಲ್ಲಿ ಈ ಎರಡು ವಸ್ತುಗಳ ಉಪಯೋಗವನ್ನು ಅತ್ಯಂತ ಸಾವಧಾನದಿಂದ ಮಾಡಬೇಕೆಂದು ಜನರಿಗೆ ಎಚ್ಚರ ಕೊಡುತ್ತ ಬಂದಿರುವರು. 'ಅಂತರ್ವಾಣಿ'ಯ ಬಗ್ಗೆ ಮಾತಾಡುವವರತ್ತ ಅವರು ಸಂಶಯದೃಷ್ಟಿಯಿಂದ ನೋಡುವುದನ್ನು ನಾನು ಬಲ್ಲೆನು. ಅದೇ ರೀತಿ ಉಪವಾಸ ಮಾಡುವವರನ್ನು ಬಹುಶಃ ಅವರು ಯಾವಾಗಲೂ ತಡೆಯಲೆತ್ನಿಸುವರು. ಹೀಗೆ ಮಾಡುವುದು ಸರಿಯೆ ಇರುವುದು.

# ೧೨. ಸತ್ಯಾಗ್ರಹ

ಗಾಂಧೀಜಿಯವರ ನೆನಪಾಗುವುದೊಂದೇ ತಡ, ನಮ್ಮೆದುರು ಸತ್ಯಾಗ್ರಹದ ಚಿತ್ರವು ನಿಲ್ಲುವುದು. ಹಾಲಿಲ್ಲದ ಹಸುವಿನ ಕಲ್ಪನೆ ಮಾಡಲಿಕ್ಕೆ ಆಗದಿರುವಂತೆ ಸತ್ಯಾಗ್ರಹರಹಿತ ಗಾಂಧಿಯ ಕಲ್ಪನೆ ಮಾಡಲು ಆಗದು. ಗಾಂಧೀಜಿಯವರು ಸತ್ಯಾಗ್ರಹಕ್ಕೆ ಅತ್ಯಂತ ವ್ಯಾಪಕ ಅರ್ಥವನ್ನು ಕಲ್ಪಿಸುವರು. ಅವರ ಸತ್ಯಾಗ್ರಹದ ಕಲ್ಪನೆ 'ಕಾಯದೇಭಂಗ' ದಿಂದ ಮರ್ಯಾದಿತವಿಲ್ಲ. ಸವಿನಯ ಕಾಯದೇ ಭಂಗವೆಂಬುದು ಸತ್ಯಾಗ್ರಹದ ಒಂದು ಅಂಗವು ಮಾತ್ರ. ಅವರ ದೃಷ್ಟಿಯಿಂದ ಹರಿಜನ ಕಾರ್ಯವೂ ಕಾಯದೇಭಂಗದಷ್ಟೆ ಸತ್ಯಾಗ್ರಹ ವೆನಿಸಬಲ್ಲದು. ರಾಟೆಯಿಂದ ನೂಲುವುದೂ ಸತ್ಯಾಗ್ರಹವೆ. ಸತ್ಯ, ಬ್ರಹ್ಮಚರ್ಯ ಇವೆಲ್ಲ ಸತ್ಯಾಗ್ರಹದ ಅಂಗೋಪಾಂಗಗಳು.

ಸತ್ಯಾಗ್ರಹವೆಂದರೆ ಸತ್ಯದ ಬಗ್ಗೆ ಆಗ್ರಹ, ಸತ್ಯದ ಬಗ್ಗೆ ಹಟ. ಈ ಮೂಲ ಮಾತನ್ನು ಮುಂದಿಟ್ಟುಕೊಂಡೆ ಸತ್ಯಾಗ್ರಹ ಆಶ್ರಮದವರು ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಸ್ವಾದ, ಅಪರಿಗ್ರಹ, ಅಭಯ, ಅಸ್ಪೃಶ್ಯತಾನಿವಾರಣೆ, ಕಾಯಿಕಪರಿಶ್ರಮ, ಸರ್ವಧರ್ಮಸಮ ಭಾವ, ನಮ್ರತೆ, ಸ್ವದೇಶಿ, ಈ ಹನ್ನೊಂದು ವ್ರತಗಳ ಪಾಲನೆ ಮಾಡ ಬೇಕಾಗುವುದು. ಇದರ ಅರ್ಥವೇನಂದರೆ, ಈ ಹನ್ನೊಂದು ವ್ರತಗಳೂ ಸತ್ಯಾಗ್ರಹದ ಅಂಗಗಳು. ಸವಿನಯ ಕಾಯದೇಭಂಗವು ನಮ್ರತೆ, ಸತ್ಯ, ಅಹಿಂಸೆ, ಅಭಯ ಇವುಗಳ ಅಂಗಭೂತವಾಗಿ ಸತ್ಯಾಗ್ರಹದಲ್ಲಿ ಒಳಕೊಳ್ಳುವುದು, ಇದಕ್ಕೆ ಸ್ವತಂತ್ರ ಸ್ಥಾನವಿಲ್ಲ. ಹೀಗಿದ್ದರೂ ಸತ್ಯಾಗ್ರಹ ಮತ್ತು ಸವಿನಯ ಕಾಯದೆಭಂಗ ಇವು ಸಮಾನಾರ್ಥಕ

ಎಂದು ಜನಸಾಮಾನ್ಯರು ತಿಳಿಯುವರು. 'ಸವಿನಯ' ಈ ವಿಶೇಷಣದ ಮಹತ್ವವನ್ನು ಚನ್ನಾಗಿ ತಿಳಿದುಕೊಳ್ಳುವವರು ಕಡಿಮೆ. ಸತ್ಯಾಗ್ರಹ ಅಂದರೆ ಕಾಯದೇಭಂಗ, ಇಷ್ಟೇ ಸಾಧಾರಣ ಜನರ ತಿಳಿವಳಿಕೆ. ಈಗ ನಾಲ್ವತ್ತು ವರ್ಷ ಸತತ ಪ್ರಯತ್ನ ನಡೆದರೂ ಇನ್ನೂ ಈ ತಪ್ಪು ತಿಳಿವಳಿಕೆ ರೂಢವಿದ್ದುದು ಆಶ್ಚರ್ಯ. ಸಾಮಾನ್ಯತಃ ಎಲ್ಲ ಬಗೆಯ ಕಾಯದೇಭಂಗವು ಅಥವಾ ಕಾಯದೇಕ್ಕೆ ಸಲ್ಲದ ವಿರೋಧವು ಈಗ ಸತ್ಯಾಗ್ರಹ ಎಂಬ ಹೆಸರಿನಿಂದ ಕರೆಯಲಾಗುವುದು.' ಕಾಯದೇ ಭಂಗ ಮಾಡುವಾಗ ಶುದ್ಧ ಸತ್ಯಾಗ್ರಹತತ್ವದಂತೆ ನಡೆಯದೆ ಇರುವವರು ಅದಕ್ಕೆ ಸತ್ಯಾಗ್ರಹ ಎಂಬ ಹೆಸರಿನಿಂದ ಕರೆಯದೆ 'ನಿಃಶಸ್ತ್ರ ಪ್ರತಿಕಾರ' ಎಂದರೆ ಅವರು ಸತ್ಯಾಗ್ರಹದ ವಿಶೇಷ ಸೇವೆ ಮಾಡಿದಂತಾಗುವುದು.

ಈ ಶುದ್ಧ ಸತ್ಯಾಗ್ರಹದ ಬೀಜವು ಗಾಂಧೀಜಿಯವರಲ್ಲಿ ಚಿಕ್ಕಂದಿನಿಂದ ಕಂಡು ಬರುವುದು. ಆದರೆ ಅವರ ಸವಿನಯ ಆಜ್ಞಾಭಂಗದ ಸ್ಥೂಲ ದರ್ಶನವು ಮೊದಲು ನಮಗೆ ಆಫ್ರಿಕೆಯಲ್ಲಿ ಆಗುವುದು. ಆಫ್ರಿಕೆಗೆ ಹೋದೊಡನೆ ಅವರು ಪ್ರಿಟೋರಿಯಾಕ್ಕೆ ಹೋಗಬೇಕಾಯಿತು. ಆದುದರಿಂದ ಡರ್ಬನದಿಂದ ಪ್ರಿಟೋರಿಯಾಕ್ಕೆ ಹೊರಟರು. ಮೊದಲನೆ ವರ್ಗದ ಟಿಕೀಟು ಕೊಂಡು ಗಾಡಿ ಏರಿ ಆರಾಮ ಕುಳಿತುಕೊಂಡರು. ರಾತ್ರಿ ಒಂಬತ್ತು ಗಂಟೆಗೆ ಒಬ್ಬ ಬಿಳಿಯ ಪ್ರವಾಸಿಯು ಅದೇ ಡಬ್ಬಿಯನ್ನೇರಿದನು. ಅವನು ಗಾಂಧೀಜಿಯವರನ್ನು ಕಾಲಿನಿಂದ ತಲೆವರೆಗೆ ನಿರೀಕ್ಷಿಸಿ ಹೊರಗೆ ಹೋಗಿ ಒಬ್ಬ ರೇಲ್ವೆ ಅಧಿಕಾರಿಯನ್ನು ಕರಕೊಂಡು ಬಂದನು. ಅಧಿಕಾರಿಯು ಬಂದೊಡನೆ: 'ಏಳಿರಿ, ನೀವು ಇಲ್ಲಿ ಕೂಡಲಾರಿರಿ, ಕೆಳಗಿನ ವರ್ಗದ ಡಬ್ಬಿಗೆ ನೀವು ಹೋಗಬೇಕಾದೀತು.'

'ನನ್ನ ಬಳಿ ಮೊದಲನೆ ವರ್ಗದ ತಿಕೀಟು ಇದೆ.'

'ಚರ್ಚೆ ಬೇಡಿರಿ, ಏಳಿರಿ, ಎರಡನೇ ಡಬ್ಬಿಗೆ ನಡೆಯಿರಿ.'

‘ನಾನು ಈ ರೀತಿ ಈ ಡಬ್ಬಿಯಿಂದ ಹೋಗುವವನಲ್ಲನೆಂದು ಗಟ್ಟಿಯಾಗಿ ಹೇಳುವೆನು. ನನ್ನ ಬಳಿ ತಿಕೀಟು ಇದೆ ಹಾಗೂ ಇದೇ ಡಬ್ಬಿಯಲ್ಲಿ ಕುಳಿತು ನಾನು ನನ್ನ ಪ್ರವಾಸವನ್ನು ಮುಗಿಸಲಿಚ್ಛಿಸುವೆ.’

‘ಸರಲ ಹೇಳಿದರೆ ನೀವು ಕೇಳುವುದಿಲ್ಲ, ನಾನು ಪೋಲೀಸರನ್ನು ಕರೆಯುವೆ.’

ಪೋಲೀಸ ಸಿಪಾಯಿಯು ಬಂದನು. ಅವನು ಗಾಂಧೀಜಿಯವರ ಕೈಹಿಡಿದು ಅವರನ್ನು ಹೊರಗೆ ಸಾಗಿಸಿದನು. ಇವರ ಸಾಮಾನನ್ನು ಹೊರಗೆ ಬೀಸಾಡಿದನು. ಎರಡನೆ ಡಬ್ಬಿಗೆ ಹೋಗಲು ಇವರು ಒಪ್ಪಲಿಲ್ಲ. ಇವರನ್ನು ಬಿಟ್ಟೇ ಗಾಡಿ ಹೊರಟು ಹೋಯಿತು. ಇವರು ಪ್ರವಾಸಿಕರ ಕೋಣೆಯಲ್ಲಿ ಹೋಗಿ ಸುಮ್ಮನೆ ಕುಳಿತರು. ಇವರ ಸಾಮಾನು ರೇಲ್ವೆದವರ ಹತ್ತರವೆ ಉಳಿಯಿತು. ರಾತ್ರಿ ಬಹಳ ಚಳಿ ಇತ್ತು. ಇವರು ಸೆಟೆದು ಹೋದರು: ‘ನಾನು ನನ್ನ ಕರ್ತವ್ಯದ ವಿಚಾರವನ್ನು ನಡೆಸಿದೆನು. ನಾನು ನನ್ನ ಹಕ್ಕು ಬಾಧ್ಯತೆಗಳ ಬಗ್ಗೆ ಹೋರಾಡಬೇಕೊ ಅಥವಾ ಅಪಮಾನವನ್ನು ಸಹಿಸಿ ಕೂಡ ಪ್ರಿಟೋರಿಯಾಕ್ಕೆ ಸಾಗಿ ಅಲ್ಲಿಯ ಖಟ್ಲೇ ನಡೆಸಿದ ಬಳಿಕವೆ ತಿರುಗಿ ಬರಬೇಕೋ? ನನ್ನ ಕರ್ತವ್ಯವನ್ನು ಮಾಡದೆ ನಾನು ಸ್ವದೇಶಕ್ಕೆ ಹೋಗುವುದು ಅಳುಬುರುಕತನವೆನಿಸುವುದು. ಈ ಕರಿ ಬಿಳಿಯರ ಭೇದಭಾವವು ಬೇರು ಬಿಟ್ಟು ಗಂಭೀರರೂಪವನ್ನು ತಾಳಿದೆ. ನನ್ನ ಅಪಮಾನವು ಆ ರೋಗದ ಒಂದು ಬಾಹ್ಯ ಲಕ್ಷಣವು ಮಾತ್ರ. ಈ ರೋಗದ ತಳ ಬುಡವನ್ನು ನಾನು ನಷ್ಟಗೊಳಿಸಲಿಕ್ಕೆ ಬೇಕು ಹಾಗೂ ಈ ಪ್ರಯತ್ನ ಮಾಡುವಾಗ ಬರಬಹುದಾದ ಎಲ್ಲ ಕಷ್ಟನಷ್ಟಗಳನ್ನು ಸಹಿಸಲಿಕ್ಕೆ ಬೇಕು. ಈ ಪ್ರಕಾರ ನಿರ್ಧಾರ ಮಾಡಿ ನಾನು ಎರಡನೆ ಗಾಡಿಯಿಂದ ಪ್ರಿಟೋರಿಯಾಕ್ಕೆ ಸಾಗಿದೆನು.’

ಡರಬನದಿಂದ ಪ್ರಿಟೋರಿಯಾಕ್ಕೆ ಹೋಗಬೇಕಾದರೆ ರೇಲಿನಿಂದ ಮೊದಲು ಚಾರ್ಲ್ಸಟಾವುನಕ್ಕೆ ಹೋಗಬೇಕಾಗುವುದು. ಅಲ್ಲಿಂದ ಕುದುರೆ ಟಪಾಲ ಗಾಡಿ ಹೋಗುವುದು. ಅದರಲ್ಲಿ ಪ್ರವಾಸಮಾಡಿ



ರೇಖಾ ಚಿತ್ರ - ಊಟ ಕೆಲಸ ಎರಡೂ

( ಶ್ರೀ [illegible] )

ಜೋಹಾನ್ಸಬರ್ಗಕ್ಕೆ ಹೋಗಬೇಕು, ಅಲ್ಲಿಂದ ಮತ್ತೆ ರೇಲಿನಿಂದ ಪ್ರಿಟೋರಿಯಾಕ್ಕೆ ಮುಟ್ಟಬೇಕು. ಗಾಂಧೀಜಿಯವರು ಎರಡನೇ ಗಾಡಿ ಹಿಡಿದು ಚಾರ್ಲ್ಸ್‌ಟಾವುನ ಮುಟ್ಟಿದರು. ಮುಂದೆ ಕುದುರೆ ಗಾಡಿ ಯಲ್ಲಿ ಪ್ರವಾಸ. ರೇಲಿನ ತಿಕೀಟಿನೊಡನೆ ಕುದುರೆ ಗಾಡೀ ತಿಕೀಟನ್ನೂ ಅವರು ಕೊಂಡಿದ್ದರು. ಇವರು ಕಪ್ಪು ಇದ್ದುದನ್ನು ನೋಡಿ ಗಾಡಿ ಏಜಂಟನು ನಿಮ್ಮ ತಿಕೀಟು ರದ್ದುಪಡಿಸಲಾಗಿದೆ ಎಂದು ಹೇಳಿಬಿಟ್ಟನು! ಗಾಂಧೀಜಿಯವರು ಅವನಿಗೆ ಸರಿಯಾದ ಉತ್ತರ ಕೊಟ್ಟದ್ದರಿಂದ ಅವನು ಸುಮ್ಮನಾದನು. ಆದರೆ ಅದರಿಂದ ಕರಿ ಬಿಳಿಯರ ಪ್ರಶ್ನೆಯ ಅಡಚಣಿ ದೂರಾಗಲಿಲ್ಲ. ಬಿಳಿಯ ಪ್ರವಾಸಿಗಳೆಲ್ಲ ಗಾಡಿಯ ಒಳಗೆ ಕುಳಿತಿದ್ದರು. ಬಿಳಿಯರೊಡನೆ ಇವರನ್ನು ಕೂಡಿಸುವುದು ಶಕ್ಯವಿರಲಿಲ್ಲ. ಆದುದರಿಂದ ಕೋಚಮುನ್ನನ ಬದಿಗೆ ಕೂಡತಕ್ಕ ಗಾಡಿಯ ಸಂಚಾಲ ಕನು ತಾನು ಸ್ವತಃ ಒಳಗೆ ಕುಳಿತು ಇವರನ್ನು ಕೋಚಮುನ್ನನ ಬದಿಗೆ ಕೂಡಿಸಿದನು !

ಇದು ಅಪಮಾನದ ಸಂಗತಿ. ಇದನ್ನು ವಿಷದ ಗುಟುಕಿನಂತೆ ನುಂಗಿಕೊಂಡರು. ಗಾಡಿ ನಡೆಯಿತು. ಹಲವು ತಾಸು ಆದವು. ಗಾಡಿಯ ಸಂಚಾಲಕನಿಗೆ ತಂಬಾಕಿನ ತಲಬಾಯಿತು. ಅವನು ಹೊರಗೆ ಕೂಡುವ ನಿಶ್ಚಯ ಮಾಡಿದನು. ಆದರೆ ಗಾಂಧೀಜಿಯವರು ಅವನ ಸ್ಥಳದಲ್ಲಿ ಕುಳಿತಿದ್ದರು. ಅವರನ್ನು ಒಳಗೆ ಕೂಡಿಸುವದಂತೂ ಸಾಧ್ಯವೆ ಇರಲಿಲ್ಲ. ಇನ್ನಷ್ಟು ಗಾಂಧೀಜಿಯವರ ಅಪಮಾನ ಮಾಡಿ ಈ ತನ್ನ ಸಮಸ್ಯೆಯನ್ನು ಬಿಡಿಸಬೇಕೆಂದು ಅವನು ಯೋಜಿಸಿದನು. ಕೋಚಮುನ್ನನ ಆ ಬದಿಗೆ ಇನ್ನೊಂದು ಅಡಚಣಿಯ ಸ್ಥಳ ಇತ್ತು. ಅತ್ತ ದೃಷ್ಟಿಯನ್ನಿಟ್ಟು, 'ನೀನು ಇನ್ನು ಅಲ್ಲಿ ಕೂಡು. ನನಗೆ ತಂಬಾಕು ಸೇದಬೇಕಾಗಿದೆ.' ಎಂದನು. ಈ ಅಪಮಾನವು ಅಸಹ್ಯ ವಿತ್ತು. ಗಾಂಧೀಜಿಯವರು, 'ಒಳಗೆ ಕೂಡುವುದು ನನ್ನ ಹಕ್ಕು. ನೀನು ಹೇಳಿದ್ದರಿಂದ ಇಲ್ಲಿ ಕುಳಿತೆನು. ಈಗ ನೀನು ತಂಬಾಕ ಸೇದ ಬೇಕಾದ್ದರಿಂದ ಈ ಸ್ಥಳವೂ ಬೇಕಾಯಿತೆ? ನಾನು ಒಳಗೆ ಕೂಡ

ಬಹುದು ಆದರೆ ಬೇರೆ ಯಾವ ಸ್ಥಳದ ಸಲುವಾಗಿಯೂ ನಾನು ಈ ಸ್ಥಳವನ್ನು ಬಿಡಲಾರೆ.' ಎಂದರು. ಆಯ್ತು, ಇಷ್ಟು ಅನ್ನುವುದೊಂದೇ ತಡ, ಅವನು ಇವರಿಗೆ ಒಂದು ತಪರಾಕಿ ಕೊಟ್ಟನು. ಇವರ ಕೈ ಹಿಡಿದು ಇವರನ್ನು ಕೆಳಗೆ ಎಳೆಯಲೆತ್ನಿಸಿದನು. ಗಾಂಧೀಜಿಯವರೂ ಗಾಡಿಯನ್ನು ಹಿಡಿದುಕೊಂಡು ತಮ್ಮ ಸ್ಥಳವನ್ನವಚಿಕೊಂಡು ಕುಳಿತರು.

ಇತರ ಪ್ರಯಾಣಿಕರು ಈ ಮೋಜನ್ನು ಸುಮ್ಮನೆ ನೋಡುತಿದ್ದರು. ಗಾಡಿಯ ಸಂಚಾಲಕನು ಇವರನ್ನು ಹೊಡೆಯುತಿದ್ದನು, ಬೈಯ್ಯುತಿದ್ದನು, ಎಳೆಯುತಿದ್ದನು. ಇವರು ಗಾಡಿಗೆ ಅಂಟಿಕೊಂಡಿದ್ದರು; ಆದರೆ ಶಾಂತರಿದ್ದರು. ಅವನು ಬಲಿಷ್ಠನಿದ್ದನು ಇವರು ದುರ್ಬಲರಿದ್ದರು. ಪ್ರವಾಸಿಗಳಿಗೆ ದಯೆ ಉಂಟಾಯಿತು. ಅವರಲ್ಲಿ ಒಬ್ಬನು ಅಂದದ್ದು, 'ತಮ್ಮಾ ಹೋಗಲಿ ಬಿಡು, ಆ ಬಡವನಿಗೆ ಏಕೆ ಹೊಡೆಯುತ್ತಿ?' ಅವನ ಸಿಟ್ಟೇನೂ ಕಡಿಮೆಯಾಗಲಿಲ್ಲ. ಆದರೆ ಕೊಂಚು ನಾಚಿಕೊಂಡನು. ಇವರನ್ನು ಅಲ್ಲಿಯೆ ಕೂಡಗೊಟ್ಟನು. ಗಾಡಿಯು ತನ್ನ ಮುಕ್ಕಾಮಿಗೆ ಮುಟ್ಟಿತು. ಅಲ್ಲಿಂದ ಗಾಂಧೀಜಿಯವರು ಮತ್ತೆ ರೇಲ ಹತ್ತಿದರು. ಅಲ್ಲಿ ಮತ್ತೆ ಅದೇ ಹಾಡು. ಗಾರ್ಡನು ಮೊದಲು ತಿಕೀಟು ಕೇಳಿದನು. ಆಮೇಲೆ 'ಏಳಿರಿ. ಮೂರನೆ ವರ್ಗಕ್ಕೆ ಹೋಗಿರಿ' ಎಂದನು. ಮತ್ತೆ ತಿಕ್ಕಾಟ ನಡೆಯಿತು. ಅಷ್ಟರಲ್ಲಿ ಒಬ್ಬ ಇಂಗ್ಲೀಷ ಪ್ರವಾಸಿಯು ನಡುವೆ ಬಿದ್ದು ಪ್ರಕರಣವನ್ನು ಶಾಂತಗೊಳಿಸಿದನು. ಇವರು ಪ್ರಿಟೋರಿಯಕ್ಕೆ ಸುಖರೂಪ ಮುಟ್ಟಿದರು.

ಗಾಂಧೀಜಿಯವರ ಮಟ್ಟಿಗೆ ಇದು ಸವಿನಯ ಆಜ್ಞಾಭಂಗದ ಮೊದಲನೆ ಪಾಠವು. ಅವರ ಈ ವೃತ್ತಿಯ ಪ್ರಥಮ ದರ್ಶನವು ಇಲ್ಲಿಯೆ ಆಗುವುದು ಎಂದು ಹೇಳಬಹುದು. ಇಂಥ ಪ್ರಸಂಗದಲ್ಲಿ ಈ ರೀತಿ ಮಾಡತಕ್ಕದ್ದೆಂದು ಅವರೇನು ನಿಶ್ಚಯ ಮಾಡಿಟ್ಟಿರಲಿಲ್ಲ. ಆದರೆ ಆಯಕಟ್ಟಿನ ಪ್ರಸಂಗ ಬಂದೊಡನೆ ಅವರ ವಿವೇಕಶಕ್ತಿಯು ಅವರಿಗೆ ಆಜ್ಞಾಭಂಗದ ಮಾರ್ಗವನ್ನು ತೋರಿಸಿತು ಹಾಗೂ ಅವರು ಆರೀತಿ ಮಾಡಿದರು. ಅವರು ಹೊಡೆತ ತಿಂದರು, ಆದರೆ ಹೊಡೆಯುವವನ

ಬಗ್ಗೆ ಅವರಲ್ಲಿ ಕ್ರೋಧ ಉಂಟಾಗಲಿಲ್ಲ. ಅವನ ಮೇಲೆ ಖಟ್ಲೇ ನಡೆಸುವ ಮನಸೂ ಆಗಲಿಲ್ಲ. ಈ ಪ್ರಕಾರ ಮೊದಲಿನ ಪ್ರಯೋಗವು ಸಫಲತೆಯಿಂದ ಸಮಾಪ್ತವಾಯಿತು.

ಚಿಕ್ಕದಾಗಿ ಕಾಣಿಸುವ ಅವರ ಈ ಪ್ರವೃತ್ತಿಯು ಮುಂದೆ ವಿಶಾಲವಾದ ಆಕಾರವನ್ನು ತಾಳಿತು. ಇದು ಬರೀ ಆಜ್ಞಾಭಂಗವಲ್ಲ. ಇದು 'ಸವಿನಯ' ವಿರುವುದು. ಈ ವಿನಯವು ಸತ್ಯಾಗ್ರಹದ ಒಂದು ಮುಖ್ಯ ಕರಾರು. ಗಾಂಧೀಜಿಯವರ ಮಟ್ಟಿಗೆ ಸತ್ಯಾಗ್ರಹವೆಂಬದೊಂದು ಕೇವಲ ರಾಜಕೀಯ ಶಸ್ತ್ರವಲ್ಲ. ಅವರ ದೃಷ್ಟಿಯಿಂದ ಆದಿಯಿಂದ ಅಂತ್ಯದವರೆಗೆ ಅದು ಧಾರ್ಮಿಕ ಶಸ್ತ್ರವು. ಅದನ್ನು ಅವರು ರಾಜಕಾರಣದಲ್ಲಿ, ಮನೆಯಲ್ಲಿ, ಮಠದಲ್ಲಿ, ಪ್ರತಿ ಪ್ರಸಂಗದಲ್ಲಿ, ಪ್ರತಿ ಪರಿಸ್ಥಿತಿಯಲ್ಲಿ ಉಪಯೋಗಿಸುವರು.

ಕಸ್ತೂರಬಾ ಇವರಿಗೆ ಒಮ್ಮೆ ಜಡ್ಡಾಯಿತು. ಸಾಮಾನ್ಯ ಚಿಕಿತ್ಸೆಯಿಂದ ಗುಣವಾಗಲಿಲ್ಲ. ಗಾಂಧೀಜಿಯವರು ಜಲಚಿಕಿತ್ಸೆ ಹಾಗೂ ನಿಸರ್ಗ ಚಿಕಿತ್ಸೆಯನ್ನು ಪ್ರಾರಂಭಿಸಿದರು. ಉಪ್ಪು ಬೇಳೆಗಳನ್ನು ಬಿಟ್ಟುಬಿಡಬೇಕೆಂದು ಗಾಂಧೀಜಿಯವರ ಅಭಿಪ್ರಾಯವಾಯಿತು. ಆದರೆ ಕಸ್ತೂರಬಾ ಇವರಿಗೆ ಅದು ಸರಿದೋರಲಿಲ್ಲ. ಒಂದು ದಿನ ಚರ್ಚೆ ನಡೆದಾಗ ಬಾ ಇವರು ಅಂದದ್ದು, 'ನಿಮಗೆ ಉಪ್ಪು ಬೇಳೆ ಬಿಡಲು ಹೇಳಿದರೆ ನೀವು ಸಹ ಬಿಡಲು ಸಾಧ್ಯವಾಗಲಿಕ್ಕಿಲ್ಲ.' 'ಇದು ನಿನ್ನ ತಪ್ಪು ತಿಳಿವಳಿಕೆ. ನನಗೆ ಜಡ್ಡಾದರೆ ಮತ್ತು ಡಾಕ್ತರರು ನನಗೆ ಆ ವಸ್ತುಗಳನ್ನು ಬಿಡಹೇಳಿದರೆ ನಾನು ಅವಶ್ಯ ಬಿಟ್ಟುಬಿಡುವೆನು. ಈಗ ನೀನು ಬಿಟ್ಟರೂ ಸೈ ಬಿಡದಿದ್ದರೂ ಸೈ, ನಾನು ಈಗಲೆ ಒಂದು ವರ್ಷದಮಟ್ಟಿಗೆ ಅವುಗಳನ್ನು ಬಿಟ್ಟುಬಿಡುವೆನು,' ಎಂದರು. ಪಾಪ, ಬಾ ಗಾಬರಿಗೊಂಡಳು, ಈ ಆಪತ್ತನ್ನು ತಾನೇ ಕರೆತಂದಂತಾಯಿತು. 'ನಾನು ಅವುಗಳನ್ನು ಬಿಡುವೆನು, ನೀವು ಮಾತ್ರ ಬಿಡಬೇಡಿ' ಎಂದಳು. ಆದರೆ ಗಾಂಧೀಜಿಯವರು ಆಡುತ್ತಾಡುತ್ತ ಪ್ರತಿಜ್ಞೆ ಮಾಡಿಬಿಟ್ಟಿದ್ದರು. ಅದರಿಂದ ಅವರು ಚ್ಯುತರಾಗುವುದು ಅಸಾಧ್ಯ. ಬಾ

ಇವರೂ ಮುಂದೆ ಸಮಾಧಾನ ಹಚ್ಚಿಕೊಂಡರು. ಈ ಸಂಗತಿ ಬಗ್ಗೆ ಹೇಳುವಾಗ ಗಾಂಧೀಜಿಯುವರು ಅಂದದ್ದು, ' ಈ ಸತ್ಯಾಗ್ರಹವು ನನ್ನ ಜೀವನಸ್ಮೃತಿಗಳಲ್ಲಿ ಎಲ್ಲಕ್ಕೂ ಹೆಚ್ಚು ಸಂತೋಷಕಾರಕವೆಂದು ನಾನು ತಿಳಿಯುವೆನು.'

ಈ ಎರಡು ಘಟನೆಗಳು ಗಾಂಧೀಜಿಯುವರ ಶುದ್ಧ ಸತ್ಯಾಗ್ರಹದ ರೀತಿನೀತಿಗಳ ರೂಪರೇಖೆಯನ್ನು ನಮ್ಮೆದುರು ಮಂಡಿಸುವವು. ತಮ್ಮ ಮೇಲೆ ಸಿಟ್ಟಿಗೆದ್ದ ಒಬ್ಬ ಅಪರಿಚಿತ ಅಜ್ಞಾನಿ ಗೃಹಸ್ಥನ ಸಂಬಂಧದಲ್ಲಿ ಒಂದು ಘಟನೆ ಸಂಭವಿಸಿತು. ಇನ್ನೊಂದು ತನ್ನ ಸ್ವಾಸ್ಥ್ಯಕ್ಕಿಂತ ನಾಲಿಗೆಯ ರುಚಿಗೆ ಹೆಚ್ಚು ಮಹತ್ವ ಕೊಡುವ ನಿಕಟ ಸಂಬಂಧಿಕರ ವಿಷಯದಲ್ಲಿ ಸಂಭವಿಸಿತು. ಆದರೆ ಆ ಅವರ ಭಾವನೆಯು ಎರಡೂ ಸಂದರ್ಭಗಳಲ್ಲಿ ಒಂದೇ ರೀತಿ ಕೆಲಸ ಮಾಡಿತು. ಎರಡರಲ್ಲಿಯೂ ಹೃದಯಪರಿವರ್ತನದ ಇಚ್ಛೆ ತೋರುತಿದೆ, ಸ್ವ-ಇಚ್ಛೆಯಿಂದ ಕಷ್ಟ ಸಹನ ಮಾಡುವ ನೀತಿ ಸ್ಪಷ್ಟವಿದೆ, ಕ್ರೋಧ ಆವೇಶಗಳ ಅಭಾವವಿದೆ. ಈ ಎರಡು ಘಟನೆಗಳ ಒಳ್ಳೆ ಅಭ್ಯಾಸಮಾಡಿ ನೋಡಿದರೆ, ಮುಂದಿನ ದೊಡ್ಡ ದೊಡ್ಡ ರಾಜಕೀಯ ಹೋರಾಟಗಳಲ್ಲಿ ಕೂಡ ಇಲ್ಲಿ ಕಂಡು ಬಂದ ಭಾವನೆಗಳೆ, ಈ ವೃತ್ತಿಯೆ ಇರುವುದೆಂಬುದು ಪ್ರತೀತವಾಗುವುದು—ಅಕ್ರೋಧದಿಂದ ಕ್ರೋಧವನ್ನು ಗೆದೆಯುವುದು, ಸ್ವತಃ ಕಷ್ಟ ಸಹನ ಮಾಡಿ ಇತರರ ಸದ್ಭಾವನೆಗಳನ್ನು ಜಾಗ್ರತಗೊಳಿಸುವುದು, ಇವೇ ದೃಗ್ಗೋಚರವಾಗುವವು. ಇವರು ಜೀವನದ ಎಲ್ಲ ಕ್ರಿಯೆಗಳಲ್ಲಿಯೂ ಸತ್ಯಾಗ್ರಹ ಶಸ್ತ್ರವನ್ನು ಉಪಯೋಗಿಸಿರುವರು. ಆದರೆ ರಾಜಕೀಯ ಕ್ಷೇತ್ರದಲ್ಲಿ ಇದರ ಉಪಯೋಗ ಮಾಡಿದ್ದರಿಂದ ಇದಕ್ಕೆ ಹೆಚ್ಚು ಖ್ಯಾತಿಯುಂಟಾಯಿತು. ಆದುದರಿಂದ ಸತ್ಯಾಗ್ರಹ ನೀತಿಯು ಚನ್ನಾಗಿ ತಿಳಿಯಬೇಕಾದರೆ ಹಲವು ರಾಜಕೀಯ ಘಟನೆಗಳ ಸಿಂಹಾವಲೋಕನವು ಹೆಚ್ಚು ಸಹಾಯಕವಾಗಬಹುದು.

ಸರಕಾರದೊಡನೆ ಗಾಂಧೀಜಿಯುವರು ಎಷ್ಟೋಸಾರೆ ಹೋರಾಡಿರುವರು ಹಾಗೂ ಎಷ್ಟೋ ಸಾರೆ ತಿಕ್ಕಾಡಿರುವರು. ಈ ಎಲ್ಲ

ಹೋರಾಟ ತಿಕ್ಕಾಟಗಳಲ್ಲಿ ಸತ್ಯಾಗ್ರಹದ ಛಾಯೆ ಕಂಡೇ ಕಾಣುವುದು. ಆದರೆ ೧೯೧೪-೧೮ ರಲ್ಲಿ ಆಗಿಹೋದ ಯುರೋಪೀಯ ಮಹಾಯುದ್ಧ, ಅದೇ ಅವಧಿಯಲ್ಲಿ ಹೂಡಲಾದ ಚಂಪಾರಣ್ಯದ ಸತ್ಯಾಗ್ರಹ, ಮತ್ತು ಈಗಿನ ಮಹಾಯುದ್ಧ ಈ ಮೂರು ಪ್ರಕರಣಗಳು ಇವರು ಸ್ವದೇಶಕ್ಕೆ ಬಂದಬಳಿಕ ಆದವುಗಳು. ಇವುಗಳಲ್ಲಿ ಇವರ ಶುದ್ಧ ಸತ್ಯಾಗ್ರಹದ ದಿಗ್ದರ್ಶನವಾಗುವುದು. ಆಫ್ರಿಕೆಯಲ್ಲಿ ನಡೆದ ಸತ್ಯಾಗ್ರಹವು ಇವರ ಅಖಂಡ ನಾಯಕತ್ವದಲ್ಲಿಯೆ ನಡೆಯಿತು. ಅಲ್ಲಿಯೂ ಶುದ್ಧ ಸತ್ಯಾಗ್ರಹದ ನೀತಿಯೆ ಅನುಸರಿಸಲಾಯಿತು. ೧೯೨೦-೨೨ ಹಾಗೂ ೧೯೩೦-೩೨ ಈ ಹೋರಾಟಗಳು ವಿಸ್ತೃತವಾದವುಗಳು. ಅವುಗಳ ಅಧಿನಾಯಕತ್ವವು ಇವರದಿದ್ದರೂ ಆ ಸತ್ಯಾಗ್ರಹಗಳು ಬಹು ಜನರಲ್ಲಿ ಪಸರಿಸಿಕೊಂಡವು. ಅದರ ಪರಿಣಾಮವೇನಂದರೆ, ಆ ಸತ್ಯಾಗ್ರಹಗಳು ಪೂರ್ಣಾಂಶದಿಂದ ಸತ್ಯಾಗ್ರಹವೆಂದು ಉಳಿಯಲಿಲ್ಲ. ಆ ಹೋರಾಟಗಳಲ್ಲಿ ಸತ್ಯಾಗ್ರಹದೊಡನೆ ದುರಾಗ್ರಹವೂ ಕೂಡಿಕೊಂಡಿತು.

ಜನರು ಶರೀರತಃ ಯಾವ ಹಿಂಸೆಯನ್ನೂ ಮಾಡಲಿಲ್ಲ ಎಂಬುದು ನಿಜ. ಆದರೆ ಹಲವರ ಮಾತಿನಲ್ಲಿ ಹಾಗೂ ಮನಸ್ಸಿನಲ್ಲಿ ಸಾಕಷ್ಟು ದ್ವೇಷ ತುಂಬಿತ್ತು.

ಹಲವು ವರ್ಷಗಳಾಚೆ ಇಟಲಿ ಮತ್ತು ತುರ್ಕಸ್ಥಾನದ ನಡುವೆ ಯುದ್ಧವು ಪ್ರಾರಂಭವಾದಾಗ ಅಕಬರ ಕವಿಯು ಬರೆದುದೇನಂದರೆ,

**ನ ಸೀನೇ ಮೇ ಜೋರ ಹೈ ನ ಬಾಜೂ ಮೇ ಬಲ**
**ಕಿ ಟರ್ಕಿ ಕೇ ದುಶ್ಮನ ಸೇ ಜಾಕರ ಲಡೇ;**
**ತಹೆದಿಲ್ ಸೇ ಹಮ ಕೋಸತೇ ಹೈ ಮಗರ**
**ಕಿ ಇಟಲೀ ಕೀ ತೋಪೋ ಮೇ ಕೀಡೆ ಪಡೇ.**

ತುರ್ಕಸ್ತಾನದ ಶತ್ರುವಿನೊಡನೆ (ಇಟಲಿ) ಹೋರಾಡಬೇಕೆಂದರೆ ನಮ್ಮ ಎದೆ ಗಟ್ಟಿಲ್ಲ, ನಮ್ಮ ಬಾಹುಗಳಲ್ಲಿ ಬಲವಿಲ್ಲ. ಆದುದರಿಂದ ನಾವು, ಇಟಲಿಯ ತೋಪುಗಳಲ್ಲಿ ಹುಳ ಬೀಳಲಿ, ಎಂದು ಮನಃಪೂರ್ವಕವಾಗಿ ಶಪಿಸುವೆವು !

ಸ್ವಲ್ಪ ಹೆಚ್ಚು ಕಡಿಮೆ ಮಾಡಿದರೆ ಈ ಮಾತುಗಳು ಅನ್ವಯಿಸುವಂಥ ಅನೇಕ ಸತ್ಯಾಗ್ರಹಿಗಳು ಆಗ ಆ ಹೋರಾಟದಲ್ಲಿ ಸೇರಿದ್ದರು. 'ಇಂಗ್ಲಂಡಕೇ ಫೇಫಡೋ ಮೇ ಕೀಡೋ ಪಡೆ' (ಇಂಗ್ಲಂಡದ ಫುಪ್ಪುಸಗಳಲ್ಲಿ ಹುಳ ಬೀಳಲಿ) ಹೀಗೆ ಅನ್ನಬಹುದಾದವರ ಸಂಖ್ಯೆಯೂ ಕಡಿಮೆ ಇರಲಿಲ್ಲ. ಆದರೆ ಹೋದ ಹಾಗೂ ವರ್ತಮಾನ ಮಹಾಯುದ್ಧಗಳ ವಿಷಯದಲ್ಲಿ ಗಾಂಧೀಜಿಯವರು ಸ್ವೀಕರಿಸಿದ ನೀತಿಯು ಶುದ್ಧ ಸತ್ಯಾಗ್ರಹಿಯ ನೀತಿ ಎಂದು ಹೇಳಬಹುದು.

# ೧೩. ಗಾಂಧೀಜಿಯವರ ಯುದ್ಧ-ನೀತಿ

ಹೋದ ಮಹಾಯುದ್ಧ ಹಾಗೂ ಈಗ ನಡೆದ ಮಹಾಯುದ್ಧ ಈ ಎರಡೂ ಜಗತ್ತಿನಲ್ಲಿಯ ಬಹಳ ದೊಡ್ಡ ಘಟನೆಗಳು. ಪ್ರಪಂಚದ ಪ್ರತಿಯೊಂದು ಚಟುವಟಿಕೆಯ ಮೇಲೆ ಅವುಗಳ ಪರಿಣಾಮವಾಗಿದೆ, ಮುಂದಾದರೂ ಆಗುವುದು. ನಿಜವಾಗಿ ನೋಡಿದರೆ ಹೋದ ಮಹಾ-ಯುದ್ಧವೆ ಈ ಯುದ್ಧದ ಕಾರಣವೆಂದು ಹೇಳಬಹುದು. ಈ ಎರಡೂ ಯುದ್ಧಗಳೆಂದರೆ ಪ್ರಪಂಚಕ್ಕೆ ಒಡಕೊಂಡ ಮಹಾರೋಗದ ಬಾಹ್ಯ ಚಿನ್ಹ ಮಾತ್ರ. ಆ ರೋಗವು ಇನ್ನೂ ಬೇರೆಯೆ ಇದೆ. ಭೂಗರ್ಭ ದಲ್ಲಿ ನಡೆಯುತಿರುವ ಅಲ್ಲೋಲ ಕಲ್ಲೋಲವು ಭೂಕಂಪವಾದಾಗಲೆ ನಮಗೆ ದೃಗ್ಗೋಚರವಾಗುವಂತೆ ಮಾನವೀ ಸಮಾಜದಲ್ಲಿ ಬೆಳೆಯು ತಿರುವ ಕ್ಷೋಭದ ಅಗ್ನಿಯು ಈ ಯುದ್ಧವಾದಾಗಲೆ ನಮ್ಮ ಕಣ್ಣಿಗೆ ಬಿದ್ದಿತು. ಹೋದ ಯುದ್ಧವು ಒಂದು ಬಗೆಯ ಭೂಕಂಪವೆ ಆಗಿತ್ತು. ಅಮೇರಿಕೆಯ ಪ್ರೆಸಿಡೆಂಟ ವಿಲ್‌ಸನ್ನರು ಅದರ ನಿದಾನವನ್ನು ಕಟ್ಟಿದರು. ಇಂಗ್ಲಂಡದ ಆಗಿನ ಪ್ರಧಾನ ಮಂತ್ರಿಗಳಾದ ಲಾಯಿಡ್ ಜಾರ್ಜರಿಗೂ ಪರಿಸ್ಥಿತಿಯ ಸ್ಪಷ್ಟ ಜ್ಞಾನವಾಯಿತು. ಆದರೆ ಅವರ ಮನೋದೌರ್ಬಲ್ಯವು ಅವರನ್ನು ಅಸಹಾಯರನ್ನಾಗಿ ಮಾಡಿತು. ವಿಜಯ ಮದದ ಮೂಲಕ ಇವರು ರೋಗವನ್ನು ಮರೆತುಬಿಟ್ಟರು. ಪೂರ್ಣ ರೋಗಚಿಕಿತ್ಸೆಯನ್ನು ಮಾಡಹೋಗದೆ ಅದರ ಬಾಹ್ಯ ಲಕ್ಷಣ ಗಳನ್ನಷ್ಟೆ ಅಳಿಸಲೆತ್ನಿಸಿದರು. ಪರಿಣಾಮತಃ ಮಾನವ ಸಮಾಜದಲ್ಲಿ ಪುನಃ ಒಂದು ಭಯಂಕರವಾದ ಸ್ಫೋಟವಾದಂತೆ ಈ ಯುದ್ಧ ಪ್ರಾರಂಭಿಸಿತು. ಇದರ ನೋಪಿನಿಂದ ಈಗ ಪ್ರಪಂಚದ ರಾಷ್ಟ್ರಗಳಲ್ಲಿ ವ್ಯಾಕುಲವಾಗಿ ನರಳುತ್ತಿವೆ.

ಈ ಎರಡೂ ಯುದ್ಧಗಳಲ್ಲಿ ಗಾಂಧೀಜಿಯವರು ಯಾವ ವೃತ್ತಿಯನ್ನು ತಾಳಿ, ಏನು ಮಾಡಿದರು, ಇದು ನೋಡತಕ್ಕ ವಿಷಯವಾಗಿದೆ. ಗಾಂಧೀಜಿಯವರ ರಾಜಕಾರಣದಲ್ಲಿ ಯಾವಾಗಲೂ ಧರ್ಮದೃಷ್ಟಿಯೆ ಪ್ರಧಾನವಾಗಿರುತ್ತದೆ. ಈ ಶತಮಾನದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಈ ಎರಡು ಮಹಾಯುದ್ಧಕ್ಕಿಂತ ಹೆಚ್ಚಿನ ಪ್ರಕರಣಗಳಾವೂ ಆಗಿಲ್ಲ. ಈ ಎರಡೂ ಪ್ರಕರಣಗಳಲ್ಲಿ ಗಾಂಧೀಜಿಯವರು ರಾಜನೀತಿ ಧರ್ಮ-ನೀತಿಗಳ ಸಮನ್ವಯವನ್ನು ಹೇಗೆ ಮಾಡಿದರು ಇದು ಚನ್ನಾಗಿ ಸಮಾಲೋಚಿಸುವ ವಿಷಯವಾಗಬಲ್ಲದು. ಈ ಸಂದರ್ಭಗಳಲ್ಲಿ ಅವರು ಕೈಕೊಂಡ ಧೋರಣವು ಅವರ ವ್ಯಕ್ತಿತ್ವದ ಜ್ಞಾನಮಾಡಿ ಕೊಡಲು ಬಹಳ ಉಪಯುಕ್ತವಾಗಿದೆ. ಪ್ರಥಮ ಮಹಾಯುದ್ಧದ ನಂತರ ಗಾಂಧೀಜಿಯವರ ನೀತಿಯಲ್ಲಿ ಒಂದು ಮಹತ್ವದ ಬದಲಾವಣೆ ಆದುದು ನಿಜ. ಬ್ರಿಟಿಶ ರಾಜ್ಯಶಾಸನದಲ್ಲಿ ಇದ್ದ ಅವರ ವಿಶ್ವಾಸವು ಪೂರ್ಣ ಅಳಿದು ಹೋಯಿತು. ಆ ವಿಶ್ವಾಸವು ಹಾರಿಹೋಗುವ ಪೂರ್ವದಲ್ಲಿ ಅವರ ಮೇಲೆ ದೊಡ್ಡ ಆಘಾತಗಳಾದವು. ಆ ಆಘಾತಗಳ ಮೂಲಕವೆ ಆ ವಿಶ್ವಾಸದ ತಳಹದಿಯು ಸಡಿಲಾಗಿ ಕುಸಿಬಿದ್ದಿತು.

‘ ಬ್ರಿಟಿಶ ರಾಜ್ಯಶಾಸನದಲ್ಲಿದ್ದ ನನ್ನ ವಿಶ್ವಾಸದಷ್ಟು ವಿಶ್ವಾಸವು ಇನ್ನಾರದೂ ಇರುವುದು ಸಾಧ್ಯವಿಲ್ಲ. ಈಗ ನಾನು ವಿಚಾರಿಸಲಾಗಿ ಆ ವಿಶ್ವಾಸದ ಮೂಲದಲ್ಲಿ ನನ್ನ ಸತ್ಯಪ್ರಿಯತೆಯೆ ಇತ್ತೆಂದು ನನಗೆ ತೋರಿಬಂದಿದೆ. ಬ್ರಿಟಿಶ ಶಾಸನದ ದುರ್ಗುಣಗಳು ನನಗೆ ಗೊತ್ತಿರಲಿಲ್ಲವೆಂದಲ್ಲ. ಆದರೆ ಗುಣಾವಗುಣಗಳ ಜಮಾ ಖರ್ಚು ಮಾಡಿ ನೋಡಿದರೆ ಬ್ರಿಟಿಶ ಶಾಸನ ಪದ್ಧತಿಯಲ್ಲಿ ಗುಣವೇ ಹೆಚ್ಚೆಂದು ನನ್ನ ಭಾವನೆಯಾಗಿತ್ತು. ಆಫ್ರಿಕೆಯಲ್ಲಿ ನಾನು ಅನುಭವಿಸಿದ ವರ್ಣ-ಭೇದವು ಬ್ರಿಟಿಶರ ಸ್ವಭಾವಕ್ಕೆ ವಿರುದ್ಧವಾದುದು ಎಂದು ನನಗೆ ತೋರುತಿತ್ತು. ಅದು ಕೇವಲ ಸ್ಥಾನಿಕವಾದುದು ಹಾಗೂ ತಾತ್ಪೂರ್ತಿಕವಾದುದು ಎಂದು ನಾನು ತಿಳಿದಿದ್ದೆನು. ಆದುದರಿಂದ ರಾಜ ಕುಟುಂಬದ ಬಗ್ಗೆ ಆದರವನ್ನು ವ್ಯಕ್ತಮಾಡುವ ವಿಷಯದಲ್ಲಿ ನಾನು ಎಲ್ಲ ಇಂಗ್ಲಿಷರಿಗಿಂತ ಹೆಚ್ಚು ಮುಂದೆ ಹೋಗುತಿದ್ದೆನು. ಆದರೆ

ಈ ರಾಜಭಕ್ತಿಯಿಂದ ನಾನು ಎಂದೂ ಯಾವ ಸ್ವಾರ್ಥವನ್ನೂ ಸಾಧಿಸಲಿಲ್ಲ. ಆ ನನ್ನ ರಾಜಭಕ್ತಿಯಿಂದ ನಾನು ಒಂದು ಋಣವನ್ನು ತೀರಿಸುತ್ತಿದ್ದೆನೆಂದು ನನ್ನ ಭಾವನೆ'.

ಇವು ಗಾಂಧೀಜಿಯುವರ ಪೂರ್ವಭಾವನೆಗಳು. ಮುಂದೆ ಇವರು ಸರಕಾರದವರನ್ನು ಕುರಿತು 'ಸೈತಾನಿ' ಎಂಬ ಶಬ್ದ ಪ್ರಯೋಗವನ್ನು ಮಾಡಲಾರಂಭಿಸುವಷ್ಟರಲ್ಲಿ ಇವರ ವಿಚಾರಗಳಲ್ಲಿ ಪರಿವರ್ತನವಾಗಿತ್ತು. ಸರಕಾರವು 'ಸೈತಾನಿ' ಆದರೂ ಇವರ ಕಾರ್ಯಪದ್ಧತಿಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಯಾಕಂದರೆ ಸೈತಾನನೊಡನೆಯೂ ಇವರ ಹಗೆತನವಿಲ್ಲ! ನಾನು ಒಮ್ಮೆ ಅವರಿಗೆ ಅಂದದ್ದು, 'ಕ್ಷ ಎಂಬ ಮನುಷ್ಯನು ಬಲು ದುಷ್ಟನು. ಅವನನ್ನು ನೀವು ನಿಮ್ಮ ಬಳಿ ಏಕೆ ಇಟ್ಟುಕೊಳ್ಳುವಿರಿ? ಗಾಂಧೀಜಿಯುವರು ಉತ್ತರಿಸಿದ್ದು, 'ಸೈತಾನನು ಕೂಡ ನನ್ನ ಬಳಿ ಕೂಡಬೇಕೆಂದು ನನ್ನ ಇಚ್ಛೆ. ಆದರೆ ನನ್ನೊಡನೆ ಇರುವುದು ಅವನಿಗೆ ಇಷ್ಟವಿಲ್ಲ'. ಅವರ ರಾಜಭಕ್ತಿ ಮಾಯವಾದುದು ನಿಜ, ಆದರೆ ರಾಜ್ಯ ನಡೆಸುವವರ ಹೃದಯಪರಿವರ್ತನೆ ಮಾಡಬೇಕೆಂಬ ಅವರ ಹಂಬಲ ಅಳಿಯಲಿಲ್ಲ. ಋಣವನ್ನು ಕೊಟ್ಟ ಯಾವ ಸ್ವರಾಜ್ಯವನ್ನು ಅವರು ದೊರಕಿಸಬೇಕೆಂದಿದ್ದರೊ, ಅದನ್ನು ಈಗ ಹೃದಯಪರಿವರ್ತನೆಯಿಂದ ಪ್ರಾಪ್ತಮಾಡಿಕೊಳ್ಳಬೇಕೆಂದು ಪ್ರಯತ್ನಿಸಲಾರಂಭಿಸಿರುವರು. ಆದರೆ ಸ್ವತಃ ಕಷ್ಟಪಡಬೇಕೆಂಬ ಅವರ ನೀತಿ ಹಾಗೂ ತತ್ಸಮವಾದ ಅನ್ಯ ಕಾರ್ಯ ಪದ್ಧತಿಗಳು ಇದ್ದಕ್ಕಿದ್ದ ಹಾಗೆಯೆ ಇವೆ.

೪-೮-೧೪ ನೆ ದಿನ ಹೋದ ಮಹಾಯುದ್ಧದ ಘೋಷಣೆ ಯಾಯಿತು. ಆರನೆ ತಾರೀಖಿನ ದಿನ ಗಾಂಧೀಜಿಯುವರು ಆಫ್ರಿಕೆಯಿಂದ ತೆರಳಿ ಇಂಗ್ಲಂಡದಲ್ಲಿ ಕಾಲಿಟ್ಟರು. ಲಂಡನಕ್ಕೆ ಮುಟ್ಟಿದೊಡನೆ ತಮ್ಮ ಕರ್ತವ್ಯದತ್ತ ಅವರ ಮನಸು ಹರಿಯಿತು. ಆಗ ಇಂಗ್ಲಂಡದಲ್ಲಿ ಅವರ ಹಲವು ಭಾರತೀಯ ಮಿತ್ರರಿರುತಿದ್ದರು. ಅವರದೊಂದು ಸಣ್ಣ ಸಭೆ ಕರೆದು ಆಗಿನ ಕರ್ತವ್ಯದ ಬಗ್ಗೆ ತಮ್ಮ ವಿಚಾರಗಳನ್ನು

ಅವರ ಮುಂದೆ ಮಂಡಿಸಿದರು. ಇಂಗ್ಲಂಡದಲ್ಲಿದ್ದ ಹಿಂದೀಯರು ತಮ್ಮ ಕೈಲಾದಮಟ್ಟಿಗೆ ಸಹಾಯ ಮಾಡಿ ತಮ್ಮ ಕರ್ತವ್ಯಪಾಲನೆ ಮಾಡಬೇಕೆಂದು ಅವರ ಅಭಿಪ್ರಾಯ. ಇಂಗ್ಲೀಷ ವಿದ್ಯಾರ್ಥಿಗಳು ಸೈನ್ಯದಲ್ಲಿ ಸೇರಲಾರಂಭಿಸಿದ್ದರು. ಅಲ್ಲಿದ್ದ ಭಾರತೀಯ ವಿದ್ಯಾರ್ಥಿಗಳೂ ಹಾಗೆ ಮಾಡಬೇಕು, ಎಂದು ಅವರ ಅಂಬೋಣ. 'ನಮ್ಮಿಬ್ಬರ ಸ್ಥಿತಿಯಲ್ಲಿ ಸಾಮ್ಯವೇನು ? ಇಂಗ್ಲೀಷರು ಮಾಲಕರು, ನಾವು ಗುಲಾಮರು. ಗುಲಾಮರು ಏಕೆ ಸಹಕರಿಸಬೇಕು ? ಗುಲಾಮರು ಸ್ವತಂತ್ರರಾಗಬೇಕಾದರೆ ತಮ್ಮ ಮಾಲಕನ ಸಂಕಟವೆ ಅವರಿಗೆ ಉತ್ತಮ ಸಂಧಿ' ಹೀಗೊಂದು ವಿಚಾರಸರಣಿ ಇತ್ತು. ಆದರೆ ಇದರಿಂದ ಗಾಂಧಿಯವರ ಮನಸು ಕದಲಲಿಲ್ಲ. ಈ ಪ್ರಕಾರದ ವಿಚಾರವು ಈಗ್ಯೂ ಅವರ ಮನಸಿನ ಮೇಲೆ ಯಾವ ಪರಿಣಾಮವನ್ನು ಉಂಟು ಮಾಡುವುದಿಲ್ಲ.

'ನನಗೆ ಇಂಗ್ಲೀಷರು ಹಾಗೂ ಹಿಂದೀಯರು ಇವರಿಬ್ಬರ ಸ್ಥಿತಿಭೇದವು ಚನ್ನಾಗಿ ಗೊತ್ತಿತ್ತು. ಆದರೆ ನಾವು ತೀರ ಗುಲಾಮರ ಸ್ಥಿತಿಗೆ ಮುಟ್ಟಿದ್ದೇವೆಂದು ನಾನು ತಿಳಿದಿರಲಿಲ್ಲ. ಇದು ಬ್ರಿಟಿಶ ಶಾಸನ ಪದ್ಧತಿಯ ದೋಷವಲ್ಲ, ಅಧಿಕಾರಿಗಳ ದೋಷವೆಂದು ನಾನು ನಂಬಿದ್ದೆನು. ಇದನ್ನು ಪ್ರೇಮದಿಂದ ಬದಲಾಯಿಸುವುದು ಸಾಧ್ಯವೆಂದು ನಾನು ನಂಬಿದ್ದೆನು. ನಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕೆಂಬ ಆಶೆ ನಮ್ಮಲ್ಲಿದ್ದರೆ ಅವರ ಸಂಕಟಕಾಲದಲ್ಲಿ ಅವರಿಗೆ ಸಹಾಯಮಾಡಿ ನಾವು ಅವರ ಹೃದಯಪಲ್ಲಟ ಮಾಡುವುದು ನಮ್ಮ ಕರ್ತವ್ಯವು'

ಗಾಂಧೀಜಿಯವರ ವಿಚಾರಗಳು ಹೀಗಿದ್ದರೂ ಅವರ ವಿರೋಧೀ ಮಿತ್ರರು ಬ್ರಿಟಿಶ ರಾಜ್ಯ ಶಾಸನದಲ್ಲಿ ಅವರಷ್ಟು ವಿಶ್ವಾಸವುಳ್ಳವರಾಗಿರಲಿಲ್ಲ. ಆದುದರಿಂದ ಅವರು ಸಹಕರಿಸಲು ಉತ್ಸುಕರಿದ್ದಿಲ್ಲ. ಈ ಹೊತ್ತು ಗಾಂಧೀಜಿಯವರ ವಿಶ್ವಾಸವೂ ಹಾರಿಹೋಗಿದೆ. ಆದುದರಿಂದ ಅವರು ಸಹಕಾರ ಮಾಡಿಲ್ಲ. ಆದರೆ 'ಇಂಗ್ಲಿಷರ ಸಂಕಟವೆ

ನಮ್ಮ ಸುಸಂಧಿ' ಎಂಬ ವಿಚಾರಸರಣಿಯನ್ನು ಅವರು ಈಗ್ಯೂ ಸ್ವೀಕರಿಸುವುದಿಲ್ಲ. ನಮ್ಮ ಬೇಡಿಕೆಗಳನ್ನು ಈಗ ನಾವು ಮಂಡಿಸ ಬೇಕೆಂದು ಅವರ ಮಿತ್ರರು ಆ ಸಮಯದಲ್ಲಿ ಅಂದರು. ಗಾಂಧೀಜಿ ಯವರು ಅಂದದ್ದು, 'ಯುದ್ಧದನಂತರ ನಮ್ಮ ಬೇಡಿಕೆಗಳನ್ನು ಅವರೆದುರು ಇಡುವುದು ಹೆಚ್ಚು ಸರಿಯಾಗುವುದು ಹಾಗೂ ಜಾಣತನ ದ್ದಾಗುವುದು.' ಈ ಸಾರೆ ಕಾಂಗ್ರೆಸ್ಸಿನ ಮುಖಾಂತರ ಬೇಡಿಕೆಗಳು ಆಗಲೆ ಮಂಡಿಸಲಾಗಿವೆ. ಆದರೂ ಇಂಗ್ಲೀಷರ ಸಂಕಟದ ಚಿಂತೆ ಯಿಂದ ಗಾಂಧೀಜಿಯವರು ಮುಕ್ತರಿಲ್ಲ. ಅವರಿಗೆ ಯಾವದೇಬಗೆಯ ತೊಂದರೆಯನ್ನುಂಟುಮಾಡುವುದು ಗಾಂಧೀಜಿಯವರಿಗೆ ಇಷ್ಟವಿಲ್ಲ. ಪ್ರಥಮ ಹಾಗೂ ದ್ವಿತೀಯ ಯುದ್ಧಗಳ ಸಂಬಂಧದಿಂದ ಇವರ ಮನೋ ವೃತ್ತಿಯಲ್ಲಿದ್ದ ಈ ಸೂಕ್ಷ್ಮ ಸಾದೃಶ್ಯವು ಅಧ್ಯಯನಯೋಗ್ಯ ವಿರುವುದು.

ಆಗ ಕೊನೆಗೆ ಲಂಡನದಲ್ಲಿ ಒಂದು ಸ್ವಯಂಸೇವಕದಲವು ನಿರ್ಮಾಣ ಮಾಡಲಾಯಿತು. ಲಾರ್ಡ ಕ್ರ್ಯೂ ಇವರು ಆಗ ಭಾರತ ಮಂತ್ರಿಗಳಾಗಿದ್ದರು. ಬಹಳ ಚಿಕಿತ್ಸೆಯ ನಂತರ ಅವರು ಈ ದಲದ ಸೇವೆ ಸ್ವೀಕರಿಸಲು ಸಮ್ಮತಿಸಿದರು. ಆಗ ಸಹ ನಮ್ಮ ಬಗ್ಗೆ ಇಂಗ್ಲೀಷ ಜನರಲ್ಲಿ ಅವಿಶ್ವಾಸವಿತ್ತು. ಈಗ್ಯೂ ಅದೇ ಅವಿಶ್ವಾಸ ಇದ್ದಕ್ಕಿದ್ದ ಹಾಗೆ ಇದೆ.

ಬ್ರಿಟಿಶರಿಗೆ ಸಹಾಯ ಮಾಡುವಕುರಿತು ಗಾಂಧೀಜಿಯವರು ಒಂದು ಸ್ವಯಂಸೇವಕದಲವನ್ನು ನಿರ್ಮಿಸಿರುವರೆಂಬ ಸುದ್ದಿಯನ್ನು ಅವರ ಆಫ್ರಿಕೆಯಲ್ಲಿಯ ಜೊತೆಗಾರರು ಕೇಳಿದೊಡನೆ ಅವರಿಗೆ ಅಚ್ಚರಿ ಯಾಯಿತು. ಇತ್ತ ಅಹಿಂಸೆಯ ಉಪಾಸನೆ ಅತ್ತ ಯುದ್ಧದಲ್ಲಿ ಭಾಗ ವಹಿಸುವದು! ಗಾಂಧೀಜಿಯವರ ಈ ಎರಡು ಪರಸ್ಪರ ವಿರುದ್ಧ ಪ್ರವೃ ತ್ತಿಗಳು ಅವರ ಜೊತೆಗಾರರ ಮನಸಿನಲ್ಲಿ ಗೊಂದಲವನ್ನೆಬ್ಬಿಸಿದವು.

ಯುದ್ಧನೀತಿಯಲ್ಲಿ ಇವರಿಗೆ ಕೊಂಚವೂ ವಿಶ್ವಾಸವಿರಲಿಲ್ಲ. 'ನಮ್ಮ ಘಾತ ಮಾಡುವವನ ಬಗ್ಗೆ ಸಹ ಕ್ಷಮಾವೃತ್ತಿಯನ್ನು ತಾಳಬೇಕೆಂದು

ಅಹಿಂಸೆ ಹೇಳುವುದು. ಹೀಗಿರುವಾಗ ಯಾವ ಪಕ್ಷ ಧರ್ಮದ್ದು ಯಾವುದು ಅಧರ್ಮದ್ದು, ಎಂಬುದರ ಅರಿವು ಸಹ ನಮಗೆ ಇಲ್ಲದಿರುವಾಗ ಯಾವದೊಂದು ಪಕ್ಷದಪರವಾಗಿ ನಾವು ಹೋರಾಡುವ ಬಗೆ ಹೇಗೆ ? ' ಎಂಬುದೆ ಆಗಿನ ಪ್ರಶ್ನೆಯಾಗಿತ್ತು.

ಗಾಂಧೀಜಿಯವರು ಇದಕ್ಕೆ ಈ ರೀತಿ ಉತ್ತರ ಕೊಟ್ಟರು : 'ಯುದ್ಧ ಹಾಗೂ ಅಹಿಂಸೆ ಇವುಗಳ ಮೇಳವು ಎಂದೂ ಆಗದು ಎಂಬುದನ್ನು ನಾನು ಅರಿತಿದ್ದೆನು. ಆದರೆ ಧರ್ಮಾಧರ್ಮಗಳ ನಿರ್ಣಯವು ಇಷ್ಟೊಂದು ಸರಲವಿಲ್ಲ. ಸತ್ಯದ ಉಪಾಸಕನು ಒಮ್ಮೊಮ್ಮೆ ಕತ್ತಲೆಯಲ್ಲಿ ಕೂಡ ಸುತ್ತಾಡಬೇಕಾಗುವುದು. ಅಹಿಂಸೆ ಇದೊಂದು ವಿಶಾಲ ಧರ್ಮವು ' ಜೀವೋ ಜೀವಸ್ಯ ಜೀವನಮ್ ' ಇದರ ಅರ್ಥವು ಗೂಢವಿದೆ. ಮನುಷ್ಯನು ಅರಿತು ಅರಿಯದೆ ಯಾವದೊಂದುಬಗೆಯ ಹಿಂಸೆಯನ್ನು ಮಾಡದೆ ಜೀವಿಸಲಾರನು. ಜೀವಂತವಿರುವ ಕ್ರಿಯೆ ಕೂಡ-ಉಣ್ಣುವ ಕುಡಿಯುವ ಮಲಗುವ ಕ್ರಿಯೆಗಳು-ಜೀವ ಹಿಂಸೆ ಇಲ್ಲದೆ ಆಗದು, ಆ ಜೀವ ಅಣುವಿನಷ್ಟು ಸಣ್ಣದಿರಲಿ ದೊಡ್ಡದಿರಲಿ. ಆದುದರಿಂದ ಅಖಿಲ ಜೀವನವೆ ಹಿಂಸಾಮಯವು. ಹೀಗಿರುವದರಿಂದ ಅವನ ಕರ್ಮಗಳೆಲ್ಲ ದಯಾಪ್ರೇರಿತವಾಗಿ ದಯೆಯ ಪ್ರವಾಹದಂತೆ ಹರಿಯುತ್ತಿದ್ದರೆ ಮಾತ್ರ ಅಹಿಂಸೆಯ ಪೂಜಕನು ತನ್ನ ಧರ್ಮವನ್ನು ಯಥಾರ್ಥವಾಗಿ ಪಾಲಿಸಬಲ್ಲನು. ಅಹಿಂಸಾವಾದಿಯು ಸತತ ಜೀವ ರಕ್ಷಣೆ ಮಾಡಲು ಯತ್ನಿಸುವನು. ಈ ರೀತಿ ಹಿಂಸೆಯ ಪಾಪಮಯ ಮಾರ್ಗದಿಂದ ಅವನು ದೂರವಿರಬಲ್ಲನು. ಇಂದ್ರಿಯನಿಗ್ರಹ ಹಾಗೂ ದಯಾಧರ್ಮದ ವೃದ್ಧಿ ಇವುಗಳನ್ನು ಸಾಧಿಸುವುದು ಅವನ ಕರ್ತವ್ಯವಿರುವುದು. ಆದರೆ ಮನುಷ್ಯನು ಹಿಂಸಾದೋಷದಿಂದ ಪೂರ್ಣ ಮುಕ್ತನಿರುವದು ಅಸಾಧ್ಯವು. ಆತ್ಮನು ಒಬ್ಬನೇ ಹಾಗೂ ಸರ್ವವ್ಯಾಪಿಯಿರುವನು. ಆದುದರಿಂದ ಒಬ್ಬನು ಮಾಡಿದ ಕೆಡುಕಿನ ಪರಿಣಾಮವು ಅಪ್ರತ್ಯಕ್ಷವಾಗಿ ಎಲ್ಲರ ಮೇಲೂ ಆಗುವದು, ಆ ದೋಷವು ಎಲ್ಲರಿಗೂ ಬಡಕೊಳ್ಳುವುದು. ಈ ನ್ಯಾಯದಿಂದಲೂ ಮನುಷ್ಯನು ಹಿಂಸೆಯಿಂದ ಪೂರ್ಣ ಅಲಿಪ್ತನಿರಲಾರನು. ಇದಲ್ಲದೆ

ಮನುಷ್ಯನು ಒಂದು ಸಮಾಜದ ಘಟಕನಿರುವವರೆಗೆ ಸಮಾಜರಕ್ಷಣೆಗಾಗಿ ಆಗುತ್ತಿರುವ ಹಿಂಸಾದೋಷದಿಂದ ಅವನು ಮುಕ್ತನಾಗನು, ಯಾಕಂದರೆ ಅವನು ಸಮಾಜದ ಭಾಗವೇ ಇರುವನು, ಎರಡು ರಾಷ್ಟ್ರಗಳಲ್ಲಿ ಯುದ್ಧ ಪ್ರಾರಂಭವಾದೊಡನೆ ಅದನ್ನು ನಿಲ್ಲಿಸಿಬಿಡುವುದು ಅಹಿಂಸಾವಾದಿಯ ಪ್ರಥಮ ಕರ್ತವ್ಯವು. ಆದರೆ ಈ ಕೆಲಸವನ್ನು ಮಾಡಲು ಪಾತ್ರತೆ ಇಲ್ಲದವನು, ಈ ಬಗೆಯ ಶಕ್ತಿ ಇಲ್ಲದವನು ಒಂದೊಪ್ಪತ್ತು ಯುದ್ಧದಲ್ಲಿ ಸೇರಿದರೂ ಅವನು ತನ್ನನ್ನು, ರಾಷ್ಟ್ರವನ್ನು, ಪ್ರಪಂಚವನ್ನು ಯುದ್ಧದಿಂದ ಮುಕ್ತಮಾಡಲು ನಿರಂತರ ಪ್ರಯತ್ನವನ್ನು ಮಾಡುತ್ತಲೆ ಇರಬೇಕು.'

ಗಾಂಧೀಜಿಯವರ ಅಂದಿನ ಹಾಗೂ ಇಂದಿನ ವಿಚಾರಗಳಲ್ಲಿ ಏನೂ ಅಂತರವಿಲ್ಲ. ಕಾರ್ಯಕ್ರಮದ ಬಾಹ್ಯರೂಪದಲ್ಲಿ ಭಿನ್ನತೆ ಕಾಣಬಹುದು. 'ಪ್ರತಿಯೊಂದು ಕರ್ಮವು ದಯಾಪ್ರೇರಿತವಿದ್ದರೆ ಮಾತ್ರ ಅಹಿಂಸಾವಾದಿಯು ತನ್ನ ಧರ್ಮವನ್ನು ಪೂರ್ಣ ರೀತಿಯಿಂದ ಪಾಲಿಸಬಲ್ಲನು'. ಈ ವಾಕ್ಯವು ಅವರ ಎಲ್ಲ ನಿರ್ಣಯಗಳ ನಿಯಂತ್ರಕ ಮಂತ್ರವಿದ್ದಂತೆ, ಅವರ ಮನೋಯಂತ್ರದ ಮೂಲ ಸೂತ್ರವಿದ್ದಂತೆ. ಆ ಮೊದಲಿನ ಯುದ್ಧದಲ್ಲಿ ಸೇರಬೇಕೆನ್ನಲು ಇನ್ನೊಂದು ಕಾರಣವನ್ನು ಅವರು ತೋರುತಿದ್ದರು: 'ನನ್ನ ದೇಶದ ಸ್ಥಿತಿಯನ್ನು ನಾನು ಬ್ರಿಟಿಶ ರಾಜ್ಯದ ಸಹಾಯದಿಂದ ಸುಧಾರಿಸಬೇಕೆಂದಿದ್ದೆ. ನಾನು ಇಂಗ್ಲಂಡದಲ್ಲಿ ಇಂಗ್ಲೀಷ ನಾವಿಕ ಬಲದ ಸಹಾಯದಿಂದ ಸುರಕ್ಷಿತನಾಗಿದ್ದೆ. ಇಂಗ್ಲಂಡದ ಛತ್ರಛಾಯೆಯಲ್ಲಿ ನಾನು ಸುರಕ್ಷಿತನಿದ್ದುದರಿಂದ ಒಂದು ಬಗೆಯಿಂದ ನಾನು ಅವರು ಮಾಡುತಿರುವ ಹಿಂಸೆಯಲ್ಲಿ ಭಾಗಿಯಾಗಿದ್ದೆನು. ಇಂಗ್ಲಂಡದೊಡನೆ ಇದ್ದ ನನ್ನ ಸಂಬಂಧವನ್ನು ನಾನು ಹರಕೊಳ್ಳಲು ಸಿದ್ಧನಿದ್ದಿಲ್ಲವೆಂದು ಭಾವಿಸಿದರೆ ನನ್ನ ಮುಂದೆ ಮೂರು ಮಾರ್ಗಗಳು ಕಾಣುತಿದ್ದವು. ಯುದ್ಧದ ವಿರುದ್ಧ ಹೋರಾಟ ಹೂಡಿ ಇಂಗ್ಲಂಡವು ತನ್ನ ನೀತಿಯನ್ನು ಸುಧಾರಿಸುವ ವರೆಗೆ ಸತ್ಯಾಗ್ರಹ ತತ್ವಕ್ಕನುಸರಿಸಿ ಇಂಗ್ಲೀಷ ರಾಜ್ಯದೊಡನೆ ಅಸಹಕಾರ ಮಾಡುವುದು ಒಂದು ಹಾದಿ. ಕಾಯದೇಭಂಗ

ಮಾಡಿ ಸೆರೆಮನೆಗೆ ಹೋಗುವುದು ಎರಡನೆ ಹಾದಿ. ಯುದ್ಧದಲ್ಲಿ ಬ್ರಿಟಿಶರಿಗೆ ಸಹಾಯ ಮಾಡಿ ಹಾಗೆ ಮಾಡುತ್ತಿರುವಾಗಲೆ ಯುದ್ಧದಲ್ಲಿ ನಡೆಯುವ ಹಿಂಸೆಯ ಪ್ರತಿಕಾರ ಮಾಡುವ ಶಕ್ತಿಯನ್ನು ದೊರಕಿಸುವುದು ಮೂರನೆಯ ಹಾದಿ. ಮೊದಲಿನ ಎರಡು ಮಾರ್ಗಗಳಿಂದ ನಡೆಯುವ ಸಾಮರ್ಥ್ಯವು ನನ್ನಲ್ಲಿಲ್ಲವೆಂದು ಭಾವಿಸಿ ನಾನು ಮೂರನೆಯ ಮಾರ್ಗವನ್ನು ಸ್ವೀಕರಿಸಿದೆನು.'

ಈ ತರ್ಕಸರಣಿಯು ಸ್ವಲ್ಪ ಕುಂಟವಿದ್ದಂತೆ ತೋರುವುದು. ಗಾಂಧೀಜಿಯವರು ಮೊದಲು ನಿರ್ಣಯ ಮಾಡಿ ಬಿಟ್ಟಬಳಿಕ ಆ ನಿರ್ಣಯಕ್ಕೆ ಆಧಾರ ತರ್ಕಗಳನ್ನು ಯಾವ ರೀತಿ ಹುಡುಕುವರು ಎಂಬುದನ್ನು ಇನ್ನೊಂದೆಡೆ ಚರ್ಚಿಸುವ. ಆದರೆ ತರ್ಕವು ಅಥವಾ ನಿರ್ಣಯದ ಕಾರಣಗಳು ಅಷ್ಟೊಂದು ಬಲಶಾಲಿ ಇಲ್ಲದಿದ್ದರೂ ತಮ್ಮ ಆತ್ಮಕ್ಕೆ ಯಾವ ಕಾಲಕ್ಕೆ ಯಾವುದು ಸತ್ಯವೆಂದು ಹೊಳೆಯುವುದೊ ಅದನ್ನು ಗಾಂಧೀಜಿಯವರು ಅನುಸರಿಸುವರು. ಅವರ ವಿಚಾರಸರಣಿಯಲ್ಲಿ ಬುದ್ಧಿಪುರಃಸರವಾದ ಆತ್ಮವಂಚನೆ ಎಂದೂ ಇರುವುದಿಲ್ಲ. ಮುಖ್ಯ ಮಾತೇನೆಂದರೆ ಬ್ರಿಟಿಶ ಶಾಸನಪದ್ಧತಿಯಲ್ಲಿ ಅವರ ದೃಢವಿಶ್ವಾಸವಿತ್ತು. ದಕ್ಷಿಣ ಆಫ್ರಿಕೆಯಲ್ಲಿ ಇವರೊಡನೆ ಬೇಕಾದಷ್ಟು ದುರ್ವ್ಯವಹಾರ ನಡೆದರೂ ಇವರು ಎದೆಗುಂದಲಿಲ್ಲ ಮತ್ತು ಇವರ ಶ್ರದ್ಧೆ ಕದಲಲಿಲ್ಲ. ಬೋಅರ ಯುದ್ಧ ಹಾಗೂ ಜೂಲೂ ದಂಗೆಗಳ ಕಾಲಕ್ಕೆ ಇವರ ಸಹಾನುಭೂತಿ ಬೋಅರರತ್ತ ಹಾಗೂ ಜೂಲೂ ಜನರತ್ತ ಇತ್ತು. ಆದರೂ ಇವರು ಇಂಗ್ಲೀಷರಿಗೆ ಸಹಾಯಮಾಡುವುದೆ ತಮ್ಮ ಧರ್ಮವೆಂದು ತಿಳಿದರು. ನಂತರ ಜೊಸೆಫ್ ಚೆಂಬರ್ಲೇನರು ಭಾರತೀಯರ ಸ್ಥಿತಿಯನ್ನು ನಿರೀಕ್ಷಿಸಲು ಆಫ್ರಿಕಾಕ್ಕೆ ಹೋದಾಗ ಅಲ್ಲಿಯ ಹಿಂದೀಯರು ಪ್ರತಿನಿಧಿ ಮಂಡಳದ ಮುಖಾಂತರ ಅವರನ್ನು ಭೆಟ್ಟಿಯಾಗುವ ಸಿದ್ಧತೆ ನಡೆಸಿದಾಗ 'ನೀವು ಎಲ್ಲರೂ ಬರಬಹುದು, ಆದರೆ ಗಾಂಧೀಯವರನ್ನು ಮುಖಂಡರನ್ನಾಗಿ ಮಾಡಬೇಡಿ. ಅವರ ಭೆಟ್ಟಿ ಒಮ್ಮೆ ಆಗಿದೆ. ಅವರಿಗೆ ಪುನಃ ಪುನಃ ಭೆಟ್ಟಿಯಾಗಬೇಕಿಲ್ಲ' ಎಂದು ಸ್ಪಷ್ಟ

ವಾಗಿ ಚೆಂಬರ್ಲೇನರು ಹೇಳಿಕಳುಹಿಸಿದರು! ಇದೆಲ್ಲ ಗಾಂಧೀಜಿಯವರು ಆ ಬಗೆಯ ಸಹಾಯ ಮಾಡಿದ ಬಳಿಕ!

ಇಂಗ್ಲೀಷರ ಈ ತರಹದ ವೃತ್ತಿಯು ಈಗ್ಯೂ ಮೊದಲಿದ್ದಂತೆಯೆ ಇದೆ.

ದುಂಡುಮೇಜಿನ ಪರಿಷತ್ತು ಆಯಿತು. ಅಲ್ಲಿ ಹೋದ ಜನರು ಭಾರತೀಯರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿರಲಿಲ್ಲ. ಅವರು ಸರಕಾರ ನಿಯುಕ್ತರಿದ್ದರು. ಸರಕಾರದವರು ನಮಗೆ ಶಾಂತಿ ಸಂರಕ್ಷಣೆಗಳನ್ನು ದಯಪಾಲಿಸಿದರು, ಅಂದಬಳಿಕ ನಮ್ಮ ಪ್ರತಿನಿಧಿಗಳನ್ನಾದರೂ ಅವರೇ ಏಕೆ ನೇಮಿಸಬಾರದು? ಈಹೊತ್ತು ಸಹ ಕಾಂಗ್ರೆಸ್ ಹಾಗೂ ಬ್ರಿಟಿಶ ಸರಕಾರ ಇವರ ನಡುವೆ ಇದೇ ಮಾತಿನ ಬಗ್ಗೆ ಚರ್ಚೆ ನಡೆದಿದೆ. ಯುದ್ಧ ಮುಗಿದನಂತರ ಎಲ್ಲ ಜಾತಿ, ಸಮಾಜ, ಭಾಗ ಇವುಗಳ ಪ್ರತಿನಿಧಿಗಳೊಡನೆ ಹಿಂದುಸ್ತಾನದ ಭಾವೀ ಘಟನೆಯ ಬಗ್ಗೆ ಚರ್ಚೆ ಮಾಡುವೆವು ಎಂದು ಸರಕಾರದವರು ಅನ್ನುವರು. ಯಾವ ಜಾತಿಗಳು, ಯಾವ ಸಮಾಜ, ಯಾವ ಭಾಗ ಇತ್ಯಾದಿ ಸಂಗತಿಗಳನ್ನು ನಿರ್ಣಯಿಸುವವರು ಸರಕಾರದವರೇ. ಆರಿಸಲ್ಪಟ್ಟ ಪ್ರತಿನಿಧಿಗಳ ಮುಖಾಂತರ ಪ್ರಾಂತೀಯ ಸರಕಾರಗಳು ನಡೆದಿದ್ದವು. ಆದರೆ ಆ ಪ್ರತಿನಿಧಿಗಳು ಮನೆಯಲ್ಲಿ ಕೂಡಬೇಕು! ಸರಕಾರದವರು ಈಗ ಹೊಸ ಪ್ರತಿನಿಧಿಗಳನ್ನು ನಿರ್ಮಾಣ ಮಾಡಬೇಕೆನ್ನುವರು! ದಕ್ಷಿಣ ಆಫ್ರಿಕೆಯಲ್ಲಿ ಗಾಂಧೀಜಿಯವರು ಅಲ್ಲಿಯ ಹಿಂದೀ ಜನರ ಪ್ರತಿನಿಧಿಯಾಗಿ ಚೆಂಬರ್ಲೇನರಿಗೆ ಭೆಟ್ಟಿಯಾಗುವುದು, ಇದು ಸಲ್ಲದ ಮಾತು, ಇದು ಸರಕಾರದವರಿಗೆ ಸಹನವಾಗದ ಮಾತು. ಆದುದರಿಂದ ಹಾಗೆ ಆಗಕೂಡದು ಎಂದು ಚೆಂಬರ್ಲೇನರು ಹೇಳಿದರು!

ಈ ಮಾತಿನ ಪರಿಣಾಮವು ಕೂಡ ಗಾಂಧೀಜಿಯವರ ಮನಸಿನ ಮೇಲೆ ಅಷ್ಟೊಂದು ಕೆಡುಕಾಗಲಿಲ್ಲ. ಹೋದ ಮಹಾಯುದ್ಧವು ಸುರುವು ಆದೊಡನೆ ಮತ್ತೆ ಸಹಾಯವನ್ನು ಮಾಡಿದರು. ನಂತರ

ಪಂಜಾಬದಲ್ಲಿ ಕೊಲೆಪಾತಕವಾಯಿತು, ರೌಲೆಟ್ ಕಾಯದೆ ಪಾಸಾಯಿತು, ಜಾಲಿಯನವಾಲಾ ಬಾಗದ ದುರಂತ ನಡೆಯಿತು. ಇಷ್ಟೆಲ್ಲ ಆದರೂ ಗಾಂಧೀಜಿಯವರ ಶ್ರದ್ಧೆ ಹಾಗೇ ಜೀವಂತವಿತ್ತು. ಹೊಸ ಸುಧಾರಣೆಗಳು ಬಂದೊಡನೆ, ಅವುಗಳನ್ನು ಸ್ವೀಕರಿಸಬೇಕೆನ್ನುವವರಿಗೆ ಗಾಂಧೀಜಿಯವರ ಬೆಂಬಲ! ಗಾಂಧೀಜಿಯವರ ಶ್ರದ್ಧೆ ಹಾಗೂ ಅಹಿಂಸೆ ಹೀಗೆ ಇರುವುದು:

**ಜೋ ತೋಕೋ ಕಾಂಟಾ ಬುವೇ, ತಾಹಿ ಬೋಯ ತೂ ಫೂಲ,**
**ತೋಕೋ ಫೂಲಕೇ ಫೂಲ ಹೈ, ವಾಕೋ ಹೈ ತಿರಸೂಲ.**

ನಿನ್ನ ಮಾರ್ಗದಲ್ಲಿ ಮುಳ್ಳು ಎರಚುವವರ ಹಾದಿಯಲ್ಲಿ ನೀನು ಹೂವುಗಳನ್ನು ಹರವು. ನಿನ್ನಮಟ್ಟಿಗೆ ನೀನು ಹರವಿದ ಹೂಗಳು ಹೂವಾಗಿಯೆ ಇರುವವು. ಆ ಮುಳ್ಳುಗಳು ಮಾತ್ರ ಅವನಮಟ್ಟಿಗೆ ತ್ರಿಶೂಲಗಳಾಗುವವು.

ಗಾಂಧೀಜಿಯವರ ಈ ಮನೋವೃತ್ತಿಯು ಒಂದೇಸವನಾಗಿ ಅಖಂಡ ರೀತಿಯಿಂದ ಮೊದಲಿನಿಂದ ಕಡೆಯವರೆಗೆ ಹೀಗೆ ಇದೆ. ಈಗ ಬ್ರಿಟಿಶ್ ರಾಜ್ಯನೀತಿಯಲ್ಲಿಯ ಅವರ ವಿಶ್ವಾಸವು ನಷ್ಟವಾಗಿದ್ದರೂ ಬ್ರಿಟಿಶ್ ಸರಕಾರದೊಡನೆ ಇದ್ದ ಅವರ ವ್ಯವಹಾರವು ಅದೇ ಪ್ರೇಮ ಹಾಗೂ ಅಹಿಂಸೆಯಿಂದ ಯುಕ್ತವಿರುವುದು. ಈಗ್ಯೂ ಗಾಂಧೀಜಿಯವರು ತಮ್ಮ ವಿರೋಧಿಗಳ ಹಾದಿಗುಂಟ ಹೂವಿನ ಗಿಡಗಳನ್ನು ಹಚ್ಚುವುದರಲ್ಲಿಯೆ ಮಗ್ನರಿರುವರು.

ಬ್ರಿಟಿಶರ ರಾಜ್ಯನೀತಿಯಲ್ಲಿದ್ದ ಶ್ರದ್ಧೆಯ ಮೂಲಕವೆ ಹೋದ ಯುದ್ಧದಲ್ಲಿ ಅವರು ಬ್ರಿಟಿಶರಿಗೆ ಸಹಾಯವನ್ನು ಮಾಡಿದರು. ನಿರ್ಣಯದ ನಂತರ ಅವರ ತರ್ಕಸರಣಿಗೆ ಪ್ರಾರಂಭವಾಗುವುದು. ಆದುದರಿಂದ ಒಮ್ಮೊಮ್ಮೆ ಅದು ಕುಂಟವಿದ್ದಂತೆ ತೋರುವುದು. ಸರಕಾರಕ್ಕೆ ಸಹಾಯ ಮಾಡಬೇಕೆಂದು ಅವರು ನಿರ್ಣಯಿಸಿದ್ದರಿಂದ ಅದು ತಮ್ಮ ಧರ್ಮವೆಂದು ಅವರಿಗೆ ಎನಿಸಿತು ಹಾಗೂ ಒಂದು ವಿಶಿಷ್ಟ ಮರ್ಯಾ

ದೆಯುವರೆಗೆ ಸಹಾಯ ಮಾಡತಕ್ಕದ್ದೆಂದು ಅವರು ನಿರ್ಧರಿಸಿದರು. ಬೋಅರ ಹಾಗೂ ಜೂಲು ಲಢಾಯಿಯ ಕಾಲಕ್ಕೆ ಸಹಾನುಭೂತಿ ಇವರೊಡನೆ ಇದ್ದರೂ ಇಂಗ್ಲೀಷರಿಗೆ ಸಹಾಯ ಮಾಡುವುದು ತಮ್ಮ ಧರ್ಮವೆಂದೆನಿಸಿ ಅವರು ಹಾಗೆ ಮಾಡಿದರು. ಈ ಬಗೆಯ ಅಸಂಬದ್ಧತೆ ಆಶ್ಚರ್ಯದ ಸಂಗತಿಯಲ್ಲ. ಒಂದು ಸಂದರ್ಭದಲ್ಲಿ ಧರ್ಮವೆನಿಸ ಬಹುದಾದ ಕರ್ಮವು ಇನ್ನೊಂದು ಸಂದರ್ಭದಲ್ಲಿ ಅಧರ್ಮವೆನಿಸ ಬಲ್ಲದು. ಆದುದರಿಂದಲೆ ಕರ್ಮದ ಗತಿಯು ಗಹನವಾದುದು ಎಂದಿರುವರು. ಇದೇ ಬಗೆಯ ವಿಸಂಗತಿಯುಳ್ಳ ಒಂದು ಕಥೆಯು ಮಹಾಭಾರತದಲ್ಲಿದೆ. ಭಾರತೀಯ ಯುದ್ಧದ ಎಲ್ಲ ಸಿದ್ಧತೆ ಆದ ಬಳಿಕ ವೀರರೆಲ್ಲರು ಒಬ್ಬರಿಗೊಬ್ಬರು ಎದುರಾಗಿ ಹೋರಾಡುವ ಪ್ರಸಂಗ ದಲ್ಲಿ ಯುಧಿಷ್ಠಿರನು ಭೀಷ್ಮನಿಗೆ ನಮಸ್ಕಾರ ಮಾಡುವನು ಹಾಗೂ ಯುದ್ಧಕ್ಕಾಗಿ ಅವನಿಂದ ಅಪ್ಪಣೆ ಬೇಡುವನು. ಯುಧಿಷ್ಠಿರನ ಈ ವಿನಯವನ್ನು ನೋಡಿ ಭೀಷ್ಮನು ಅತ್ಯಂತ ಪ್ರಸನ್ನನಾಗುವನು ಹಾಗೂ 'ಮಗನೇ, ಯುದ್ಧ ಮಾಡು, ಜಯಶೀಲನಾಗು, ನಿನಗೆ ಬೇಕಾದು ದನ್ನು ಬೇಡು, ನಿನ್ನ ಪರಾಜಯವಾಗದು' ಎಂದು ಆಶೀರ್ವದಿ ಸುವನು. ಹೀಗೆ ಪ್ರತಿಪಕ್ಷೀಯನಿಗೆ ಆಶೀರ್ವಾದ ಕೊಟ್ಟರೂ ತಾನು ಕೌರವ ಪಕ್ಷದವನಾಗಿಯೆ ಯುದ್ಧ ಮಾಡಬೇಕಾದುದರಿಂದ ಆ ವಿಸಂಗತಿಯನ್ನು ವಿವೇಚಿಸುವ ಕುರಿತು ಭೀಷ್ಮನು ಅಂದದ್ದು, 'ನಾನು ಕೌರವರ ಅನ್ನ ತಿಂದವನಾದುದರಿಂದ ಅವರ ಪರವಾಗಿಯೆ ಯುದ್ಧ ಮಾಡುವೆನು. ಆದರೆ ನಿನಗೆ ಬೇಕಾದುದನ್ನು ನೀನು ಅವಶ್ಯ ಬೇಡು ವೆಂಥವನಾಗು.'

> **ಅರ್ಥಸ್ಯ ಪುರುಷೋ ದಾಸೋ ದಾಸಸ್ತ್ವರ್ಥೋ ನ ಕಸ್ಯಚಿತ್ ।**
> **ಇತಿ ಸತ್ಯಂ ಮಹಾರಾಜ ಬದ್ಧೋಽಸ್ಮ್ಯರ್ಥೇನ ಕೌರವೈಃ ॥**

'ಮಹಾರಾಜನೆ, ಮನುಷ್ಯನು ದುಡ್ಡಿನ ದಾಸನು ಎಂಬುದು ನಿಜ. ದುಡ್ಡು ಮಾತ್ರ ಯಾರ ದಾಸವೂ ಅಲ್ಲ. ಆದುದರಿಂದ ನಾನು ಕೌರವರ ಋಣದಿಂದ ಬದ್ಧನು.'

ಭೀಷ್ಮನಂಥವನಿಗೆ ಎಲ್ಲಿಯ ದುಡ್ಡು, ಎಲ್ಲಿಯ ದುಡ್ಡಿನ ಬಂಧನ? ಆದರೆ ಇಲ್ಲಿ ದುಡ್ಡು ಅಂದರೂ ದುಡ್ಡಿನ ಸೇವನದ ಮೂಲಕ ಉಂಟಾದ ಋಣ ಹಾಗೂ ಅದರ ಬಂಧನ, ಅರ್ಥಾತ್ ಆ ಋಣವನ್ನು ತೀರಿಸುವುದೂ ಒಂದು ಧರ್ಮವೆ ಸೈ. ತಾನು ಆ ಧರ್ಮದಿಂದ ಬದ್ಧನು ಎಂದು ಹೇಳುವುದೆ ಇಲ್ಲಿ ಭೀಷ್ಮನ ಉದ್ದೇಶವು. ಆದುದರಿಂದ ಕೌರವರ ಪರವಾಗಿ ಯುದ್ಧಮಾಡಿದರೂ ತಾನು ಇರುವುದು ಪಾಂಡವ ಪಕ್ಷಪಾತಿಯಾಗಿ, ಎಂದು ಭೀಷ್ಮನು ಹೇಳುವನು.

ಆ ಯುದ್ಧವಾಗಿ ಸಾವಿರಾರು ವರ್ಷಗಳ ನಂತರ ಬೇರೊಂದು ಮಹಾಯುದ್ಧವು ಯುರೋಪದಲ್ಲಿ ಪ್ರಾರಂಭವಾಯಿತು. ಆ ಪ್ರಸಂಗದಲ್ಲಿ ಗಾಂಧೀಜಿಯವರು, 'ನಾನು ಯಾವದೇ ಯುದ್ಧವನ್ನು ಎತ್ತಿ ಹಿಡಿಯಲಾರೆ. ಆದರೆ ಇಂಗ್ಲಂಡದ ಬಲದ ಸಹಾಯದಿಂದ ನನ್ನ ಸಂರಕ್ಷಣೆ ಆಗುತಿರುವುದರಿಂದ ನಾನು ಇಂಗ್ಲಂಡಕ್ಕೆ ಸಹಾಯವನ್ನು ನೀಡುವೆನು.' ಸಾವಿರಾರು ವರ್ಷಗಳ ನಂತರ ಆದ ಇತಿಹಾಸದ ಪುನರಾವೃತ್ತಿಯ ಒಂದು ಉತ್ತಮ ಉದಾಹರಣೆ ಇದು.

ಹೋದ ಮಹಾಯುದ್ಧವು ನಾಲ್ಕು ವರುಷ ನಡೆಯಿತು. ಮಿತ್ರ ರಾಷ್ಟ್ರಗಳು ತಮ್ಮ ಜೀವದ ಹಂಗುದೊರೆದು ಹೋರಾಡಬೇಕಾಯಿತು. ಯುದ್ಧದಲ್ಲಿ ಅನೇಕ ಏರಿಳಿತಗಳು ಆದವು. ಗಾಂಧೀಜಿಯವರು ಸಹಾಯ ಮಾಡಿದಷ್ಟು ಸರಲ ಮನಸ್ಸಿನಿಂದ ಇನ್ನಾರೂ ಇಂಗ್ಲೀಷರಿಗೆ ಆಗ ಸಹಾಯ ಮಾಡಿರಲಿಕ್ಕಿಲ್ಲ. ಹಲವು ಮುಖಂಡರು ವಿರುದ್ಧಪಕ್ಷ ವಹಿಸಿದರು, ಅನೇಕರು ತಟಸ್ಥರುಳಿದರು. ಜನಸಾಮಾನ್ಯರ ಭಾವನೆಗಳಲ್ಲಿ ಸಹ ಆ ಮತ್ತು ಈ ಮಹಾಯುದ್ಧದ ಸಮಯದಲ್ಲಿ ಇದ್ದ ಸಾದೃಶ್ಯವು ನೋಡತಕ್ಕಂತಹದಿದೆ.

ಆ ಯುದ್ಧದ ಕಾಲಕ್ಕೆ ಲಾರ್ಡ ಚೆಮ್ಸಫರ್ಡರು ಎಲ್ಲ ಮುಖಂಡರ ಹಾಗೂ ದೊಡ್ಡ ದೊಡ್ಡ ಗೃಹಸ್ಥರದೊಂದು ಸಭೆ ಕರೆದಿದ್ದರು. ಗಾಂಧೀಜಿಯವರಿಗೂ ಆಮಂತ್ರಣ ಬಂದಿತ್ತು. ಸ್ವಲ್ಪ ಹಿಂದೆಮುಂದೆ

ನೋಡಿ, ಚರ್ಚೆಮಾಡಿ ಆ ಸಭೆಯಲ್ಲಿ ಭಾಗವಹಿಸತಕ್ಕದ್ದೆಂದು ಅವರು ನಿಶ್ಚಯಿಸಿದರು. ಸಭೆಯಲ್ಲಿ ಮಂಡಿಸಲಾದ ಗೊತ್ತುವಳಿಗೆ ಗಾಂಧೀಜಿಯುವರು ಅನುಮೋದನ ಕೊಡುವಾಗ ಹಿಂದಿಯಲ್ಲಿ 'ನಾನು ಇದನ್ನು ಅನುಮೋದಿಸುವೆನು' ಇಷ್ಟೇ ಹೇಳಿ ಕುಳಿತುಬಿಟ್ಟರು. ಆದರೆ ತಾವು ಹೇಳಬೇಕಾದುದನ್ನೆಲ್ಲ ಅವರು ಪತ್ರದಲ್ಲಿ ಬರೆದು ವ್ಹಾಯಿಸರಾಯರಿಗೆ ಕಳಿಸಿದರು. ಆ ಪತ್ರ ಕೂಡ ನೋಡುವಂತಹುದಿದೆ—

'ಈಗಿನ ಭಯಂಕರ ಪ್ರಸಂಗದಲ್ಲಿ ಬ್ರಿಟಿಶ ರಾಷ್ಟ್ರಕ್ಕೆ ಮನಃಪೂರ್ವಕವಾಗಿ ನಾವು ಸಹಾಯಮಾಡುವುದು ಅವಶ್ಯವೆಂದು ನನ್ನ ಅಭಿಪ್ರಾಯವಿದೆ. ಈ ಬ್ರಿಟಿಶ ರಾಷ್ಟ್ರಸಂಘದಲ್ಲಿ ನಾವು ಭವಿಷ್ಯದಲ್ಲಿ ಬಹಳ ಬೇಗನೆ ಸಮಭಾಗಿಗಳಾಗುವೆವೆಂದು ಆಶಿಸುತ್ತಿದ್ದೇವೆ. ನಾವು ಈಗ ಸಹಾಯ ಮಾಡುವುದರಿಂದ ನಾವು ನಮ್ಮ ಉದ್ದೇಶವನ್ನು ಸಾಧಿಸುವ ಮಾರ್ಗದಲ್ಲಿ ಮುಂದರಿಯುವೆವೆಂಬ ಭಾವನೆಯು ನಮ್ಮ ಮನಸಿನಲ್ಲಿದ್ದುದು ನಿಜವು. ನಮ್ಮ ಕರ್ತವ್ಯಪಾಲನೆ ಮಾಡಿದರೆ ನಮ್ಮ ಅಧಿಕಾರವು ತನ್ನಿಂತಾನೆ ಪ್ರಾಪ್ತವಾಗುವುದೆಂದು ನನ್ನ ನಂಬಿಗೆ ಇದೆ. ತಾವು ಈಗ ಯಾವ ರಾಜಕೀಯ ಸುಧಾರಣೆಗಳನ್ನು ಕುರಿತು ಚರ್ಚಿಸುತಿರುವಿರೊ ಆ ಸುಧಾರಣೆಗಳಲ್ಲಿ ಕಾಂಗ್ರೆಸ್ ಲೀಗಿನ ಯೋಜನೆಯನ್ನು ಇದ್ದಕ್ಕಿದ್ದ ಹಾಗೆ ಸೇರಿಸುವಿರೆಂದು ಜನರ ವಿಶ್ವಾಸವಿರುವುದು. ಹಲವು ಮುಖಂಡರು ಈ ರೀತಿ ನಂಬಿರುವರು ಮತ್ತು ಯುದ್ಧದಲ್ಲಿ ಸಹಾಯ ಮಾಡಬೇಕೆಂದು ಈ ನಂಬಿಗೆಯೆ ಅವರನ್ನು ಪ್ರೇರಿಸಿರುವುದು.'

ಇದು ಗಾಂಧೀಜಿಯುವರ ಪತ್ರದ ಒಂದು ಭಾಗ. ಎಷ್ಟು ನಿರ್ಮಲವಾದ ವಿಶ್ವಾಸವಿದು! ಆಗ ಹಿಂದೂ ಮುಸಲ್ಮಾನರಲ್ಲಿ ಐಕ್ಯವಿತ್ತು. ಈಗಿನಂತೆ ಜಾತೀಯ ಅನೈಕ್ಯದ ಪರಿಸ್ಥಿತಿ ಇರಲಿಲ್ಲ. ಲೀಗ ಹಾಗೂ ಕಾಂಗ್ರೆಸ್ ಈ ಎರಡೂ ಪಕ್ಷಗಳು ಕೂಡಿ ಒಂದು ಯೋಜನೆಯನ್ನು ಸರಕಾರದೆದುರಿಗೆ ಮಂಡಿಸಿದ್ದವು. ಆದರೆ ಸರಕಾರದವರು ಅದಕ್ಕೆ ಮಹತ್ವ ಕೊಡಲಿಲ್ಲ, ಅದನ್ನು ಸ್ವೀಕರಿಸಲಿಲ್ಲ. ಈ ರೀತಿ ಎಲ್ಲ ಆಶೆಗಳು ನಿಷ್ಫಲವಾದವು. ನಮಗೆ ಸ್ವರಾಜ್ಯದ ಅಧಿಕಾರ

ಗಳನ್ನು ಕೊಡುವ ವಿಷಯದಲ್ಲಿ ಹಿಂದೂ ಮುಸಲ್ಮಾನರ ಅನೈಕ್ಯವೆ ಬ್ರಿಟಿಶ ಸರಕಾರಕ್ಕೆ ಇದ್ದ ದೊಡ್ಡ ಅಡಚಣಿ ಎಂದು ಯಾರಾದರೂ ತಿಳಿದಿದ್ದರೆ ಅವರು ಮೇಲೆ ಹೇಳಿದ ಸಂದರ್ಭವನ್ನು ಲಕ್ಷಿಸಬೇಕು.

ಮುಂದೆ ತಮ್ಮ ಪತ್ರದಲ್ಲಿ ಗಾಂಧೀಜಿಯುವರು ಬರೆದುದೇನಂದರೆ, 'ನಾನು ನನ್ನ ಜನರ ಮನಸ್ಸನ್ನು ಒಲಿಸುವುದು ಸಾಧ್ಯವಾದರೆ ಈಗಿನ ಯುದ್ಧಕಾಲದಲ್ಲಿ ಸ್ವರಾಜ್ಯದ ಸುದ್ದಿಯನ್ನು ಸಹ ತೆಗೆಯಬೇಡಿ ರೆಂದು ಅವರಿಗೆ ಹೇಳಬಯುಸುವೆನು.'

ಈಗಿನ ಮಹಾಯುದ್ಧದ ಪ್ರಾರಂಭದಲ್ಲಿ ಗಾಂಧೀಜಿಯುವರು ವ್ಹಾಯಿಸರಾಯರಿಗೆ ಭೆಟ್ಟಿಯಾದರು. ಭೆಟ್ಟಿಯ ನಂತರದ ಒಂದು ನಿವೇದನದಲ್ಲಿ ಅವರು ಅಂದದ್ದು, 'ಈ ಆಯುಕಟ್ಟಿನ ಪರಿಸ್ಥಿತಿಯಲ್ಲಿ ಹಿಂದುಸ್ತಾನದ ಸ್ವಾತಂತ್ರ್ಯದ ವಿಚಾರವು ಕೂಡ ನನಗೆ ಬರುವುದಿಲ್ಲ. ಸ್ವಾತಂತ್ರ್ಯವು ದೊರೆಯುವುದು ನಿಶ್ಚಯ. ಆದರೆ ಇಂಗ್ಲಂಡ ಫ್ರಾನ್ಸ ಗಳು ನಷ್ಟವಾಗಿ ಹೋದರೆ ಇಲ್ಲವೆ ಮಿತ್ರರಾಷ್ಟ್ರಗಳು ಜರ್ಮನಿಯನ್ನು ತೀರ ಹೀನ ದೀನ ಮಾಡಿ ಗೆದ್ದರೆ ನಮ್ಮ ಸ್ವಾತಂತ್ರ್ಯದ ಉಪಯೋಗ ವೇನು?' ಈ ಮಾತುಗಳಲ್ಲಿ ಹಾಗೂ ಹೋದ ಯುದ್ಧಕಾಲದ ಮಾತುಗಳಲ್ಲಿ ಸಹ ಸಾದೃಶ್ಯವಿದೆ.

ಮತ್ತೆ ಮುಂದೆ ವ್ಹಾಯಿಸರಾಯರಾದ ಚೆಮ್ಸಫರ್ಡ ಸಾಹೇಬ ರಿಗೆ ಗಾಂಧೀಜಿಯುವರು ಬರೆದುದು, 'ಹಿಂದುಸ್ತಾನವು ತನ್ನ ಪ್ರತಿ ಯೊಬ್ಬ ಗಟ್ಟಿಮುಟ್ಟೆ ತರುಣನನ್ನು ಇಂಗ್ಲಂಡದ ರಕ್ಷಣಕ್ಕಾಗಿ ಬಲಿ ಗೊಡಬೇಕೆಂದು ನನ್ನ ಇಚ್ಛೆ ಇದೆ. ಹಿಂದುಸ್ತಾನ ದೇಶವನ್ನು ಬ್ರಿಟಿಶ ಸಾಮ್ರಾಜ್ಯದ ಒಂದು ಆದರಣೀಯ ಘಟಕವನ್ನಾಗಿ ಮಾಡಲು ಈ ಬಗೆಯ ಬಲಿದಾನವೆ ಸಾಕು ಎಂದು ನನ್ನ ವಿಶ್ವಾಸವಿದೆ. ಈ ಸಂಕಟ ಸಮಯದಲ್ಲಿ ನಾವು ಜೀವದ ಹಂಗುದೊರೆದು ಸಾಮ್ರಾಜ್ಯದ ಸೇವೆ ಮಾಡಿದರೆ ಹಾಗೂ ಅದನ್ನು ರಕ್ಷಿಸಿದರೆ ಈ ಕಾರ್ಯವು ಕೂಡ ನಮ್ಮನ್ನು ನಮ್ಮ ಧ್ಯೇಯದತ್ತ ಬೇಗನೆ ಒಯ್ಯುವುದು. ನಾವು

ಸಾಮ್ರಾಜ್ಯದ ಸೇವೆಯನ್ನು ಮಾಡುವುದರಲ್ಲಿಯೆ ನಮಗೆ ಸ್ವರಾಜ್ಯದ ಹಕ್ಕುಗಳು ದೊರೆತಂತಾಯಿತೆಂದು ನಾವು ತಿಳಿಯತಕ್ಕದ್ದು, ಎಂಬುದರ ಪ್ರತೀತಿ ಪಡೆಯಲು ನಾನು ನನ್ನ ದೇಶಬಾಂಧವರಿಗೆ ಹೇಳಬಯಸುವೆನು.'

ಗಾಂಧೀಜಿಯವರು ಆ ಪ್ರಸಂಗದಲ್ಲಿ ಈ ಮೇಲಿನ ತಮ್ಮ ಪತ್ರದಲ್ಲಿ ಯಾವ ಬಗೆಯ ಭಾಷೆಯನ್ನುಪಯೋಗಿಸಿದರೊ ಅದೇ ಬಗೆಯ ಭಾಷೆಯನ್ನು ನಮ್ಮ ಬೇಡಿಕೆಗಳ ವಿಷಯದಲ್ಲಿ ಈಗ ಸರಕಾರದವರು ಉಪಯೋಗಿಸುತಿರುವರು. ಇದೊಂದು ಆಶ್ಚರ್ಯದ ಸಂಗತಿಯು. ಈಗ ಯುದ್ಧದ ಬಗ್ಗೆ ಮಾತ್ರ ಮಾತಾಡಿರಿ, ನಮ್ಮ ಪರವಾಗಿ ಹಂಗು ದೊರೆದು ಹೋರಾಡಿರಿ, ಹೀಗೆ ಮಾಡುವುದರಿಂದಲೆ ನಿಮಗೆ ಸ್ವರಾಜ್ಯ ಪ್ರಾಪ್ತಿಯಾಗುವುದು, ಎಂದು ಸರಕಾರದವರು ಸಾರುತಿರುವರು. ಹೋದ ಯುದ್ಧದ ಕಾಲಕ್ಕೆ ಸಹ, ಒಳಜಗಳಗಳನೆಲ್ಲ ಮರೆತು ನೀವು ಏಕಚಿತ್ತದಿಂದ ತಮ್ಮ ಸಲುವಾಗಿ ಹೋರಾಡಬೇಕೆಂದು ಸರಕಾರದವರು ನಮಗೆ ಹೇಳುತಿದ್ದರು. ಗಾಂಧೀಜಿಯವರು ಹಾಗೆ ಮಾಡಿಯೂ ಬಿಟ್ಟರು. ಹಿಂದುಸ್ತಾನವು ತನ್ನ ನವ ಯುವಕರ ಬಲಿದಾನವನ್ನು ಮಾಡಿತು. ಸಾಮ್ರಾಜ್ಯ ರಕ್ಷಣೆಗಾಗಿ ಹಣವನ್ನೂ ಸೂರೆಮಾಡಿತು. ಆದರೆ ಅದರಿಂದ ಹಿಂದುಸ್ತಾನಕ್ಕೆ ಸ್ವಾತಂತ್ರ್ಯವು ಮಾತ್ರ ದೊರೆಯಲಿಲ್ಲ. ಯುದ್ಧಾಂತ್ಯದಲ್ಲಿ ಜಾಲಿಯಾನವಾಲಾದ ಉಡುಗರೆ ದೊರಕಿತು. ಆಗ ಗಾಂಧೀಜಿಯವರ ವಿಶ್ವಾಸವು ಹಾರಿಹೋಯಿತು. ಆದರೂ ಅಹಿಂಸಾತ್ಮಕವಾದ ತಮ್ಮ ಕಾರ್ಯಪದ್ಧತಿಯಲ್ಲಿ ಗಾಂಧೀಜಿಯವರು ಬದಲು ಮಾಡಲಿಲ್ಲ.

ವರ್ತಮಾನ ಯುದ್ಧವನ್ನು ಕುರಿತು ಗಾಂಧೀಜಿಯವರು ಸ್ವೀಕರಿಸಿದ ನೀತಿಯು ಕೂಡ ಶುದ್ಧ ಸತ್ಯಾಗ್ರಹಕ್ಕನುಸರಿಸಿದುದೆ ಇದೆ. ಹೋದ ಯುದ್ಧದ ಕಾಲಕ್ಕೆ ಬ್ರಿಟಿಶ ಮುತ್ಸದ್ದಿಗಳ ಮನೋವೃತ್ತಿಯಲ್ಲಿ ಯಾವ ಒಂದು ವಿಶ್ವಾಸವು ಗಾಂಧೀಜಿಯವರಿಗೆ ಇತ್ತೊ ಅದು ಮಾತ್ರ ಈಗ ಇಲ್ಲದಾಗಿದೆ. ಆದರೆ ಪ್ರತಿಪಕ್ಷಿಯಲ್ಲಿ ಕೆಡುಕುತನವು ಹೆಚ್ಚಿದಂತೆ

ನಾವು ಹೆಚ್ಚೆಚ್ಚು ಅಹಿಂಸಾಮಯರಾಗಲಿಕ್ಕೆಬೇಕೆಂಬದೆ ಸತ್ಯಾಗ್ರಹದ ನೀತಿ, ಎಂದು ಗಾಂಧೀಜಿಯವರ ಅಂಬೋಣವಿದೆ. ಆದುದರಿಂದ ಸದ್ಯಕ್ಕೆ ಗಾಂಧೀಜಿಯವರು ಅಸಹಕಾರವನ್ನು ಹೂಡಿದ್ದರೂ ಈ ಸಂಕಟ ಕಾಲದಲ್ಲಿ ಇಂಗ್ಲಂಡಕ್ಕೆ ಹೆಚ್ಚಿನ ಅಡಚಣಿ ಉಂಟಾಗುವಂತೆ ವರ್ತಿಸುವುದು ಅವರಿಗೆ ಸರಿದೋರುವುದಿಲ್ಲ. ಈ ಅವರ ವೃತ್ತಿಯ ಮೂಲಕ ಆದ ಪರಿಣಾಮವೇನಂದರೆ, ಇಂಗ್ಲಂಡ ಅತ್ತ ದುರ್ಬಲವಾಗುತ್ತ ನಡೆದಂತೆ ತಮ್ಮಿಂದ ಇಂಗ್ಲಂಡಕ್ಕೆ ತೊಂದರೆಯಾಗದಂತೆ ಅವರು ಹೆಚ್ಚೆಚ್ಚು ಎಚ್ಚರಪಡಲಾರಂಭಿಸಿರುವರು.

ಇನ್ನು ಹೋದ ಯುದ್ಧ ಹಾಗೂ ಈ ಯುದ್ಧ ಈ ಎರಡರಲ್ಲಿ ಇನ್ನೊಂದು ದೊಡ್ಡ ಅಂತರವಿದೆ. ಯುದ್ಧದಲ್ಲಿ ಸೇರಬೇಕೊ ಸೇರಬಾರದೊ ಎಂಬ ವಿಷಯವನ್ನು ನಿರ್ಣಯಿಸುವಾಗ ಆ ಅಂತರವು ಸಾಕಷ್ಟು ಪರಿಣಾಮಕಾರಿಯಾಗಿದೆ.

ಹೋದ ಯುದ್ಧಕಾಲದಲ್ಲಿ ನಾವು ತೀರ ಪರಾಧೀನರಿದ್ದೆವು. ನಮ್ಮ ಮೇಲೆ ಯಾವ ಹೊಣೆಯೂ ಇರಲಿಲ್ಲ. ನಮ್ಮನ್ನು ಕೇಳುವವರೇ ಇದ್ದಿಲ್ಲ. ಆದರೆ ಆಗ ಇಂಗ್ಲೀಷರಿಗೆ ಸಹಾಯ ಸಿಗದಂತೆ ನಾವು ತಕ್ಕಮಟ್ಟಿಗೆ ಪ್ರಯತ್ನ ಮಾಡಿ ಸ್ವಲ್ಪ ಉಪದ್ರವ ಕೊಡುವುದು ಸಾಧ್ಯವಿತ್ತು. ಅರ್ಥಾತ್ ಹಾಗೆ ಮಾಡುವುದೂ ಸತ್ಯಾಗ್ರಹ ನೀತಿಗೂ ಅಹಿಂಸಾನೀತಿಗೂ ವಿರುದ್ಧವಾಗುತಿತ್ತು. ಇನ್ನು ಯುದ್ಧ ಪ್ರಯತ್ನಕ್ಕೆ ತಡೆಹಾಕುವ ಮಾತು ಬೇರೆ ಹಾಗೂ ಸಕ್ರಿಯ ಸಹಾಯವನ್ನು ಒದಗಿಸಿಕೊಡುವ ಮಾತು ಬೇರೆ. ಆಗ ಪ್ರಯತ್ನಗಳನ್ನು ತಡೆಗಟ್ಟದೆ ಹಾಗೆಯೆ ಅಸಹಕಾರ ಮಾಡಲಿಕ್ಕೂ ಬರುತ್ತಿತ್ತು. ಆದರೆ ಆಗ ಆ ಮಧ್ಯಮಾರ್ಗವನ್ನು ಬಿಟ್ಟು ಸಕ್ರಿಯ ಸಹಾಯವನ್ನು ಮಾಡುವದೆ ತಮ್ಮ ಧರ್ಮವೆಂದು ಗಾಂಧೀಜಿಯವರು ತಿಳಿದರು. ‘ನಾವು ಇಂಗ್ಲಂಡದ ಮೂಲಕ ಸುರಕ್ಷಿತರಿರುವೆವು ಹಾಗೂ ಒಳ್ಳೆ ಆನಂದದಿಂದ ಆ ಸಂರಕ್ಷಣವನ್ನು ಸ್ವೀಕರಿಸಿರುವೆವು. ಅಂದಬಳಿಕ ಅವರಿಗೆ ಸಕ್ರಿಯ ಸಹಾಯ ಮಾಡುವುದು, ಶಸ್ತ್ರಧಾರಿಗಳಾಗಿ ಅವರ ಪರವಾಗಿ ಯುದ್ಧ

ದಲ್ಲಿ ಹೋರಾಡುವುದು ಸಹ ನಮ್ಮ ಧರ್ಮವು' ಎಂದು ಆಗ ಅವರ ವಿಚಾರಸರಣಿ ಇತ್ತು. ಆದರೆ ಈಗಿನ ಪರಿಸ್ಥಿತಿಯಲ್ಲಿ ಈ ವಿಚಾರ ಸರಣಿಯಲ್ಲಿ ಏನೂ ತಥ್ಯವಿಲ್ಲ. ಯಾಕಂದರೆ ಆಗಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಮಹದಂತರವಿದೆ. ಆದುದರಿಂದ ಆ ಹಳೆಯ ಯುಕ್ತಿವಾದವು ಈಹೊತ್ತು ಹಳಸಿಹೋಗಿರುವುದು.

ಈ ಸಾರೆ ಯುದ್ಧ ಪ್ರಾರಂಭವಾದಾಗ ಪ್ರಾಂತಿಕ ಸ್ವರಾಜ್ಯವು ಜಾರಿಯಲ್ಲಿತ್ತು ಹಾಗೂ ಎಂಟು ಪ್ರಾಂತಗಳ ರಾಜ್ಯಸೂತ್ರಗಳು ಕಾಂಗ್ರೆಸ ಮಂತ್ರಿಮಂಡಳಗಳ ಕೈಯಲ್ಲಿದ್ದವು. ಇನ್ನೊಂದು ಪ್ರಾಂತ ದಲ್ಲಿ ಅಂದರೆ ಸಿಂಧದಲ್ಲಿ ಕೂಡ ಅರೆವಾಸಿ ಕಾಂಗ್ರೆಸ್ಸಿನ ವರ್ಚಸ್ಸು ನಡೆಯುತಿತ್ತು. ಈ ರೀತಿ ಒಂಬತ್ತು ಪ್ರಾಂತಗಳಲ್ಲಿ ಕಾಂಗ್ರೆಸ್ಸಿನ ಆಧಿ ಪತ್ಯವು ಇತ್ತೆಂದು ಹೇಳಬಹುದು. ಕೇಂದ್ರದಲ್ಲಿಯೂ ಸ್ವರಾಜ್ಯವು ಇರತಕ್ಕದ್ದು ಎಂಬ ಮಾತು ಸರಕಾರಕ್ಕೆ ಒಪ್ಪಿತವಾಗಿತ್ತು. ಇದನ್ನೆಲ್ಲ ನೋಡಿದರೆ ನಾವು ಸ್ವರಾಜ್ಯದ ಸಮಸಮೀಪ ಹೋಗಿದ್ದೇವೆಂದು ಅನು ಮಾನ ಮಾಡಲು ಅವಕಾಶವುಂಟಾಗಿತ್ತು. ಆದುದರಿಂದ ನಾವು ಕೇವಲ ಬ್ರಿಟಿಶ ಸರಕಾರದಿಂದಲೆ ರಕ್ಷಿಸಲ್ಪಡುತ್ತಿದ್ದೇವೆ ಎಂದು ಅನ್ನ ಲಿಕ್ಕಾಗದು. ನಾವು ಸ್ವಸಂರಕ್ಷಣೆ ಮಾಡಿಕೊಳ್ಳಬಹುದು ಎಂದು ಅನ್ನುವಷ್ಟು ಯೋಗ್ಯತೆ ನಮ್ಮಲ್ಲಿ ಬಂದಿದೆ. ಹೋದ ಯುದ್ಧದ ಸಮಯದಲ್ಲಿ ಇದ್ದಷ್ಟು ಪರಾಧೀನರು ನಾವು ಈಗ ಇಲ್ಲ. ನಾವು ಸ್ವಸಂರಕ್ಷಣೆ ಯಾವ ರೀತಿ, ಹೇಗೆ ಮಾಡಿಕೊಳ್ಳುವೆವು, ಎಂಬುದನ್ನು ಹೇಳುವ ನೈತಿಕ ಅಧಿಕಾರವು—ಕಾಯದೇದಿಂದ ಇಲ್ಲದಿದ್ದರೂ— ನಮಗೆ ಬಂದಿದೆ. ಇಂಗ್ಲಂಡಕ್ಕೆ ತೊಂದರೆ ಕೊಡಕೂಡದು ಎಂದು ಹೇಳುವುದು ತಮ್ಮ ಧರ್ಮವೆಂದು ಗಾಂಧೀಜಿಯವರು ಹೇಳುವ ಕಾಲಕ್ಕೆಯೆ ಭಾರತದ ಮೇಲೆ ಪರರು ಆಕ್ರಮಣ ಮಾಡಿದರೆ ಈ ದೇಶ ವನ್ನು ಹಿಂಸೆಯಿಂದ ರಕ್ಷಿಸಬೇಕೊ ಅಹಿಂಸೆಯಿಂದ ರಕ್ಷಿಸಬೇಕೊ ಇದನ್ನು ಹೇಳುವುದಾದರೂ ಅವರ ಧರ್ಮವಿದೆ. ನಾವು ಶತ್ರುಗಳನ್ನು ಸಾಯುಗೊಲ್ಲುತ್ತ ಸಾಯಬೇಕೊ ಅವರನ್ನು ನೋಯಿಸದೆ ಸಾಯಲು ಕಲಿಯಬೇಕೊ, ಎಂಬುದನ್ನು ಹೇಳುವುದು ಅವರ ಧರ್ಮವಾಗಿದೆ.

ಈಗಿನ ಎಲ್ಲ ಪರಿಸ್ಥಿತಿಯನ್ನು ಚನ್ನಾಗಿ ಪರಿಶೀಲಿಸಿ ಗಾಂಧೀಜಿಯವರು ಸತ್ಯಾಗ್ರಹದ ಹೋರಾಟವನ್ನು ಹೂಡಿರುವರೆಂಬುದು ನಿಜ. ಆದರೆ ಉಗ್ರವಾದ ಹಿಂಸೆಯನ್ನು ಕೂಡ ಅಹಿಂಸೆಯಿಂದಲೆ ನಿರೋಧಿಸತಕ್ಕದ್ದೆಂದು ಅವರು ಮೊದಲೇ ನಿಶ್ಚಯಿಸಿರುವರು. ಅಬಿಸೀನಿಯಾ, ಸ್ಪೇನ, ಚೀನ ಮುಂತಾದ ವಿಪದ್ಗ್ರಸ್ತ ರಾಷ್ಟ್ರಗಳಿಗೂ ಇದೇ ಉಪದೇಶವನ್ನು ಅವರು ಮಾಡಿರುವರು. ಸಂಕಟಪರಂಪರೆಯಲ್ಲಿ ತೊಳಲಾಡುತಿರುವ ರಾಷ್ಟ್ರಗಳಿಗೆ ಕೊಟ್ಟ ಸಲಹೆಗೆ ವಿಪರೀತವಾದ ಸಲಹೆಯನ್ನು ತಮ್ಮ ದೇಶದವರಿಗೆ ಅವರು ಕೊಡುವುದು ಸಾಧ್ಯವೋ ?

ಗಾಂಧೀಜಿಯವರ ದೃಷ್ಟಿಯಿಂದ ಅಹಿಂಸೆಯ ಆತ್ಯಂತಿಕ ಪರೀಕ್ಷೆಯ ಕಾಲವು ಈಗ ಬಂದುಬಿಟ್ಟಿದೆ. ಅಹಿಂಸೆಯ ಪ್ರಯೋಗದ ಸಫಲತೆಯ ಪ್ರತ್ಯಕ್ಷ ಪ್ರದರ್ಶನ ಮಾಡಬೇಕಾಗಿದ್ದರೆ ಇದಕ್ಕೂ ಉತ್ತಮ ಸಂಧಿ ಇನ್ನೊಂದಾವುದು ? ನೈತಿಕ ಹಾಗೂ ವ್ಯವಹಾರಿಕ ದೃಷ್ಟಿಯಿಂದ ಸತ್ಯಾಗ್ರಹದ ಸಮರವನ್ನು ಹೂಡುವದಕ್ಕೂ ಮೊದಲೇ ಈಗ ನಡೆದ ಅತ್ಯುಗ್ರ ಹಾಗೂ ವ್ಯವಸ್ಥಿತವಾದ ಹಿಂಸೆಯನ್ನು ಹಿಂದುಸ್ತಾನವಂತೂ ಹಿಂಸಾತ್ಮಕ ಮಾರ್ಗದಿಂದ ವಿರೋಧಿಸುವುದು ಸಾಧ್ಯವಿಲ್ಲ, ಎಂಬ ಮಾತನ್ನು ಗಾಂಧೀಜಿಯವರು ನಿರ್ಣಯಿಸಿದ್ದರು. ಶಾಸ್ತ್ರೀಯ ಹಾಗೂ ವ್ಯವಸ್ಥಿತ ರೀತಿಯಿಂದ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ರಾಷ್ಟ್ರಗಳನ್ನು ಎದುರಿಸುವ ಶಸ್ತ್ರಪದ್ಧತಿ ಹಿಂದುಸ್ತಾನದಲ್ಲಿ ಇಲ್ಲೇ ಇಲ್ಲ. ಆದರೆ ತಾತ್ವಿಕ ದೃಷ್ಟಿಯಿಂದ ವಿಚಾರ ಮಾಡುವಾಗ ನಮ್ಮ ಸಿದ್ಧತೆ ಮುಂತಾದ್ದು ಗೌಣ ವಿಷಯವು. 'ಭಯಂಕರವಾದ ಹಿಂಸೆಯನ್ನು ಅಹಿಂಸೆಯಿಂದ ಎದುರಿಸಿ ನಾವು ಗೆದ್ದು ತೋರಿಸಿದರೆ ಪ್ರಪಂಚದ ಮುಂದೆ ಒಂದು ಧಾರ್ಮಿಕ ಶಸ್ತ್ರದ ಪ್ರದರ್ಶನವನ್ನು ಮಾಡಿ ತೋರಿದಂತೆ ಆಗಲಿಕ್ಕಿಲ್ಲವೆ', ಎಂಬುದೆ .ಗಾಂಧೀಜಿಯವರ ಪ್ರಶ್ನೆಯಾಗಿತ್ತು. ಇಂಗ್ಲಂಡ ಹಾಗೂ ಹಿಂದುಸ್ತಾನಗಳ ನಡುವೆ ಒಪ್ಪಂದವಾದರೆ ಹಿಂದುಸ್ತಾನವು ಈ ಯುದ್ಧದಲ್ಲಿ ಇಂಗ್ಲಂಡಕ್ಕೆ ಕೇವಲ ನೈತಿಕ ಸಹಾಯ ಕೊಡಬೇಕೇ ಹೊರತು ಪ್ರತ್ಯಕ್ಷ ಹಿಂಸಾಮಯ ಯುದ್ಧದಲ್ಲಿ ಭಾಗವಹಿಸಿ ತನ್ನ ನೈತಿಕ ವೃತ್ತಿಗೆ ಕಲಂಕವುಂಟಾಗು

ವಂತೆ ಮಾಡಬಾರದೆಂದು ಗಾಂಧೀಜಿಯವರು ಅಭಿಪ್ರಾಯಪಟ್ಟ ಕಾರಣ ವಾದರೂ ಈ ಅವರ ನಿರ್ಣಯವೆ.

ಕಾಂಗ್ರೆಸ್ಸಿನ ಮುಖಂಡರು ಈ ನೀತಿಯ ಶ್ರೇಷ್ಠತೆಯನ್ನು ಒಪ್ಪುತಿದ್ದರು. ಆದರೆ ಈ ಮಾರ್ಗದಿಂದ ನಡೆಯಲು ಹಿಂಜರಿಯುತಿದ್ದರು. ತೀಕ್ಷ್ಣ ಬುದ್ಧಿವಾದಿಗಳಾದ ಚಕ್ರವರ್ತಿ ರಾಜಗೋಪಾಲಾಚಾರ್ಯ ರಂಥವರು ಯುದ್ಧಮಾಡುವ ನೀತಿಗೆ ಧರ್ಮ ಎಂಬ ಹೆಸರನ್ನು ಕೊಡಲು ಸಹ ಸಿದ್ಧರಿದ್ದಿಲ್ಲ. ಮೊದಮೊದಲು ಈ ಪ್ರಶ್ನೆಗೆ ಅಷ್ಟೊಂದು ಮಹತ್ವವುಂಟಾಗಲಿಲ್ಲ. ಕಾಂಗ್ರೆಸ್ಸಿನ ಬೇಡಿಕೆಗಳು ಸರಕಾರದೆದುರಿಗೆ ಮಂಡಿಸಲಾಗಿದ್ದವು. ಸರಕಾರದವರು ಅವುಗಳನ್ನು ಪೂರೈಸಲಿಲ್ಲ. ಇಷ್ಟೇ ಅಲ್ಲ, ಆ ಬಗ್ಗೆ ಯಾವ ಆಶೆಯನ್ನೂ ತೋರಿಸಲಿಲ್ಲ. ಕಾಂಗ್ರೆಸ್ಸಿನ ಗೊತ್ತುವಳಿಯ ಅರ್ಥವನ್ನು ಕಾಂಗ್ರೆಸ್ಸಿನಲ್ಲಿಯ ಎರಡೂ ಪಕ್ಷದವರು ತಮ್ಮ ಮನಸಿನಲ್ಲಿ ಬೇರೆಬೇರೆಯಾಗಿ ಮಾಡಿಕೊಂಡಿದ್ದರು. ಸರಕಾರದೊಡನೆ ಒಪ್ಪಂದವಾದ ಬಳಿಕ ಸಹ ಕೇವಲ ನೈತಿಕ ಬೆಂಬಲವನ್ನು ಮಾತ್ರ ಕೊಡತಕ್ಕದ್ದೆಂದು ಗಾಂಧೀವಾದಿಗಳು ತಿಳಕೊಂಡಿದ್ದರು. ಜನ-ಧನ ಸಹಾಯವನ್ನು ಕೂಡ ಕೊಡುವುದು ತಮ್ಮ ಕರ್ತವ್ಯವೆಂದು ಇತರ ಮುಖಂಡರು ತಿಳಿದಿದ್ದರು. ಕಾಂಗ್ರೆಸ್ಸು ಒಂದರಹಿಂದೊಂದು ಗೊತ್ತುವಳಿಯನ್ನು ಸ್ವೀಕರಿಸುತ್ತ ಹೋಯಿತು. ಈ ಎರಡು ಪಕ್ಷದವರು ಅವುಗಳ ಬೇರೆ ಬೇರೆ ಎರಡು ಅರ್ಥಗಳನ್ನು ತಮ್ಮ ಮನಸಿನಲ್ಲಿ ಮಾಡುತ್ತ ಹೋದರು.

ಹಿಂದುಸ್ತಾನವು ಇಂಗ್ಲಂಡಕ್ಕೆ ಕೇವಲ ನೈತಿಕ ಬೆಂಬಲವನ್ನು ಮಾತ್ರ ಕೊಡಬಲ್ಲದು ಎಂಬ ತಮ್ಮ ಅಭಿಪ್ರಾಯವನ್ನು ಗಾಂಧೀಜಿಯವರು ತಮ್ಮ ಲೇಖ, ಹೇಳಿಕೆ, ವ್ಹಾಯಿಸರಾಯರೊಡನೆ ಆದ ಮಾತುಕತೆ ಮುಂತಾದವುಗಳಲ್ಲಿ ಸ್ಪಷ್ಟಗೊಳಿಸಿದ್ದರು. ಆದರೂ ಒಪ್ಪಂದವಾದ ಪಕ್ಷದಲ್ಲಿ ಜನ-ಧನಗಳ ಸಹಾಯವು ಸಹ ದೊರೆಯುವುದು ಅಸಂಭವವಿಲ್ಲ ಎಂದು ವ್ಹಾಯಿಸರಾಯರು ಕೂಡ ತಮ್ಮ ಮನಸಿನಲ್ಲಿ ಎಣಿಸಿರಲಿಕ್ಕೆ ಸಾಕು. ದಿನಗಳು ಸಾಗಿದವು, ತಿಂಗಳು

ದಾಟಿದವು. ಜರ್ಮನಿಯು ಕರಾಲ ಮೃತ್ಯುಸಮ ದಾಳಿಯು ಒಂದರ ಹಿಂದೊಂದು ರಾಷ್ಟ್ರಗಳನ್ನು ಆಕ್ರಮಿಸುತ್ತ ಮುಂದೆ ಸಾಗಿತು. ಫ್ರಾನ್ಸ್ ಬಿದ್ದೊಡನೆ 'ಕೊಲ್ಲುತ್ತ ಸಾಯಬೇಕೋ' 'ನೋಯಿಸದೆ ಸಾಯಬೇಕೊ' ಎಂಬ ಪ್ರಶ್ನೆಗೆ ಹೆಚ್ಚು ಮಹತ್ವ ಬರಲಾರಂಭಿಸಿತು. ಆ ವರೆಗೆ ಎರಡೂ ಪಕ್ಷಗಳು ತಮ್ಮ ತಮ್ಮ ಕಲ್ಪನೆಗಳಂತೆ ಗೊತ್ತುವಳಿಗಳ ಅರ್ಥ ಮಾಡಿಕೊಂಡು ಪರಸ್ಪರ ಕೂಡಿ ನಡೆದಿದ್ದರು. ಅದು ಈಗ ಅಸಂಭವವಾಗಲಾರಂಭಿಸಿತು. ಈ ಮತಭೇದವು ಮೊದಲಿನಿಂದ ಗಾಂಧೀಜಿಯವರಿಗೆ ಗೊತ್ತಿತ್ತು. ಆದರೆ ಸಹಕಾರಿಗಳು ತಾವಾಗಿ ತಮ್ಮನ್ನು ಬಿಡುವವರೆಗೆ ಕಾಂಗ್ರೆಸ್ಸಿನಲ್ಲಿಯ ತಮ್ಮ ಹೊಣೆಗಾರಿಕೆಯನ್ನು ಅವರು ಬಿಡುವುದು ಸಾಧ್ಯವಿರಲಿಲ್ಲ. ಇನ್ನು ಮುಂದೆ ಗಾಂಧೀಜಿಯವರನ್ನೂ ತಮ್ಮೊಡನೆ ಎಳಕೊಂಡು ಹೋಗುವುದು ಅನ್ಯಾಯ, ಎಂದು ಕೊನೆಗೆ ಅವರ ಸಹಕಾರಿಗಳಿಗೆ ಎನಿಸಿತು. ೨೦-೬-೪೦ ನೆ ದಿನ ವರ್ಧಾದಲ್ಲಿ ನಡೆದ ವರ್ಕಿಂಗ ಕಮೀಟಿ ಸಭೆಯಲ್ಲಿ ಒಂದು ಉದ್ದವಾದ ಗೊತ್ತುವಳಿ ಮಾಡಿ ಗಾಂಧೀಜಿಯವರಿಗೆ ಅಪ್ಪಣೆ ಕೊಡಲಾಯಿತು.

ಗಾಂಧೀಜಿಯವರ ಜೀವನದಲ್ಲಿ ಇದೂ ಒಂದು ತೀರ ಹೊಸ ಘಟನೆಯೆ ಸೈ. ಮಹಾಭಾರತದಲ್ಲಿ ಯುಧಿಷ್ಠಿರನು ಸ್ವರ್ಗಾರೋಹಣ ಮಾಡುತಿರುವಾಗ ನಡೆದ ಘಟನೆಯ ವರ್ಣನೆ ಹಾಗೂ ಈ ಘಟನೆ ಇವುಗಳಲ್ಲಿ ಅತ್ಯಂತ ಸಾಮ್ಯವಿದೆ ಎಂದು ಹೇಳಬಹುದು. ಗಾಂಧೀಜಿ ಹಾಗೂ ಇತರ ಮುಖಂಡರು ಇವರ ನಡುವೆ ಆದ ಈ ಮತಭೇದದ ಚರ್ಚೆ ಮಾಡುವಾಗ ನಾನು ಅಂದದ್ದು, 'ಬಾಪೂ, ಇದಕ್ಕೆ ಮತಭೇದವೆನ್ನಲಾಗದು. ಬೆಲ್ಲದ ಪೆಂಟಿಗಳಲ್ಲಿ ಒಂದು ಹೆಚ್ಚು ಸಿಹಿ, ಒಂದು ಕಡಿಮೆ ಸಿಹಿ ಇದ್ದಾಕ್ಷಣಕ್ಕೆ ಅದೇನು ಮತಭೇದವಾಯಿತೇ? ನೀವು ಶುದ್ಧ ಧರ್ಮವನ್ನು ಹೇಳುತಿರುವಾಗ ನಿಮ್ಮ ಸಹಕಾರಿಗಳು ಆಪದ್ಧರ್ಮವನ್ನು ಹೇಳುತಿರುವರು. ಇಷ್ಟೇ. ಶುದ್ಧ ಧರ್ಮದ ಹೋಮಕುಂಡದಲ್ಲಿ ತಮ್ಮ ವ್ಯವಹಾರಿಕ ವೃತ್ತಿಯ ಬಲಿದಾನವನ್ನು ಕೊಡಲು ಸಿದ್ಧರಾಗುವಷ್ಟು ಬಲಿಷ್ಠ ಶ್ರದ್ಧೆ ಅವರಲ್ಲಿಲ್ಲ. ತಮ್ಮಲ್ಲಿರುವಷ್ಟೆ ಜೀವಂತಶ್ರದ್ಧೆ ಎಲ್ಲರಲ್ಲಿಯೂ ಇರಬೇಕೆಂದು ನೀವು ಅಪೇಕ್ಷಿಸುವು

ದಾದರೂ ಏಕೆ? ಯುಧಿಷ್ಠಿರನು ಸ್ವರ್ಗಕ್ಕೆ ಹೊರಟಾಗ ಅವನ ತೀರ ಸಮೀಪದವರೆಲ್ಲರೂ ಒಬ್ಬೊಬ್ಬರೆ ಹಿಂದೆ ಬೀಳಲಾರಂಭಿಸಿದರು. ನಿಮ್ಮ ದಾದರೂ ಅದೇ ಗತಿ ಇದೆ. ನೀವು ಮುಂದೆ ಹೋದಹಾಗೆ, ಮೇಲಕ್ಕೆ ಏರುತ್ತ ಹೋದಂತೆ, ನಿಮ್ಮ ಜೊತೆಗಾರರು ಹಿಂದೆ ಉಳಿಯುತಿರುವರು, ದಣಿದು ಬೀಳುತಿರುವರು.' ಹತ್ತರ ಕುಳಿತ ಡಾ. ಸುಶೀಲಾ ನಾಯರರು ಚೇಷ್ಟೆಯಿಂದ ಅಂದದ್ದು, 'ಆದರೆ ಯುಧಿಷ್ಠಿರನೊಡನೆ ಅವನ ನಾಯಿ ಯಂತೂ ಕೊನೆವರೆಗೆ ಹೋಯಿತು. ಬಾಪೂ, ಈ ದೃಷ್ಟಾಂತದಂತೆ ನೋಡಿದರೆ ಸ್ವರ್ಗವನ್ನು ಮುಟ್ಟುವ ನಾಯಿ ಯಾವುದು?' ತಟ್ಟನೆ ಗಾಂಧೀಜಿಯವರು, 'ಮೊದಲು ಆ ಯುಧಿಷ್ಠಿರನಾರು, ಎಂಬುದನ್ನು ಹೇಳಬಾರದೆ!' ಅಂದರು. ದೊಡ್ಡ ವಿಷಯದ ಚರ್ಚೆಯ ಮೂಲಕ ಎಲ್ಲರ ಮುಖದ ಮೇಲೆ ಪಸರಿಸಿದ ಗಂಭೀರತೆ ಈ ಚೇಷ್ಟೆಯಿಂದ ದೂರ ವಾಯಿತು. ಎಲ್ಲರೂ ಹೊಟ್ಟೆತುಂಬ ನಕ್ಕರು!

ಇರಲಿ ಒಟ್ಟಿಗೆ ಇದರ ಪರಿಣಾಮವೇನು? ಕಾಲಪುರುಷನು ಇತಿಹಾಸವನ್ನು ಬರೆಯುತ್ತ ಮುಂದೆ ಸಾಗಿರುವನು. ಕೊನೆ ಇನ್ನೂ ಆಗಿಲ್ಲ. ಆಗು ಹೋಗುಗಳು ಭವಿಷ್ಯ ಗರ್ಭದಲ್ಲಿ ಹುದುಗಿಕೊಂಡಿವೆ. ಆದರೆ ಒಂದು ಸಂಗತಿಯು ಸ್ಪಷ್ಟವು. ಕಾಂಗ್ರೆಸ್ಸಿನ ಅಹಿಂಸಾವಾದ ವೆಂದರೆ ಆಯಾಕಾಲಕ್ಕೆ ಉಪಯುಕ್ತವಾದ ಧೋರಣೆ ಎಂದು ಕೈಕೊಂಡ ಮಾರ್ಗವದು, ಆದರೆ ಗಾಂಧೀಜಿಯವರ ಮಟ್ಟಿಗೆ ಅದು ಅವರ ಜೀವಾಳವು. ಅವರ ಅಹಿಂಸೆಯು ಕಾಂಗ್ರೆಸ್ಸನ್ನು ಆವರಿಸಿ ಬಿಡಲಿಕ್ಕಿಲ್ಲ ಎಂದು ಯಾರು ಹೇಳಬಲ್ಲರು? ಉಪಯುಕ್ತತಾವಾದ ದಿಂದ ಈವರೆಗೆ ಮರೆಯಾದ ಕಾಂಗ್ರೆಸ್ಸಿನ ಅಹಿಂಸೆಯು ಇನ್ನು ಮುಂದೆ ತನ್ನ ಶುದ್ಧ ಸ್ವರೂಪವನ್ನು ಪ್ರಕಟಗೊಳಿಸಲಿಕ್ಕಿಲ್ಲ, ಎಂದು ಯಾರು ಹೇಳಬೇಕು?

ಕಾಂಗ್ರೆಸ್ಸು ಎರಡು ತಿಂಗಳು ಉಪಯುಕ್ತತಾವಾದಕ್ಕನುಸರಿಸಿ ನಡೆದು ಮತ್ತೆ ಮುಂಬಯಿಯಲ್ಲಿ ತನ್ನ ಎಲ್ಲ ಸೂತ್ರಗಳನ್ನು ಗಾಂಧೀಜಿ ಯವರ ಕೈಯಲ್ಲಿ ಕೊಟ್ಟಿತು! ತನ್ನ ಇಚ್ಛೆ ಇರಲಿ ಬಿಡಲಿ, ಕಾಂಗ್ರೆಸ್ಸು

ಗಾಂಧೀವಾದದತ್ತ ಆಕರ್ಷಿತವಾಗುತ್ತಲಿದೆ ಎಂಬದಕ್ಕೆ ಇದು ಸಾಕ್ಷಿಯಲ್ಲವೆ ?

ಹೊರಗಿನಿಂದ ಹಿಂದುಸ್ತಾನದ ಮೇಲೆ ಆಕ್ರಮಣವಾದ ಪಕ್ಷದಲ್ಲಿ ದೇಶದ ರಕ್ಷಣವನ್ನು ಮಾಡುವ ಪ್ರಸಂಗ ಬಂದಾಗ ನಮ್ಮ ಮುಖಂಡರ ಮನಸಿನಲ್ಲಿ ಸಾಕಷ್ಟು ಅಲ್ಲೋಲ ಕಲ್ಲೋಲವಾಗುವುದೆಂದು ನಾನು ಎಣಿಸಿದ್ದೇನೆ. ಯಾವದೊಂದು ದೊಡ್ಡ ರಾಷ್ಟ್ರದೊಡನೆ ಶಸ್ತ್ರಾಸ್ತ್ರಗಳಿಂದ ಹಿಂಸಾಮಾರ್ಗದಿಂದ ಹೋರಾಡುವ ಹುರುಪು- ಅದು ನಿಜವಾಗಿ ಹುರುಪು ಎಂದೆನಿಸಿದರೆ- ನಮಗೆ ಇದ್ದರೆ ಅದು ಸದ್ಯಕ್ಕೆ ಸಣ್ಣ ಬಾಯಲ್ಲಿ ದೊಡ್ಡ ತುತ್ತುಕೊಂಡಂತೆ. ಇದು ಸ್ಪಷ್ಟವು. ಇನ್ನು ನಮ್ಮ ಹತ್ತರ ಸತ್ಯಾಗ್ರಹದ ಶಸ್ತ್ರವಿದೆ. ಅದು ಸಾಣಿಗೆ ಹಿಡಿದು ಹರತಾಗಿ ಪೂರ್ಣ ಸಿದ್ಧವಾಗಿದೆ ಎಂದು ಹೇಳಲು ಬರದೆ ಇದ್ದರೂ ಆ ಶಸ್ತ್ರವು ಈಹೊತ್ತು ಇನ್ನಾವ ರಾಷ್ಟ್ರದ ಹತ್ತರವೂ ಇಲ್ಲ ಎಂದು ಹೇಳಬಹುದು. ಆದುದರಿಂದ ನಿಜವಾಗಿಯೆ ಹಿಂದುಸ್ತಾನದ ಸಂರಕ್ಷಣದ ಪ್ರಶ್ನೆ ಉಂಟಾದರೆ ಹಾಗೂ ಆ ಕಾಲಕ್ಕೆ ಗಾಂಧೀಜಿಯವರು ಜೀವಂತರಿದ್ದರೆ ಈ ಸತ್ಯಾಗ್ರಹ ಶಸ್ತ್ರವನ್ನು ಹಾಗೆಯೆ ಇಟ್ಟುಕೊಂಡು ಅವರು ಸುಮ್ಮನಿರಲಿಕ್ಕಿಲ್ಲ. ಹಿಂದುಸ್ತಾನದ ಜನರು ಅಹಿಂಸಾತ್ಮಕ ಯುದ್ಧದಲ್ಲಿ ಎಂದಿಗೂ ಹಿಂದೆ ಬೀಳಲಿಕ್ಕಿಲ್ಲ ಎಂಬ ವಿಶ್ವಾಸವನ್ನು ಗಾಂಧೀಜಿಯವರು ತಳೆದಿರುವರು. ಮುಖಂಡರಲ್ಲಿಯೆ ಶ್ರದ್ಧೆ ಕಡಿಮೆ ಇದೆ, ಜನರಲ್ಲಿ ಸಾಕಷ್ಟಿದೆ ಎಂದು ಗಾಂಧೀಜಿಯವರ ಅಭಿಪ್ರಾಯವು.

ಏನೇ ಇರಲಿ. ಒಂದು ಸಂಗತಿ ಸಿದ್ಧವಾಯಿತು. ಅದೇನೆಂದರೆ, ಅಹಿಂಸೆಯಲ್ಲಿದ್ದ ಗಾಂಧೀಜಿಯವರ ಜೀವಂತ ಶ್ರದ್ಧೆ. ಸಿದ್ಧವಾಗತಕ್ಕ ಇನ್ನೊಂದು ಸಂಗತಿ ಇದೆ. ಅದಾವದೆಂದರೆ ಅಹಿಂಸಾಶಸ್ತ್ರದ ಕೌಶಲ, ಅದಕಾಗಿ ಪ್ರಸಂಗವು ಬರುತ್ತಲಿದೆ ಎಂದು ಹೇಳಬಹುದು. ಗಾಂಧೀಜಿಯವರ ಜೀವನ ಕಾಲದಲ್ಲಿ ಅಂಥ ಪ್ರಸಂಗವು ಬಂದುದಾದರೆ ಹಾಗೂ ಆ ಶಸ್ತ್ರಕ್ಕೆ ವಿಜಯವು ಪ್ರಾಪ್ತವಾದರೆ ಈ ಪ್ರಪಂಚದ ಭಾವೀ ಇತಿಹಾಸ ನಿರ್ಮಾಣದ ದೃಷ್ಟಿಯಿಂದ ಅದೊಂದು ಅತ್ಯದ್ಭುತ ಸಂಗತಿ ಎನಿಸುವದು.

ಭವಿಷ್ಯದ ಮಾತು ಹಾಗಿರಲಿ. ಇಂಗ್ಲೀಷರಿಗೆ ತೊಂದರೆಯನ್ನುಂಟು ಮಾಡಕೂಡದು ಎಂಬ ಗಾಂಧೀಜಿಯವರ ಇಚ್ಛೆಯನ್ನು ಈ ದೇಶದವರು ಏಕರೀತಿಯಾಗಿ ಮನ್ನಿಸಿರುವರು. ಖಾಕಸಾರರು ನಡುವೆ ತೊಂದರೆ ಕೊಟ್ಟರು, ಆದರೆ ಕಾಂಗ್ರೆಸ್ಸು ಸುಮ್ಮನಿದ್ದಿತು. ಇದು ಬಲಿಷ್ಠರ ಶಾಂತಿಯು. ಕಾಂಗ್ರೆಸ್ಸು ಈಹೊತ್ತು ಸಹಜವಾಗಿ ಲಕ್ಷಾಂತರ ಜನರನ್ನು ಬಲಿಕೊಡಬಲ್ಲದು ಹಾಗೂ ಸೆರೆಮನೆಗಳನ್ನು ತುಂಬಿ ಬಿಡಬಹುದು. ಆದರೆ ಗಾಂಧೀಜಿಯವರು ಶಾಂತಿಯನ್ನು ಸ್ಥಿರವಾಗಿಟ್ಟರು. ಯುದ್ಧಸಮಯದಲ್ಲಿ ಜನರ ಮೇಲೆ ತಮ್ಮ ವರ್ಚಸ್ಸು ಎಷ್ಟಿದೆ ಎಂಬುದನ್ನು ಸಿದ್ಧಗೊಳಿಸಿದರು. ಈಹೊತ್ತು ಇದ್ದಷ್ಟು ಶಾಂತಿಯು ದೇಶದಲ್ಲಿ ಎಂದೂ ಇರಲಿಲ್ಲ. ನಾವು ನಮ್ಮ ಔದಾರ್ಯದ ಪ್ರದರ್ಶನವನ್ನು ಮಾಡಿದಂತಾಯಿತು. ಇದರಿಂದ ನಮ್ಮ ಶಕ್ತಿ ಎಷ್ಟಿದೆ ಎಂಬುದು ಸಿದ್ಧವಾಗಿದೆ. ನಮ್ಮ ಪ್ರಾಮಾಣಿಕತೆಯೂ ಇದರಿಂದ ಸ್ಪಷ್ಟವಾಗಿದೆ. ಶುದ್ಧ ಸತ್ಯಾಗ್ರಹದ ಸ್ವರೂಪವು ಇಂಗ್ಲಂಡದೆದುರಿಗೆ ಈಹೊತ್ತು ಇದೆ. ಇಂಗ್ಲೀಷರೊಡನೆ ನಮ್ಮ ಹೋರಾಟವು ನಿಂತಿಲ್ಲ. ಯುದ್ಧವು ಮುಗಿದಬಳಿಕ ಜೋರಿನಿಂದ ಹೋರಾಟ ಹೂಡಬೇಕಾಗಬಹುದು. ಕದಾಚಿತ ಭಯಂಕರವಾದ ಹೋರಾಟವು ನಡೆಯಬಹುದು. ಸರಕಾರವು ತಪ್ಪುಮಾಡಿ ಕಾಂಗ್ರೆಸ್ಸನ್ನು ತನ್ನೊಡನೆ ಯುದ್ಧಹೂಡಲು ಒತ್ತಾಯಪಡಿಸುವ ಸಂಭವವೂ ಇದೆ. ಆದರೆ ಸರಕಾರಕ್ಕೆ ತೊಂದರೆ ಕೊಡಕೂಡದೆಂಬ ನೀತಿಯ ಮೂಲಕ ಗಾಂಧೀಜಿಯವರು ಆತ್ಯಂತಿಕ ಪ್ರಯತ್ನ ಮಾಡುವರೆಂಬಲ್ಲಿ ಸಂಶಯವಿಲ್ಲ. ಈ ಹೊತ್ತು ಇಂಗ್ಲೀಷರು ಸಂತ್ರಸ್ತರಿರುವರು. ಈ ಪ್ರಸಂಗದಲ್ಲಿ ಅವರಿಗೆ ಪೆಟ್ಟು ಕೊಡುವುದು ಅಂಜುಬುರುಕತನದ ಲಕ್ಷಣವೆಂದು ಅವರ ಭಾವನೆ. ಗಾಂಧೀಜಿಯವರಿಗೆ ಸ್ವರಾಜ್ಯಕ್ಕಿಂತ ಸತ್ಯಾಗ್ರಹವು ಹೆಚ್ಚು ಪ್ರಿಯವಿರುವುದು. ನಾವು ಶುದ್ಧ ಸತ್ಯಾಗ್ರಹವನ್ನು ಅನುಸರಿಸುವುದರಿಂದಲೆ ಸ್ವದೇಶ ಸ್ವರಾಜ್ಯಗಳ ಆತ್ಯಂತಿಕ ಸೇವೆ ಮಾಡಬಲ್ಲೆವೆಂದು ಗಾಂಧೀಜಿಯವರ ಅಭಿಪ್ರಾಯವಿರುವುದು. ಆದುದರಿಂದ ಈ ಪ್ರಸಂಗದಲ್ಲಿ ಬ್ರಿಟಿಶ ಸರಕಾರಕ್ಕೆ ಆಗಬಹುದಾದ ತೊಂದರೆಯನ್ನು ಗಾಂಧೀಜಿಯವರು ತಕ್ಕಮಟ್ಟಿಗೆ ತಪ್ಪಿಸಿದರು. ಇಂಗ್ಲಂಡಕ್ಕೆ ಈ ಬಗ್ಗೆ ಕೃತ-

ಜ್ಞತಾ ಬುದ್ಧಿಯಿಲ್ಲ. ಇಂಗ್ಲಂಡದ ಮನೋವೃತ್ತಿಯಲ್ಲಿಯೂ ಹೆಚ್ಚು ಕಡಿಮೆಯಾದಂತೆ ತೋರುವುದಿಲ್ಲ. ಆದರೆ 'ಚಮತ್ಕಾರದ ಯುಗವು ಇನ್ನೂ ಕಳೆದುಹೋಗಿಲ್ಲ. ಪರಮಾತ್ಮನಿರುವವರೆಗೆ ಚಮತ್ಕಾರವು ಬೇಕಾದಾಗ ಆಗಬಹುದು' ಎಂದು ಗಾಂಧೀಯವರ ಆಶೆ! ಈ ಶ್ರದ್ಧೆಯ ಬಲದಿಂದಲೆ ಗಾಂಧೀಜಿಯವರ ಜೀವನರಥವು ಮುಂದೆ ಸಾಗಿದೆ.

ಈ ಯುದ್ಧದ ಸಮಯದಲ್ಲಿ ಇನ್ನೊಂದು ಸಂಗತಿಯನ್ನು ನಾನು ಗಾಂಧೀಜಿಯವರಲ್ಲಿ ನಿರೀಕ್ಷಿಸಿರುವೆನು. ಯುದ್ಧವು ಪ್ರಾರಂಭವಾದಂದಿನಿಂದ ಬಹುಶಃ ಸೇವಾಗ್ರಾಮದಲ್ಲಿಯೆ ಇರಬೇಕೆಂದು ಅವರು ಇಚ್ಛಿಸುತ್ತಿರುವರು. ಅತಿಶಯ ಆವಶ್ಯಕ ಕಾರಣಗಳ ಮೂಲಕ ಒಮ್ಮೆ ಅವರು ಬಂಗಾಲಕ್ಕೆ ಹೋಗಬೇಕಾಯಿತು. ರಾಮಗಡ ಕಾಂಗ್ರೆಸ್ಸಂತೂ ತಪ್ಪಿಸಲಿಕ್ಕೆ ಬಾರದ ಮಾತು. ವ್ಹಾಯಿಸರಾಯರಿಗೆ ಭೆಟ್ಟಿಯಾಗಲಿಕ್ಕೆ ಹೋಗಲೇಬೇಕಾದಾಗ ಹೋಗಿಬಂದರು. ಈ ಮೇಲೆ ಹೇಳಿದ ಪ್ರವಾಸವನ್ನು ಹೊರ್ತುಪಡಿಸಿ ಸೇವಾಗ್ರಾಮ ಬಿಟ್ಟು ಹೊರಗೆ ಹೋಗಲು ಅವರು ಇಚ್ಛಿಸುವುದಿಲ್ಲ. ಅಂಥ ಹೊರಗೆ ಹೋಗುವ ಯಾವ ಕಾರ್ಯಕ್ರಮವೂ ಅವರಿಗೆ ಇಷ್ಟವಿಲ್ಲ. ಆಯಾ ಊರಿಗೆ ಬರುವೆನೆಂದು ಕೊಟ್ಟಿರುವ ಹಲವು ವಚನಗಳನ್ನು ಸಹ ಅವರು ತಿರುಗಿಕೊಂಡರು. ಏಕೆ, ಹೀಗೇಕೆ? 'ಯುದ್ಧವು ನಡೆದಿರುವವರೆಗೆ ಸೇವಾಗ್ರಾಮ ಬಿಡುವದು ಏಕೋ ನನಗೆ ಸರಿ ಎನಿಸುವುದಿಲ್ಲ,' ಎನ್ನುವರು. ಏನಾದರೂ ವಿಶೇಷ ವಿಚಾರವು ನಡೆದಿರಬಹುದು. ಆದರೆ ಅವರು ಅಷ್ಟೊಂದು ವಿಚಾರಮಗ್ನರಿದ್ದುದೂ ಕಂಡುಬರುವುದಿಲ್ಲ. ಆದರೂ ಈ ಯುದ್ಧದ ಸಂಬಂಧದಿಂದ ಅವರಿಗೆ ಸಾಕಷ್ಟು ವಿಚಾರ ಮಾಡಬೇಕಾಗಿದೆ ಎಂಬಲ್ಲಿ ಸಂಶಯವಿಲ್ಲ.

# ೧೪. ನಿರ್ಣಯ ಮಾಡುವ ರೀತಿ

ಗಾಂಧೀಜಿಯವರಿಗೆ ವಿಚಾರ ಮಾಡಲು ಸಮಯವಾದರೂ ಸಿಗುವುದೆ, ಎಂಬ ಪ್ರಶ್ನೆ ಒಮ್ಮೊಮ್ಮೆ ಎದುರಾಗುವುದು. ಯಾಕಂದರೆ ಅವರಿಗೆ ಒಂದು ಕ್ಷಣದ ಫುರಸತಿಗೆ ಸಹ ಸಿಗದಷ್ಟು ಕೆಲಸವು ಅವರ ಮುಂದೆ ಬಿದ್ದಿರುತ್ತದೆ. ಈ ಕಾರ್ಯಬಾಹುಲ್ಯದ ಮೂಲಕ ಎಷ್ಟೋ ಸಾರೆ ಮಹತ್ವದ ಕೆಲಸಗಳ ಕಡೆಗೆ ದುರ್ಲಕ್ಷವಾಗಿ ಚಿಲ್ಲರೆ ಕೆಲಸಗಳಲ್ಲಿ ಅನವಶ್ಯಕವಾಗಿ ಹೆಚ್ಚು ಸಮಯ ಹಾಳಾಗುತಿದೆ. ಅವರೊಡನೆ ಯಾವಾಗಲು ಇರುತಿರುವ ಕಾರ್ಯದರ್ಶಿ ಮಂಡಲವೆ ಅವರು ಎರಡನೆ ದುಂಡುಮೇಜಿನ ಪರಿಷತ್ತಿಗೆ ಹೋದಾಗ ಅವರ ಸಂಗಡ ಇತ್ತು. ಅಲ್ಲಿ ಹೊಸ ಹೊಸ ಕೆಲಸಗಳ ರಾಶಿಯೆ ಬಂದು ಬೀಳಲಾರಂಭಿಸಿತು, ಆದರೂ ಅದನೆಲ್ಲ ನಿಸ್ತರಿಸಿ ಬಿಡುವ ಸಾಕಷ್ಟು ವ್ಯವಸ್ಥೆ ಇರಲಿಲ್ಲ. ಆ ಕಾಲಕ್ಕೆ ಇನ್ನೂ ಹೆಚ್ಚು ಹೊಸ ಕಾರ್ಯಕರ್ತರನ್ನು ನೇಮಿಸಿಕೊಳ್ಳದೆ ಇನ್ನೊಂದುಪಾಯವಿರಲಿಲ್ಲ. ಆದರೆ ಅದು ಗಾಂಧೀಜಿಯವರಿಗೆ ಮಾನ್ಯವಿರಲಿಲ್ಲ. ಕೆಲಸವು ಬೆಳೆಯುತ್ತ ಹೋದಹಾಗೆ ತಮ್ಮ ತಮ್ಮೊಳಗೆಯೆ ಹಂಚಿಹಾಕಿ ಅದನೆಲ್ಲ ನಿಸ್ತರಿಸುವ ಪ್ರಯತ್ನವು ನಡೆದಿತ್ತು. ಈ ಮೂಲಕ ಗಾಂಧೀಜಿಯವರ ನಿದ್ರೆಯ ವೇಳೆಯ ಮೇಲೆ ಆಕ್ರಮಣವಾಗಲಾರಂಭಿಸಿತು.

ಲಂಡನದಲ್ಲಿರುವಾಗ ಕೆಲಸ ಮಾಡಮಾಡುತ್ತ ರಾತ್ರಿ ಎರಡು ಗಂಟೆಯಾಗುತಿತ್ತು. ಬೆಳಿಗ್ಗೆ ನಾಲ್ಕು ಗಂಟೆಗೆ ಪ್ರಾರ್ಥನೆ ಮಾಡಿ, ತಿರುಗಾಟ, ಊಟ-ಉಡಿಗೆ ಮುಂತಾದವುಗಳನೆಲ್ಲ ಒಂಬತ್ತು ಗಂಟೆಯವರೆಗೆ ತೀರಿಸಿಕೊಂಡು ಮತ್ತೆ ಕೆಲಸಕ್ಕೆ ಪ್ರಾರಂಭ ಮಾಡಬೇಕಾಗು

ತಿತ್ತು. ಕ್ವಚಿತ್ತಾಗಿ ಮಾತ್ರ ನಾಲ್ಕು ತಾಸಿನಷ್ಟು ಅವಕಾಶವು ನಿದ್ರೆಗಾಗಿ ದೊರೆಯುತಿತ್ತು. ಹೀಗಾಗುವುದರಿಂದ ಪರಿಷತ್ತು ನಡೆದ ಕಾಲಕ್ಕೆ ಅತ್ತ ಭಾಷಣಗಳು ನಡೆದಿರುವಾಗಲೆ ಗಾಂಧೀಜಿಯವರು ಕುರ್ಚಿಯ ಮೇಲೆ ಕೂತಕೂತಲ್ಲಿ ಕಣ್ಣು ಮುಚ್ಚಿ ನಿದ್ರೆ ಮಾಡಲಾರಂಭಿಸಿದರು! ನಾನು ಈ ಬಗ್ಗೆ ಅವರಿಗೆ ಒಮ್ಮೆ ಅಂದದ್ದು, 'ಇಲ್ಲಿ ದೊಡ್ಡ ದೊಡ್ಡವರು ಕುಳಿತಿರುವಾಗ, ವ್ಯಾಖ್ಯಾನಗಳು ನಡೆದಿರುವಾಗ ನೀವು ಹೀಗೆ ಮಲಗುವುದು ಸರಿದೋರುವುದಿಲ್ಲ.' ಅವರು ಉತ್ತರಿಸಿದ್ದೇನಂದರೆ, 'ಹಾಗಾದರೇನು, ಜಾಗರಣೆ ಮಾಡಿ ಇಲ್ಲಿಯೆ ಜಡ್ಡಿಗೆ ಆಮಂತ್ರಣ ಕೊಡಬೇಕೇ? ಮೇಲಾಗಿ ಒಂದಾದರೂ ಮಹತ್ವದ ವ್ಯಾಖ್ಯಾನ ಕೇಳುವುದನ್ನು ನಾನು ಬಿಟ್ಟಿರುವೆನೆಂದು ನೀವು ಹೇಳಬಲ್ಲಿರಾ?' ಈ ಅವರ ಮಾತು ನಿಜ. ಈ ವಿಷಯದಲ್ಲಿಯೂ ಅವರು ತಮ್ಮ ವಿವೇಕವನ್ನು ಉಪಯೋಗಿಸುತಿದ್ದರು. ಹೀಗೆ ನಿದ್ರೆ ಮಾಡುವುದು ಅವರ ಯಾವ ವಿಶಿಷ್ಟ ಶಕ್ತಿಯ ಮೂಲಕ ಅವರಿಗೆ ಸಾಧ್ಯವಾಗುತಿತ್ತೊ ಹೇಳಲಿಕ್ಕೆ ಬಾರದು. ಯಾವನೊಬ್ಬ ಮಹತ್ವದ ಮನುಷ್ಯನು ಮಾತಾಡಲು ಎದ್ದುನಿಂತೊಡನೆ ಅವರ ಕಣ್ಣುಗಳು ತಟ್ಟನೆ ತೆರೆಯುತಿದ್ದವು. ಅವನ ಭಾಷಣ ಮುಗಿದೊಡನೆ ಅವರು ಪುನಃ ನಿದ್ರೆಗೈಯ್ಯುತಿದ್ದರು.

ಆದರೂ ಈ ಪರಿಸ್ಥಿತಿ ನನಗೆ ಅಷ್ಟೊಂದು ನೆಟ್ಟಗೆನಿಸುತಿರಲಿಲ್ಲ. ತಮ್ಮ ಕಾರ್ಯಕರ್ತರಲ್ಲಿ ಹೊಸ ಜನರನ್ನು ಗಾಂಧೀಜಿಯವರು ಸೇರಿಸಿಕೊಳ್ಳುವುದು ಯೋಗ್ಯವೆಂದು ನಾವು ನಮ್ಮ ನಮ್ಮೊಳಗೆ ಮಾತಾಡುತಿದ್ದೆವು. ಪ್ರತಿಯೊಂದು ಪತ್ರವನ್ನು ಗಾಂಧೀಜಿಯವರು ಅಥವಾ ಮಹಾದೇವಭಾಯಿಯವರು ಸ್ವತಃ ಬರೆಯುವ ಅವಶ್ಯಕತೆಯೇನು? ಬರೆದು ಬರೆದು ತಮ್ಮ ಬಲಗೈ ದಣಿಯಿತೆಂದರೆ ಗಾಂಧೀಜಿಯವರು ಎಡಗೈಯಿಂದ ಪ್ರಾರಂಭ ಮಾಡುತಿದ್ದರು. ಪರಿಷತ್ತಿನ ಕೆಲಸವನ್ನು ಎಷ್ಟೋ ಸಾರೆ ಅವರು ದುರ್ಲಕ್ಷಿಸುತಿದ್ದರು. ಅದರ ಬದಲಾಗಿ ಆಕಳುಗಳ ಪ್ರದರ್ಶನಗಳನ್ನು ನೋಡುವುದು ವಿಲಾಯತಿ ಆಡುಗಳನ್ನು ಪರೀಕ್ಷಿಸುವುದು, ತೀರ ಸಾಮಾನ್ಯ ಜನರಿಗೆ ಭೆಟ್ಟಿಕೊಟ್ಟು ಮಾತು

ಕಥೆ ನಡೆಸುವುದು, ವಿವಿಧ ಹುಚ್ಚುಗಳಿಗೆ (ಫ್ಯಾಡ್) ಹೆಚ್ಚು ಸಮಯ ವನ್ನು ಕೊಡುವುದು, ಇದೇ ಬೆಳೆಯುತ್ತ ನಡೆದಿತ್ತು. ಬಡಜನರ ಮಕ್ಕಳೊಡನೆ ಆಡುತಿರುವಾಗ ಒಮ್ಮೊಮ್ಮೆ, 'ನನ್ನ ದುಂಡುಮೇಜಿನ ಪರಿಷತ್ತು ಸೆಂಟ ಜೇಮ್ಸ ಅರಮನೆಯಲ್ಲಿಲ್ಲ, ಇಲ್ಲಿ ಈ ಚಿಕ್ಕಮಕ್ಕಳೊಡನೆ ಇದೆ' ಎಂದು ಅನ್ನುತಿದ್ದರು. ಅವರ ಸಂಗಡ ಇರುವವರ ಮನಸಿಗೆ ಇವೆಲ್ಲ ಮಾತು ಅಷ್ಟೊಂದು ಸರಿತೋರುತಿರಲಿಲ್ಲ. ಆದರೆ ಈಗ ವಿಚಾರಮಾಡಿ ನೋಡಲಾಗಿ ಪರಿಷತ್ತಿನ ಕಡೆಗೆ ದುರ್ಲಕ್ಷ ಮಾಡುವುದ ರಿಂದ ಗಾಂಧೀಜಿಯವರಿಗೆ ಯಾವ ಹಾನಿಯೂ ಆಗಲಿಲ್ಲ, ಎಂದೆನಿ ಸುವುದು. ಏನೇ ಇರಲಿ, ಅವರ ಮೇಲೆ ಕೆಲಸದ ಭಾರವು ಬಹಳ, ಕೆಲಸ ಮಾಡುವ ಜನ ಕಡಿಮೆ, ಎಂಬುದರ ಅನುಭವ ನನಗೆ ಈಗ್ಯೂ ಆಗುತಲಿದೆ. ಅವರು ಲಘುಲಿಪಿ ಲೇಖಕರನ್ನು ಏಕೆ ಇಟ್ಟುಕೊಳ್ಳ ಬಾರದು? ಆದರಿಂದ ಬರೆಯುವುದು ಸುಲಭವಾಗುವುದು, ವೇಳೆಯೂ ಉಳಿಯುವುದು. ನಾನು ಈ ಮಾತನ್ನು ಎಷ್ಟೋ ಸಾರೆ ಎತ್ತಿದೆನು. ಆದರೆ ಉಪಯೋಗವಾಗಲಿಲ್ಲ.

ಇರಲಿ. ಈಗ ನಮಗೆ ಎದುರಾದ ಪ್ರಶ್ನೆ ಹಾಗೆ ಉಳಿಯಿತು; ಇಷ್ಟೆಲ್ಲ ಕೆಲಸದಲ್ಲಿ ಅವರಿಗೆ ವಿಚಾರ ಮಾಡಲು ಅನುವು ಎಲ್ಲಿ?

ಅವರ ಜೊತೆಗಾರರದು ಹಾಗೂ ಅವರದು ಮತಭೇದವಾದ ಪ್ರಸಂಗಗಳು ಎಷ್ಟೋ ಇರುವವು. ಗಾಂಧೀಜಿಯವರು ತಪ್ಪು ಮಾಡು ವರು ಎಂದು ನನಗೆ ಎನಿಸಿದ ಹಲವು ಘಟನೆಗಳು ಸಹ ನನ್ನ ನೆನಪಿಗೆ ಬರುತಿವೆ. ಆದರೆ ಮುಂದೆ, ತಪ್ಪು ಅವರದಲ್ಲ, ನಮ್ಮದು, ಎಂದು ಸಿದ್ಧವಾಯಿತು. ಹೀಗೆ ಒಂದು ಪ್ರಸಂಗದಲ್ಲಿ ಒಬ್ಬ ಪ್ರತಿಷ್ಠಿತ ಮಿತ್ರರು, 'ಗಾಂಧೀಜಿಯವರು ತಪ್ಪು ಮಾಡುತಿರುವರು' ಎಂದರು. ಅಹುದು, ಎಂದು ನಾನೂ ಹೂಂಗೊಟ್ಟೆನು. ಆದರೆ ಅದೇ ಮಿತ್ರನು ಮುಂದೆ ಅಂದದ್ದೇನೆಂದರೆ, 'ಎಷ್ಟೋಸಾರೆ ಯಾವುದು ಗಾಂಧೀಜಿ ಯವರ ತಪ್ಪು ಎಂದು ನಾವು ತಿಳಿಯುತಿದ್ದೆವೊ ಅದೇ ಅವರ ಬುದ್ಧಿ ವಂತಿಕೆ ಇತ್ತು, ಎಂಬುದು ನಂತರ ಸಿದ್ಧವಾಯಿತು.' ಇದು ನಿಜ.

ಇಷ್ಟು ಕೆಲಸ, ಇಂಥ ತೊಡಕಿನ ಪ್ರಶ್ನೆಗಳು, ಇವೆಲ್ಲ ಇದ್ದರೂ ಅವರ ನಿರ್ಣಯವು ಅನೇಕ ಪ್ರಸಂಗಗಳಲ್ಲಿ ಸರಿಯಾದುದು, ಶುದ್ಧವಾದುದು ಇರುವುದು. ಇದು ಒಳ್ಳೆ ಅಚ್ಚರಿಯ ಸಂಗತಿ. ಮನುಷ್ಯನೆಂದ ಮೇಲೆ ತಪ್ಪಾಗೇ ಆಗುವವು. ಗಾಂಧೀಜಿಯವರೂ ತಪ್ಪು ಮಾಡುವರು, ಅವರು ತಮ್ಮ ತಪ್ಪುಗಳನ್ನು ಬಹಳ ಬೆಳೆಸಿ ಬೆಳೆಸಿ ಹೇಳುವರು, ಅವು ಗಳ ಬಗ್ಗೆ ವಿಚಾರ ಮಾಡುವರು. ಆದರೆ ಅವರು ಯಾವುದಕ್ಕೆ ತಮ್ಮ ತಪ್ಪು ಎಂದರೊ ಅವುಗಳು ತಪ್ಪೆಂದು ಅವರ ಜೊತೆಗಾರರು ತಿಳಿಯಲಿಲ್ಲ! ಇದೊಂದು ಚಮತ್ಕಾರ. ಇಷ್ಟೇ ಅಲ್ಲ, ಅವು ತಮ್ಮ ತಪ್ಪುಗಳೆಂದು ಒಪ್ಪುವಲ್ಲಿ ಗಾಂಧೀಜಿಯವರು ತಪ್ಪು ಮಾಡಿದರೆಂದು ಆ ಜೊತೆಗಾರರ ಅಭಿಪ್ರಾಯ! ಮನುಷ್ಯ ಮಾತ್ರನು ತಪ್ಪು ಮಾಡೇ ಮಾಡುವನು, ಗಾಂಧೀಜಿಯವರೂ ಮಾಡುವರು. ಆದರೆ ಅಂಥ ಪ್ರಸಂಗಗಳು ತೀರ ಕಡಿಮೆ.

ಗಾಂಧೀಜಿಯವರು ಯಾವದೊಂದು ಮಾತಿನ ನಿರ್ಣಯ ಮಾಡುವ ಬಗೆ ಯಾವುದು? ಅವರು ಯಾವ ರೀತಿ ವಿಚಾರ ಮಾಡುವರು? ಇಷ್ಟು ಕೆಲಸಗಳಲ್ಲಿ ನಿಮಗ್ನರಿದ್ದರೂ ಯಾವಾಗ ವಿಚಾರ ಮಾಡುವರು? ಗಾಂಧೀಜಿಯವರು ವಿಚಾರಮಗ್ನರಿದ್ದುದನ್ನು ನಾನೆಂದೂ ನೋಡಿಲ್ಲ. ಯಾವುದೇ ಪ್ರಶ್ನೆ ಎದುರಿಗೆ ಬರುವುದೊಂದೇ ತಡ, ಅವರು ತೀರ್ಪು ಕೊಟ್ಟೇ ಮುಂದೆ ಹೋಗುವರು. ದೊಡ್ಡ ದೊಡ್ಡ ಮಹತ್ವದ ಪ್ರಸಂಗಗಳಲ್ಲಿ ಪ್ರಶ್ನೆಗಳು ಎದುರು ನಿಂತಾಗ ನಿರ್ಣಯ ಮಾಡುವ ಸಮಯವು ಸಮೀಪಿಸಿದಾಗ ತೀರ ಕೊನೆಯ ಕ್ಷಣ ಬರುವ ವರೆಗೆ ಮಾತ್ರ ಅವರು ನಿರ್ಣಯ ಮಾಡುವುದಿಲ್ಲ.

ದುಂಡುಮೇಜಿನ ಪರಿಷತ್ತಿನ ಮೊದಲನೆಯ ಅಧಿವೇಶನದಲ್ಲಿ ಅವರ ಮಹತ್ವದ ಭಾಷಣವಾಗತಕ್ಕದ್ದಿತ್ತು. ಅದು ಅವರ ಮೊದಲನೆಯ ವ್ಯಾಖ್ಯಾನ. ಅವರ ಮಾತು ಕೇಳಬೇಕೆಂದು, ಅವರ ವಿಚಾರಗಳನ್ನು ತಿಳಿದುಕೊಳ್ಳಬೇಕೆಂದು, ಎಲ್ಲರೂ ಉತ್ಸುಕರಾಗಿದ್ದರು. ಗಾಂಧೀಜಿಯವರು ಏನೂ ವಿಚಾರ ಮಾಡಿದಂತೆ ತೋರಲಿಲ್ಲ, ಯಾವ

ಸಿದ್ಧತೆಯನ್ನೂ ಮಾಡಿರಲಿಲ್ಲ. ಆದರೆ ಅಲ್ಲಿ ಹೋಗಿ ಭಾಷಣವನ್ನು ಪ್ರಾರಂಭಿಸಿದೊಡನೆ ನದಿಯ ಪ್ರವಾಹದಂತೆ ತತ್ವಪೂರ್ಣ ಮಾರ್ಮಿಕ ಮಾತುಗಳು ಅವರ ಬಾಯಿಂದ ಹೊರಹೊಮ್ಮಲಾರಂಭಿಸಿದವು. ಇನ್ನೊಮ್ಮೆ ಒಂದು ಅತ್ಯಂತ ಮಹತ್ವದ ವಿಷಯವನ್ನು ಕುರಿತು ವ್ಹಾಯಿಸರಾಯರಿಗೆ ಭೆಟ್ಟಿಯಾಗಲು ಹೋಗುವ ಸಂದರ್ಭ, ಐದೇ ನಿಮಿಷ ಮೊದಲು ನಾನು ಕೇಳಿದ್ದು, 'ನೀವು ಏನು ಮಾತಾಡುವಿರಿ?' ಅವರು ಅಂದದ್ದು, 'ನನ್ನ ಮಿದುಳು ಈಗ ಬರಿದು ಇದೆ. ನಾನು ಏನು ಮಾತಾಡಬಹುದೊ ಕಾಣೆ' ಅಲ್ಲಿ ಹೋದೊಡನೆ ಒಂದು ಹೊಸ ಮಾತನ್ನು ಹೇಳಿ ಬಂದುಬಿಟ್ಟರು. ಇದೊಂದು ಅದ್ಭುತವಾದ ಸಂಗತಿ.

ಅಹಮದಾಬಾದಿನಲ್ಲಿ ಗಿರಣಿ ಕೂಲಿಕಾರರ ಕಟ್ಟು ಆಯಿತು. ಕೂಲಿಕಾರರ ಪಕ್ಷವು ನ್ಯಾಯ್ಯವಿದ್ದೆಂಬುದನ್ನು ಗಾಂಧೀಜಿಯವರು ಒಪ್ಪಿದ್ದರು. ಗಿರಣಿ ಮಾಲಕರ ಮೇಲೂ ಅವರ ಪ್ರೇಮವಿತ್ತು. ಆದುದರಿಂದ ಕೆಲಮಟ್ಟಿಗೆ ಅದು ಪ್ರೇಮದ ಜಗಳವೆ ಇತ್ತು. ಕೂಲಿಕಾರರು ಮೊದಮೊದಲು ಜೋರಿನಲ್ಲಿದ್ದರು, ಮುಂದೆ ಮೆತ್ತಗಾಗಲಾರಂಭಿಸಿದರು. ಹಸಿವೆಯ ಬಳಲಿಕೆಯಿಂದ ಅವರ ಮೋರೆಗಳು ಒಣಗಲಾರಂಭಿಸಿದವು. ಆಗ ಒಮ್ಮೆ ಕೂಲಿಕಾರರ ಸಭೆಯಲ್ಲಿ ಗಾಂಧೀಜಿಯವರು ಭಾಷಣ ಮಾಡುತಲಿದ್ದರು. ಕೂಲಿಕಾರರ ಮುಖದ ಮೇಲೆ ತೇಜವಿರಲಿಲ್ಲ. ಅಕಸ್ಮಾತ್ತಾಗಿ ಅವರ ಬಾಯಿಂದ ಬಂದುದೇನಂದರೆ, 'ಕಟ್ಟು ಮಾಡಿದವರೆಲ್ಲ ಗಟ್ಟಿಯಾಗಿ ನಿಲ್ಲದಿದ್ದರೆ, ನಿರ್ಣಯವಾಗುವ ವರೆಗೆ ಕಟ್ಟು ಮಾಡಿದವರೆಲ್ಲ ಕಟ್ಟನ್ನು ಹಾಗೆ ನಡೆಸದಿದ್ದರೆ ನಾನು ಅನ್ನವನ್ನು ಮುಟ್ಟಲಿಕ್ಕಿಲ್ಲ.' ಈ ಅನಪೇಕ್ಷಿತವಾದ ನಿರ್ಣಯವು ಒಮ್ಮೆಲೆ ಅವರ ಬಾಯಿಂದ ಬಂದಿತು. ಉಪವಾಸದ ವಿಚಾರವು ಮೊದಲು ಅವರಿಗೆ ಬಂದಿರಲಿಲ್ಲ, ತರ್ಕಮಾಡಿ ಸಾಂಗೋಪಾಂಗ ರೀತಿಯಿಂದ ಅದನ್ನು ಚರ್ಚಿಸಿಯೂ ಇರಲಿಲ್ಲ. ರಾಜಕೋಟದ ಉಪವಾಸವಾದರೂ ಇದೇ ತರಹದಿಂದ ಒಮ್ಮೆಲೆ ನಿರ್ಣಯಿಸಲಾಗಿತ್ತು.

---

# ೧೫. ಆತ್ಮಪ್ರೇರಣೆ

ಈ ಎಲ್ಲ ಘಟನೆಗಳನ್ನು ಪರಿಶೀಲಿಸಿದರೆ ನನಗೆ ಒಂದು ಮಾತು ಸ್ಪಷ್ಟವಾಗಿ ಕಾಣುವುದು. ಅದೇನೆಂದರೆ, ಯಾವುದೊಂದು ನಿರ್ಣಯ ಮಾಡುವಾಗ ಗಾಂಧೀಜಿಯವರು ವಿಚಾರಮಗ್ನರೂ ಆಗುವುದಿಲ್ಲ ಅಥವಾ ಮೊದಲು ತಮ್ಮ ನಿರ್ಣಯುವನ್ನು ವಿಚಾರದ ಒರೆಗಲ್ಲಿಗೆ ಹಚ್ಚಿ ನೋಡುವುದೂ ಇಲ್ಲ. ಅವರ ನಿರ್ಣಯುವು ಮೊದಲು ಆಗಿಹೋಗುವುದು ಬಳಿಕ ತರ್ಕ, ಯುಕ್ತಿವಾದ ಮುಂತಾದವುಗಳು ಅದರ ಸಮ-ರ್ಥನಕ್ಕಾಗಿ ಮುಂದೆ ಬರುವವು. ಆದುದರಿಂದಲೆ ಒಮ್ಮೊಮ್ಮೆ ಅವರ ಯುಕ್ತಿವಾದವು ಕುಂಟವಿದ್ದಂತೆ ತೋರುವುದು, ಇಲ್ಲವೆ ‘ ಘೃತಾಧಾರಂ ಪಾತ್ರಂ ವಾ ಪಾತ್ರಾಧಾರಂ ಘೃತಮ್ ’ ಎಂಬ ನ್ಯಾಯದಂತೆ (ಘೃತಕ್ಕೆ ಪಾತ್ರದ ಆಧಾರ, ಪಾತ್ರಕ್ಕೆ ಘೃತದ ಆಧಾರ) ಅತ್ಯಂತ ಸೂಕ್ಷ್ಮ ಇಲ್ಲವೆ ಹರುಕು ಮುರುಕು, ಅಥವಾ ದೂರಾನ್ವಯದಂತೆ ಕಂಡು ಬರುವದು. ಈ ಬಗೆಯ ಯುಕ್ತಿವಾದದ ಮೂಲಕ ಅವರ ವಿರುದ್ಧ ಪಕ್ಷದವರಿಗೆ ಎಷ್ಟೋ ಸಾರೆ ಏನೂ ತಿಳಿಯದಂತಾಗಿ ತೊಂದರೆಯುಂಟಾಗುತ್ತಿದೆ. ಅಂಥ ಪ್ರಸಂಗಗಳಲ್ಲಿ ವಿರೋಧಿಗಳು ಅವರಿಗೆ ಚಾಣಕ್ಯ ಎಂಬ ಹೆಸರಿಡುವರು. ಹಿಡಿಯಲು ಹೋದರೆ ಸರ್ರನೆ ಜಾರಿಹೋಗುವ ಮೀನದಂತೆ (ಸ್ಲಿಪರಿ ಕಸ್ಟಮರ್) ಗಾಂಧೀಜಿಯವರು ಯಾವ ಹಿಡಿತಕ್ಕೂ ಸಿಕ್ಕದೆ ಇದ್ದವರು ಎಂದು ಅವರು ಹೇಳುವರು.

ಆದರೆ ನಿಜಸಂಗತಿಯೇನಂದರೆ, ಗಾಂಧೀಜಿಯವರ ತರ್ಕವು ಸಹಜ ಹಾಗೂ ಸ್ವಾಭಾವಿಕವಾದುದು ಇರುತ್ತದೆ. ನಿರ್ಣಯದ ನಂತರ ಆ ಯುಕ್ತಿವಾದವು ಅಸ್ತಿತ್ವದಲ್ಲಿ ಬರುತ್ತಿರುವುದರಿಂದ ತರ್ಕದ

ತಳಹದಿಯ ಮೇಲೆ ಆ ನಿರ್ಣಯವು ನಿಂತಿರುವುದಿಲ್ಲ. ಆದುದರಿಂದ ಒಮ್ಮೊಮ್ಮೆ ಅವರ ಇಡೀ ನಿರ್ಣಯವೆ ಬಹಳ ತೊಡಕಿನದು ಅಥವಾ ಚಾಣಕ್ಯನ ವಾಗ್ಜಾಲದಿಂದ ಯುಕ್ತವಾದುದು, ಅಥವಾ ಪೊಳ್ಳು ಎಂದು ಪ್ರತೀತವಾಗುವುದು. ಹಾಗಿರದೆ ಇನ್ನೇನಾಗಬೇಕು? ಚಳಿಗಾಲ ದಲ್ಲಿ ದಕ್ಷಿಣಾಯನವಾಗಿ ಬೇಸಿಗೆಯಲ್ಲಿ ಉತ್ತರಾಯಣವಾಗಿ ನೀನು ಏಕೆ ಸಾಗುವಿ, ಎಂದು ಸೂರ್ಯನನ್ನು ಕೇಳಿದರೆ ಅವನಿಂದ ಯಥಾರ್ಥ ಉತ್ತರವು ದೊರಕಬಲ್ಲದೆ? ದಕ್ಷಿಣಾಯನ ಉತ್ತರಾಯಣಗಳ ಮೂಲ ಕವೆ ಚಳಿಗಾಲ ಬೇಸಿಗೆಗಾಲಗಳುಂಟಾಗುವವು ಹೊರತು ಚಳಿಗಾಲ ಬೇಸಿಗೆಗಾಲಗಳಿಂದ ದಕ್ಷಿಣಾಯನ ಉತ್ತರಾಯಣಗಳು ಆಗುವುದಿಲ್ಲ! ಗಾಂಧೀಜಿಯವರ ಯುಕ್ತಿವಾದವೂ ಅದೇ ತರಹ. ಅವರ ನಿರ್ಣಯ ದಿಂದ ಮುಂದೆ ಯುಕ್ತಿವಾದವು ಹುಟ್ಟುವುದು ಹೊರತು ಯುಕ್ತಿವಾದದ ಪರಿಣಾಮವಾಗಿ ಅವರ ನಿರ್ಣಯ ಆಗುವುದಿಲ್ಲ. ಅವರ ನಿರ್ಣಯ ಗಳನ್ನು ಸಮರ್ಥಿಸುವ ಎಲ್ಲಕ್ಕೂ ಹೆಚ್ಚಿನ ಮತ್ತು ಬಲವಾದ ಯುಕ್ತಿ ವಾದವೆಂದರೆ ಅದು ಗಾಂಧೀಜಿಯವರ ನಿರ್ಣಯವಿರುವುದು ಎಂಬುದೇ! ಅತಿಶಯೋಕ್ತಿ ಮಾಡುವ ಉದ್ದೇಶದಿಂದ ನಾನು ಹೀಗೆ ಹೇಳುವುದಿಲ್ಲ. ಅವರ ಯುಕ್ತಿವಾದಕ್ಕಿಂತ ಅವರ ನಿರ್ಣಯವು ಎಷ್ಟೋ ದೃಢವಾದುದು ಹಾಗೂ ಎಷ್ಟೋ ಬಲವುಳ್ಳದ್ದು ಇದ್ದುದನ್ನು ನಾನು ಮನಗಂಡಿದ್ದೇನೆ.

ಪ್ರತಿವರ್ಷ ಸ್ವಾತಂತ್ರ್ಯ ದಿನಾಚರಣೆಯ ಪ್ರಸಂಗದಲ್ಲಿ ನಾವು ಮಾಡತಕ್ಕ ಪ್ರತಿಜ್ಞೆಯಲ್ಲಿ ಹಿಂದುಸ್ತಾನದ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಹಾಗೂ ಆಧ್ಯಾತ್ಮಿಕ ನಾಶವನ್ನು ಇಂಗ್ಲೀಷರು ಮಾಡಿರು ವರು ಎಂಬ ವಿಧಾನವಿದೆ. ಇದು ಹಳೆಯ ಪ್ರತಿಜ್ಞೆ, ಈಗ ಬಹು ದಿವಸಗಳಿಂದ ಪ್ರಚಾರದಲ್ಲಿದೆ. ಆದರೆ ಆ ಬಗ್ಗೆ ಈ ಸಾರೆ ಬಹಳ ಕೋಲಾಹಲವಾಯಿತು. ಇದು ತೀರ ಸುಳ್ಳು ಎಂದು ಆಂಗ್ಲ ಪತ್ರ ಕಾರರು ಹಾಗೂ ಹಲವು ಆಂಗ್ಲ ಮುಖಂಡರು ಈ ವಿಧಾನವನ್ನು ಅಲ್ಲಗಳೆದರು. 'ನಾವು ಈ ದೇಶದ ಆಧ್ಯಾತ್ಮಿಕ ಅಥವಾ ಸಾಮಾಜಿಕ ನಾಶವನ್ನು ಎಂದು, ಹೇಗೆ ಮಾಡಿದೆವು? ಈ ಮಾತು ಪೂರಾ ಸುಳ್ಳು ಇದೆ,' ಎಂದು ಅವರು ಅಂದರು.

ಈ ಮಾತಿನಲ್ಲಿ ಸ್ವಲ್ಪ ತಥ್ಯವೂ ಇರಬಹುದು. ಆದರೆ ವಾಡಿಕೆಯಂತೆ ಗಾಂಧೀಜಿಯವರು ಹೇಳುವ ಮಾತಿಗೆ ಜನಸಾಮಾನ್ಯರು ಯಾವದೇ ಅರ್ಥವನ್ನು ಕಲ್ಪಿಸಿದರೂ ಅವರು ಸ್ವತಃ ತಮ್ಮ ಅರ್ಥವನ್ನೇ ಇಟ್ಟುಕೊಳ್ಳುವರು. ಅವರು ಶಬ್ದಗಳ ಸಾಮಾನ್ಯ ಅರ್ಥದ ದಾಸರಾಗಿ ನಡೆಯುವುದಿಲ್ಲ. ಶಬ್ದಗಳಲ್ಲಿ ತುಂಬಿದ ತತ್ವಾರ್ಥವನ್ನೇ ಅವರು ಅನುಲಕ್ಷಿಸುವರು. ಸ್ವಾತಂತ್ರ್ಯವು ತನ್ನ ಧ್ಯೇಯ ಎಂದು ಕಾಂಗ್ರೆಸ್ಸು ಸಾರಿತು. 'ಅಹುದು, ಸ್ವಾತಂತ್ರ್ಯವೆ ಧ್ಯೇಯ' ಎಂದು ಗಾಂಧೀಜಿಯವರೂ ಒಪ್ಪಿದರು. ಆದರೆ ತಮಗೆ ಸ್ವಾತಂತ್ರ್ಯವು ಬೇಕು ಎಂದು ಜವಾಹರಲಾಲರು ಅನ್ನುವಾಗ ಅವರ ಅರ್ಥವು ಬೇರೆ ಹಾಗೂ ಗಾಂಧೀಜಿಯವರ ಅರ್ಥವು ಬೇರೆ ಇರುತ್ತದೆ. ಗಾಂಧೀಜಿಯವರ ದೃಷ್ಟಿಯಿಂದ ಸ್ವಾತಂತ್ರ್ಯವೆಂದರೆ ಪೂರ್ಣ ಸ್ವರಾಜ್ಯವಂತೂ ಸೈ. ಆದರೆ ಕೇವಲ ರಾಜಕೀಯ ಸ್ವಾತಂತ್ರ್ಯಕ್ಕಿಂತ ಅವರ 'ಸ್ವಾತಂತ್ರ್ಯ'ವು ಹೆಚ್ಚು ವ್ಯಾಪಕಾರ್ಥವುಳ್ಳದ್ದು. ಗಾಂಧೀಜಿಯವರು ಕಲ್ಪಿಸುವ ಪೂರ್ಣ ಸ್ವರಾಜ್ಯದಲ್ಲಿ ಆಂಗ್ಲರು ಪೂರ್ಣ ತ್ಯಾಗವೃತ್ತಿಯವರಾಗುವದು ಅವಶ್ಯ, ಇಷ್ಟೇ ಅಲ್ಲ. ಭಾರತೀಯರೂ ಸುಖನಿದ್ರೆ ಮಾಡದೆ ಅತ್ಯಂತ ದುಡಿಯಬೇಕಾಗುವುದು. ಸ್ವಾತಂತ್ರ್ಯದ ಬಗ್ಗೆ ಮಾತಾಡುತ್ತಿರುವಾಗ ಮಾತುಮಾತಿಗೆ 'ಪೂರ್ಣ ಸ್ವರಾಜ್ಯ' ಎಂಬ ಶಬ್ದಪ್ರಯೋಗವನ್ನು ಗಾಂಧೀಜಿಯವರು ಮಾಡುವರು. ಮುಂದೆ ರಾಮರಾಜ್ಯ ಎಂದು ಹೇಳಿಬಿಡುವರು.

ನಿಜವಾಗಿ ನೋಡಿದರೆ ಗಾಂಧೀಜಿಯವರಿಗೆ ಬೇಕಾದುದು ರಾಮರಾಜ್ಯವೆ. ಪಾಶ್ಚಾತ್ಯ ಚುನಾವಣೆ ಪದ್ಧತಿಯನ್ನು ಅವರು ಎಷ್ಟೋ ಸಾರೆ ಹೀಯಾಳಿಸಿದ್ದಾರೆ ಹಾಗೂ ರಾಮರಾಜ್ಯವೆ ಶ್ರೇಷ್ಠ ಎಂದು ಅಂದಿದ್ದಾರೆ. ಅವರ ದೃಷ್ಟಿಯಿಂದ ರಾಮರಾಜ್ಯವೆಂದರೆ ಪೂರ್ಣ ಸ್ವರಾಜ್ಯವಾಗಬಲ್ಲದು. ಆದರೆ ಪೂರ್ಣ ಸ್ವರಾಜ್ಯವೆಂದರೆ ಒಳ್ಳೆಯ ರಾಜ್ಯವಾಗದೆ ರಾಕ್ಷಸ ರಾಜ್ಯವೂ ಆಗಬಲ್ಲದು! ಜರ್ಮನಿಯು ಸ್ವತಂತ್ರವಿದೆ ಎಂದು ನಾವು ತಿಳಿಯಲು ಅಡ್ಡಿ ಇಲ್ಲ. ಆದರೆ ಅಂಥ ಸ್ವಾತಂತ್ರ್ಯವು ಗಾಂಧೀಜಿಯವರಿಗೆ ಇಷ್ಟವಿಲ್ಲ. ಅವರು ಮೂಲ

ಮುದ್ದೆಯನ್ನು ಅನುಲಕ್ಷಿಸುವರು. ಅವರು ಕೇವಲ ಶಬ್ದಗಳ ಗುಲಾಮರಲ್ಲ. ಹೋಳಿಗೆ ಅನ್ನಿರಿ ಅಥವಾ ಅದಕ್ಕೆ ಇನ್ನೊಂದೇನಾದರೂ ಹೆಸರು ಇಡಿರಿ, ಪೋಷಕ ಹಾಗೂ ರುಚಿಕರವಾದ ಆಹಾರವು ಬೇಕು, ಎಂದು ಗಾಂಧೀಜಿಯವರ ಅಂಬೋಣವು. ಏನಾದರೊಂದು ಮುಖ್ಯ ಮುದ್ದೆ ಇಲ್ಲವೆ ತಥ್ಯ ನೋಡಿ ಗಾಂಧೀಜಿಯವರು ಶಬ್ದಕ್ಕೆ ಅರ್ಥವನ್ನು ಕಲ್ಪಿಸುವರು. ಆದುದರಿಂದ ಪ್ರತಿಯೊಂದು ಶಬ್ದಕ್ಕೆ ಅವರು ತಮ್ಮ ಅರ್ಥವೊಂದನ್ನು ಕಲ್ಪಿಸಿ ಅದನ್ನೆ ಗಟ್ಟಿಯಾಗಿ ಹಿಡಿದುಕೊಳ್ಳುವರು. ಈ ಮೂಲಕ ಅನೇಕಸಾರೆ ತಪ್ಪು ತಿಳಿವಳಿಕೆಗಳುಂಟಾಗುವವು. ಆದರೆ ಅವರಿಗೆ ಅದರ ದುಃಖವಿಲ್ಲ.

ಕಾನ್‌ಸ್ಟಿಟ್ಯೂಯೆಂಟ ಅಸೆಂಬ್ಲಿ ಶಬ್ದದ ಅರ್ಥದ ಗತಿಯೂ ಇದೇ ಇರುವುದು. ರಾಮುಗಡದಲ್ಲಿ ಸ್ವೀಕರಿಸಲ್ಪಟ್ಟ ಸವಿನಯ ಕಾಯದೇಭಂಗದ ಗೊತ್ತುವಳಿಯಲ್ಲಿಯ ನಿರೋಧದ ಅಥವಾ ಕರಾರಿನ ಭಾಗವನ್ನು ಜನರು ಮರೆತುಬಿಡುವರು ಹಾಗೂ ಕಾಯದೇಭಂಗವನ್ನಷ್ಟೆ ನೆನಪಿನಲ್ಲಿಡುವರು. ಆದರೆ ಗಾಂಧೀಜಿಯವರು ಆ ಕಾಯದೇಭಂಗವನ್ನು ಮರೆಯಲ್ಲಿಟ್ಟು ಆ ನಿರೋಧ ಅಥವಾ ಕರಾರಿನ ಜಪವನ್ನೆ ಮಾಡುವರು. ಜನರು ‘ ಉಂಡಿ ’ ಎಂಬ ಶಬ್ದದ ಉಚ್ಚಾರ ಮಾಡುವಾಗ ಅವರೆದುರು ಒಂದು ದುಂಡಾದ ಸವಿಯಾದ ರುಚಿಕರ ಪದಾರ್ಥವು ಬರುವುದು. ಆದರೆ ಗಾಂಧೀಜಿಯವರು ಇಷ್ಟರಿಂದ ಸಂತುಷ್ಟರಾಗುವುದಿಲ್ಲ. ದುಂಡು, ಚೌಕು, ಬಿಳಿದು, ಕೆಂಪುದು ಮುಂತಾದ ಮಾತುಗಳ ಕಡೆಗೆ ಅವರ ಲಕ್ಷವಿಲ್ಲ. ಅದು ಚಪ್ಪಟೆ ಇರಲಿ ದುಂಡೇ ಇರಲಿ, ಸಿಹಿ ಇರಲಿಕ್ಕೆ ಬೇಕು, ತಾಜಾ ಇರಲಿಕ್ಕೆ ಬೇಕು. ಅದರಲ್ಲಿ ಕಹಿ ವಿಷ ಏನೂ ಇರಬಾರದು. ಅದು ಉತ್ತಮ ಪದಾರ್ಥಗಳಿಂದ ಕೂಡಿದುದಿರಬೇಕು, ವಾಂಛನೀಯ ವಸ್ತುಗಳೆಲ್ಲ ಅದರಲ್ಲಿರಬೇಕು. ಅದರ ರೂಪ, ಆಕಾರ ಬೇಕಾದಂತಹದಿದ್ದರೂ ಗಾಂಧೀಜಿಯವರಿಗೆ ಸಲ್ಲುವುದು. ಉಂಡಿಯಲ್ಲಿ ಹಾಕಿದ ಸಕ್ಕರೆ ಬೆಳ್ಳಗೆ ಇರದೆ ಕೆಂಪು ಇದ್ದರೂ ಚಿಂತೆ ಇಲ್ಲ. ಆ ಮೂಲಕ ಉಂಡಿಯ ಬಣ್ಣ ಕೆಂಪು ಇದ್ದರೂ ಅದು ಅವರ ಮನಸಿಗೆ ಬರುವುದು. ನಮ್ಮ ದೇಶದ ‘ ಚತುರ್ವಿಧ

ನಾಶ' ದ ವಿಷಯವನ್ನು ಗಾಂಧೀಜಿಯವರು ಸಮರ್ಥಿಸಿದಾಗ ಅವರು ಅದರ ಅರ್ಥವನ್ನು ಬೇರೆಯೆ ಮಾಡಿದರು ಹಾಗೂ ಕಾಂಗ್ರೆಸ್ಸಿನವರು ಬೇರೆಯೆ ಮಾಡಿದರು.

ಆದುದರಿಂದ ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿಯ ಈ ಭಾಗವು ಸುಳ್ಳು ಹಾಗೂ ಹಿಂಸಾತ್ಮಕವಿರುವುದೆಂದು ಹಲವು ಪ್ರತಿಷ್ಠಿತ ಆಂಗ್ಲರು ಪ್ರತಿಪಾದಿಸಿದಾಗ ಗಾಂಧೀಜಿಯವರು ಕೂಡಲೆ ತಮ್ಮ ಅರ್ಥವನ್ನು ಹೇಳಿ ಹೀಗೆ ಬರೆದರು : ' ನನ್ನ ತಂದೆಯವರು ಸಾದಾ ಮನುಷ್ಯರು. ಕಾಲಲ್ಲಿ ಮೆತ್ತನ್ನ ತೊಗಲಿನ ದೇಶೀ ಜೋಡನ್ನು ಮೆಟ್ಟುತ್ತಿದ್ದರು. ಆದರೆ ಗವರ್ನರನ ದರಬಾರಿಗೆ ಹೋಗುವ ಪ್ರಸಂಗ ಬಂದಾಗ ಅವರು ಕಾಲ ಚೀಲು ಹಾಗೂ ಬೂಟು ಹಾಕಿಕೊಂಡರು. ಕರ್ಜನ್ ಸಾಹೇಬರ ದರಬಾರದ ಆಮಂತ್ರಣ ಬಂದೊಡನೆ ಹಲವು ರಾಜಾಮಹಾರಾಜರಿಗೆ ವಿಲಕ್ಷಣವಾದ ಸಿದ್ಧತೆ ಮಾಡಬೇಕಾಗುತ್ತಿತ್ತೆಂಬದನ್ನು ನಾನು ಕಲಕತ್ತೆಯಲ್ಲಿ ನೋಡಿರುವೆ. ಆಗಿನ ಅವರ ರೂಪ, ಸೋಗು ಇವು ಅತ್ಯಂತ ಅಸಹ್ಯವಾಗಿದ್ದವು ಹಾಗೂ ಅವರು ಬಟ್ಲೆರರಂತೆ ಕಾಣುತಿದ್ದರು! ಸಾವಿರಾರು ಭಾರತೀಯರು ಆಂಗ್ಲೀಭೂತರಾಗಿರುವರಲ್ಲದೆ (ಆ್ಯಂಗ್ಲಿಸಾಯಿಜ್ಡ) ತಮ್ಮ ಭಾಷೆಯನ್ನು ಕೂಡ ಮರೆತುಬಿಟ್ಟಿರುವರು. ಇದೇನು ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ನಾಶವಲ್ಲವೆ? ನಾವು ನಮ್ಮ ಸ್ವೇಚ್ಛೆಯಿಂದ ಈ ಆತ್ಮಘಾತವನ್ನು ಮಾಡಿಕೊಂಡೆವೆಂದು ಒಂದೊಪ್ಪತ್ತು ತಿಳಿದರೂ ಈ ವಿಷಯದಲ್ಲಿ ಇಂಗ್ಲೀಷರ ಹೊಣೆಗಾರಿಕೆ ಕಡಿಮೆಯಾಗಲಾರದು. ಯಾವ ಬೇಡಿಗಳು ಸೆರೆಯಾಳನ್ನು ಸೆರೆಯಲ್ಲಿ ಬಂಧಿಸಿಡಲು ಕಾರಣವಾಗುವವೊ ಅವುಗಳನ್ನೆ ಆ ಸೆರೆಯಾಳು ಪೂಜಿಸ ತೊಡಗಿದರೆ ಹಾಗೂ ತನ್ನ ಬಂಧನಕರ್ತರನ್ನು ಅನುವರ್ತಿಸಲಾರಂಭಿಸಿದರೆ ಅದು ಅವನ ಆತ್ಯಂತಿಕ ನಾಶವಲ್ಲವೆ? ಇದಕ್ಕೂ ಹೆಚ್ಚಿನ ಅಧೋಗತಿ ಯಾವುದು ? '

ಇದೊಂದು ಹೊಸ ಯುಕ್ತಿವಾದದಂತೆ ತೋರುವುದು. ಆದರೆ ಇದರಿಂದ ಆ ಪ್ರತಿಜ್ಞೆಯಲ್ಲಿಯ ಆ ವಿಶಿಷ್ಟ ವಿಧಾನದ ಮೂಲಕ ಆಂಗ್ಲರಲ್ಲಿ ಉಂಟಾದ ಕಟುಭಾವವು ಎಷ್ಟೋ ಕಡಿಮೆಯಾಯಿತು. ಆದರೂ

ಗಾಂಧೀಜಿಯವರ ವಿರೋಧಿಗಳ ಮನಸಿಗೆ ಈ ಮಾತುಗಳು ಅತಿಶಯವಾಗಿ ಹತ್ತದೆ ಇರಲಿಲ್ಲ. ವಾಸ್ತವಿಕ ಈ ಪ್ರತಿಜ್ಞೆಯ ಅರ್ಥವನ್ನು ಗಾಂಧೀಜಿಯವರು ತಮಗೆ ಇಷ್ಟವಿದ್ದಂತೆ ಹಾಗೂ ಜನರು ತಮಗೆ ಸರಿದೋರಿದಂತೆ ತಿಳುಕೊಂಡಿರುವರು. ಗಾಂಧೀಜಿಯವರು ತರ್ಕದ ಆಧಾರದಿಂದ ನಿರ್ಣಯ ಮಾಡುವದಿಲ್ಲ. ಅವರ ನಿರ್ಣಯ ಮೊದಲು, ತರ್ಕ ತದನಂತರ. ಯಥಾರ್ಥವಾಗಿ ನೋಡಿದರೆ ಶುದ್ಧ ಬುದ್ಧಿಯವರು ಯಾವದೊಂದು ನಿರ್ಣಯ ಮಾಡಬೇಕಾದರೆ ಹೆಚ್ಚು ವಿಚಾರ ಮಾಡುತ್ತ ಕೂಡಬೇಕಾಗುವುದಿಲ್ಲ. ಒಂದು ಉತ್ತಮ ಬಂದೂಕಿನ ಗುಂಡು ವೇಗದಿಂದ ಸಾಗಿ ಗುರಿಯನ್ನು ಸರಿಯಾಗಿ ವೇಧಿಸುವುದು. ಅದೇ ರೀತಿ ಸ್ಥಿತಪ್ರಜ್ಞನು ಒಂದು ಯಂತ್ರದಂತೆ ಕೂಡಲೆ ನಿರ್ಣಯ ಮಾಡಬಲ್ಲನು. ಯಾಕೆಂದರೆ ಯೋಗಸೂತ್ರಗಳಲ್ಲಿ ಹೇಳಿದಂತೆ, 'ಸತ್ಯ ಪ್ರತಿಷ್ಠಾಯಾಂ ಕ್ರಿಯಾ ಫಲಾಶ್ರಯತ್ವಮ್' (ಸತ್ಯವು ಪ್ರತಿಷ್ಠಿತವಾದಲ್ಲಿ ಕ್ರಿಯೆಯಾದೊಡನೆ ಫಲವು ಕಟ್ಟಿಟ್ಟಂತೆ) ಈ ಅವರ ವಿಲಕ್ಷಣ ಅತಿಮಾನವ ಶಕ್ತಿಯ ಮೂಲಕ—ಇದಕ್ಕೆ ಅತಿಮಾನವವೆನ್ನದೆ ಇನ್ನೇನನ್ನಬೇಕು—ಪಕ್ಷಪ್ರತಿಪಕ್ಷಗಳಿಬ್ಬರೂ ಎಷ್ಟೋಸಾರೆ ಗೊಂದಲಕ್ಕೀಡಾಗುವರು. ಇದರ ಮೂಲಕವೆ, ಗಾಂಧೀಯವರೆಂದರೆ ಒಂದು ಒಗಟು, ಒಂದು ಗೂಢ, ಎಂಬ ಭಾವನೆ ಉಂಟಾಗಿದೆ. ಈ ಮೂಲಕವೆ ಹಲವರು ಅವರ ಮಾತಿನ ಕಡೆಗೆ ಸಂಶಯ ದೃಷ್ಟಿಯಿಂದ ನೋಡುವರು.

ಗಾಂಧೀ ಆಯರ್ವಿನ್ ಒಪ್ಪಂದವಾದ ಸಮಯದ ಸುದ್ದಿ ಇದು. ಬಹುಶಃ ಎಲ್ಲ ಮಾತುಗಳ ನಿರ್ಣಯವಾಗಿ ಹೋಗಿತ್ತು. ಇಬ್ಬರೂ ಆ ಖರಡನ್ನು (ಡ್ರಾಫ್ಟ) ಅತಿಶಯ ಎಚ್ಚರದಿಂದ ಓದಿಕೊಂಡರು. ವ್ಹಾಯಿಸರಾಯರ ಮನೆಯಲ್ಲಿರುವಾಗ ಓದುವಾಗಲೆ ಮಧ್ಯಾಹ್ನವಾಯಿತು. ಆಗ 'ನಾನು ಇನ್ನು ಊಟ ಮಾಡುವೆನು. ನೀವೂ ದಣಿದಿರುವಿರಿ. ಇಲ್ಲಿ ನನ್ನ ಕೋಣೆಯಲ್ಲಿಯೆ ವಿಶ್ರಮಿಸಿರಿ. ಬಳಿಕ ಕೆಲಸವನ್ನು ಮುಂದೆ ಸಾಗಿಸುವ' ಎಂದು ವ್ಹಾಯಿಸರಾಯರು ಅಂದರು. ಗಾಂಧೀಜಿಯವರು ಒಳ್ಳೇದು ಎಂದು ಮಲಗಿಬಿಟ್ಟರು.

ಎರಡೂವರೆ ಗಂಟೆಗೆ ಎದ್ದು ಮೋರೆ ತೊಳೆದುಕೊಂಡರು. ಗಾಂಧೀಜಿಯವರು ಆ ಸಮಯದ ತಮ್ಮ ಭಾವನೆಗಳನ್ನು ಹೀಗೆ ಹೇಳುವರು, 'ನನಗೇನೋ ಅಸ್ವಸ್ಥತೆ ಉಂಟಾದಂತೆ ಕಂಡುಬಂದಿತು. ಅದು ಶಾರೀರಿಕ ಅಸ್ವಸ್ಥತೆ ಇರಲಿಲ್ಲ, ಮಾನಸಿಕವಿತ್ತು. ನಾನೇನೋ ಒಂದು ಪಾಪ ಮಾಡುತಿರುವೆ ಎಂದೆನಿಸಿತು. ಆ ಒಪ್ಪಂದದ ಕಾಗದವನ್ನೆತ್ತಿ ಓದತೊಡಗಿದೆನು. ಓದುತಿರಲಾಗಿ ಭೂಕಂದಾಯದ ವಿಷಯ ಬಂದೊಡನೆ ನನ್ನ ತಲೆ ಹೊಡೆಯಲಾರಂಭಿಸಿತು. ಸರಿ, ಆ ವಿಷಯದ ಬಗ್ಗೆಯೆ ತಪ್ಪಾಗಿದೆ ಎಂದು ತಿಳಿದೆನು. ಈ ಖರಡು (ಡ್ರಾಫ್ಟ) ಸರಿಯಾಗಿಲ್ಲವೆಂದು ವ್ಹಾಯಿಸರಾಯರಿಗೆ ಹೇಳಿದೆನು. ಇದಕ್ಕೆ ನಾನು ಒಪ್ಪಲಾರೆ. ನಾನು ಇದಕ್ಕೆ ಮೊದಲು ಒಪ್ಪಿದ್ದು ನಿಜ. ಆದರೆ ಈಗ ಹಾಗೆ ಒಪ್ಪುವುದೆಂದರೆ ಪಾಪ ಮಾಡಿದಂತೆ ಎಂದು ನನಗೆ ಪ್ರತೀತವಾಗಿದೆ. ಆದುದರಿಂದ ಆ ಒಪ್ಪಿಗೆ ಈಗ ರದ್ದಾಗಿದೆ ಎಂದು ತಿಳಿಯಬೇಕು, ಎಂದು ಹೇಳಿದೆನು.'

ಇದನ್ನು ಕೇಳಿ, ವ್ಹಾಯಿಸರಾಯರು ತಣ್ಣಗಾಗಿಬಿಟ್ಟರು. ಅವರು 'ಇದೇನು ರೀತಿಯೆ', ಎಂದಿರಬಹುದು. ಹೀಗೆ ಮಾಡಿದುದಕ್ಕೆ ಅವರ ಯುಕ್ತಿವಾದವು ಸಿದ್ಧವಿತ್ತು. ಅದು ಪ್ರತಿಪಕ್ಷವನ್ನು ಒಪ್ಪಿಸುವಂತಹದೂ ಇತ್ತು. ಆದರೆ ಮೊದಲು ನಿರ್ಣಯವಾಯಿತು, ಬಳಿಕ ಯುಕ್ತಿವಾದದ ಉದಯ. ಕೊನೆಗೆ ವ್ಹಾಯಿಸರಾಯರು ಗಾಂಧೀಜಿಯವರ ತರ್ಕಸರಣಿಯನ್ನು ಮನ್ನಿಸಿದರು. ಆದರೇನು, ಈ ಮನುಷ್ಯನು ಸರಲನಿಲ್ಲ ಎಂದು ಅವರು ಅಂದುಕೊಂಡಿರಲಿಕ್ಕಿಲ್ಲವೆ?

ಆರನೆ ಎಪ್ರಿಲ ಇದು 'ಸತ್ಯಾಗ್ರಹ ದಿನ' ಎಂದು ಆಚರಿಸಲಾಗುವುದು. ಹೀಗೆ ನಿರ್ಣಯವಾದುದರ ಇತಿಹಾಸವಾದರೂ ಇದೇ ಬಗೆಯದು. ಆ ತಾರೀಖಿನ ಮುಂಚೆ ಎಷ್ಟೋ ದಿನ ಅದರ ಕಲ್ಪನೆ ಸಹ ಗಾಂಧೀಜಿಯವರಿಗೆ ಇರಲಿಲ್ಲ. ಒಂದು ದಿನ ಗಾಂಧೀಜಿಯವರು ಮಲಗಿಕೊಂಡರು. ಆರನೇ ತಾರೀಖನ್ನು ಸತ್ಯಾಗ್ರಹ ದಿನವೆಂದು ಆಚರಿಸತಕ್ಕದ್ದು, ಎಂದು ಅವರಿಗೆ ಕನಸಾಯಿತು. ಇನ್ನು ಸಮಯ ಕಡಿಮೆ ಇದೆ, ಇದು ಯಶಸ್ವಿಯಾಗಲಿಕ್ಕಿಲ್ಲ, ಎಂದು ಅವರ ಸಹಕಾರಿ

ಗಳು ಹೇಳಿದರು. ಆದರೆ ಅದನ್ನು ಅವರು ಲೆಕ್ಕಿಸಲಿಲ್ಲ. ಅತ್ತಿತ್ತ ಡಂಗುರ ಸಾರಲಾಯಿತು ಹಾಗೂ ಆ ದಿನವು ಒಳ್ಳೆ ವಿಜೃಂಭಣೆಯಿಂದ ಪಾಲಿಸಲಾಯಿತು. ಇದೇನು, ಯಾವದೊಂದು ತರ್ಕ ಇಲ್ಲವೆ ಯುಕ್ತಿ ವಾದದಿಂದ ಆದ ನಿರ್ಣಯವೆ? ಹಟದಿಂದ ಒಂದು ನಿರ್ಣಯ ಮಾಡಿ ಬಳಿಕ ಯುಕ್ತಿವಾದವನ್ನು ಇವರು ಹೂಡುವರು. ಇವರೆಂಥವರು, ಇವರೊಡನೆ ಕೆಲಸ ಹೇಗೆ ಮಾಡಬೇಕು, ಎಂದು ಅವರ ಸಹಕಾರಿಗಳಿಗೆ ಎನಿಸಿರಲಿಕ್ಕಿಲ್ಲವೆ ? ಆದರೆ ಅಂತರಾತ್ಮನ ಪ್ರೇರಣೆಯಿಂದ ನಿರ್ಣಯ ಮಾಡುವವರ ನಿರ್ಣಯಗಳು ಸಾಮಾನ್ಯ ಯುಕ್ತಿ-ತರ್ಕಗಳ ಸಹಾಯ ದಿಂದ ಮಾಡಲಾಗುವುದಿಲ್ಲ, ಎಂದು ನನಗೆ ಎನಿಸುವುದು. ಈ ಬಗೆಯ ಪ್ರೇರಣೆ ಎಲ್ಲರಿಗೂ ಸಾಧ್ಯವಿಲ್ಲ. ಅದನ್ನು ಪಡೆದು ಬರಬೇಕು. ಈ ಅಂತರಾತ್ಮನೆಂದರೇನು ಇದನ್ನು ತಿಳಿದುಕೊಳ್ಳುವದೂ ಕಠಿಣ. ಅದು ಬೇರೆ ವಿಷಯ. ಗಾಂಧೀಜಿಯವರ ನಿರ್ಣಯಗಳು ಹೇಗೆ ಆಗು ವವು ಇದನ್ನು ಹೇಳುವುದೆ ಇಲ್ಲಿ ನನ್ನ ಉದ್ದೇಶವಿತ್ತು.

---

# ೧೬. ನಿರಹಂಕಾರಿ ಜೀವ

ನನ್ನ ಹಾಗೂ ಗಾಂಧೀಜಿಯವರ ಪ್ರಥಮ ದರ್ಶನವಾದಂದಿನಿಂದ ನಮ್ಮ ಸಂಬಂಧವು ಅವಿಚ್ಛಿನ್ನವಾಗಿದೆ. ಹಲವು ವರ್ಷ ನಾನು ಅವರ ಹತ್ತಿರ ವಿಮರ್ಶಕ ದೃಷ್ಟಿಯನ್ನಿಟ್ಟುಕೊಂಡು ಹೋಗುತಿದ್ದೆ, ಅವರ ದೋಷಗಳನ್ನು ಹುಡುಕಲೆತ್ನಿಸುತಿದ್ದೆ, ಯಾಕೆಂದರೆ ತರುಣರ ಆರಾಧ್ಯ ಮುಖಂಡರಾದ ಲೋಕಮಾನ್ಯರ ಕೀರ್ತಿಗೆ ಸರಿಮಿಗಿಲೆನಿಸಿ ಅವರ ಕೀರ್ತಿ ಮುಂದರಿಯಲಾರಂಭಿಸಿತ್ತು. ಇದು ನನಗೆ ಅಷ್ಟೊಂದು ಮನಸಿಗೆ ಬಂದಿರಲಿಲ್ಲ. ಆದರೆ ನಾನು ಅವರ ಛಿದ್ರಗಳನ್ನು ಹುಡುಕಲು ಯತ್ನಿಸಿದಂತೆ ಹಾಗೂ ಹೆಚ್ಚು ಆಳವಾಗಿ ನೋಡಿದಂತೆ ನನಗೆ ಆ ಬಗ್ಗೆ ನಿರಾಶೆಯಾಯಿತು. ಹಲವು ವರ್ಷಗಳಲ್ಲಿಯೆ ನನ್ನ ವೃತ್ತಿ ಬದಲಾಗಿ ಅವರ ಬಗ್ಗೆ ಆದರವುಂಟಾಯಿತು. ಆ ಆದರವು ಪಕ್ವವಾಗಿ ಈಗ ಭಕ್ತಿಯ ರೂಪವನ್ನು ತಾಳಿದೆ. ಗಾಂಧೀಜಿಯವರ ಸಂಸರ್ಗದಿಂದ ಪ್ರಭಾವಾನ್ವಿತನಾಗದೆ ಇರುವವರು ತೀರ ಕಡಿಮೆ. ಅವರ ಸ್ವಭಾವವೆ ಹಾಗೆ.

ಎಚ್ಚರಿರುವಾಗ ನಾವು ಯಾವ ಕೆಲಸವನ್ನು ಎಂದೂ ಮಾಡಲಿಕ್ಕಿಲ್ಲವೊ ಅಂತಹ ಕೆಲಸಗಳನ್ನು ಸಹ ನಾವು ಒಮ್ಮೊಮ್ಮೆ ಕನಸಿನಲ್ಲಿ ಮಾಡಿಬಿಡುವೆವು. ಆದರೆ ನಮ್ಮ ದೇಹವು ಎಚ್ಚರಿದ್ದರೂ ಅನೇಕ ಸಾರೆ ನಮ್ಮ ಮನಸು ಸುಷುಪ್ತಿಯಲ್ಲಿರುವುದು. ಸೂಕ್ಷ್ಮವಾಗಿ ಆತ್ಮನಿರೀಕ್ಷಣೆ ಮಾಡುತ್ತ ಹೋದರೆ ಅಂಥ ಅವಸ್ಥೆಯಲ್ಲಿ ನಮ್ಮಿಂದಾದ ಕೆಲಸಗಳ ಸೂಕ್ಷ್ಮ ಲೆಕ್ಕವೆಲ್ಲ ಗೊತ್ತಾಗುತಿದೆ. ಈಗ ಇಪ್ಪತ್ತೈದು ವರ್ಷ ಗಾಂಧೀಜಿಯವರೊಡನೆ ನನ್ನ ಸಂಬಂಧವಿದೆ. ಅವರ ಅತ್ಯಂತ

ಸಮೀಪ ಇದ್ದು ಸೂಕ್ಷ್ಮದರ್ಶಕ ಯಂತ್ರದ ಸಹಾಯದಿಂದ ಯಾವ ದೊಂದು ವಸ್ತುವನ್ನು ಪರೀಕ್ಷಿಸಿ ನೋಡುವಂತೆ ನಾನು ಅವರ ಜೀವನ ವನ್ನು ಅಭ್ಯಸಿಸಿರುವೆನು. ವಿಮರ್ಶಕ ಬುದ್ಧಿಯಿಂದ ಅವರ ದೋಷ ಗಳನ್ನು ಹುಡುಕಲೆತ್ನಿಸಿರುವೆನು. ಆದರೆ ಅವರು 'ಮಲಗಿದ್ದನ್ನು', ತಿಳಿದು ತಿಳಿದು ತಪ್ಪು ಮಾಡಿದ್ದನ್ನು—ಅವರ ಎಚ್ಚರ ಹಾರಿದ್ದನ್ನು— ನಾನು ಒಮ್ಮೆಯೂ ನೋಡಿಲ್ಲ. ಅವರ ವಿವೇಕವು, ಆತ್ಮವು ಪ್ರತಿ ಕ್ಷಣ ಎಚ್ಚರಿರುವದೆಂದು ಹೇಳಬಹುದು. ಆದುದರಿಂದ 'ನನ್ನ ಜೀವನದ ಪ್ರತಿಕ್ಷಣವೂ ಪರಮಾತ್ಮ ಸೇವೆಯಲ್ಲಿ ವೆಚ್ಚವಾಗುವುದು' ಎಂದು ಅವರು ನನಗೆ ಹೇಳುವುದರಲ್ಲಿ ಎಳ್ಳಷ್ಟೂ ಅತಿಶಯೋಕ್ತಿಯಿಲ್ಲ. ವೆಂದು ನಾನು ಹೇಳಬಲ್ಲೆ. ಹೀಗೆ ಅವರು ಹೇಳುವುದು ಅಹಂಕಾರ ವೆನಿಸದು. ಯಾಕಂದರೆ ಅವರು ತ್ರಯಸ್ಥರಂತೆ ತಮ್ಮನ್ನು ತಾವೆ ನಿಃಪಕ್ಷಪಾತ ಬುದ್ಧಿಯಿಂದ ನಿರೀಕ್ಷಿಸಿ ವಿವೇಚಿಸಬಲ್ಲರು. ಈ ರೀತಿ ನಿರೀಕ್ಷಿಸುವಾಗ ಮನುಷ್ಯನು ತನ್ನನ್ನೆ ವಿವೇಚಿಸಲಿ, ಇತರರನ್ನೆ ವಿವೇ ಚಿಸಲಿ, ಅವನು ನಿಃಪಕ್ಷಪಾತ ಬುದ್ಧಿಯಿಂದ ಹಾಗೆ ಮಾಡುವನು. ಆ ರೀತಿ ತ್ರಯಸ್ಥನಂತೆ ಆತ್ಮಸಾಕ್ಷಿಯಾಗಿ ಸ್ವಭಾವ ವರ್ಣನೆ ಮಾಡು ವವನು ಪರರ ವರ್ಣನೆಯನ್ನು ಯಾವ ನಿಃಸಂಕೋಚ ಭಾವದಿಂದ ಮಾಡಬಲ್ಲನೊ ಅದೇ ನಿಃಸಂಕೋಚ ಭಾವದಿಂದ ತನ್ನನ್ನು ವರ್ಣಿಸ ಬಲ್ಲನು.

ಯರವಡೆಯಲ್ಲಿರುವಾಗ ಅವರು ಒಂದರಹಿಂದೊಂದು ಉಪವಾಸ ಪ್ರಾರಂಭಿಸಿದೊಡನೆ 'ನಾನಂತೂ ಈಗ ಮುದುಕ, ಬೇಗ ಸಾಯು ವವ. ಹೋರಾಡುತ್ತ ಸಾಯುವುದೆ ಲೇಸು' ಎಂದು ಗಾಂಧೀಜಿ ಯವರು ತಿಳಿದಿರಲಿಕ್ಕೆ ಸಾಕು, ಎಂಬ ವಿಚಾರ ನನ್ನಲ್ಲಿ ತಲೆದೋರಿತು. ಆಗ ನಾನು ಒಂದು ರೀತಿ ಕೆರಳಿಸಿ ಮಾತಾಡಬೇಕೆಂದು, 'ನೀವು ಜೀವಂತವಿರುವಾಗ ದೇಶಕಲ್ಯಾಣ ಮಾಡಿದಿರಿ. ಈಗ ಸಾಯುವ ಕಾಲ ಬಂದಿದೆ. ಸಾವಿನಿಂದ ಸಹ ದೇಶಕ್ಕೆ ಲಾಭವಾಗುವಂತೆ ಮಾಡುವುದು ನಿಮ್ಮ ಮನಸಿನಲ್ಲಿದ್ದಂತೆ ಕಾಣುವುದು,' ಎಂದೆನು. ಅವರು ಅಂದದ್ದು, 'ಈ ರೀತಿ ಕಲ್ಪನೆ ಮಾಡುವುದು ಸಹ ಅಹಂಕಾರವೆನಿಸುವುದು.

ಯಾಕೆಂದರೆ ಮಾಡುವುದು, ಮಾಡಿಸುವುದು, ಮಾಡಿಸದಿರುವುದು ಪರಮಾತ್ಮನ ಕೆಲಸ. ನೀವು ಅಂದಂತೆ ಏನಾದರೊಂದು ವಿಚಾರವನ್ನು ನಾವು ತಲೆಯಲ್ಲಿ ಹಾಕಿಕೊಳ್ಳುವುದೆಂದರೆ ಪರಮಾತ್ಮನ ಅಸ್ತಿತ್ವದ ಅಪಮಾನವದು. ಅದು ನಮ್ಮ ಅಹಂಕಾರದ ಪ್ರದರ್ಶನವಾಗುವುದು.' ಈ ಮಾತನ್ನು ಕೇಳಿ ನಾನು ಅಚ್ಚರಿಗೊಂಡೆನು. ತಮ್ಮ ಅಹಂಕಾರದ ನಾಶವನ್ನು ಅವರು ಎಷ್ಟು ಪೂರ್ಣವಾಗಿ ಮಾಡಿರುವರೆಂಬುದು ನನಗೆ ಆಗ ಪ್ರತೀತವಾಯಿತು.

' ಕಾಛ ದೃಢಾಂ ಕರ ಬರಸಣಾ ಮನ ಚಂಗಾ ಮುಖ ಮಿಟ್ಠ ||
ರಣಸೂರಾ ಜಗವಲ್ಲಭಾ ಸೋ ಮೈ ವಿರಲಾ ದಿಟ್ಠ ||

' ಬ್ರಹ್ಮಚರ್ಯ, ಕೊಡುಗೈ, ನಿರ್ಮಲ ಮನಸು, ಸವಿ ನಾಲಿಗೆ, ರಣದಲ್ಲಿ ಶೌರ್ಯ, ಲೋಕಕ್ಕೆ ಪ್ರಿಯನಿರುವುದು ' ಈ ಎಲ್ಲ ಗುಣಗಳಿಂದ ಯುಕ್ತನಿರುವವನು ವಿರಲ. '

ಗಾಂಧೀಜಿಯವರ ಅಂತರಂಗದಲ್ಲಿ ಇಣಿಕಿ ನೋಡಿದರೆ ಮಾತ್ರ ಅವರು ಅಹಂಕಾರದಿಂದ ಎಷ್ಟು ಅಲಿಪ್ತರಿರುವರೆಂಬದು ಗೊತ್ತಾಗಬಲ್ಲದು.

ಹರಿಜನಸೇವಕ ಸಂಘದ ಪ್ರತಿಯೊಬ್ಬ ಅಧಿಕಾರಿಯು ಒಂದು ಶಪಥ ಮಾಡಬೇಕಾಗುವುದು. ' ನಾನು ನನ್ನ ಜೀವನದಲ್ಲಿ ಉಚ್ಚ ನೀಚ ಭೇದವನ್ನು ಎಣಿಸಲಿಕ್ಕಿಲ್ಲ ' ಎಂಬುದೆ ಅದರ ತಾತ್ಪರ್ಯ. ಈ ಪ್ರತಿಜ್ಞೆ ಮಾಡುವ ಪ್ರಸಂಗ ಬಂದಾಗ, ನಾನು ಮಾಡಲಾರೆ, ಎಂದೆನು. ಆಗ ನಾನು ಅಂದದ್ದು, ' ಜನ್ಮತಃ ಯಾರೂ ಉಚ್ಚ ನೀಚರಿಲ್ಲ ಎಂಬುದನ್ನು ನಾನು ಸಹಜವಾಗಿ ಒಪ್ಪುವೆನು. ಆದರೆ ಒಬ್ಬನು ಪಾಪಿ, ದುಷ್ಟ, ಕಳ್ಳ ಇದ್ದು ಆ ಮಾತು ನನಗೆ ಪ್ರತ್ಯಕ್ಷ ಗೊತ್ತಿದ್ದರೆ ಹಾಗೂ ಆ ದೋಷ ನನ್ನಲ್ಲಿಲ್ಲದಿದ್ದರೆ ನಾನು ಆ ಬಗ್ಗೆ ಅಹಂಕಾರಿಯಾಗದಿದ್ದರೂ ಅವನಿಗಿಂತ ನಾನು ಲೇಸು, ಎಂಬ ಭಾವನೆ

ನನ್ನಲ್ಲಿ ಬರದೆ ಇರುವುದು ಕಠಿಣ. ನಾನು ತ್ರಯಸ್ಥನಾಗಿ ನೋಡಿ ದರೂ ಇಂಥವನಿಗಿಂತ ನಾನು ಉಚ್ಚನು, ಇಂಥವನಿಗಿಂತ ನೀಚನು, ಎಂಬ ಭಾವನೆ ನನ್ನಲ್ಲಿ ಉಂಟಾಗುವುದು.'

ಈ ಮಾತಿನಿಂದ ಅವರು ಸೋಲಲಿಲ್ಲ. ಆಗ ನಾನು ಅದಕ್ಕೂ ಬಲವುಳ್ಳ ಯುಕ್ತಿವಾದವೊಂದನ್ನು ಅವರ ಮುಂದಿಟ್ಟೆನು: 'ನಿಮ್ಮ ಬಗ್ಗೆಯೆ ಈಗ ವಿಚಾರ ಮಾಡಿರಿ. ನನಗಿಂತ ನೀವು ದೇವರಿಗೆ ಸಮೀಪ ದವರು. ನಿಮ್ಮಲ್ಲಿ ಏನೂ ಅಹಂಕಾರವಿಲ್ಲದಿದ್ದರೂ ನೀವು ನನಗಿಂತ ಉಚ್ಚರು ಎಂಬ ಮಾತನ್ನು ನೀವು ಮರೆಯುವ ಬಗೆ ಹೇಗೆ?'

ಗಾಂಧೀಜಿಯವರು ಅಂದದ್ದು, ಈ ನಿಮ್ಮ ಮಾತು ಸರಿಯಾದು ದಲ್ಲ. ನಮ್ಮ ಮೆಟ್ಟು ಯಾವುದು ಎಂಬುದನ್ನು ನಿರ್ಣಯಿಸುವವರೆಗೆ ದೇವರ ಹತ್ತಿರದವರು ಯಾರು, ದೂರಿನವರು ಯಾರು, ಇದನ್ನು ಹೇಗೆ ಹೇಳಬೇಕು? ಸಮೀಪವಿರುವವನಂತೆ ತೋರುವವನು ದೂರಿರಬಹುದು, ದೂರಿರುವವನಂತೆ ತೋರುವವನು ಸಮೀಪವಿರಬಹುದು. ನಾನೊಮ್ಮೆ ಆಫ್ರಿಕಾಕ್ಕೆ ಹೊರಟಿದ್ದೆನು. ಸರಿಯಾದ ಸಮಯಕ್ಕೆ ಹಡಗವನ್ನೇ ರುವುದಾಗಲಿಲ್ಲ. ಹಡಗದ ಲಂಗರವನ್ನೆತ್ತಿಬಿಟ್ಟಿದ್ದರು. ಆದುದರಿಂದ ಒಂದು ನಾವಿನಲ್ಲಿ ಕೂಡಿಸಿ ನನ್ನನ್ನು ಹಡಗಕ್ಕೆ ಕಳಿಸಿದರು. ಆದರೆ ಬಿರುಗಾಳಿ ಬಿಟ್ಟದ್ದರಿಂದ ನನ್ನ ನಾವು ಆ ಹಡಗದ ಬದಿಗೆ ಬಡಿಬಡಿದು ಎಷ್ಟೋ ಸಾರೆ ದೂರ ನೂಕಲ್ಪಟ್ಟಿತು. ಕೊನೆಗೆ ಏನೋ ಮಾಡಿ ನನ್ನನ್ನು ಹಡಗದ ಮೇಲೆ ಏರಿಸಿದರು. ಆದರೆ ಆ ನಾವು ಹಾಗೆ ಬಡಿದಾಡುತ್ತ ಹಡಗದ ಹತ್ತಿರ ಹೋಗದೆ ಇರುವ ಸಂಭವವೂ ಇತ್ತು ಹಾಗೂ ನಾನು ಹಡಗದ ಮೇಲೆ ಏರದೆ ಇರುವ ಸಂಭವವೂ ಇತ್ತು. ಆ ನಾವು ಹಡಗಕ್ಕೆ ಸ್ಪರ್ಶ ಮಾಡಿದಾಕ್ಷಣಕ್ಕೆ ನಾನು ಹಡಗವನ್ನೇರಿ ದಂತಾಗಲಿಲ್ಲ. ಹಡಗದ ತೀರ ಸಮೀಪ ಹೋಗಿ ಹಡಗವನ್ನು ಮುಟ್ಟಿ ದರೂ ಅದರಿಂದ ಮತ್ತೆ ದೂರ ಹೋಗುವ ಸಂಭವವೂ ಇದೆ. ಅಂದ- ಬಳಿಕ ನಾನು ದೇವರ ಬಳಿ ಇರುವೆ, ಇನ್ನೊಬ್ಬನು ಇಲ್ಲ, ಎಂದು ನಾನು ಹೇಗೆ ಅನ್ನಬಲ್ಲೆ? ಈ ಕಲ್ಪನೆಯೆ ಭ್ರಮಮೂಲಕವು ಹಾಗೂ ಅಹಂಕಾರಯುಕ್ತವು.'

ಈ ಅವರ ವಿಚಾರಸರಣಿಯು ನನಗೆ ಮೋಹಕವೆನಿಸಿತು. ಅದಕೂ ಹೆಚ್ಚು ಗಾಂಧೀಜಿಯವರ ಆತ್ಮಜಾಗ್ರತಿ ನನಗೆ ವಿಶೇಷ ಮೋಹಕವೆನಿಸಿತು. ರಾಜನ ಸೋಗು ಹಾಕಿಕೊಳ್ಳುವ ನಟನು ಆ ಸೋಗಿನಿಂದ ಮೋಹಿತನಾಗುವುದಿಲ್ಲ. ಗಾಂಧೀಜಯವರು ತಮ್ಮ ದೊಡ್ಡಸ್ತಿಕೆಯ ಮೂಲಕ ಆತ್ಮಜಾಗ್ರತಿಯನ್ನು ಕಳಕೊಂಡಿಲ್ಲ. ಅಹಂಕಾರ ಎಂಬುದು ಮೋಹದ ಅಪರನಾಮವು. ಜಾಗ್ರತನಿದ್ದವಗೆ ಅಹಂಕಾರವೆಲ್ಲಿಯದು ಮೋಹವೆಲ್ಲಿಯದು ? ಈ ಪರಿ ನಿರಹಂಕಾರಿಗಳಿರುವುದರಿಂದ ಗಾಂಧೀಜಿಯವರು ಒಮ್ಮೊಮ್ಮೆ ನಿಃಸಂಕೋಚಭಾವದಿಂದ ಆತ್ಮಸ್ತುತಿ ಮಾಡಿಕೊಳ್ಳುವುದೂ ಉಂಟು : 'ನಾನು ಪ್ರಚಾರ ಕಾರ್ಯನಿಪುಣನು, ಶ್ರೇಷ್ಠ ಪತ್ರಿಕಾಕರ್ತನು, ನಾನು ಪಕ್ಕಾ ಬನಿಯಾ (ವೈಶ್ಯ) ಇರುವೆನು, ಶರೀರಶಾಸ್ತ್ರದ ವಿದ್ಯಾರ್ಥಿ ಇರುವೆನು, ನಾನು ಈಗ ಮೂವತ್ತೆಂಟು ವರ್ಷ (೧೯೨೯ ರಲ್ಲಿ ಬರೆದುದು) ಗೀತಾನುವರ್ತಿಯಾಗಿರುವೆನು, ನಾನು ಸತ್ಯದ ಪೂಜಕನು, ಈಶಸೇವೆಯಲ್ಲಿ ನನ್ನ ಜೀವ ಸವೆಯುತಿದೆ, ಇತ್ಯಾದಿ.' ಇನ್ನಾರಾದರೂ ಹೀಗೆ ಅಂದರೆ ಅದು ಅಹಂಕಾರದೋಷದಿಂದ ಯುಕ್ತವೆನಿಸಬಹುದು. ಆದರೆ ಗಾಂಧೀಜಿಯವರ ಮಟ್ಟಿಗೆ ಹಾಗೆ ಎನಿಸದು. ಯಾಕಂದರೆ ಗಾಂಧೀಜಿಯವರು ತ್ರಯಸ್ಥರಾಗಿ ಆತ್ಮಸಾಕ್ಷಿಯಿಂದ ತಮ್ಮ ವರ್ಣನೆ ಮಾಡಬಲ್ಲರು.

ಒಬ್ಬ ದಕ್ಷನಾದ ಶಸ್ತ್ರವೈದ್ಯನು ಚೂರಿಯಿಂದ ದೇಹವನ್ನು ಕೊರೆದು ಮನುಷ್ಯ ಶರೀರದಲ್ಲಿಯ ಅಂತರಾವಯುವಗಳನ್ನು ಹೊರಗೆ ತೆಗೆದು ತೋರಿಸಬಲ್ಲನು. ಕೊಳೆತ ಭಾಗಗಳನೆಲ್ಲ ಕತ್ತರಿಸಿ ಚಲ್ಲಿ ಪುನಃ ಹೊಲಿದುಬಿಡಬಲ್ಲನು. ನಿರ್ಜೀವ ಹಣ್ಣು ಕಾಯಿಗಳನ್ನು ಕೊಯ್ಯುವಂತೆ ಮಾನವ ಶರೀರವನ್ನು ನಿರ್ದಯತೆಯಿಂದ ಕೊಯ್ಯುವ ಕೌಶಲವನ್ನು ತೋರಬಲ್ಲನು. ಆದರೆ ಅದೇ ಶಸ್ತ್ರವೈದ್ಯನು ಈ ಪ್ರಯೋಗವನ್ನು ತನ್ನ ಮೇಲೆ ಮಾಡಲಾರನು. ಪ್ರಸಂಗವಶಾತ್ ತನ್ನ ಕೊಳೆತ ಕಾಲನ್ನೆ ನಗುನಗುತ್ತ ಕತ್ತರಿಸಿ ಎಸೆದು ಬಿಡಬಲ್ಲ ಶಸ್ತ್ರವೈದ್ಯನೆಲ್ಲಿರುವನು ? ಆದರೆ ಗಾಂಧೀಜಿಯವರು ಅಂಥ ಶಸ್ತ್ರವೈದ್ಯರು. ಅವರ

ಸ್ನಾಯುಗಳು ಮಮತಾರಹಿತವಾಗಿರುವವು. ಆದುದರಿಂದ ಪರರ ಮೇಲೆ ಅವರು ಎಷ್ಟು ನಿರ್ದಯತೆಯಿಂದ ಶಸ್ತ್ರವನ್ನು ನಡೆಸಬಲ್ಲರೊ ಅದಕೂ ಹೆಚ್ಚು ನಿರ್ದಯತೆಯಿಂದ ಅವರು ತಮ್ಮ ಸ್ವಂತದ ಮೇಲೆ ನಡೆಸಬಲ್ಲರು. 'ನಾನು ಹಿಮಾಲಯದಂಥ ದೊಡ್ಡ ತಪ್ಪು ಮಾಡಿದೆನು ನಾನು ಈ ಪಾಪ ಮಾಡಿದೆನು, ಆ ಪಾಪ ಮಾಡಿದೆನು' ಎಂಬ ಒಪ್ಪಿಗೆಗಳಿಂದ ಅವರ ಚರಿತ್ರವು ತುಂಬಿದೆ. ಹೀಗಿರುವುದರಿಂದ ಅವರು 'ನನ್ನ ಅಹಿಂಸೆಗಿಂತ ಬುದ್ಧನ ಅಹಿಂಸೆ ಕಡೆ. ಟಾಲ್ ಸ್ಟಾಯನ ವಿಚಾರಗಳು ಅವನ ಆಚಾರಕ್ಕಿಂತ ಬಹಳ ಮುಂದೆ ಓಡು ತಿದ್ದವು, ಆದುದರಿಂದ ತನ್ನ ವಿಚಾರದಂತೆ ಸಂಪೂರ್ಣವಾಗಿ ನಡೆಯಲು ಅವನು ಸಮರ್ಥನಾಗಲಿಲ್ಲ. ನನ್ನ ವಿಚಾರಗಳಿಗಿಂತ ನನ್ನ ಆಚಾರಗಳು ಒಂದು ಹೆಜ್ಜೆ ಮುಂದೆ ಇಕ್ಕುವಂತೆ ನಾನು ಪ್ರಯತ್ನಿಸುತ ಲಿದ್ದೇನೆ,' ಈ ರೀತಿ ಹೇಳಿದರೆ ಇದು ಅಹಂಕಾರವೆನಿಸದು. ಪರರ ಶರೀರವನ್ನು ಕೊಯ್ಯಬಹುದಾದ ಕೌಶಲದಿಂದಲೆ ತನ್ನ ಶರೀರವನ್ನು ಕೂಡ ಕೊಯ್ಯಲು ಸಮರ್ಥನಿದ್ದ ನಿಃಸ್ಪೃಹ ಶಸ್ತ್ರವೈದ್ಯನು ಹೇಳಿದಂತೆ ಈ ಮಾತು ಇದೆ.

ಅಹಂಕಾರವೆಂಬದು ಗಾಂಧೀಜಿಯವರಿಗೆ ಸ್ಪರ್ಶ ಸಹ ಮಾಡುವುದಿಲ್ಲವೆಂಬ ಮಾತು ಅವರ ಸ್ವಭಾವದ ಅಧ್ಯಯನ ಮಾಡುವವರಿಗೆ ಸಹಜವಾಗಿ ತಿಳಿಯುವುದು. ಸಣ್ಣಪುಟ್ಟ ಮಾತುಗಳಿಂದ ಮನುಷ್ಯನ ಪರೀಕ್ಷೆ ಆಗುವುದು, ದೊಡ್ಡ ಸಂಗತಿಗಳಿಂದಲ್ಲ, ಎಂದು ಹೇಳುವುದುಂಟು. ಎಲ್ಲಕ್ಕೂ ದೊಡ್ಡ ತ್ಯಾಗ ಮಾಡುವವನು ಸಹ ನಿತ್ಯ ಜೀವನದ ಸಣ್ಣ ಕೆಲಸಗಳಲ್ಲಿ ತಪ್ಪು ಮಾಡುವುದು ಹಾಗೂ ತೀರ ಹೀನ ರೀತಿ ವರ್ತಿಸುವುದು ಕಂಡುಬರುವುದು, ಹೀಗೆ ಆಗುವ ಕಾರಣವೇನಂದರೆ, ದೊಡ್ಡ ಕೆಲಸ ಮಾಡುವಾಗ ಎಚ್ಚರಪಟ್ಟು ಜನರು ಏಕಾಗ್ರವಾಗಿ ವರ್ತಿಸುವರು. ಆದುದರಿಂದ ಆ ಕೆಲಸವು ಎದ್ದು ಕಾಣುವುದು. ಆದರೆ ಸಣ್ಣಪುಟ್ಟ ಕೆಲಸ ಮಾಡುವಾಗ ಮನುಷ್ಯನು ಅತ್ತ ದುರ್ಲಕ್ಷ ಮಾಡುವನು. ಅರ್ಥಾತ್ ಅಂಥ ಸಂದರ್ಭಗಳಲ್ಲಿ ತ್ಯಾಗವು ಅವನ ಮೈಯುಂಡಿಲ್ಲ, ಅವನ ಸಹಜ ಸ್ವಭಾವವಾಗಿಲ್ಲ ಎಂದು ಹೇಳಬೇಕಾ

ಗುತ್ತಿದೆ. ಗಾಂಧೀಜಿಯವರ ವಿಷಯದಲ್ಲಿ ಮಾತ್ರ ಕೆಲಸವು ಸಣ್ಣದಿರಲಿ ದೊಡ್ಡದಿರಲಿ, ಅವರು ಎಲ್ಲವನ್ನೂ ಅತ್ಯಂತ ಎಚ್ಚರಪಟ್ಟು ಮಾಡುವರು, ಎಂದು ಹೇಳಬಹುದು. ಇದರ ಅರ್ಥವೇನಂದರೆ, ತ್ಯಾಗ, ಸತ್ಯ, ಅಹಿಂಸೆ ಇವು ಅವರ ಸ್ವಭಾವಧರ್ಮಗಳಾಗಿಬಿಟ್ಟಿವೆ. ಧರ್ಮಪಾಲನಕ್ಕಾಗಿ ಅವರಿಗೆ ವಿಶೇಷ ಪ್ರಯತ್ನ ಮಾಡಬೇಕಾಗುವುದಿಲ್ಲ. ಮಾಡಬೇಕಾಗಿದ್ದರೂ ತೀರ ಅಲ್ಪ ಹಾಗೂ ಸೂಕ್ಷ್ಮ ಪ್ರಯತ್ನವು ಸಾಕಾಗುವುದು. ಅವರು ಹಗಲಿರುಳು ಜಾಗ್ರತರಿರುವರು. ಇದು ಸಾಮಾನ್ಯ ಅವಸ್ಥೆಯಲ್ಲ. ಇದು ಸಿದ್ಧಾವಸ್ಥೆಯ ಲಕ್ಷಣವೇ.

# ೧೭. ನಿಜರೂಪ

ಒಬ್ಬ ಮಹಾತ್ಮರು ಎಂಬ ದೃಷ್ಟಿಯಿಂದ, ಒಬ್ಬ ಶ್ರೇಷ್ಠ ಮುಖಂಡರು ಎಂಬ ದೃಷ್ಟಿಯಿಂದ ಈ ವರೆಗೆ ನಾವು ಗಾಂಧೀಜಿಯವರನ್ನು ಪರಿಶೀಲಿಸಿದೆವು. ಆದರೆ ನಾವು ಅವರ ಆತ್ಮಸ್ವರೂಪವನ್ನು ಕಾಣಬೇಕಿದ್ದರೆ ಅವರ 'ಬಾಪೂ' ಎಂಬ ರೂಪದಲ್ಲಿಯೆ ಅದನ್ನು ಕಾಣಬಲ್ಲೆವು. ಸೇವಾಗ್ರಾಮದಲ್ಲಿ ದೊಡ್ಡ ದೊಡ್ಡ ಸಮಸ್ಯೆಗಳು ಚರ್ಚೆಗೆ ಬರುವವು. ಅಲ್ಲಿ ವ್ಹಾಯಿಸರಾಯರೊಡನೆ ಪತ್ರವ್ಯವಹಾರ ನಡೆಯುವುದು, ವರ್ಕಿಂಗ ಕಮೀಟಿಯ ಅಧಿವೇಶನಗಳಾಗುವವು, ಶ್ರೇಷ್ಠ ಜ್ಯೇಷ್ಠ ಮುಖಂಡರು ಬರುವರು. ಕಾಂಗ್ರೆಸ್ ಮಂತ್ರಿಮಂಡಳಗಳ ಕೈಯಲ್ಲಿ ರಾಜ್ಯಸೂತ್ರಗಳಿದ್ದಾಗ ಆಯಾ ಮಂತ್ರಿಗಳೂ ಸಲಹೆ ಸೂಚನೆಗಳಿಗಾಗಿ ಅಲ್ಲಿಗೆ ಎಡತಾಕುತಿದ್ದರು. ಆದರೆ ಇದೆಲ್ಲ ಅಲ್ಲಿ ನಡೆದರೂ ಆಶ್ರಮವಾಸಿಗಳು ದೊಡ್ಡವರ ಪತ್ರಗಳನ್ನು ನೋಡಿಯೂ ಚಕಿತರಾಗುವುದಿಲ್ಲ, ಮುಖಂಡರನ್ನು ಕಂಡೂ ಮೋಹಿತರಾಗುವುದಿಲ್ಲ. ರಾಜಕಾರಣದ ಬಗ್ಗೆ ಅವರಲ್ಲಿ ಅಂಥ ಪ್ರೇಮವೂ ಇಲ್ಲ. ಬಾಪೂ ಏನು ತಿಂದರು ಏನು ಉಂಡರು, ಮಲಗಿದರಾವಾಗ ಎದ್ದರಾವಾಗ, ಯಾರೊಡನೆ ಏನು ಮಾತಾಡಿದರು, ಯಾರು ಏನು ಕೇಳಿದರು, ಈ ವಿಷಯಗಳಲ್ಲಿಯೆ ಅಲ್ಲಿಯವರಿಗೆ ಹೆಚ್ಚು ರುಚಿ. ಗಾಂಧೀಜಿಯವರು ಸಹ ಅವಶ್ಯಕತೆಗಿಂತ ಹೆಚ್ಚಾಗಿ ಆಶ್ರಮದ ಸಣ್ಣಪುಟ್ಟ ಮಾತುಗಳಲ್ಲಿ ಮನಸಿಕ್ಕುವರು.

ಆಶ್ರಮವೆಂದರೆ ಒಂದು ವಿಲಕ್ಷಣವಾದ ಮಂಡಳಿ ಅಥವಾ ಗುಂಪು ಎಂದು ಹೇಳಬಹುದು. ಅದು ಶಂಕರನ ಲಗ್ನದ ಮೆರವಣಿಗೆ

ಎನ್ನಬಹುದು. ಅಲ್ಲಿ ಅನೇಕ ತರಹದ ಜನರಿರುವರು. ಅಲ್ಲಿ ನಾನಾ ತರಹದ ರೋಗಿಗಳೂ ಇರುವರು. ಅವರ ಚಿಕಿತ್ಸೆಯಲ್ಲಿ ಗಾಂಧೀಜಿಯವರು ವಿಶೇಷ ರುಚಿಗೊಳ್ಳುವರು. ಆ ಎಲ್ಲರಿಗೂ ಗಾಂಧೀಪ್ರೇಮದ ಹುಚ್ಚು. ಚಳಿಗಾಲದಲ್ಲಿ ಹೊದ್ದುಕೊಳ್ಳಲು ಒಬ್ಬ ರೋಗಿಗಾಗಿ ಒಂದು ರಜಯಿ ( ಗಾಶಿ ) ಹೊಲಿಯುವ ಕೆಲಸ ನಡೆದಿತ್ತು. ಕಸ್ತೂರಬಾ ಇವರ ಹಳೇ ಹರಿದ ಶೀರೆಗಳು ತರಲಾದವು. ಗಾಂಧೀಜಿಯವರು ಅವುಗಳನ್ನು ತಮ್ಮ ಕೈಯಿಂದ ಅಳೆದರು. ಎಷ್ಟು ಅರಿವೆ ಬೇಕಾಗಬಹುದೆಂಬುದರ ಊಹೆ (ಎಸ್ಟಿಮೇಟ್) ಮಾಡಲಾಯಿತು. ಅರಳಿಯ ಬದಲು ಒಳಗೆ ಹಳೆಯ ವೃತ್ತಪತ್ರಗಳ ಮಡಿಕೆಗಳನ್ನು ಹಾಕಿ ಅವುಗಳನ್ನು ಹೊಲಿಯುವ ಕೆಲಸವು ನಡೆಯಿತು. ಗಾಂಧೀಜಿಯವರು ಇದನ್ನೆಲ್ಲ ಒಳ್ಳೆ ಪ್ರೇಮದಿಂದ ಮಾಡಿಸಿದರು. ಅರಳಿಯಕಿಂತ ವೃತ್ತಪತ್ರಗಳು ಹೆಚ್ಚು ಬೆಚ್ಚಗಿರುವವೆಂದು ನನಗೆ ಹೇಳಿದರು. ಇವರ ಅತಿಶಯ ಬೆಲೆಯುಳ್ಳ ವೇಳೆ ಈ ರೀತಿ ವೆಚ್ಚವಾಗಬೇಕೇ, ಎಂದು ನನಗೆ ಎನಿಸಿತು. ನಾನು ಚೇಷ್ಟೆಯಿಂದ ಅಂದದ್ದು, 'ದೇಶದ ದೊಡ್ಡ ದೊಡ್ಡ ಸಮಸ್ಯೆಗಳಿಗಿಂತ ಆಶ್ರಮದ ಇಂಥ ಕೆಲಸಗಳಲ್ಲಿ ನಿಮ್ಮ ಪ್ರೀತಿ ಹೆಚ್ಚು !' ಅದಕ್ಕೆ, 'ಹೆಚ್ಚೆಂದು ಹೇಳಲಿಕ್ಕಾಗದು. ಆದರೆ ಅಷ್ಟೇ ಎಂದೆನ್ನಬಹುದು,' ಎಂದರು.

ನಾನು ಸುಮ್ಮನಾದೆನು. ಯಾಕಂದರೆ ಗಾಂಧೀಜಿಯವರು ಚೇಷ್ಟೆಯಿಂದ ಉತ್ತರ ಕೊಡದೆ ಗಂಭೀರ ಭಾವದಿಂದ ಉತ್ತರ ಕೊಟ್ಟಿದ್ದರು. ಆದರೆ ಅವರು ಹೇಳಿದ ಮಾತು ನಿಜ. ಹೀಗೆ ಅವರು ಮಾಡುವ ಕಾರಣವು ಇನ್ನೂ ಒಂದು ಇರಬಲ್ಲದು. ಹಗಲಿರುಳು ಕೇವಲ ಗಂಭೀರ ವಿಷಯಗಳನ್ನು ಕುರಿತೇ ವಿಚಾರಿಸುತ್ತ ಕುಳಿತರೆ ಅವರಿಗೆ ವಿಶ್ರಾಂತಿ ಹೇಗೆ ದೊರೆಯಬೇಕು ? ಕದಾಚಿತ್ ಆಶ್ರಮವೆಂಬುದು ಅವರಿಗೆ ಪರೋಪಕಾರ ಹಾಗೂ ಆಟ ಈ ಎರಡೂ ಕೂಡಿದ ಒಂದು ಪ್ರಯೋಗಶಾಲೆಯಂತೆ ಇದೆ. ಆಶ್ರಮವು ಗಾಂಧೀಜಿಯವರ ಕುಟುಂಬ. ಎಲ್ಲಕ್ಕೂ ದೊಡ್ಡ ವ್ಯಕ್ತಿಗೂ ಕೌಟುಂಬಿಕ ಸುಖವು ಬೇಕಾಗುವುದು. ಹಾಗೆ ನೋಡಿದರೆ ವಿಶ್ವವೆ ಗಾಂಧೀಜಿಯವರ

ಕುಟುಂಬವು. ಆದರೂ ಆಶ್ರಮದಲ್ಲಿರುವ ಕುಟುಂಬದ ಹೊಣೆಯು ಅವರ ಮೇಲೆ ವಿಶೇಷ. ನಿರ್ಮೋಹವೃತ್ತಿಯಿಂದ ಆ ಹೊಣೆಯನ್ನು ಅವರು ಹೊರುತಿರುವರು.

ಆಶ್ರಮದಲ್ಲಿ ಅನೇಕ ಭಿನ್ನ ಭಿನ್ನ ಸ್ವಭಾವದ ಹಾಗೂ ಶಕ್ತಿಯ ಜನರನ್ನು ಅವರು ಇಟ್ಟಿರುವರು. ಈ 'ಗಣ'ಗಳನ್ನು ಇಲ್ಲೇಕೆ ಹಾಗೂ ಹೇಗೆ ಇಟ್ಟಿರುವರು ಎಂಬ ಬಗ್ಗೆ ಹೊರಗಿನವರಿಗೆ ಆಶ್ಚರ್ಯ ವಾಗುವುದು. ಆದರೆ ಒಬ್ಬೊಬ್ಬರ ಪರಿಚಯವಾದಂತೆ ಅವರವರ ವಿಶೇಷ ಸ್ಥಾನವು ಅಲ್ಲಿ ಇದೆ ಎಂಬುದು ಗೊತ್ತಾಗುವುದು. ಯಾಕಂದರೆ ಹಲವರು ಹಲವು ಸಂಗತಿಗಳಲ್ಲಿ ತಮಗಿಂತ ಶ್ರೇಷ್ಠರಿರುವರು ಎಂದು ಗಾಂಧೀಜಿಯವರು ತಿಳುಕೊಂಡಿರುವರು. ಯಾವುದಾದರೊಂದು ಆಧ್ಯಾತ್ಮಿಕ ಪ್ರಶ್ನೆಯನ್ನು ಬಿಡಿಸಬೇಕಾದಾಗ ಬಹುಶಃ ಅವರು ತಮ್ಮ ಜೊತೆಗಾರರಾದ ವಿನೋಬಾ, ಕಿಶೋರಿಲಾಲ, ಕಾಕಾಸಾಹೇಬ ಮುಂತಾದವರನ್ನು ಕರೆಯಿಸುವರು. ಇಂಥ ಜೊತೆಗಾರರನ್ನು ಅಲ್ಲಿಟ್ಟು ಕೊಂಡೆ ಅವರು ತಮ್ಮಲ್ಲಿಯ ಉಚ್ಚ ನೀಚ ಭಾವನೆಯನ್ನು ನಷ್ಟಪಡಿ ಸಿದ್ದಾರೆ. ಎಲ್ಲಕ್ಕೂ ಹೀನ ಎಂದು ತಿಳಿಯಲಾದ ಕೆಲಸ, ಅದೇರೀತಿ ಎಲ್ಲಕ್ಕೂ ಶ್ರೇಷ್ಠವೆಂದು ತಿಳಿಯಲಾದ ಕೆಲಸ, ಈ ಎರಡೂ ಕೆಲಸ ಗಳನ್ನು ಮಾಡುವವರು ಇಬ್ಬರೂ ಊಟದ ಸಮಯದಲ್ಲಿ ಜೋಡಿ ಯಿಂದ ಕೂಡುವರು. ಪಂಕ್ತಿಭೇದವು ಅಲ್ಲಿ ಯಾವ ರೀತಿ ನಷ್ಟವಾಗಿ ದೆಯೊ ಅದೇರೀತಿ ಗಾಂಧೀಜಿಯವರ ಮನಸಿನಲ್ಲಿ ಹಾಗೂ ಆಶ್ರಮ ವಾಸಿಗಳಲ್ಲಿ ಉಚ್ಚ ನೀಚ ಭೇದವು ಉಳಿದಿಲ್ಲ.

ಈಗ ಹಲವು ದಿನಗಳಾಗಿ ಹೋದವು. ಗಾಂಧೀಜಿಯವರು ವ್ಹಾಯಿಸರಾಯರಿಗೆ ಭೆಟ್ಟಿಯಾಗಲು ದಿಲ್ಲಿಗೆ ಬಂದಿದ್ದರು. ಆದರೆ ತಿರುಗಿ ಸೇವಾಗ್ರಾಮಕ್ಕೆ ಹೋಗುವ ಗಡಿಬಿಡಿ ಇದ್ದಂತೆ ತೋರಿತು. ತಾವು ತಿರುಗಿ ಸೇವಾಗ್ರಾಮಕ್ಕೆ ಮುಟ್ಟುವರೊ ಇಲ್ಲವೊ ಎಂಬ ಬಗ್ಗೆ ಅವರಲ್ಲಿ ಅಧೈರ್ಯವುಂಟಾದಂತೆ ಕಂಡುಬಂದಿತು! ಕೊನೆಗೆ ಇನ್ನು ತಾವು ಸ್ವತಃ ಬೇಗನೆ ತಿರುಗಿ ಹೋಗುವುದು ಶಕ್ಯವಿಲ್ಲ ಎಂಬುದನ್ನರಿ

ತೊಡನೆ ಕೂಡಲೆ ಮಹಾದೇವಭಾಯಿಯವರಿಗೆ ಹೋಗಲು ಅವರು ಆಜ್ಞೆ ಕೊಟ್ಟರು. ಇನ್ನೂ ದಿಲ್ಲಿಯಲ್ಲಿ ಕೆಲಸವು ಸಾಕಷ್ಟು ಇತ್ತು. ಇಂಥ ದೊಡ್ಡ ಸಮಸ್ಯೆ ಎದುರು ಇರುವಾಗ ಅವರು ತಾವು ಸ್ವತಃ ತಿರುಗಿ ಹೋಗಲು ಏಕೆ ಆತುರರಿದ್ದರು ಅಥವಾ ಮಹಾದೇವಭಾಯಿಯವರನ್ನು ಒಮ್ಮೆಲೆ ಕಳಿಸಲು ಏಕೆ ಸಿದ್ಧರಾದರು ಇದು ನನಗೆ ತಿಳಿಯದೆ ಹೋಯಿತು. ನಾನು ಅಂದದ್ದು, ' ಇಷ್ಟು ದೊಡ್ಡ ಕೆಲಸವನ್ನು ಮುಂದಿಟ್ಟುಕೊಂಡು ನೀವು ತಿರುಗಿ ಹೋಗುವ ಬಗ್ಗೆ ಆತುರರಿರುವುದು ನನಗೇನೋ ಸರಿ ತೋರುವುದಿಲ್ಲ, ' ಇದಕೆ ಗಾಂಧೀಜಿಯವರು ಅಂದದ್ದು, ' ನನ್ನ ಹೊಣೆಯ ವಿಚಾರವನ್ನಾದರೂ ಮಾಡಿರಿ. ಸೇವಾಗ್ರಾಮದಲ್ಲಿ ನಾನೊಂದು ಜನರ ಗುಂಪನ್ನೆ ಕಟ್ಟಿಕೊಂಡು ಕುಳಿತಿರುವೆ. ರೋಗಿಗಳಂತೂ ಸೈ, ಮೇಲೆ ಹುಚ್ಚರೂ ಅಲ್ಲಿದ್ದಾರೆ. ಇನ್ನು ಮುಂದೆ ಎಲ್ಲರನ್ನೂ ಬಿಟ್ಟುಕೊಟ್ಟು ಕೇವಲ ಮಹಾದೇವಭಾಯಿಯವರನ್ನಷ್ಟೆ ಸಂಗಡ ಇಟ್ಟುಕೊಂಡು ಇರಬೇಕೆಂದು ನನಗೆ ಒಮ್ಮೊಮ್ಮೆ ಎನಿಸುವುದು. ಬೇಕಾದರೆ ಸಂಗಡ ಬಾ ಒಬ್ಬಳಿರಲಿ. ಎಲ್ಲರನ್ನೂ ಕಳಿಸಿಬಿಡುವೆ. ಅಂದರೆ ನನ್ನ ಹೊಣೆ ಹಗುರಾಗುವುದು. ಆದರೆ ಈ ಜಂಗುಳಿಯ ಹೊಣೆ ನನ್ನ ಮೇಲೆ ಇರುವವರೆಗೆ ಅದನ್ನು ನಾನು ಹೊರಲಿಕ್ಕೇಬೇಕು. ಇದೇ ಕಾರಣದಿಂದ ನನ್ನ ದೇಹವು ದಿಲ್ಲಿಯಲ್ಲಿದ್ದರೂ ನನ್ನ ಮನಸು ಸೇವಾಗ್ರಾಮದಲ್ಲಿ ತೊಡಗಿದೆ. '

ಸೇವಾಗ್ರಾಮದ ಕುಟುಂಬದ ಬಗ್ಗೆ ಇದ್ದ ಗಾಂಧೀಜಿಯವರ ಭಾವನೆಗಳು ಈ ಮೇಲಿನ ಉದ್ಗಾರಗಳಲ್ಲಿ ಸ್ವಲ್ಪಮಟ್ಟಿಗೆ ಸ್ಪಷ್ಟವಾಗಿರುವವು. '-ಬಾಪೂ ' ಎಂಬುದು ಎಷ್ಟು ಅನ್ವರ್ಥಕ ಎಂಬುದು ಇದರ ಮೇಲಿಂದ ಗೊತ್ತಾಗುವುದು.

# ೧೮. ಸೂಕ್ಷ್ಮದೃಷ್ಟಿ

ಗಾಂಧೀಜಿಯವರು ಒಂದು ಪೈಗೆ ಪೈ ಲೆಕ್ಕವನ್ನು ಇಡುವರು. ಲೆಕ್ಕವನ್ನು ತಪ್ಪದೆ ಇಡುವ ರೂಢಿ ಅವರಿಗೆ ಚಿಕ್ಕಂದಿನಿಂದ ಇರುವುದು. ಗಾಂಧೀಜಿಯವರು ವ್ಯವಸ್ಥಾಪ್ರಿಯರು. ಅವರಿಗೆ ಚಿಕ್ಕಂದಿನಿಂದ ಅಚ್ಚುಕಟ್ಟುತನ ಎಂಬುದು ಬೇಕಾದ ವಿಷಯ, ಆದುದರಿಂದ ಅವರ ಕೋಣೆಯು ಸ್ವಚ್ಛ, ಸಾರಿಸಿದ್ದು ಹಾಗೂ ವ್ಯವಸ್ಥಿತವಿರುವುದು. ಟೊಂಕಕ್ಕೆ ಸುತ್ತಿದ ಪಂಜೆ ಸಹ ಅಚ್ಚುಕಟ್ಟಿರುವುದು. 'ಗಾಂಧೀಜಿಯವರು ಮುಪ್ಪಾದುದು ನಿಜ, ಆದರೆ ಅವರ ಮೈಚರ್ಮ ತರುಣರ ಚರ್ಮದಂತೆ ನುಣುಪಾಗಿರುವುದು' ಎಂದು ಒಬ್ಬ ವ್ಹಾಯಿಸರಾಯರು ಅವರ ಬಗ್ಗೆ ಅಂದರು. ಅವರು ತಮ್ಮ ಆರೋಗ್ಯವನ್ನು ಚನ್ನಾಗಿ ಕಾಯುವರೆಂಬ ಮಾತು ನಿಜ. ಪ್ರತಿಯೊಂದು ಮಾತಿನಿಂದ ಲಾಭವನ್ನು ಹೇಗೆ ಪಡೆಯಬೇಕು, ಈ ದೃಷ್ಟಿ ಅವರಲ್ಲಿದೆ. ಪತ್ರಗಳಿಗೆ ಚುಚ್ಚಿ ಬಂದ ಟಾಚಣಿಗಳನ್ನು ಸಹ ಅವರು ತೆಗೆದು ಕಾದಿಡುವರು.

ಲಂಡನಕ್ಕೆ ಹೋಗುವ ಸಮಯ ಒಬ್ಬ ಬಿಳಿಯ ಪ್ರವಾಸಿ ನಮ್ಮ ಹಡಗದಮೇಲಿದ್ದನು. ಅವನು ನಿತ್ಯ ಗಾಂಧೀಜಿಯವರನ್ನು ನಿಂದಿಸುವ ಕ್ರಮವನ್ನು ನಡೆಸಿದ್ದನು. ಒಂದು ದಿನ ಗಾಂಧೀಜಿಯವರನ್ನು ಕುರಿತು ಏನೋ ಒಂದು ವ್ಯಂಗ್ಯಕಾವ್ಯ ಬರೆದು ಅದನ್ನು ಕೊಂಡು ಅವರೆಡೆಗೆ ಬಂದನು. ಬರೆದ ಪುಟಗಳನ್ನು ಗಾಂಧೀಜಿಯವರಿಗೆ ಕೊಟ್ಟನು. ಅವರು ಒಂದಕ್ಷರವನ್ನೂ ಓದದೆ ಮಾತಾಡದೆ ಆ ಪುಟಗಳನೆಲ್ಲ ಹರಿದು ಕಸದ ಬುಟ್ಟಿಗೆ ಹಾಕಿ ಟಾಚಣಿಯನ್ನು ಮಾತ್ರ ತೆಗೆದು ತಮ್ಮ ಡಬ್ಬಿಯಲ್ಲಿ ಇಟ್ಟುಕೊಂಡರು. ಇದನೆಲ್ಲ ನೋಡಿ ಅವನು ಅಂದದ್ದು,

'ಗಾಂಧೀಜಿಯವರೇ ಹೀಗೇಕೆ? ಅದನ್ನು ಓದಿಯಾದರೂ ನೋಡಿರಿ. ಅದರಲ್ಲಿ ಸ್ವಲ್ಪ ತಥ್ಯವಿದೆ.' ಅದಕೆ, 'ಹಾಂ, ಅಹುದು. ತಥ್ಯವಿದ್ದುದನ್ನು ನಾನು ತೆಗೆದು ನನ್ನ ಡಬ್ಬಿಯಲ್ಲಿಟ್ಟುಕೊಂಡಿದ್ದೇನೆ' ಎಂದು ಗಾಂಧೀಜಿಯವರು ಉತ್ತರ ಕೊಟ್ಟರು! ಎಲ್ಲರೂ ಇದನ್ನು ಕೇಳಿ ನಗಲಾರಂಭಿಸಿದರು. ಆ ಆಂಗ್ಲ ಗೃಹಸ್ಥನ ತೇಜೋಭಂಗವಾದುದರಿಂದ ಅವನು ಖಿನ್ನನಾದನು.

ಕೆಲಸಕ್ಕೆ ಬರಬಹುದಾದ ಚಿಕ್ಕದೊಂದು ಪದಾರ್ಥವನ್ನು ಕೂಡ ಗಾಂಧೀಜಿಯವರು ಕಳಕೊಳ್ಳದೆ ಸಂಗ್ರಹಿಸುವರು. ಒಂದೊಂದು ಮೊಳ ಎರಡು ಮೊಳ ಸಣಬಿನ ತುಣುಕುಗಳನ್ನು ಸಹ ಸಂಗ್ರಹಿಸಿಡುವರು. ತಿಂಗಳಗಟ್ಟಲೆ ಆದಬಳಿಕ ಕೆಲಸ ಬಿದ್ದಾಗ ಅವುಗಳನ್ನು ತೆಗೆದು ಉಪಯೋಗಿಸುವರು. ರಾಟೆಯ ಕೆಳಗೆ ಇಡುವ ಕರೇ ಅರಿವೆಯ ಒಂದು ತುಣುಕನ್ನು ಅವರು ಈಗ ಸುಮಾರು ಹನ್ನೆರಡು ವರುಷ ಉಪಯೋಗಿಸುತಿರುವುದನ್ನು ನಾನು ನೋಡುತಲಿದ್ದೇನೆ. ಜನರು ಬರೆದ ಪತ್ರಗಳಿಂದ ಬಿಳಿ ಕಾಗದಗಳನ್ನು ತೆಗೆದು ಅವುಗಳ ಪಾಕೀಟುಗಳನ್ನು ಮಾಡಿಸಿ ಅವರು ಉಪಯೋಗಿಸುವುದುಂಟು. ಈ ಅವರ ಮಾಟವು ಅತ್ಯಂತ ಕಂಜೂಷನ ಕೃತಿಗಳನ್ನು ಸಹ ಹಿಂದೆ ಹಾಕಬಲ್ಲದು!

ಇದೊಂದು ಲಂಡನದಲ್ಲಿ ನಡೆದ ಮಾತು. ಪಟ್ಟಣದಿಂದ ದೂರ ಪೂರ್ವಭಾಗದಲ್ಲಿ ಅವರು ಇರುತಿದ್ದರು. ಕಚೇರಿಯು ಅಲ್ಲಿಂದ ಏಳೆಂಟು ಮೈಲು ಅಂತರದ ಮೇಲೆ. ಹಗಲು ಊಟ ಕಚೇರಿಯಲ್ಲಿ, ಒಬ್ಬ ಮಿತ್ರನ ಮನೆಯಲ್ಲಿ, ಆಗುತಿತ್ತು. ಇಳಿದ ಸ್ಥಳದಿಂದ ದಿನಾಲು ಕಚೇರಿಗೆ ಊಟವು ತರಲಾಗುತಿತ್ತು.

ಊಟದೊಡನೆ ಗಾಂಧೀಜಿಯವರು ಒಮ್ಮೊಮ್ಮೆ ಜೇನುತುಪ್ಪವನ್ನು ಸೇವಿಸುವರು. ನಾವು ಇಂಗ್ಲಂಡಕ್ಕೆ ಇಜಿಪ್ತದ ಮಾರ್ಗವಾಗಿ ಹೋಗುವಾಗ ಅಲ್ಲಿಯ ಜನರು ಒಂದು ದೊಡ್ಡ ಪಾತ್ರೆ ತುಂಬಿ ಜೇನು

ತುಪ್ಪವನ್ನು ಕೊಟ್ಟರು. ದಿನಾಲು ಆದರೊಳಗಿಂದಲೆ ಸ್ವಲ್ಪ ತುಪ್ಪವನ್ನು ತೆಗೆದು ಅವರು ಸೇವಿಸುತ್ತಿದ್ದರು. ಆ ದಿನ ಮೀರಾಬೆನ್ ಅದನ್ನು ಮನೆಯಿಂದ ತರಲು ಮರೆತಳು. ನೆನಪಾದೊಡನೆ ನಾಲ್ಕಾಣೆ ಕೊಟ್ಟು ಒಂದು ಬಾಟಲಿಯಲ್ಲಿ ತುಪ್ಪ ತರಿಸಿ ಊಟದೊಡನೆ ಇಟ್ಟಳು. ಊಟಕ್ಕೆ ಕುಳಿತೊಡನೆ ಅವರ ದೃಷ್ಟಿ ಆ ಬಾಟಲಿಯ ಮೇಲೆ ಹೋಯಿತು, ಈ ಬಾಟಲಿ ಇಲ್ಲಿ ಹೇಗೆ ಬಂದಿತು, ಎಂದು ಗಾಂಧೀಜಿ ಕೇಳಿದರು, ಆಗ ಎಲ್ಲ ಕಥೆಯನ್ನು ಮೀರಾಬೇನ್ ಹೇಳಿದಳು. ಸರಿ, ಅದನ್ನು ಕೇಳಿದೊಡನೆ ದೊಡ್ಡ ಗದ್ದಲವೆ ನಡೆಯಿತು. ಗಾಂಧೀಜಿಯವರು ಅಂದದ್ದು, ' ಹೀಗೆ ಹಣ ಹಾಳುಮಾಡುವುದೇಕೆ? ನಾವು ಕೊಟ್ಟ ಹಣದ ದುರುಪಯೋಗವನ್ನು ಜನರು ಈ ರೀತಿ ಮಾಡಬೇಕೇ? ಒಂದು ದಿನ ನನಗೆ ಜೇನುತುಪ್ಪವಿಲ್ಲದಿದ್ದರೇನಾಗುತಿತ್ತು? ನಾನೇನು ಉಪವಾಸ ಬೀಳುತಿದ್ದೆನೊ? '

ಹಿಂದುಸ್ತಾನದ ಅತ್ಯಂತ ಬಿಕ್ಕಟ್ಟಿನ ಪ್ರಶ್ನೆಗಳು ಎದುರು ಬಿದ್ದಿದ್ದವು. ಅವುಗಳನ್ನು ಬದಿಗಿಟ್ಟು ಅವರು ಸಾಕಷ್ಟು ವೇಳೆ ಈ ಬಗ್ಗೆ ವ್ಯಾಖ್ಯಾನ ನಡೆಸಿದರು. ಮೀರಾಬೇನಳಿಗೆ ಸಿಟ್ಟು ಮಾಡಿದರು. ಹತ್ತಿರ ಕುಳಿತವರಿಗೆ ತಲೆ ಹಿಡಿಯಿತು. ಆದರೆ ಗಾಂಧೀಜಿಯವರ ಮಟ್ಟಿಗೆ ಸಣ್ಣ ಮಾತುಗಳು ಸಹ ಬಹಳ ಮಹತ್ವದವೆನಿಸುವವು. ಗಾಂಧೀಜಿಯವರು ಒಮ್ಮೊಮ್ಮೆ ಸಣ್ಣ ಮಾತು ದೊಡ್ಡ ಮಾತು ಇವುಗಳ ನಡುವೆ ವಿವೇಕ ಮಾಡದೆ ವರ್ತಿಸುವರು, ಎಂದು ಜನರಿಗೆ ತೋರುವುದು. ಅವರೊಡನೆ ಇರುವವರಿಗೆ ಒಮ್ಮೊಮ್ಮೆ ಮನಸ್ತಾಪ ಉಂಟಾಗುವುದು. ಆದರೆ ಗಾಂಧೀಜಿಯವರ ಮೇಲೆ ಅದರ ಪರಿಣಾಮ ವೇನೂ ಆಗುವುದಿಲ್ಲ.

ಅವರು ತಮ್ಮ ಬಟ್ಟೆಗಳನ್ನು ಬಹಳ ಸಾವಧಾನವಾಗಿ ಉಪಯೋಗಿಸುವರು. ಎಲ್ಲಿಯಾದರೂ ಸ್ವಲ್ಪ ಹರಿದರೂ ಅದಕೆ ತುಂಡು ಹಚ್ಚಿ ಹೊಲಿದು ಬಿಡುವರು. ಪ್ರತಿಯೊಂದು ವಸ್ತುವನ್ನು ಸಾಕಷ್ಟು ಸ್ವಚ್ಛ ಇಡುವರು, ಆದರೆ ಎಲ್ಲದರಲ್ಲಿಯೂ ನಿಪುಣತನ ಬಹಳ.

ನೀರಿನ ವೆಚ್ಚ ಸಹ ಬಹಳ ಹಿಡಿತದಿಂದ! ಕೈ-ಬಾಯಿ ತೊಳೆಯಲು ಬಹಳ ಕಡಿಮೆ ನೀರನ್ನು ಕೊಳ್ಳುವರು, ಎಸರು ಬರುವಂತೆ ಕಾಸಿದ ನೀರನ್ನು ಒಂದು ಸೀಸೆಯಲ್ಲಿ ಹಾಕಿ ಇಟ್ಟು ಅವಶ್ಯವಿದ್ದಾಗ ಕುಡಿಯುವರು. ಅದೇ ನೀರು ಕುಡಿಯಲು ಹಾಗೂ ಕೈ-ಬಾಯಿ ತೊಳೆಯಲು ಬರುವದು.

# ೧೯. ದಿನಚರಿ

ಗಾಂಧೀಜಿಯವರ ದಿನಚರಿಯು ಬಹಳ ಅಚ್ಚುಕಟ್ಟು. ಅವರು ಪ್ರತಿಕ್ಷಣದ ಉಪಯೋಗವನ್ನು ಮಾಡುವರು, ಅವರಿಗೆ ಹೊರಗಣ ಪತ್ರಗಳು ಬಹಳ. ಅವೆಲ್ಲವುಗಳಿಗೂ ಉತ್ತರ ಕೊಡಬೇಕಾಗುವುದು. ಪ್ರಾಯಶಃ ಅವರು ಊಟ ಮಾಡುವಾಗ ಸಹ ಓದುವರು. ಒಮ್ಮೊಮ್ಮೆ ಊಟದ ಸಮಯದಲ್ಲಿ ಜನರಿಗೆ ಭೆಟ್ಟಿ ಕೊಡುವರು ಹಾಗೂ ಸಂಭಾಷಣೆ ನಡೆಸುವರು. ತಿರುಗಾಡುವ ವೇಳೆಯನ್ನು ಸಹ ಅವರು ಪುಕ್ಕಟೆ ಕಳೆಯುವದಿಲ್ಲ.

ಬಹುಶಃ ಬೆಳಿಗ್ಗೆ ನಾಲ್ಕು ಗಂಟೆಗೆ ಏಳುವರು. ಎದ್ದೊಡನೆ ಮೋರೆ ತೊಳೆದು ಪ್ರಾರ್ಥನೆ ಮಾಡುವರು. ಬಳಿಕ ಶೌಚಾದಿ ಪ್ರಾತರ್ವಿಧಿಗಳನ್ನು ತೀರಿಸಿ ಮುಂಜಾನೆ ಏಳು ಗಂಟೆಯ ಸುಮಾರಕ್ಕೆ ಹಗುರಾದ ಅಲ್ಪಾಹಾರ ಮಾಡುವರು. ಮುಂದೆ ಸ್ವಲ್ಪ ತಿರುಗಾಟ, ಮತ್ತೆ ಕೆಲಸಕ್ಕೆ ಪ್ರಾರಂಭ. ಒಂಬತ್ತು ಗಂಟೆಗೆ ಮೈಗೆ ಎಣ್ಣೆ ತಿಕ್ಕಿಸುವರು, ಆದರೆ ಆ ಕಾಲಕ್ಕೆ ಕೆಲಸವು ನಡೆದೇ ಇರುವುದು. ಮುಂದೆ ಸ್ನಾನವಾದ ಬಳಿಕ ಹನ್ನೊಂದು ಗಂಟೆಗೆ ಊಟ ಮಾಡುವರು, ಒಂದು ಹೊಡೆಯುವ ವರೆಗೆ ಕೆಲಸ ಮಾಡಿ ಸ್ವಲ್ಪ ಒರಗಿಕೊಳ್ಳುವರು. ಎರಡು ಗಂಟೆಯ ಸುಮಾರಕ್ಕೆ ಎದ್ದು ಶೌಚಕ್ಕೆ ಹೋಗುವರು. ಆ ಕಾಲಕ್ಕೂ ಕೆಲಸ ನಡೆದೇ ಇರುವದು. ಆಮೇಲೆ ಹೊಟ್ಟೆಯ ಮೇಲೆ ಹಸಿ ಮಣ್ಣಿನ ಪೋಟೀಸು ಹಾಕಿ ಸ್ವಲ್ಪ ಕಾಲ ವಿಶ್ರಮಿಸುವರು. ಒರಗಿದಲ್ಲಿಯೆ ಕೆಲಸವು ನಡೆದಿರುವದು. ನಾಲ್ಕು ಗಂಟೆಯ ಸುಮಾರಕ್ಕೆ ರಾಟೆಯ ಮೇಲೆ ನೂಲುವರು. ಮತ್ತೆ ಬರೆಯುವ ಓದುವ ಕೆಲಸವು

ನಡೆಯುವದು. ಐದರ ಸುಮಾರಿಗೆ ಸಂಜೆಯ ಊಟ ಆಗುವುದು. ನಂತರ ತಿರುಗಾಡುವುದು, ಏಳು ಗಂಟೆಗೆ ಪ್ರಾರ್ಥನೆ ನಡೆಯುವುದು, ಮತ್ತೆ ಸ್ವಲ್ಪ ಕೆಲಸ ಮಾಡಿ ಒಂಭತ್ತು ಅಥವಾ ಒಂಭತ್ತು ವರೆಗೆ ಮಲಗುವರು.

ಅವಶ್ಯವಿದ್ದಾಗ ರಾತ್ರಿ ಎರಡು ಗಂಟೆಗೆ ಎದ್ದು ಕೆಲಸವನ್ನು ಪ್ರಾರಂಭಿಸುವರು. ಗಾಂಧೀಜಿಯವರ ಊಟ ತೀರ ಸಾದಾ ಇರುವುದು. ಆದರೆ ವರ್ಷೆರಡು ವರ್ಷಕ್ಕೊಮ್ಮೆ ಅದರಲ್ಲಿ ಹೆಚ್ಚು ಕಡಿಮೆ ಆಗುವುವು, ಒಂದು ಕಾಲದಲ್ಲಿ ಕೇವಲ ನೆಲಗಡಲೆ ಅಥವಾ ಶೇಂಗಾ ಮತ್ತು ಬೆಲ್ಲದ ಮೇಲೆ ಇರುತಿದ್ದರು. ಅನೇಕ ವರ್ಷಗಳ ಹಿಂದೆ ಅವರು ಹಾಲು ಮುಟ್ಟುತಿರಲಿಲ್ಲ. ಅದರ ಬದಲು ಸುಮಾರು ನೂರರಷ್ಟು ಬದಾಮು ತಿನ್ನುತಿದ್ದರು, ಎಂಬ ಮಾತು ನನಗೆ ಗೊತ್ತಿದೆ. ರೊಟ್ಟಿಯನ್ನು ಬಿಟ್ಟು ಒಂದು ನೂರರಷ್ಟು ಖಜ್ಜೂರಿ ಹಣ್ಣು ತಿಂದುದನ್ನು ನಾನು ನೋಡಿರುವೆ. ಒಮ್ಮೆ ರೊಟ್ಟೀ ಹೆಚ್ಚು ತಿಂದು ಹಣ್ಣು ತೀರ ಕಡಿಮೆ ತಿನ್ನುತಿದ್ದರು. ಈ ಬಗೆಯ ಆಹಾರ ಪ್ರಯೋಗಗಳು, ಒಂದು ಪದಾರ್ಥ ಬಿಡುವುದು ಇನ್ನೊಂದು ಹಿಡಿಯುವುದು ಮುಂತಾದ್ದು ನಡೆದೇ ಇರುವುದು. ಹಲವು ವರ್ಷಗಳ ಹಿಂದೆ ಬೇವಿನ ತೊಪ್ಪಲ ಹಾಗೂ ಹುಣಚೀ ಹಣ್ಣಿನ ಹೊಡೆತ ಪ್ರಾರಂಭವಾಗಿತ್ತು. ಆದರೆ ಹಲವು ದಿನಗಳ ನಂತರ ಅದನೆಲ್ಲ ಬಿಟ್ಟರು. ಹಸಿ ಆಹಾರವನ್ನು (ಕುದಿಸದೆ ಇದ್ದುದು) ಹಲವು ದಿನ ತಿನ್ನುತಿದ್ದರು. ಜಡ್ಡಾದುದರಿಂದ ಅದನ್ನು ಬಿಟ್ಟರು.

ಈ ಬಗೆಯ ಪ್ರಯೋಗಗಳನ್ನು ಎಲ್ಲರೂ ಮಾಡುವುದು ಇಷ್ಟವಿಲ್ಲ. ಈಗ ಸಾಕಷ್ಟು ಸಾರು, ಗೋದಿಯ ತೆಳುವಾದ ರೊಟ್ಟಿ, ಕುಚ್ಚಿದ ಕಾಯಿಪಲ್ಲೆ, ಬಳ್ಳೊಳ್ಳಿ ಹಾಗೂ ಹಣ್ಣು ಇದು ಗಾಂಧೀಜಿಯವರ ಆಹಾರವಿರುವುದು. ಪ್ರತಿಯೊಂದು ಪದಾರ್ಥದಲ್ಲಿ ಕೊಂಚ ಸೋಡಾ ಹಾಕಿ ಬಿಡುವರು. ಸೋಡಾ ಇದು ಆರೋಗ್ಯದಾಯಕ

ಎಂದು ಅವರ ತಿಳಿವಳಿಕೆ ಇದೆ. ಒಂದು ದಿನದಲ್ಲಿ ಗಾಂಧೀಜಿಯವರು ಅಯ್ದು ಪದಾರ್ಥಗಳಿಗಿಂತ ಹೆಚ್ಚು ತಿನ್ನುವುದಿಲ್ಲ. ಉಪ್ಪು ಸಹ ಈ ಅಯ್ದರಲ್ಲಿಯೆ ಎಣಿಸಲಾಗುವುದು.

ಹರೆಯದವರಿದ್ದಾಗ ದಿನಂಪ್ರತಿ ಇಪ್ಪತ್ತೈದು ಮೈಲಿನಷ್ಟು ಸಹ ಅವರು ನಡೆಯುತಿದ್ದರು. ಈಗ ಮುಪ್ಪಾದರೂ ನಡೆಯುವ ವ್ಯಾಯಾಮವನ್ನು ಅವರು ಬಿಟ್ಟಿಲ್ಲ. ಒಂದು ದಿನ ಊಟವಿರದಿದ್ದರೂ ನಡೆದೀತು, ನಿದ್ದೆ ಕಡಿಮೆ ಸಿಕ್ಕರೂ ಸಾಗಬಹುದು, ಆದರೆ ತಿರುಗಾಟ ವಾಗದಿದ್ದರೆ ಜಡ್ಡಾಯಿತೆಂದೇ ತಿಳಿಯಬೇಕು, ಎಂದು ಅವರು ಒಮ್ಮೊಮ್ಮೆ ಅನ್ನುವರು. ಹಸಿಮಣ್ಣಿನ ಪಟ್ಟಿಯನ್ನು ಹೊಟ್ಟೆಯ ಮೇಲೆ ಒಂದು ತಾಸು ಕಟ್ಟಿ ಇಡುವರು. ಅದೂ ಬಹಳ ಮಹತ್ವ ದ್ದೆಂದು ಹೇಳುವರು.

ನಿದ್ರೆಯ ಮಟ್ಟಿಗೆ ತಮಗೆ ಬೇಕಾದಾಗ ಅವರು ಮಲಗಬಲ್ಲರು. ಗಾಂಧೀ ಆಯರ್ವಿನ್ ಒಪ್ಪಂದದ ಸಮಯವು ನನಗೆ ನೆನಪಿದೆ. ಹಲವು ಆಂಗ್ಲರು ನನ್ನ ಮನೆಯಲ್ಲಿ ಗಾಂಧೀಜಿಯವರಿಗೆ ಭೆಟ್ಟಿಯಾಗ ಬೇಕೆಂದು ನಿರ್ಧರಿಸಿದ್ದರು. ನಿಶ್ಚಿತ ವೇಳೆಗಿಂತ ಹದಿನೈದು ನಿಮಿಷ ಮೊದಲು ಗಾಂಧೀಜಿಯವರು ಬಂದರು. ‘ ನನಗೆ ಈಹೊತ್ತು ನಿದ್ದೆಯ ಅವಶ್ಯಕತೆ ಇದೆ, ಸ್ವಲ್ಪ ಮಲಗುವೆನು ’ ಎಂದರು. ‘ ಇನ್ನೂ ಹದಿನೈದು ನಿಮಿಷ ಮಾತ್ರ ಇರುವವು. ಈಗ ನಿದ್ರೆಗೆ ವೇಳೆ ಎಲ್ಲಿದೆ ’ ಎಂದು ನಾನು ಕೇಳಿದೆನು. ‘ ಹದಿನೈದು ಮಿನಿಟು ನನಗೆ ಸಾಕು ’ ಎಂದರು. ಮಂಚದ ಮೇಲೆ ಒರಗಿದ ಒಂದು ಕ್ಷಣದಲ್ಲಿ ನಿದ್ದೆ ಹೋದರು. ಇದಕ್ಕೂ ಆಶ್ಚರ್ಯದ ಸಂಗತಿ ಏನಂದರೆ, ಹದಿನೈದು ನಿಮಿಷದ ನಂತರ ತಾವಾಗಿ ಎಚ್ಚತ್ತರು, ‘ ನಿಮ್ಮ ನಿದ್ರಾಶಕ್ತಿಯು ಅದ್ಭುತವಿರುವುದೆಂದು ’ ನಾನು ಒಮ್ಮೆ ಅವರಿಗೆ ಅಂದೆನು. ಅದಕೆ ‘ ನಿದ್ರೆಯ ಮೇಲಿನ ನನ್ನ ಪ್ರಭುತ್ವವು ಹೋದ ದಿನವೆ ನನ್ನ ಸಾವು ಸಮೀಪಿಸಿತೆಂದು ತಿಳಿಯಬೇಕು ’ ಎಂದು ಉತ್ತರ ಕೊಟ್ಟರು.

ಜಡ್ಡಾದವರ ಶುಶ್ರೂಷೆ ಮಾಡುವುದು ಗಾಂಧೀಜಿಯುವರಿಗೆ ಬಹಳ ಪ್ರಿಯ. ಚಿಕ್ಕಂದಿನಿಂದ ಈ ಪ್ರವೃತ್ತಿ ಅವರಲ್ಲಿದೆ. ಆಫ್ರಿಕೆಯಲ್ಲಿರುವಾಗ ಅವರು ಉಪಚಾರಿಕೆಯ (ನರ್ಸ) ಕೆಲಸವನ್ನು ಮಾಡಿದ್ದಲ್ಲದೆ ಒಂದು ಚಿಕ್ಕದಾದ ಆಸ್ಪತ್ರಿಯನ್ನು ಕೂಡ ನಡೆಸುತಿದ್ದರು. ತಮ್ಮ 'ಹಿಂದ ಸ್ವರಾಜ್ಯ' ಎಂಬ ಪುಸ್ತಕದಲ್ಲಿ ಅವರು ಒಂದು ದೃಷ್ಟಿಯಿಂದ ಆಸ್ಪತ್ರಿಗಳನ್ನು ಅಲ್ಲಗಳೆದಿದ್ದರೂ ಸ್ವತಃ ಆಸ್ಪತ್ರಿ ಇಟ್ಟು ತಮ್ಮ ಶುಶ್ರೂಷಾ ಪ್ರೀತಿಯನ್ನು ವ್ಯಕ್ತಮಾಡಿದರು. ಆ ಅವರ ಪ್ರೀತಿಯು ಈಗ್ಯೂ ಇದ್ದಕ್ಕಿದಂತೆಯೆ ಇದೆ. ಕೇವಲ ಸೇವೆಮಾಡಿ ಅಷ್ಟಕ್ಕೆ ಬಿಡುವುದಿಲ್ಲ, ಚಿಕಿತ್ಸೆಯಲ್ಲಿಯೂ ಸ್ವಲ್ಪ ಮನಸು ಹಾಕುವರು ಹಾಗೂ ಸಣ್ಣ ಪುಟ್ಟ ಔಷಧಗಳ ಹಾಗೂ ಉಪಾಯಗಳ ಪ್ರಯೋಗದಿಂದ ಲಾಭಾಲಾಭಗಳೇನಾಗುವವೆಂಬುದನ್ನು ಶೋಧಿಸುತ್ತಲೆ ಇರುವರು.

ಯಾವನಾದರೂ ಅತ್ಯವಸ್ಥನಿದ್ದರೆ ಹಾಗೂ ಅವನು ಗಾಂಧೀಜಿಯವರಿಗೆ ಭೆಟ್ಟಿಯಾಗಲಿಚ್ಛಿಸಿದರೆ ಅವರು ತಮಗೆ ಬೇಕಾದಷ್ಟು ಅಡಚಣಿಗಳು ಇದ್ದರೂ ಜಡ್ಡಿನವನಿಗೆ ಭೆಟ್ಟಿಯಾಗಲು ಹೋಗುವರು. ಈ ರೀತಿ ಅವರು ಮಾಡುವುದನ್ನು ನಾನು ಎಷ್ಟೋ ಸಾರೆ ನೋಡಿರುವೆ. ಒಂದೆರಡು ಸಂದರ್ಭಗಳಲ್ಲಿ ಅವರ ಭೆಟ್ಟಿಯಿಂದ ಜಡ್ಡಿನವರಿಗೆ ಅತಿಶಯ ಆರಾಮ ಎನಿಸಿದ್ದೂ ನನಗೆ ಗೊತ್ತಿದೆ.

ಇದೊಂದು ಹಳೆಯ ಸಂಗತಿ, ದಿಲ್ಲಿಯಲ್ಲಿ ಆದದ್ದು. ಓರ್ವ ಹೆಣ್ಣುಮಗಳು ಮರಣಾಸನ್ನಳಾಗಿದ್ದಳು, ರೋಗದೊಡನೆ ಹೋರಾಡಿ ತೀರ ಸಣ್ಣಾಗಿದ್ದಳು. ಬರೀ ಉಸುರೊಂದು ಆಡುತಿತ್ತು. ಇಹ-ಲೋಕದ ಯಾತ್ರೆಗೆ ಆಕೆ ಶರಣು ಹೊಡೆದಿದ್ದಳೆಂದು ಹೇಳಬಹುದು. ಮುಂದಿನ ಯಾತ್ರೆಯ ಸಿದ್ಧತೆಯೆಂದು ಕೇವಲ ರಾಮನಾಮ ಜಪ ಮಾಡುತ್ತ ದಿನಗಳನ್ನೆಣಿಸುತ್ತ ಬಿದ್ದಿದ್ದಳು. ಗಾಂಧೀಜಿಯವರಿಂದ ಕೊನೆ ಆಶೀರ್ವಾದವನ್ನು ಪಡೆಯುವದಷ್ಟು ಉಳಿದಿತ್ತು. 'ಗಾಂಧೀಜಿಯವರ ದರ್ಶನವಾದರೂ ನನಗೆ ಆಗಬಹುದೋ? ಕೊನೆಗೆ ಅವರ

ಭೆಟ್ಟಿಯಾದರೂ ಆಗಲಿ,' ಎಂದು ಆಕೆ ಅಂದಳು. ಗಾಂಧೀಜಿಯವರು ದಿಲ್ಲಿಯ ಸಮೀಪ ಸಹ ಆಗ ಇರಲಿಲ್ಲ. ಆದುದರಿಂದ ಅವರ ಭೆಟ್ಟಿ ದುಸ್ತರವಾಗಿತ್ತು. ಸಾಯುವ ಪ್ರಾಣಿಯ ಆಶೆಯನ್ನು ತೀರ ನಿಷ್ಫಲಗೊಳಿಸಬಾರದೆಂದು 'ನೋಡುವ, ನಿನ್ನ ಇಚ್ಛೆಯನ್ನು ಕದಾಚಿತ್ ದೇವರು ಪೂರೈಸಬಹುದು' ಎಂದು ನಾನು ಅಂದೆನು.

ಗಾಂಧೀಜಿಯವರು ಕಾನಪೂರದಿಂದ ದಿಲ್ಲಿ ಮಾರ್ಗವಾಗಿ ಅಹಮದಾಬಾದಕ್ಕೆ ಹೋಗತಕ್ಕವರಿರುವರೆಂದು ನನಗೆ ಮುಂದೆ ಎರಡು ದಿನಗಳಲ್ಲಿ ಸುದ್ದಿ ಬಂದಿತು. ಅವರ ಗಾಡಿ ಬೆಳಿಗ್ಗೆ ನಾಲ್ಕು ಗಂಟೆಗೆ ದಿಲ್ಲಿಗೆ ಬರುತಿತ್ತು. ಅಹಮದಾಬಾದದ ಗಾಡಿ ಅಯ್ದು ಗಂಟೆಗೆ ಅಲ್ಲಿಂದ ಹೊರಡುತಿತ್ತು. ಕೇವಲ ಒಂದು ತಾಸಿನ ಅವಕಾಶವಿತ್ತು. ಆ ಜಡ್ಡಿನಾಕೆ ದಿಲ್ಲಿಯಿಂದ ಹತ್ತು ಮೈಲಿನ ಮೇಲೆ ಇರುತಿದ್ದಳು. ಒಂದು ತಾಸಿನಲ್ಲಿ ಆಕೆಗೆ ಭೆಟ್ಟಿಯಾಗಿ ಮಾತಾಡಿ ತಿರುಗಿ ಬರುವುದು ದುರ್ಘಟವಾದ ಕೆಲಸವೆ ಆಗಿತ್ತು.

ಅದು ಒಳ್ಳೆ ಚಳಿಗಾಲ. ಕೆಟ್ಟ ಗಾಳಿ ಬೀಸುತಿತ್ತು, ಆಗ ಇನ್ನೂ ಗಾಳಿ ತಾಕದ ಮೋಟರಗಳು ಇರಲಿಲ್ಲ. ಅಂಥ ಗಾಳಿಯಲ್ಲಿ ಗಾಂಧೀಜಿಯವರಿಗೆ ಬೆಳಗಿನ ಝಾವದಲ್ಲಿ ಇಪ್ಪತ್ತು ಮೈಲಿನ ಪ್ರವಾಸ ಮಾಡಿಸುವುದು ಸ್ವಲ್ಪ ಭಯಕಾರಕವೆ. ಗಾಂಧೀಜಿಯವರು ಬರತಕ್ಕವರಿರುವರೆಂಬ ಸುದ್ದಿ ಸಹ ಪಾಪ ಆ ಜಡ್ಡಿನಾಕೆಗೆ ಇರಲಿಲ್ಲ. ಆಕೆಯ ಮನಸಿನಲ್ಲಿ ಅವರ ದರ್ಶನದ ತೀವ್ರ ಇಚ್ಛೆ ಇತ್ತು. ಆದರೆ ಮಾರ್ಗದಲ್ಲಿ ಇವೆಲ್ಲ ಪ್ರತ್ಯಕ್ಷ ಅಡಚಣೆಗಳು. ಗಾಂಧೀಜಿಯವರು ಗಾಡಿಯಿಂದ ಇಳಿದರು. ನಾನು ಅಂಜುತ್ತಂಜುತ್ತ ಅಂದದ್ದು, 'ತಾವು ಈ ದಿನ ಇಲ್ಲಿ ಇರಲಾರಿರಾ?' 'ಇರುವುದು ಬಹಳ ಕಠಿಣ' ಎಂದು ಗಾಂಧೀಜಿಯವರು ಅಂದರು. ನಾನು ಹತಾಶನಾದೆನು. ಆಕೆಗೆ ಎಷ್ಟು ನಿರಾಶೆಯಾಗಬಹುದೆಂಬದನ್ನು ನಾನು ಅರಿತಿದ್ದೆನು.

ಗಾಂಧೀಜಿಯವರು ಮತ್ತೆ ಕೇಳಿದ್ದು, 'ನಾನು ಇರಬೇಕೆಂದು ಏಕೆ ಹೇಳುವಿರಿ,' ನಾನು ಅವರಿಗೆ ಕಾರಣವನ್ನು ತಿಳಿಸಿದೆನು.

‘ ನಡೆಯಿರಿ, ಈಗಲೆ ನಡೆಯಿರಿ ’ ಎಂದು ಗಾಂಧೀಜಿಯವರು ಅಂದರು. ‘ ಇಂಥ ಚಳಿಯಲ್ಲಿ, ಹೀಗೆ ಗಾಳಿ ಸುಳಿಯುತಿರುವಾಗ, ಬೆಳಗಿನ ವೇಳೆಯಲ್ಲಿ ಮೋಟರಿನಲ್ಲಿ ಕೂಡಿಸಿ ಅಷ್ಟು ಪ್ರವಾಸ ಮಾಡಲು ನಾನು ನಿಮಗೆ ಹೇಗೆ ಹೇಳಲಿ ’ ಎಂದು ನಾನು ಅಂದೆನು. ‘ ಅದರ ಚಿಂತೆ ಏಕೆ ? ಮೋಟಾರಿನಲ್ಲಿ ನನ್ನನ್ನು ಕೂಡಿಸಿರಿ, ವೇಳೆ ಕಳೆಯುವುದ ರಿಂದೇನು ಪ್ರಯೋಜನ ? ನಡೆಯಿರಿ ’ ಎಂದರು. ಗಾಂಧೀಜಿ ಯವರನ್ನು ಮೋಟರಿನಲ್ಲಿ ಕೂಡಿಸಿದೆನು. ಚಳಿ ಮತ್ತೆ ಮೇಲೆ ತಣ್ಣಗಿನ ಗಾಳಿ ಇವೆರಡು ನಿರ್ದಯತೆಯಂತ ತಮ್ಮ ಶಕ್ತಿಯ ಪ್ರದರ್ಶನ ವನ್ನು ಮಾಡುತಲಿದ್ದವು. ಸೂರ್ಯೋದಯವಂತೂ ಇನ್ನೂ ಆಗಿರ ಲಿಲ್ಲ. ಬ್ರಾಹ್ಮಮುಹೂರ್ತದಲ್ಲಿರುವ ಶಾಂತಿಯು ಎಲ್ಲೆಲ್ಲಿಯೂ ಪಸರಿ ಸಿತ್ತು. ಆ ಜಡ್ಡಿನಾಕೆ ತನ್ನ ಹಾಸಿಗೆಯ ಮೇಲೆ ಬಿದ್ದುಕೊಂಡು ರಾಮನಾಮದ ಜಪ ನಡೆಸಿದ್ದಳು. ಗಾಂಧೀಜಿಯವರು ಆಕೆಯ ಹೊರಸಿನ ಹತ್ತರ ಹೋದರು. ‘ ಗಾಂಧೀಜಿಯವರು ಬಂದಿರುವರು ’ ಎಂದು ನಾನು ಹೇಳಿದೆನು. ಆಕೆಗೆ ಮೊದಲು ನಿಜವೆನಿಸಲಿಲ್ಲ. ಸ್ತಿಮಿತಳಾದವಳಂತೆ ಇದ್ದುಬಿಟ್ಟಳು. ಬಳಿಕ ಖಟಪಿಟ ಮಾಡಿ ಎದ್ದು ಕೂಡಬೇಕೆಂದಳು, ಆದರೆ ತ್ರಾಣವೆಲ್ಲಿಂದ ಬರಬೇಕು ? ಆಕೆಯ ಕಣ್ಣಿನಿಂದ ಎರಡು ಹನಿಗಳು ತನ್ನಷ್ಟಕ್ಕೆ ತಾವೆ ಉದುರಿದವು. ನಾನು ನನ್ನ ಕರ್ತವ್ಯ ಮಾಡಿದೆನೆಂದು ತಿಳಿದೆನು.

ಆಕೆಗೆ ಆದ ಸುಖಶಾಂತಿಗಳು ಆಕೆಯ ಕಣ್ಣುಗಳಲ್ಲಿ ಒಡೆದು ಕಾಣುತಿದ್ದವು.

ಗಾಂಧೀಜಿಯವರ ಗಾಡಿ ದಿಲ್ಲಿ ಬಿಟ್ಟಿತ್ತು. ಆದುದರಿಂದ ಮೋಟಾರಿನಿಂದ ಮುಂದಿನ ಸ್ಟೇಶನ್ನಿಗೆ ಒಯ್ದು ಮುಟ್ಟಿಸಿದೆನು. ಗಾಂಧೀಜಿಯವರಿಗೆ ಬಹಳ ತೊಂದರೆಯಾಯಿತು. ಆದರೆ ಆ ಮರಣೋನ್ಮುಖ ಜೀವಕ್ಕೆ ದೊರೆತ ಶಾಂತಿ ಸಮಾಧಾನದ ಮುಂದೆ ಗಾಂಧೀಜಿಯವರು ತಮ್ಮ ತೊಂದರೆಯನ್ನು ಮರೆತುಬಿಟ್ಟರು.

ಮುಂದೆ ಸ್ವಲ್ಪೇ ದಿನಗಳಲ್ಲಿ ಆಕೆ ತೀರಿಕೊಂಡಳು. ಆದರೆ ಸಾಯುವ ಮೊದಲು ಆದ ಗಾಂಧೀಜಿಯವರ ದರ್ಶನದಿಂದ ಆಕೆಗೆ ಅಪಾರವಾದ ಶಾಂತಿ ದೊರಕಿತು.

ನಾವು ಹಸಿದವರಿಗೆ ಅನ್ನ, ನೀರಡಿಸಿದವರಿಗೆ ನೀರು ಕೊಡುವೆವು. ಅದರ ಮಹಾತ್ಮ್ಯವು ಬಹಳವಿದೆ. ಸ್ವತಃ ರಂತಿದೇವನು ಹಾಗೂ ಅವನ ಮಕ್ಕಳು ತಾವು ಬರಿ ಹೊಟ್ಟೆಯಿಂದ ಇದ್ದು ಹಸಿದವರಿಗೆ ರೊಟ್ಟೀ ಕೊಟ್ಟ ಕಥೆ ಹಾಗೂ ಅದರ ಮಹಾತ್ಮ್ಯ ಇವು ಪುರಾಣಾಂತರಗಳಲ್ಲಿ ವರ್ಣಿಸಲಾಗಿವೆ. ಆದರೆ ಒಂದು ಮರಣೋನ್ಮುಖ ಪ್ರಾಣಿ, ತನ್ನ ಅಂತಿಮ ಕ್ಷಣವನ್ನು ನಿರೀಕ್ಷಿಸುತಿದೆ, ಒಂದು ಪೂಜ್ಯ ವ್ಯಕ್ತಿಯ ದರ್ಶನವನ್ನು ಪಡೆಯಲಿಚ್ಛಿಸುತಿದೆ. ಆ ದರ್ಶನದ ಹಸಿವು ಹಿಂಗಿ ಆ ಜೀವಕ್ಕೆ ಶಾಂತಿ ದೊರೆಯುತಿದೆ. ಈ ದಾನದ ಮಹಾತ್ಮ್ಯವು ಎಷ್ಟು? ಎಷ್ಟು ಯಾರು ಹೇಳಬೇಕು?

———

# ೨೦. ಉಪಸಂಹಾರ

ಗಾಂಧೀಜಿಯವರು ಈಗ ಎಪ್ಪತ್ತೊಂದು ವರ್ಷದವರಾದರು. ಈಗ ಇಪ್ಪತ್ತೈದು ವರ್ಷದಾಚೆ ನನಗೆ ಅವರ ಪ್ರಥಮ ದರ್ಶನವಾದಾಗ ಅವರು ಪ್ರೌಢ ವಯಸ್ಸಿನವರಿದ್ದರು, ಈಗ ವೃದ್ಧರಾಗಿರುವರು. ಆಗಿನ ಅವರ ಮುಖಚರ್ಯೆ, ವೇಷಭೂಷಣ ಮುಂತಾದವುಗಳನ್ನು ಈಗಿನ ಅವರ ಮುಖಚರ್ಯೆ, ವೇಷಭೂಷಣ ಇವುಗಳೊಡನೆ ಹೋಲಿಸಿದರೆ ಬಹಳ ಅಂತರವು ತೋರುವುದು. ನಾವು ಯಾವದೊಂದು ವಸ್ತುವನ್ನು ನಿತ್ಯ ನೋಡುತಿದ್ದರೆ ಅದರಲ್ಲಿ ಆಗುತಿರುವ ಬದಲಾವಣೆಗಳನ್ನು ನಾವು ಲಕ್ಷಿಸಲಾಗುವುದಿಲ್ಲ. ಈ ಬದಲಾವಣೆಗಳು ಕಳ್ಳನ ತರಹ, ತಿಳಿಯದೆ ಆಗುವವು. ಆದುದರಿಂದ ಗಾಂಧೀಜಿಯವರ ದೇಹ, ಅವರ ಮಾತುಕತೆ, ವೇಷ, ಮುಂತಾದವುಗಳಲ್ಲಿ ಆದ ಪರಿವರ್ತನದ ನೆನಪು ನಮಗೆ ಯಾರಿಗೂ ಇಲ್ಲ. ನಾನು ಮೊದಲು ನೋಡಿದಾಗ ಅವರು ಉದ್ದಂಗಿ ತೊಡುತಿದ್ದರು, ಮುಂದೆ ಒಂದು ಬರಿ ಪೈರಣ ಹಾಕಲಾರಂಭಿಸಿದರು ಹಾಗೂ ಮುಂಡಾಸದ ಬದಲು ಟೊಪ್ಪಿಗೆ ಬಂದಿತು. ಒಂದು ಸಭೆಯಲ್ಲಿ ಮಾತನಾಡುತ್ತ ಆ ಪೈರಣವನ್ನು ಸಹ ತೆಗೆದೊಗೆದು ಬಿಟ್ಟರು. ಅಂದಿನಿಂದ ಮೊಳಕಾಲವರೆಗೆ ಧೋತರ, ಅಥವಾ ಅದಕ್ಕೆ ಪಂಜಿ ಅನ್ನುವುದೆ ಲೇಸು, ಒಂದು ಹೊದ್ದುಕೊಳ್ಳುವ ಧೋತರ ಇಷ್ಟೇ ಅವರ ವೇಷಭೂಷಣವಾಗಿದೆ.

ಮೊದಲು ಅವರು ಚಂಡಿಕೆ ಇಡುತಿದ್ದಿಲ್ಲ. ಹರಿದ್ವಾರದಲ್ಲಿ ಒಬ್ಬ ಸಾಧುವು ಅವರಿಗೆ ಅಂದದ್ದು, 'ಗಾಂಧೀ, ಜನಿವಾರವಿಲ್ಲ, ಜುಟ್ಟಿಲ್ಲ! ಹಿಂದೂ ಎಂಬುದಕ್ಕೆ ಏನಾದರೊಂದು ಚಿನ್ಹವಿರಲಿ.' ಅದನ್ನು

ಮನ್ನಿಸಿ ಅವರು ಚಂಡಿಕೆ ಇಡಲಾರಂಭಿಸಿದರು. ಒಳ್ಳೆ ಗುಚ್ಛದಂತೆ ಚಂಡಿಕೆ ಇತ್ತು. ಈಚೆಗೆ ಒಂದು ದಿನ ಅವರ ಚಂಡಿಕೆಯತ್ತ ನನ್ನ ಲಕ್ಷ ಹೋಯಿತು. ಆದರೆ ಅಲ್ಲೇನಿದೆ? ಎಲ್ಲ ಕೂದಲು ಒಂದೊಂದೇ ಹಾರಿಹೋಗಿವೆ, ಚಂಡಿಕೆ ಹೇಳಹೆಸರಿಲ್ಲದೆ ಮಾಯವಾಗಿದೆ. ಆ ಚಂಡಿಕೆ ಹೋದುದನ್ನು ನೋಡಿ, ಮೆಲ್ಲಮೆಲ್ಲನೆ ಅವರ ಶರೀರದಲ್ಲಿಯ ಪಂಚಭೂತಗಳು ಮೂಲ ಪಂಚಭೂತಗಳಲ್ಲಿ ವಿಲೀನವಾಗತೊಡಗಿವೆ ಎಂದೆನಿಸಿತು. ಹಲ್ಲೆಲ್ಲ ಉದುರಿಹೋಗಿವೆ. ಆದರೆ ಯಾವಾಗ ಹೋದವು, ಮೆಲ್ಲನೆ ಸದ್ದಿಲ್ಲದೆ ಅವು ಹೇಗೆ ಅಡಗಿದವು, ಇದರ ಸುದ್ದಿ ಸಮೀಪದವರಿಗೆ ಸಹ ಇಲ್ಲ.

ಜನರಿಗೆ ತಮ್ಮ ಜೀವನದಲ್ಲಿ ಯಶಾಪಯಶಗಳೆರಡೂ ಸಿಗುವದುಂಟು. ಲೋಕಪ್ರಿಯತೆ ಒಮ್ಮೆ ದೊರಕಬಹುದು ಮತ್ತೆ ಹೊರಟು ಹೋಗಬಹುದು. ಡ್ಯೂಕ ಆಫ್ ವೆಲಿಂಗಟನ್, ನೆಪೋಲಿಯನ್, ಡಿಜ್‌ರಾಲಿ, ಗ್ಲ್ಯಾಡಸ್ಟನ್ ಮುಂತಾದ ರಾಜಕಾರಣಿ ಪುರುಷರು ತಮ್ಮ ಜೀವನದಲ್ಲಿ ಏರಿಳಿತಗಳನ್ನು ಅನುಭವಿಸಿದರು. ಆದರೆ ಗಾಂಧೀಜಿಯವರು ಯಾವಾಗಲೂ ಏರುತ್ತಲೆ ಇದ್ದಾರೆ. ಅವರು ಇನ್ನೂ ಇಳಿತವನ್ನು ನೋಡಿಯೆ ಇಲ್ಲ ಎಂದು ಹೇಳಬಹುದು. ತಮ್ಮ ಜೀವಮಾನದಲ್ಲಿ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿದರು. ಪ್ರತಿಯೊಂದು ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡಿ ತಮ್ಮ ಕಾಣಿಕೆಯನಿತ್ತರು. ಸಾಹಿತ್ಯ ಕ್ಷೇತ್ರದಲ್ಲಿಯೂ ಇವರು ಸಾಕಷ್ಟು ಕೆಲಸ ಮಾಡಿರುವರು. ಇವರು ಎಷ್ಟು ಹೊಸ ಶಬ್ದಗಳನ್ನು ನಿರ್ಮಿಸಿದರು, ಎಷ್ಟು ಹೊಸ ಪ್ರಯೋಗಗಳನ್ನು ಮಾಡಿದರು ಇದರ ಲೆಕ್ಕವೂ ಒಂದಿಲ್ಲೊಂದು ದಿನ ಆಗಬಹುದು.

ಹಿಂದುಸ್ತಾನದಲ್ಲಿ ಎಲ್ಲಕ್ಕೂ ಕೆಡುಕು ಏನು, ಎಂದು ಯಾರೋ ಒಬ್ಬರು ಆನಿಬೆಸಂಟಮ್ಮನವರನ್ನು ಕೇಳಿದ್ದರಂತೆ. ಅದಕೆ 'ಎರಡನೆಯವರನ್ನು ಕೆಳಕ್ಕೆಳೆದು ತಾವು ಮೇಲೆ ಏರಬೇಕೆನ್ನುವುದು. ಇದೇ ಎಲ್ಲಕ್ಕೂ ಕೆಡುಕು' ಎಂದು ಅವರು ಉತ್ತರಿಸಿದ್ದರು. ಇದು ಹಿರಿದಾದ

ಕೆಡುಕು ಇರಲಿ ಬಿಡಲಿ, ಇಲ್ಲಿಯ ರಾಜಕಾರಣದಲ್ಲಿ ಈ ಪ್ರವೃತ್ತಿ ಕಂಡುಬರುವುದೇನೋ ನಿಜ. ಆದರೆ ಗಾಂಧೀಜಿಯವರು ಭೂಮಿಯನ್ನಗಿದಗಿದು ವಜ್ರವನ್ನು ಹುಡುಕಿ ತೆಗೆದರು. ಬೂದಿಯನ್ನು ತೊಳೆತೊಳೆದು ಚಿನ್ನವನ್ನು ಸಂಗ್ರಹಿಸಿದರು. ಸರದಾರ ವಲ್ಲಭಭಾಯಿಯವರನ್ನು ತಯಾರ ಮಾಡಿದ ಶ್ರೇಯ ಗಾಂಧೀಜಿಯವರಿಗಿದೆ. ರಾಜಗೋಪಾಲಾಚಾರ್ಯರು, ರಾಜೇಂದ್ರಬಾಬೂ ಇವರು ಗಾಂಧೀಜಿಯವರ ಪ್ರೇರಣೆಯಿಂದಾದವರು. ನೂರಾರು ಮುಖಂಡರನ್ನು ಹಾಗೂ ಲಕ್ಷಾಂತರ ಅನುಯಾಯಿಗಳನ್ನು ಗಾಂಧೀಜಿಯವರು ನಿರ್ಮಾಣ ಮಾಡಿದರು. ನಿಃಸತ್ವರಾದ ಹಿಂದೀಯರಲ್ಲಿ ಹೊಸ ಜೀವನವನ್ನು ಹುಟ್ಟಿಸಿದರು. ಸಣ್ಣಪುಟ್ಟ ಜನರನ್ನು ಸಹ ತಿದ್ದಿ ಸರಿಮಾಡಿದರು. ಇವರ ಜೀವನ ನೋಡಿದರೆ 'ಚಿಡಿಯೋಂಸೇ ಮೈ ಬಾಜ ಲಡಾವೂ ತಬ ಗೋವಿಂದಸಿಂಹ ನಾಮ ರಖಾವೂ' 'ಗುಬ್ಬಿಗಳನ್ನು ಗಿಡಗಗಳೊಡನೆ ಹೋರಾಡಿಸುವೆ, ಇಲ್ಲದಿದ್ದರೆ ಗೋವಿಂದಸಿಂಹನೆಂಬ ಹೆಸರು ಬಿಡುವೆ' ಎಂಬ ಪಣವು ನೆನಪಿಗೆ ಬರುವುದು.

ಈ ರಾಷ್ಟ್ರಕ್ಕೆ ಈ ತರಹದ ಅದ್ವಿತೀಯವಾದ ಕಾಣಿಕೆ ಕೊಟ್ಟ ಗಾಂಧೀಜಿಯವರು ಈ ಹೊತ್ತು ದಿನದಿನಕ್ಕೆ ಮುಪ್ಪಾಗುತಿರುವರು.

ಅವರು ಯಾವಾಗ ಮುದುಕರಾದರು ಇತ್ತ ನಮ್ಮ ಲಕ್ಷವೇ ಇಲ್ಲ.

'ದಿನದಿನ ಘಡಿಘಡಿ ಪಲಪಲ ಛಿನಛಿನ ಸ್ರವತ ಜಾತ ಜೈಸೇ ಅಂಜರೀ ಕೋ ಪಾನೀ', ದಿನದಿನಕ್ಕೆ, ತಾಸುತಾಸಿಗೆ, ಪಲಪಲಕ್ಕೆ ಕ್ಷಣಕ್ಷಣಕ್ಕೆ ಪ್ರವಾಹದ ನೀರು ಹರಿದು ಹೋಗುತಿರುವಂತೆ ನಮ್ಮ ಆಯುಷ್ಯವು ಕ್ಷಣಕ್ಷಣಕ್ಕೆ ಕಡಿಮೆಯಾಗುತ್ತ ನಡೆದಿದೆ.

ಆದರೆ ಗಾಂಧೀಜಿಯವರು ಬರೆಯುವರು, ಮಾತಾಡುವರು, ನಮಗೆ ಮಾರ್ಗ ತೋರಿಸುವರು. ಆದುದರಿಂದ ಅವರು ಸವೆಯುತ್ತ ನಡೆದುದು ನಮ್ಮ ಲಕ್ಷಕ್ಕೆ ಬಂದೇ ಇಲ್ಲ. ಗಾಂಧೀಜಿ ಹಾಗೂ ನಾವು ಸದೈವ ಕೂಡಿ ಇರುವೆವೆಂದು ನಾವು ಭಾವಿಸಿರುವೆವು. ದೇವರು ಅವರನ್ನು ಚಿರಾಯು ಮಾಡಲಿ.

ತಮ್ಮ ಆಯುಷ್ಯವನ್ನು ಕೊಟ್ಟು ಗಾಂಧೀಜಿಯವರನ್ನು ಹೆಚ್ಚು ದಿನ ಬದುಕಿಸುವುದು ಸಾಧ್ಯವಿದ್ದರೆ ಸಾವಿರಾರು ಯುವಕರು ತಮ್ಮ ಆಯುಷ್ಯವನ್ನು ಕೊಟ್ಟುಬಿಡಲು ಮುಂದೆ ಬರಬಹುದು. ಆದರೆ ಅದು ಆಗದ ಮಾತು, ಘಟಿಸದ ಕಲ್ಪನೆ.

ಕೊನೆಗೆ ಗಾಂಧೀಜಿಯವರ ಜೀವನಚರಿತ್ರವೆಂದರೇನು, ಅದರ ಸಾರವೇನು, ಎಂಬ ಪ್ರಶ್ನೆ ಎದುರಾಗುವುದು.

ರಾಮಚರಿತವನ್ನು ಯಾವನೋ ಒಬ್ಬ ಕವಿಯು ಒಂದೇ ಶ್ಲೋಕದಲ್ಲಿ ಹೀಗೆ ಹೇಳಿರುವನು:

**ಆದೌ ರಾಮತಪೋವನಾದಿಗಮನಂ ಹತ್ವಾಮೃಗಂ ಕಾಂಚನಮ್।**
**ವೈದೇಹೀ ಹರಣಂ ಜಟಾಯು ಮರಣಂ ಸುಗ್ರೀವ ಸಂಭಾಷಣಂ॥**
**ವಾಲೀ ನಿಗ್ರಹಣಂ ಸಮುದ್ರತರಣಂ ಲಂಕಾಪುರೀ ದಾಹನಂ।**
**ಪಶ್ಚಾದ್ರಾವಣ ಕುಂಭಕರ್ಣಹನನಂ ಏತದ್ಧಿ ರಾಮಾಯಣಂ॥**

ಗಾಂಧೀಜಿಯವರ ಜೀವನಚರಿತ್ರವನ್ನು ಕೂಡ ಒಂದೇ ಶ್ಲೋಕದಿಂದ ವರ್ಣಿಸಬಹುದು. ಯಾಕಂದರೆ ಅವರ ಜೀವನದಲ್ಲಿ ಮೊದಲಿನಿಂದ ತುದಿಯವರೆಗೆ ಒಂದೇ ಒಂದು ಮಾತು ಇರುವುದು—ಅಹಿಂಸೆ, ಅಹಿಂಸೆ. ಖಾದೀ ಆಗಲಿ ಅಥವಾ ಹರಿಜನ ಕಾರ್ಯವಾಗಲಿ ಅವು ಅಹಿಂಸೆಯ ಪ್ರತೀಕಗಳು. ಆದರೊಂದು ಮಾತು, ರಾಮಚರಿತದ ಕೊನೆಯ ಚರಣದಲ್ಲಿ 'ಪಶ್ಚಾದ್ರಾವಣ ಕುಂಭಕರ್ಣಹನನಂ' ಎಂದು ಇದೆ. ಗಾಂಧೀ ಚರಿತದಲ್ಲಿ 'ಇಂಗ್ಲಂಡಗಮನಂ ವಿದ್ಯಾಧ್ಯಯನಂ ಭಾರತಾಗಮನಂ ಆಫ್ರಿಕಾಗಮನಂ ಸತ್ಯಾಗ್ರಹ ಪ್ರಕರಣಂ ಭಾರತ ಪುನರಾಗಮನಂ ಸತ್ಯಾಗ್ರಹ ಸಂಚಾಲನಂ', ಇತ್ಯಾದಿ ಹೇಳಿ ಕೊನೆಗೆ 'ಪಾರತಂತ್ರ್ಯ ವಿನಾಶನಮ್' ಎಂದು ಹೇಳಬಹುದೇ?

ಯಾರು ಹೇಳಬಲ್ಲರು? ಗಾಂಧೀಜಿಯವರು ಇನ್ನೂ ಜೀವಂತವಿರುವರು!

ಹಲವು ದಿನಗಳಾಚೆ ಚೀನದ ನಿವಾಸಿಯಾದ ಓರ್ವ ಸಜ್ಜನ ಗೃಹಸ್ಥರು ಗಾಂಧೀಜಿಯವರನ್ನು ಕೇಳಿದ್ದು, 'ನಿಮ್ಮ ಜೀವಮಾನದಲ್ಲಿ ಭಾರತವು ಸ್ವತಂತ್ರವಾದುದನ್ನು ನೋಡುವ ಆಶೆ ನಿಮಗಿದೆಯೊ?' ಅದಕೆ 'ಅಹುದು, ಹಾಗೆ ಆಶಿಸುವೆ. ದೇವರು ನನ್ನಿಂದ ಇನ್ನೂ ಹೆಚ್ಚು ಕೆಲಸವನ್ನು ಮಾಡಿಸಬೇಕೆಂದಿದ್ದರೆ ಅವಶ್ಯವಾಗಿ ನನ್ನ ಜೀವಮಾನದಲ್ಲಿ ಭಾರತವು ಸ್ವತಂತ್ರವಾಗುವುದು. ಅದಕ್ಕೂ ಪೂರ್ವದಲ್ಲಿಯೆ ದೇವರು ನನ್ನನ್ನು ಒಯ್ದರೂ ನನಗೆ ಆಪತ್ತಿ ಇಲ್ಲ.' ಎಂದು ಉತ್ತರ ಕೊಟ್ಟರು.

ಆದರೆ ಭವಿಷ್ಯದಲ್ಲಿ ಏನು ನಡೆಯುವುದು ಯಾರು ಬಲ್ಲರು? ನಾಳಿನ ಮಾತನ್ನು ಈ ಹೊತ್ತು ಹೇಳುವವರಾರು?

**ಸಮಾಪ್ತಂ**

# ಒಪ್ಪೋಲೆ

**ಟೀಪು:—** ಅರ್ಥ ಕೆಡುವ ಸಂದರ್ಭದಲ್ಲಿ ಮಾತ್ರ ತಿದ್ದಿದೆ. ವಿರಾಮ ಹಾಗೂ ಅವತರಣ ಚಿನ್ಹಗಳ ತಪ್ಪುಗಳನ್ನು ತಿದ್ದಿಲ್ಲ.

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| **ಮುನ್ನುಡಿ** | | | |
| i | ೧೦ | ಬಿಡಲಾ | ಬಿಲಾರ್ |
| i | ೧೭ | ಅಭಿದಾನ | ಅಭಿಧಾನ |
| iii | ೧೮ | ಇನ್ನು | ಇನ್ನೂ |
| **ಪ್ರಸ್ತಾವನೆ** | | | |
| ೩ | ೨೨ | ಸುದೈವ | ಸದೈವ |
| ,, | ೨೬ | ಗಮುಲಗೊಡು | ಮುಲಗಗೊಡು |
| ೫ | ೨೨ | ವೃತ್ತಿಯಲ್ಲಿ | ವೃತ್ತಿಯಲ್ಲ. |
| ೬ | ೯ | ಸ್ವಾರ್ಥ | ಪರಾರ್ಥ |
| ೭ | ೨೦ | ಬೀರೀ | ಬೌರೀ |
| ,, | ೨೬ | ನನಗೆ | ನಮಗೆ |
| ೧೧ | ೫ | ಕುಣಿ....ದಂತೆ | ಕುಣಿ....ದಂತೆ,' |
| ೧೨ | ೫ | ಅವರ | ಈ ಅವರ |
| **ಮೂಲಗ್ರಂಥ** | | | |
| ೬ | ೨೦ | ಸಾಧ | ಸಾಥ |
| ,, | ೨೨ | ಮುಹರ | ಮುಗರ |
| ೭ | ೨೪ | ಸುಕ್ಷುಪ್ತಿಯು | ಸುಷುಪ್ತಿಯು |
| ೮ | ೧೫ | ಪ್ರಾಪತ್ಯ | ಪ್ರಾಪ್ಯ |
| ೧೭ | ೨ | ಮಾರೆಯುಬಲ್ಲದು | ಮರೆಯುಬಲ್ಲದು |
| ೧೭ | ೧೮ | ವ್ಯಸ್ತವು | ವ್ಯಾಪ್ತವು |
| ೨೪ | ೧೬ | ಸ್ವಾರ್ಥಕ್ಕಾಗಿ | ಪರಾರ್ಥಕ್ಕಾಗಿ |
| ೨೫ | ೨೬ | ಬೋಜಾ ಪಿನ | ಖೋಜಾ ತಿನ |
| ೨೬ | ೧೬ | ಕೋಟಿ, ಕಟ್ಟಿ, | ಕೋಟಿಕಟ್ಟಿ, |
| ೪೦ | ೧೧ | ಅಹಿಂಸೆಯ | ಅಹಿಂಸೆಯಲ್ಲಿ |

| ಪುಟ | ಸಾಲ | ತಪ್ಪು | ಒಪ್ಪು |
|---|---|---|---|
| ಮೂಲಗ್ರಂಥ | | | |
| ೪೦ | ೧೭ | ಅವರು ಸ್ಕಾಟ್ಸರಲ್ಲಿಯೆ | ಸ್ಕಾಟ್ಸರು ಅಲ್ಲಿಯೆ |
| ೪೭ | ೧೩ | ವಿಷಯಾನಾವ್ | ವಿಷಯಾಣಾವ್ |
| ೬೨ | ೪ | ಅವನಿಗೆ....ಆಗುತ್ತಿತ್ತು | ಅವನಿಗೆ ಬಹಳ ವೈರಿ ಎದ್ದಿದ್ದವು |
| ೬೪ | ೯ | ನೆರಳು | ನರಳು |
| ,, | ೨೪ | ಮಗನನ್ನು | ಮಾರ್ಗವನ್ನು |
| ೭೨ | ೧೨ | ಒಳನಾಡಿ | ಒಳನುಡಿ |
| ೭೬ | ೨೫ | ನಾಮ, ಜಪ, | ನಾಮಜಪ, |
| ೮೧ | ೨೦ | ೨೬ | ೨೯ |
| ,, | ೨೨ | ಸದ್ದು | ಶಾಂತಿ |
| ೯೬ | ೧೮ | ಚಲಾವಣೆ | ಚುನಾವಣೆ |
| ೯೭ | ೧೯ | ವ್ಯಂಗೋಕ್ತಿ | ವ್ಯಂಗ್ಯೋಕ್ತಿ |
| ೧೦೧ | ೨೫ | ಶಿಷ್ಯನು | ಶಿಕ್ಷಕನು |
| ೧೦೫ | ೧೪ | ನಿರ್ದೋಷ್ಟ | ನಿರ್ದುಷ್ಟ |
| ೧೦೯ | ೧೬ | ಕುಶಲದಿಂದ | ಕೌಶಲದಿಂದ |
| ೧೧೦ | ೯ | ಉಪವಾಸದ........ ಪ್ರಯೋಗ | ಉಪವಾಸದ ಪ್ರಯೋಗವು |
| ೧೧೩ | ೨೫ | ಚರ್ಚೆ | ಚರ್ಚಿಸ |
| ೧೨೦ | ೩ | ಕೀಡೋ | ಕೀಡೇ |
| ೧೨೧ | ೨೦ | ರಾಷ್ಟ್ರಗಳಲ್ಲಿ | ರಾಷ್ಟ್ರಗಳೆಲ್ಲ |
| ೧೨೩ | ೧೯ | ಅನ್ನ | ಅನ್ಯ |
| ೧೩೧ | ೨೨ | ದಾಸಸ್ತ್ಯಘೋರ್ | ದಾಸಸ್ತ್ವಘೋರ್ |
| ೧೪೦ | ೨೬ | ತಮ್ಮಲ್ಲಿ | ನಿಮ್ಮಲ್ಲಿ |
| ೧೪೩ | ೧೬ | ಕದಾಚಿತ | ಕದಾಚಿತ್ |
| ೧೭೮ | ೮ | ನಿರ್ದಯತೆಯಂತ | ನಿರ್ದಯತೆಯಿಂದ |